ಗೌರಿ ಲಂಕೇಶರ

ಲಂಕೇಶ್

20/- ರೂ

◆ ರಂಜನೆ ◆ ಬೋಧನೆ ◆ ಪ್ರಚೋದನೆ



ವಿಶೇಷಾಂಕ



ರಮ್ಯಪ್ರಜ್ಞೆಯ ಉನ್ನತ ಶಿಖರ: ಕುವೆಂಪು

ಮೂವತ್ತು ವರ್ಷಗಳ ಹಿಂದೆ ಪ್ರಕಟವಾದ 'ಪ್ರಸ್ತುತ' ಪುಸ್ತಕದಲ್ಲಿ ಕುವೆಂಪುರವರನ್ನು ಕುರಿತು ಪಿ. ಲಂಕೇಶರು ಬರೆದಿದ್ದ ಲೇಖನವನ್ನು ಇಲ್ಲಿ ಮರುಪ್ರಕಟಿಸುತ್ತಿದ್ದೇವೆ. ಈ ಲೇಖನ ಇವತ್ತಿಗೂ ಪ್ರಸ್ತುತವಾಗಿದೆ...

ಕುವೆಂಪು ಕನ್ನಡದ ಮೋನಾಲಿಸಾ. ಇವರದು ಅತ್ಯಂತ ವೈಯಕ್ತಿಕ ಶೈಲಿ, ಆದರೆ ಅತ್ಯಂತ ಸಾರ್ವತ್ರಿಕ. [illegible] ಕಾವ್ಯ ಪ್ರಯುಕ್ತಿಸಿದನು; ಸರಳ ಮಾತಿನ ಸಂಕೀರ್ಣ ಕೃತಿ ಆಧುನಿಕರ ಒಲವು. ಆದರೆ ಕುವೆಂಪು ಪಂಡಿತ ಭಾಷೆಯಲ್ಲಿ ಸರಳವಾದದ್ದನ್ನು ಹೇಳಿದರು; ಇವರಿಗೆ ಕಿರಿಯದರಲ್ಲಿ ಹಿರಿದರ್ಥ ಬೇಕು. ಆದರೆ ಕುವೆಂಪು ಹಿರಿಯದರಲ್ಲಿ ಹಿರಿಯ ಅರ್ಥ ತೋರಡಿಸಲು ಹೊರಟರು.

ಮಹಾಕಾವ್ಯದ ಸಾಧಕಬಾಧಕಗಳು ಅಸಂಖ್ಯ. ತಾತ್ಕಾಲಿಕ, ಸಾಮಾನ್ಯ ಕೃತಿ ಮೆಚ್ಚುವವರು ಈಗ ಹೆಚ್ಚು; ಅಲ್ಪಮತಿಗಳಿಗೆ ಸಾಧಕನ ಮಹಾಕಾವ್ಯ ಒಂದು ರೀತಿಯಲ್ಲಿ ಬಾಧಕ: ಕಾವ್ಯದ ಹೆಸರು ಕೇಳಿ ನಮಸ್ಕಾರ ಹಾಕಿ ಮುನ್ನಡೆವ ಜನಕ್ಕೆ ಮಹಾಕಾವ್ಯ ಕೇವಲ ಅಭಿಮಾನಕ್ಕೆ ಸಾಧನ; ದಡ್ಡ ವಿಮರ್ಶಕರಿಗೆ ದಪ್ಪ ಪದ ಉಪಯೋಗಿಸಿ ಹೊಗಳಲು ಸಹಾಯಕ.

ಕುವೆಂಪು, ಮಿಲ್ಟನ್ ಹಾಗೆ, ಸಾಧಕರು: ಮಿಲ್ಟನ್ ಧರ್ಮವೇ ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಕೊಟ್ಟವರು; ಆತನ ರೀತಿಯಲ್ಲಿಯೇ "ಮುಂದಿನ ಜನಾಂಗ ಸುಲಭವಾಗಿ ಮರೆಯದಂಥ" ಕೃತಿ ರಚಿಸಬೇಕೆಂಬ ಆಶೆ ಉಳ್ಳವರು. ಇಂಗ್ಲೆಂಡಿನ ಬದುಕಿನಲ್ಲಿ ಮಠ ವ್ಯವಸ್ಥೆಯ ವಿರುದ್ಧ ಹೋರಾಡಿದ ಮಿಲ್ಟನ್; ಕನ್ನಡ ಬದುಕಿನಲ್ಲಿ ಜಾತಿ, ಧರ್ಮ, ಅನ್ಯಾಯಗಳ ವಿರುದ್ಧ ಕುವೆಂಪು ಬಂಡಾಯವೆದ್ದರು.

ಎಲ್ಲಕ್ಕಿಂತ ಮುಖ್ಯವಾಗಿ, ಮಿಲ್ಟನ್ ಮತ್ತು ಕುವೆಂಪು ಇಬ್ಬರೂ ಒಂದು ವೈಯಕ್ತಿಕ ಶೈಲಿ ಬೆಳೆಸಿಕೊಂಡರು; ಅಧಿಕಾರ ಹಂಚಿಹೋಗಿ ಪ್ರಜೆಗಳ ಮದ, ಸ್ವಾತಂತ್ರ್ಯ ಬೆಳೆಯುತ್ತಿದ್ದಾಗ ಇಬ್ಬರೂ ಸಾಮೂಹಿಕ ಪುರಾಣಗಳನ್ನು ತಮ್ಮ ಕೃತಿಗಳಲ್ಲಿ ಕೆತ್ತಿದರು. ಇಬ್ಬರೂ ದೊಡ್ಡ ವಿದ್ವಾಂಸರು, ಮಹತ್ವಾಕಾಂಕ್ಷಿಗಳು; ಸಣ್ಣದು, ಚಿಲ್ಲರೆ ತಾತ್ಕಾಲಿಕ ಅಂದರೆ ನಿರ್ಲಕ್ಷ್ಯ; ತಪಸ್ಸು, ಸಾಧನೆಯ ಪರಿಪೂರ್ಣತೆಯ ಕಡೆ ಗಮನ.

ಕುವೆಂಪು ಅವರ ಪ್ರಬಲ ವಿಚಾರಗಳು ಕಾವ್ಯಕ್ಕಿಂತ ಹೆಚ್ಚಾಗಿ ಅವರ ಭಾಷಣಗಳಲ್ಲಿವೆ; ನಲವತ್ತು ವರ್ಷಗಳ ಹಿಂದೆಯೇ ನಿಷ್ಠುರ ಮಾತಾಡಿದ್ದಾರೆ; ಇವತ್ತಿಗೂ ಅಲ್ಲಿಯ ಕಾವು ಆರಿಲ್ಲ. "ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳಿಗೆಯ ಕುತ್ತಿಗೆಗೆ ಉರುಳಾಗಿದೆ" ಅಂದರು ಕುವೆಂಪು. ಅವರಿಗೆ ಆ ಕಾಲದ ದೇವಾಲಯಗಳು ಸೆರೆಮನೆಗಳಂತೆ ಕಂಡಿವೆ; ಪೂಜಾರಿ ಅಲ್ಲಿಯ ಕಾವಲುಗಾರ. ಅವರೆನ್ನುತ್ತಾರೆ: "ಸಹರಾ ಮರುಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯಜಪ ಮಾಡಿಸಿದರೆ ಮಳೆ ಬಂದು ಅದು ಫಲವತ್ತಾಗುವುದೆ?"

ತರುಣರಿಗೆ "ನಿರಂಕುಶಮತಿಗಳಾಗಿ" ಅಂದರು; ಧೀರಪ್ರಶ್ನೆಗಳನ್ನು ಕೇಳಿಕೊಳ್ಳಬೇಕು, ಧೀರ ಉತ್ತರ ಕಾಣಬೇಕೆಂದರು. ಹೊಸಗನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಮಲೆನಾಡಿನವನೊಬ್ಬ ಮಾತಾಡಹತ್ತಿದ್ದ; ಹಳ್ಳಿಗನ ಸಂಕೋಚದ ಜೊತೆಗೆ ಮೂಡುವ ಮುಳುಗುವ ಸೂರ್ಯ, ದಟ್ಟ ಅಡವಿಯ ಭೀಕರತೆ, ಗ್ರಾಮಜೀವನದ ಚೆಂದ, ಸಣ್ಣತನ, ದುರಂತಗಳು ಅವರ ಮನಸ್ಸಿನಲ್ಲಿ ತುಯ್ಯುತ್ತಿದ್ದವು. ಅವರ ಸಮಕಾಲೀನರು ಅನೇಕರು ಚೆನ್ನಾಗಿ ಬರೆಯುತ್ತಾರೆ; ಆದರೆ ಕುವೆಂಪು ಧಾಟಿಯ ಒಗರು, ಸಂತೋಷ, ವಿಷಾದ ವಿಶಿಷ್ಟವಾದದ್ದು; ಕುವೆಂಪು ಅವರ ಆಸಕ್ತಿ, ಏಕಾಗ್ರತೆ, ವಿಸ್ತಾರ ಗಮನಾರ್ಹವಾದದ್ದು. ಸುತ್ತಣ ಸಮಾಜದ ಏರುಪೇರು, ರೂಢಿಮೌಢ್ಯ, ಮತಾಂಧತೆ, ಶಿಕ್ಷಣ ಸಮಸ್ಯೆಗಳು, ಮನಃಶಾಸ್ತ್ರ ರಾಜಕೀಯ; ಇವೆಲ್ಲವನ್ನೂ ಅಭ್ಯಸಿಸುವ, ನ್ಯಾಯವಾಗಿ ಮಾತಾಡಬೇಕೆನ್ನುವ ಧೈರ್ಯವಾಗಿ ವಿವರಿಸುವ ಪ್ರಯತ್ನ ಇವರದು. ಆಗ ಹರಯ ಕುವೆಂಪು ಅವರಿಗೆ. ಅವರ ಕ್ರಿಯಾತ್ಮಕ ಬರವಣಿಗೆಗಳಲ್ಲಿ ಈ ವಿಚಾರಗಳು ಏನಾಗುತ್ತವೆ ಎಂಬುದು ಕುತೂಹಲಕರ.


ಈಗ ಕುವೆಂಪು ಅವರ ಸಮಾಜ ಪ್ರಜ್ಞೆ ಕಂದಾಚಾರದ ಮೇಲೆ ದಂಗೆಯೆದ್ದರು; ಉಚ್ಚರೆನ್ನಿಸಿಕೊಂಡ ನೀಚರನ್ನು ಖಂಡಿಸಿದರು. 'ಜಲಗಾರ' ಈ ದೃಷ್ಟಿಯಲ್ಲಿ ಕುತೂಹಲಕರ. ಇದು ರಂಗದ ಮೇಲೆ ಚೆನ್ನಾಗಿ ಹೋಗುತ್ತದೆ; ಮಾತುಗಳಿಗೆ ಒಂದು ಬಗೆಯ ಹೊಳಪಿದೆ, ಚೆಂದವಿದೆ. ಮುಖ್ಯವಾಗಿ, ಈ ನಾಟಕದ ತೀವ್ರತೆ ಸಮಾಜ ವಿಮರ್ಶೆಯನ್ನು ಅವಲಂಬಿಸಿದೆ. ಎಲ್ಲರಿಗೆ ದೇವರ ಜಾತ್ರೆಗೆ ಹೋಗುವ ಸಂಭ್ರಮ; ಅಸ್ಪೃಶ್ಯ ಜಲಗಾರ ಹೋಗುವುದಿಲ್ಲ; ಶುದ್ಧಿ ಮಾಡುವ ಕಾಯಕ ಮುಂದುವರಿಸುತ್ತಾನೆ; ಕಾಯಕವೇ ನಿಜವಾದ ಪೂಜೆಯೆಂದು ತಿಳಿದು ಹಾಡುತ್ತಾನೆ. ದೇವರು ಮೆಚ್ಚಿ ಪ್ರತ್ಯಕ್ಷವಾಗುತ್ತಾನೆ; ನಕ್ಷತ್ರ, ಚಂದ್ರ, ಗಿಡಮರಗಳ ಪ್ರಕೃತಿ ಜಲಗಾರನ ದೇವಾಲಯ ಆಗುತ್ತವೆ. ಈ ಕತೆಯನ್ನು ಕುವೆಂಪು ಉತ್ಸಾಹದಿಂದ ಮಂಡಿಸಿದ್ದಾರೆ; ಆದರೆ ಇದರ ತತ್ವ ಹಳೆಯದು, ಬಸವಣ್ಣನವರ ಕಾಲದ್ದು. ಇದನ್ನೇ ಆಧುನಿಕ ದೃಷ್ಟಿಯಿಂದ ನೋಡಿದರೆ, ಅತೃಪ್ತಿಯಾಗುತ್ತದೆ. ಜಲಗಾರನ ಬಡತನ, ಅವನಿಗೆ ದೊರೆತ ತಾತ್ಸಾರ, ಅವಮಾನಕ್ಕೆ ಪ್ರಕೃತಿ ಪರಿಹಾರವೇ? ಗುಡಿಗೋಪುರಗಳನ್ನು ಅಲ್ಲಗಳೆದು ಜಲಗಾರನ ವೃತ್ತಿ ಹೊಗಳಿದರೆ, ಅವನನ್ನು ಪ್ರಕೃತಿಯಲ್ಲಿ ಬಿಟ್ಟರೆ, ಆಯಿತೆ? ಅವನ ಆರ್ಥಿಕ, ಸಾಮಾಜಿಕ ಸ್ಥಿತಿಯಲ್ಲಿ ಅವನ ದುರಂತ ಅಡಗಿಲ್ಲವೆ? ಪ್ರಕೃತಿ ಎಲ್ಲದಕ್ಕೆ ಮದ್ದಲ್ಲ; ಹಸಿದವನಿಗಂತೂ ಅಲ್ಲ.

ಹೀಗೆ ಜಲಗಾರನಿಗೊಂದು ಹೊಸ ದೇವಸ್ಥಾನ, ಪ್ರಕೃತಿಯ ದೇವಸ್ಥಾನ ಕಟ್ಟಿಸಿಕೊಟ್ಟರು; ಎಲ್ಲ ಗುಡಿಗಳಿಗೂ ಕಂದಾಚಾರ ಕಟ್ಟಿಟ್ಟದ್ದು. ಇದು ಕುವೆಂಪು ಅವರ ಗಮನ ಸೆಳೆಯಲಿಲ್ಲ. ಪ್ರಕೃತಿ ಕುವೆಂಪು ಅವರ ಶತ್ರು ಮತ್ತು ಮಿತ್ರ ಎಂಬುದು ಇದರಿಂದ ಗೊತ್ತಾಗುತ್ತದೆ; ನಿಜವಾದ ಸಮಾಜ ಪ್ರಜ್ಞೆಯ ಜೊತೆ ಪ್ರಕೃತಿ ಹೋಗಲು ತಡವರಿಸುತ್ತದೆ. ಇನ್ನೊಂದು ನಾಟಕದಲ್ಲಿ ಇನ್ನೊಂದು ತಪ್ಪಿದೆ. ಪ್ರಕೃತಿಯ ಶಿಶು ಏಕಲವ್ಯ ಜಾತಿಯಲ್ಲಿ ಶೂದ್ರ. ಅವನಿಗೆ ಪ್ರಕೃತಿ ಎಲ್ಲವನ್ನೂ ಕಲಿಸಲಾರದು; ಬ್ರಾಹ್ಮಣ ಗುರು ದ್ರೋಣನನ್ನು ಆರಾಧಿಸುತ್ತಾನೆ; ಅವನನ್ನು ಪೇಚಿನಲ್ಲಿ ಸಿಕ್ಕಿಸುತ್ತಾನೆ. ಉಚ್ಚವರ್ಗದ ಬಗ್ಗೆ ಕುವೆಂಪು ಅವರಿಗೆ ಗುಟ್ಟಾಗಿ ಗೌರವವಿದೆ; ಒಂದು ಕಡೆಯಿಂದ ಹೋದ ಆಚಾರ ಇನ್ನೊಂದು ಕಡೆಯಿಂದ ನುಸುಳುತ್ತದೆ; ಏಕಲವ್ಯ ಕೊನೆಗೂ ತ್ಯಾಗಮೂರ್ತಿಯಾಗಿರುವುದು ದ್ರೋಣನ ಬಗ್ಗೆ ಅವನಿಗಿರುವ ಭಕ್ತಿಯಿಂದಲೇ.

ಕುವೆಂಪು ಬದುಕಿದ ಸಮಾಜ ವ್ಯವಸ್ಥೆ ಕಾರಣವಿರಬಹುದು; ಅಂದಿನ ಆದರ್ಶಗಳು, ನವೋತ್ಸಾಹ, ಹಳೆಯದರ ಬಗ್ಗೆ ಗೌರವ ಕಾರಣವಿರಬಹುದು. ಕುವೆಂಪು ಜಾತಿ ವ್ಯವಸ್ಥೆಯ ಬಗ್ಗೆ ಬರೆಯುವಾಗಲೆಲ್ಲ ಒಂದು ರೀತಿಯಲ್ಲಿ ವರ್ಣಧರ್ಮವನ್ನು ಒಪ್ಪಿರುವಂತೆ ಕಾಣುತ್ತದೆ. ಅವರಲ್ಲಿ ಎಲ್ಲೂ ಬ್ರಾಹ್ಮಣ ಶೂದ್ರನಾಗುವುದಿಲ್ಲ; ಶಂಬೂಕ ತಪಸ್ಸು ಮಾಡಲು ಇಚ್ಛಿಸುತ್ತಾನೆ; ಏಕಲವ್ಯ ಕ್ಷತ್ರಿಯರ ವಿದ್ಯೆಗೆ ಆಶೆ ಪಡುತ್ತಾನೆ; ಜಲಗಾರ ಹೊಸ ದೇವರು ಕಾಣುತ್ತಾನೆ. ಶ್ರೀರಂಗ, ಕೈಲಾಸಂ ತಮ್ಮ ಜಾತಿಯನ್ನು ವಿಡಂಬನೆಗೆ ಈಡುಮಾಡುತ್ತಿದ್ದಾಗ ಕುವೆಂಪು ಬ್ರಾಹ್ಮಣ್ಯೆಯನ್ನು ಶುದ್ಧಿಮಾಡಿ ಪ್ರವೇಶಿಸಲು ಯತ್ನಿಸುತ್ತಿದ್ದರು. ಅವರು ನೇರವಾಗಿ ಶೂದ್ರನನ್ನು ಟೀಕಿಸಿ, ರೊಚ್ಚಿಗೇಳಿಸಿದ್ದೂ ಕಮ್ಮಿ; ಮೂಲಭೂತ ಬದಲಾವಣೆಗೆ ಪ್ರೇರೇಪಿಸಿದ್ದೂ ಇಲ್ಲ. ಹೀಗಾಗಿ ಇವರ ಸಮಾಜ ಪ್ರಜ್ಞೆ ತೆಳುವಾಗುತ್ತದೆ.

ಈ ಸಮಸ್ಯೆಗೆ ಭಾಷೆ, ಪ್ರತಿಮೆಯ ಮುಖವಿದೆ. ಕುವೆಂಪು ಮುಂಚಿನಿಂದಲೂ ಎಂಥ ಸಾಮಾನ್ಯನೂ ತನ್ನ ಆತ್ಮಶ್ರೀ ಬೆಳೆಸಿಕೊಂಡರೆ ಉತ್ತಮನಾಗಬಲ್ಲ ಎಂದು ನಂಬಿದವರು. ಉತ್ತಮ ತಪಸ್ಸು ಮಾಡುತ್ತಾನೆ; ಸಂಸ್ಕೃತ, ವಿದ್ಯೆ ಕಲಿಯುತ್ತಾನೆ; ಗಂಭೀರವಾಗುತ್ತಾನೆ. ಇದು ಅವರ ಉತ್ತಮಿಕೆಯ ಕಲ್ಪನೆ. ಇದರಿಂದಾಗಿ ಕುವೆಂಪು ಜಾನಪದ ಭಾಷೆ ಬಿಟ್ಟರು; ಸುಶಿಕ್ಷಿತ ಭಾಷೆಯಲ್ಲಿ ಬರೆದರು. ಹೀಗಾಗಿ ಅವರ ಭಾವಗೀತೆಗಳಲ್ಲಿ ಶಬ್ದ ಹೆಚ್ಚು; ಅರ್ಥ ಕಡಿಮೆ. 'ಪಕ್ಷಿ', 'ಸುಗ್ಗಿ ಬರುತಿದೆ', 'ಕುಮಾರವ್ಯಾಸ' ಹೀಗೆ ನಾಲ್ಕಾರನ್ನು ಹೆಸರಿಸಬಹುದು.

ಆದರೆ ಕುವೆಂಪು ಕತೆಗಾರರು; ಅತ್ಯುತ್ತಮ ಕತೆಗಾರರು. ಇವರ ಕಥನ ಕವನಗಳ ಕಸುವು ಕತೆಯದು. ಕುವೆಂಪು ಹಿಂದೆ ನಿಲ್ಲುತ್ತಾರೆ; ಕತೆ ಅರಳಲು ಬಿಡುತ್ತಾರೆ, 'ತಾನಾಜಿ', 'ಕಿಂದರಿಜೋಗಿ' ಇಂಥವು ಸೊಗಸಾಗಿ ಬೆಳೆಯುತ್ತವೆ; ಹಿನ್ನೆಲೆ ಸ್ಪಷ್ಟವಾಗುತ್ತಾ ಸಾಗುತ್ತದೆ; ಪಾತ್ರಗಳು ಖಚಿತವಾಗುತ್ತವೆ. ಇಲ್ಲಿ ನಿಜವಾದ ಕುವೆಂಪು ಇದ್ದಾರೆ; ನಿರೂಪಣೆ, ತಮಾಷೆ, ವರ್ಣನೆ, ರಸಿಕತೆ ಎಲ್ಲಾ ಇಲ್ಲಿವೆ; ಇವರ ಸಣ್ಣ ಕತೆಗಳಿಗೂ ಇದು ಅನ್ವಯಿಸುತ್ತದೆ.



ಪಿ. ಲಂಕೇಶ್

ಕತೆ ಹೇಳುವುದರಲ್ಲಿ ಮಾಸ್ತಿ ನಿಸ್ಸೀಮರು; ಆದರೆ ಕುವೆಂಪು ಅವರದ್ದು ಭೀಮಬಲ. ಭೋರ್ಗರೆವ ಹೊಳೆಯಂತೆ, ಚೀತ್ಕರಿಸುವ ಕಾಡಿನಂತೆ ಅವರ ಕಥನ. ಎರಡೂ ಕಾದಂಬರಿಗಳಲ್ಲಿ ಕುವೆಂಪು ತಮ್ಮ ಕಾಲದ ಅತ್ಯುತ್ತಮ ಕತೆಗಾರರೆಂಬುದು ಗೊತ್ತಾಗುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಕೇಂದ್ರವಿಲ್ಲ; ಆದರೆ ಅಲ್ಲಿಯ ಜೀವನದ ಚಿತ್ರಣ ದಟ್ಟ, ತೀವ್ರ. ಹಳ್ಳಿಯ ಆಚಾರಗಳು, ಪ್ರೇಮಪ್ರಕರಣಗಳು, ಕಾಮ, ಮಣ್ಣಿನ ಕಮರು, ಜನರ ಜಾಣತನ, ಆಶ್ಚರ್ಯ, ಅಸೂಯೆ, ಎಲ್ಲದರಲ್ಲಿ ಕಾಡು ನೆಲೆಸಿದೆ; ಕಾಡಿನ ಭಾಗವಾಗಿ ಜನರಿದ್ದಾರೆ. ಎಲ್ಲದರ ಹಿಂದಿನ ಜೀವನೋತ್ಸಾಹ, ದುರಂತದ ಆಳದ ಶ್ರದ್ಧೆ ಬೆರಗುಗೊಳಿಸುತ್ತದೆ.

ಕುವೆಂಪು ಅವರ ಕಥನ ಕಲೆಗೆ ಉತ್ತಮ ನಿದರ್ಶನ 'ಹೆಗ್ಗಡಿತಿ'. ಇದು ಕುವೆಂಪು ಅವರ ನಿಜವಾದ ಜಾನಪದ ಕಾವ್ಯ; ಈ ಕೃತಿಯಲ್ಲಿ ಹೂವಯ್ಯನ ಕಡೆ ಇದ್ದಾರೆ; ಅವನ ಪ್ರೇಮಕಥೆಯೋ ಎಂಬಂತೆ ಬರೆಯುತ್ತಾರೆ. ಆದರೆ ಕತೆ ಕುವೆಂಪು ಅವರ ಉದ್ದೇಶ ಮೀರಿ ಅರ್ಥವತ್ತಾಗಿದೆ; ಮುಖ್ಯಸ್ಥಳದಲ್ಲಿ ಹೆಗ್ಗಡಿತಿ ಇದ್ದಾಳೆ; ಪುಟ್ಟಣ್ಣನ ಬೇಟೆ ಹೂವಯ್ಯನ ತಪಸ್ಸಿಗಿಂತ ಹೆಚ್ಚು ಲವಲವಿಕೆಯಿಂದ ಕೂಡಿದೆ.

ಪ್ರೇಮದ ನಾನಾ ಮುಖಗಳು, ಮಾನವ ಪ್ರಕೃತಿಯ ಅನೇಕ ಪದರಗಳು ಇಲ್ಲಿವೆ. ಹೂವಯ್ಯನ ಧ್ಯಾನ ದುರಂತದಲ್ಲಿ ಮುಗಿದಿದೆ; ಬದುಕು ವಿಜೃಂಭಿಸಿದೆ. ವೃತ್ತದೊಳಗಿನ ವೃತ್ತವಾಗಿ ಸಾಗುವ ಕತೆ ಅತ್ಯುತ್ತಮ ಕಾದಂಬರಿಗಳ ರೀತಿಯನ್ನು ನೆನಪಿಗೆ ತರುತ್ತದೆ; ಮೀನು, ಮಾಂಸ, ವಾಸನೆ, ಪ್ರೇಮಿಗಳ ಕಾವು, ದುರಂತದ ಭೀಕರತೆ ಮನಸ್ಸಿನಲ್ಲಿ ನಿಲ್ಲುತ್ತದೆ. ಇದು ನಿಜಕ್ಕೂ ದಲಿತವರ್ಗದ ದಿಗ್ವಿಜಯ.

ಆದರೆ ಕುವೆಂಪು ಅವರ ಶಕ್ತಿಯೆಲ್ಲ ಕೇಂದ್ರೀಕೃತವಾದದ್ದು 'ರಾಮಾಯಣದರ್ಶನ'ದಲ್ಲಿ, ಹತ್ತು ವರ್ಷ ಬರೆದ ಕೃತಿ; ಬದುಕಿನ ಸಾರವನ್ನೆಲ್ಲ ಇಳಿಸಿದ ಮಹತ್ವಾಕಾಂಕ್ಷೆಯ ಕಾವ್ಯ. ಕುವೆಂಪು ಒಂದಾನೊಂದು ಕಾಲಕ್ಕೆ 'ಕರಿಸಿದ್ಧ' ಬರೆಯುವಾಗ ಇಂಥದನ್ನು ಕಂಡು ನಕ್ಕಿದ್ದರು; ಸಾಮಾನ್ಯರ ಬದುಕು ಕಾವ್ಯಕ್ಕೆ ಸಾಕು ಅಂದಿದ್ದರು; ಹದಿನೆಂಟು ವರ್ಣನೆಗಳೇಕೆ, ಯಮಕ, ಗಮಕಗಳೇಕೆ, ಛಂದೋವಿಲಾಸವೇಕೆ ಅಂದಿದ್ದರು; ಆದರೆ ಕುವೆಂಪುವಿಗೆ ದೊಡ್ಡದು ಇಷ್ಟ, ದೊಡ್ಡದನ್ನು ಬರೆಯಬೇಕು, ನಮ್ಮ ಸಾಹಿತ್ಯ ಅತ್ಯುಚ್ಚ ಮಟ್ಟಕ್ಕೇರಬೇಕು ಎಂಬುದು ಆದರ್ಶ. ತಮ್ಮ ಮಹಾಕಾವ್ಯದಲ್ಲಿ ಹೇಳುತ್ತಾರೆ: "ನೀಡದೊಳ್ ಬರೆದು, ಕಾಡಿನಲಿ ಹಾರಾಡಿದಾ ಗರುಡ ಶಿಶು, ಗರಿ ಬಲಿತ ಮೇಲೆ ಅಲ್ಪ ದೇಶಂಗಳಂ ಚರಿಸಿ ತಣಿವುದೆ?"

ಮಹಾಕಾವ್ಯ ಬರೆಯಹೋಗಿ ಸ್ಪೆನ್ಸರ್ ಗೊಂದಲಗೊಂಡ; ಮಿಲ್ಟನ್ ಬಹಳ ಪ್ರಯಾಸಪಟ್ಟು ವಸ್ತುವಿಗೆ ಹುಡುಕಾಡಿದ; ಬರೆದು ಮುಗಿಸಿದ. ಪುರಾಣ ವಸ್ತುವಾದರೂ ಮಿಲ್ಟನ್‌ನಲ್ಲಿ ನೆಚ್ಚಿನ ವೈಚಾರಿಕತೆ, ಬಂಡಾಯ, ಭಕ್ತಿ, ಸ್ಥೈರ್ಯ ಅಲ್ಲಿ ವ್ಯಕ್ತವಾಗಿವೆ; ರಾಜಕೀಯ, ಧಾರ್ಮಿಕ ತಿಕ್ಕಾಟಗಳು ಅಲ್ಲಿವೆ. ಕುವೆಂಪು ಅವರ ಕಾವ್ಯದಲ್ಲೂ ಆಧುನಿಕ ಸಂಗತಿಗಳಿವೆ; ಅವರು ಕಲಿತದ್ದು, ಕಂಡದ್ದು, ಕೇಳಿದ್ದು ಒಂದು ರೂಪಕ್ಕೆ ಬಂದಿದೆ. ಮೂರು ಕಾಲವನ್ನೂ ಸಮಸ್ತ ಜಗತ್ತನ್ನೂ ಒಳಗೊಳ್ಳಲೆಳಸುವ ಈ ಕಾವ್ಯದಲ್ಲಿ ಮಾನವೀಯ ಘಟನೆಗಳು ಅನೇಕ. ಶ್ರೀರಾಮನು ಭೂಜಾತೆಯಾದ ಸೀತೆಯನ್ನು ವರಿಸುತ್ತಾನೆ; ಮರ್ತ್ಯದ ಮೌಲ್ಯ ಪ್ರತಿನಿಧಿಸುವ ರಾವಣನನ್ನು ಸಂಹರಿಸುತ್ತಾನೆ; ಚಿತ್‌ಶಕ್ತಿಯನ್ನು ಸಂವರ್ಧಿಸುತ್ತಾನೆ. ಕತೆ ಹಳೆಯದು; ಆದರೆ "ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?"

ಈ ಕೃತಿಯ ಧೋರಣೆಯಲ್ಲಿ ಎದ್ದು ಕಾಣುವುದು ಎರಡು; ಈ ಲೋಕದ ರಾಕ್ಷಸರ ಬಗ್ಗೆ ಕೂಡ ಉದಾರವಾದ ಪೂರ್ಣದೃಷ್ಟಿ; ಚಿರಪರಿಚಿತ ಕತೆ ಹೇಳುತ್ತಲೇ ಸಾಂಕೇತಿಕತೆಯನ್ನು ಸ್ಥಾಪಿಸುವ ಸಾಮರ್ಥ್ಯ. ಆದರೆ ಕುವೆಂಪು ಅವರ ಮುಂಚಿನ ಬಂಡಾಯ, ನಿಷ್ಠುರತೆ ಇಲ್ಲಿ ಇಲ್ಲ; ಜಲಗಾರ, ಏಕಲವ್ಯ, ಶಂಬೂಕರ ಸ್ಥಿತಿಯ ಅರಿವು ಮಾಸಿದೆ. "ಪೂರ್ಣದೃಷ್ಟಿ" ಆಧುನಿಕ ತತ್ವಕ್ಕೆ ಕೊಂಚ ವಿರುದ್ಧವಾಗಿದೆ; ಆಧುನಿಕರ ಪ್ರಕಾರ ವ್ಯಕ್ತಿ ನೈತಿಕ ಆಯ್ಕೆ (moral choice) ಮಾಡಬೇಕಾಗುತ್ತದೆ; ಆದರೆ ಪೂರ್ಣದೃಷ್ಟಿಯ ಪ್ರಕಾರ ಎಂಥ ಕೊಲೆಗಡುಕನೂ ದೇವರ ಇಚ್ಛೆಯಂತೆ ತನ್ನ ಕೆಲಸ ಮಾಡುತ್ತಾನೆ. ದೇವರ ನಿಯಮದಂತೆ ಎಲ್ಲ ನಡೆದರೆ ಘರ್ಷಣೆಯಲ್ಲಿ ಆಸಕ್ತಿ ಕಮ್ಮಿಯಾಗುತ್ತದೆ. ಹೋಮರನ ಶಕ್ತಿ ಗ್ರೀಕ್ ನಾಟಕಗಳ ದಿಟ್ಟತನ; ದೇವರು ನೇರಪ್ರವೇಶ ಮಾಡದೆ ಇರುವುದರಲ್ಲಿದೆ.

ಮಿಲ್ಟನ್ ಬಗ್ಗೆ ಕೀಟ್ಸ್ "ಈತನಿಗೆ ಯಾವುದು ಬದುಕೋ ಅದು ನನಗೆ ಸಾವು. ಇಂಗ್ಲಿಷ್ ಭಾಷೆಯನ್ನು ಇವನಿಂದ ರಕ್ಷಿಸಬೇಕು" ಅಂದ. ಆದರೆ ಕೀಟ್ಸ್ ಚಿಕ್ಕವನು; ದುಡುಕು ಹೆಚ್ಚು. ಕುವೆಂಪು ಹತ್ತು ವರ್ಷಕಾಲ ಶಬರಿಯ ಹಾಗೆ ಕಾಯುತ್ತಾ ಕಟ್ಟಿದ ಈ ಕಾವ್ಯಕ್ಕೆ ಹರಹಿದೆ; ವಿಶಿಷ್ಟ ಶಕ್ತಿಯಿದೆ; ಅತ್ಯುತ್ತಮವಾದದ್ದನ್ನು ಬರೆಯಬೇಕೆಂಬ ಛಲ, ನಿಷ್ಠೆ ಉದ್ದಕ್ಕೂ ಕಂಡುಬರುತ್ತದೆ; ರಮ್ಯಕಾವ್ಯ ಕೇವಲ ಸುಂದರ, ಲಲಿತ ಅನ್ನುವವರಿಗೆ ಸವಾಲು ಇಲ್ಲಿದೆ. ಈ ಕೃತಿ ಸುಲಭ ನಿರ್ಣಯಕ್ಕೆ ಸಿಕ್ಕುವುದಿಲ್ಲ. ಒಂದು ಬದುಕು ಧಾರೆಯೆರೆದ ಫಲವನ್ನು ಒಂದು ಮಾತಿನಲ್ಲಿ ತೂಗುವುದು ಸಣ್ಣತನವಾಗುತ್ತದೆ.

ಆದರೆ ಬದುಕು ವಿಚಿತ್ರವಾದದ್ದು; ಕೀಟ್ಸ್‌ನ ದುಡುಕಿನಲ್ಲಿ ಅನೇಕ ಹಿರಿಯರ ತಾಳ್ಮೆಯಲ್ಲಿಲ್ಲದ ಸತ್ಯವಿದೆ; ಕಾವ್ಯಕ್ಕೆ ಬದುಕನ್ನು ಧಾರೆಯೆರೆವ ಛಲದಲ್ಲಿ ಬದುಕೇ ಸೀಮಿತವಾಗುವ ಅಪಾಯವಿದೆ; ಭಾಷೆಯ ಜೀವ ಕುಗ್ಗುವ ಸಂಭವವಿದೆ. ಕೆಲವು ಸಲ ಕುವೆಂಪು ಮ್ಯಾಸ್‌ಮನರನ್ನು ಚಕಿತಗೊಳಿಸಿದ್ದಾರೆ. ತಮ್ಮ ಕೃತಿಗಳಿಂದ ತಾವೇ ಉದ್ಧರಿಸಿ ಮೆಚ್ಚಿಕೊಂಡಿದ್ದಾರೆ; ತಮ್ಮ ಕೃತಿಯ ಮೇಲೆ ಬಂದ ವಿಮರ್ಶೆಗೆ ತಾವೇ ಉತ್ತರ ಕೊಟ್ಟಿದ್ದಾರೆ (ಶೂದ್ರ ತಪಸ್ವಿ); 'ಹ್ಯಾಮ್ಲೆಟ್'ನಿಂದ ಎರವಲು ಪಡೆದು 'ರಕ್ತಾಕ್ಷಿ' ಬರೆದಾಗ ಕೃತಜ್ಞತೆ ಹೇಳುವುದನ್ನು ಮರೆತಿದ್ದಾರೆ; ತಮ್ಮದು 'ಭೀಮಸುಂದರಶೈಲಿ' ಎಂದು ಹೇಳಿಕೊಂಡಿದ್ದಾರೆ. ಆದರೆ ಕುವೆಂಪು ಒಂದು ಹೆಮ್ಮರ; ದೊಡ್ಡ ಆಕಾಂಕ್ಷೆ, ಸಾಧನೆಯ ವ್ಯಕ್ತಿ. ಇವರು ನಮಗೆ ಕೊಟ್ಟಿರುವುದನ್ನು ನೆನೆದು ದೋಷಗಳನ್ನು ಮರೆಯುವುದು ಸುಲಭ; ಇದೇ ಮಾತನ್ನು ಕನ್ನಡದ ಬಹಳ ಜನಕ್ಕೆ ಅನ್ವಯಿಸುವುದು ಕಷ್ಟ. ■

ವಿಶೇಷ ಸಂಚಿಕೆಯ ಬರಹಗಾರರು

- ಚೆನ್ನವೀರ ಕಣವಿ
- ಕಿ.ರಂ. ನಾಗರಾಜ
- ಡಾ. ಜಿ. ರಾಮಕೃಷ್ಣ
- ರಹಮತ್ ತರೀಕೆರೆ
- ತೀಸ್ತಾ ಸೆಟಲ್‌ವಾದ್
- ಸಾ.ರಾ. ಅಬೂಬಕ್ಕರ್
- ನಾಗೇಶ್ ಹೆಗ್ಡೆ
- ಎಂ.ಡಿ. ಒಕ್ಕುಂದ
- ಟಿ.ಎಸ್. ವಿವೇಕಾನಂದ
- ಡಾ. ಎಂ.ಎಸ್. ಆಶಾದೇವಿ
- ಡಾ. ವಿನಯಾ
- ಬಿ. ಪೀರ್‌ಭಾಷಾ
- ಎನ್.ಎಸ್. ಶಂಕರ್
- ಎಚ್.ಎಲ್. ಕೇಶವಮೂರ್ತಿ
- ಇಸ್ಮತ್ ಚುಗ್ತಾಯಿ
- ಕಲಿಗಣನಾಥ ಗುಡದೂರು
- ಬಿ.ಚಂದ್ರೇಗೌಡ
- ಬ್ಯಾಗೇಶ್ರೀ
- ಶಿವಸುಂದರ್
- ಸದಾಶಿವ ಶೆಣೈ
- ಪಾರ್ವತೀಶ
- ಕೆ. ಷರೀಫಾ
- ಜಾಣಜಾಣೆಯರು



ಮುಖಪುಟ ವಿನ್ಯಾಸ : ಅರುಣ್ ಕುಮಾರ್.ಜಿ
ಸಂಚಿಕೆಯ ವಿನ್ಯಾಸ : ಅರುಣ್ ಕುಮಾರ್.ಜಿ, ಸತೀಶ್, ನಾಗೇಶ್ ಮತ್ತು ಮಂಜುನಾಥ್ ನಿಲಸೋಗೆ
ಮುಖಪುಟ ಚಿತ್ರ : ಪ್ರೇಮ್ ಮತ್ತು ಮಲ್ಲಿಕಾ ಕಪೂರ್

ಹೊಸ ವರ್ಷದ ಹೊಸ್ತಿಲಲ್ಲಿ ನಿಂತು...



ಕಂಡಹಾಗೆ

ಇದೇ ಆಗಸ್ಟ್ ತಿಂಗಳಿಗೆ ಭಾರತಕ್ಕೆ ಸ್ವಾತಂತ್ರ್ಯ ಬಂದು 60 ವರ್ಷಗಳಾಗುತ್ತವೆ. 2007 ನೇ ಇಸವಿಯನ್ನು ಸುವರ್ಣ ಕರ್ನಾಟಕ ಎಂದು ಆಚರಿಸಲಾಗುತ್ತಿದೆ. ಬರುವ ಜುಲೈಗೆ ಅಪ್ಪ ಪತ್ರಿಕೆಯನ್ನು ಪ್ರಾರಂಭಿಸಿ 27 ವರ್ಷಗಳು ತುಂಬುತ್ತದೆ (ಅಪ್ಪನ ಹುಟ್ಟುಹಬ್ಬಕ್ಕೂ, ಪತ್ರಿಕೆ ಹುಟ್ಟುಹಬ್ಬಕ್ಕೂ ವ್ಯತ್ಯಾಸ ಗೊತ್ತಿಲ್ಲದ ಮೂರ್ಖರು ಮಾತ್ರ ಕಳೆದ ಒಂದು ವರ್ಷದಿಂದ 28-ನೇ ವರ್ಷ ಎಂದು ಲೆಕ್ಕ ಹಾಕಿದ್ದಾರೆ! ಇರಲಿ). ಅಪ್ಪನ ಪತ್ರಿಕೆ ಮರುಹುಟ್ಟು ಪಡೆದು ಮೂರನೇ ವರ್ಷಕ್ಕೆ ಕಾಲಿಟ್ಟಿದೆ.

ಯಾವುದೇ ಹುಟ್ಟುಹಬ್ಬ, ದಿನಾಚರಣೆ, ವಾರ್ಷಿಕೋತ್ಸವಕ್ಕೆ ಅರ್ಥ ಬರುವುದು ನಾವು ನಮ್ಮ ಕ್ರಿಯೆಗಳನ್ನೂ ನಮ್ಮ ಸಮಾಜದಲ್ಲಾಗುತ್ತಿರುವ ವಿದ್ಯಮಾನಗಳನ್ನು ಪುನರಾವಲೋಕಿಸಿದಾಗ. ಇದನ್ನು ಬರೆಯುತ್ತಿರುವ ದಿನವೇ ದೂರದ ಪಶ್ಚಿಮ ಬಂಗಾಳದಲ್ಲಿ ಅಲ್ಲಿನ ಸರ್ಕಾರ ವಿಶೇಷ ಆರ್ಥಿಕ ವಲಯವನ್ನು ವಿರೋಧಿಸುತ್ತಿರುವ ರೈತರ ಮೇಲೆ ಗುಂಡು ಹಾರಿಸಿ ಕನಿಷ್ಠ 20 ಜನರನ್ನು ಬಲಿ ತೆಗೆದುಕೊಂಡಿದೆ. ಇಂತಹ ದಾರುಣ ಕೃತ್ಯವನ್ನು ಎಸಗಿರುವುದು ತಾನು ರೈತ-ಕಾರ್ಮಿಕರ ಪರ ಎಂದು ಹೇಳಿಕೊಳ್ಳುವ ಸಿಪಿಎಂ ಪಕ್ಷದ ಸರ್ಕಾರ.

ಸಿಂಗೂರಿನಲ್ಲಿ ರತನ್ ಟಾಟಾನ ಕಾರ್ ಫ್ಯಾಕ್ಟರಿಗೆ 997 ಎಕರೆಗಳನ್ನು ನೀಡಲು ಹೊರಟ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ವಿರುದ್ಧ ಅಲ್ಲಿನ ಜನ ಪ್ರತಿಭಟಿಸಿದರು. ಆಗ ಅವರೆಲ್ಲ ಬಾಂಗ್ಲಾ ದೇಶದಿಂದ ಬಂದಿರುವ ಮುಸ್ಲಿಮ್ ಭಯೋತ್ಪಾದಕರು ಮತ್ತು ನಕ್ಸಲ್ ಚಳವಳಿಗಾರರು ಎಂದು ದೂಷಿಸಿದ ಮುಖ್ಯಮಂತ್ರಿ ಅವರ ಮೇಲೂ ಗುಂಡು ಹಾರಿಸಿ ಒಂದು ಡಜನ್ ಅಮಾಯಕ ಜನರನ್ನು ಕೊಂದಿದ್ದರು. ಈ ಕೃತ್ಯವನ್ನು ಭಟ್ಟಾಚಾರ್ಯ ಸಮರ್ಥಿಸಿಕೊಂಡಿದ್ದು ಹೇಗೆಂದರೆ "ನಾನು ಈ ಭೂಮಿಯನ್ನು ಕೊಡುತ್ತೇನೆಂದು ರತನ್ ಟಾಟಾಗೆ ಮಾತು ಕೊಟ್ಟಿದ್ದೇನೆ. ಈಗ ತಮ್ಮ ಭೂಮಿಯನ್ನು ಕಳೆದುಕೊಳ್ಳಲಿರುವ ಜನ ಪ್ರತಿಭಟಿಸಿದರು ಎಂದಮಾತ್ರಕ್ಕೆ ನಾನು ರತನ್ ಟಾಟಾ ಅವರಿಗೆ ಭೂಮಿ ಕೊಡುವುದಿಲ್ಲ ಅಂತ ಯಾವ ಮುಖ ಹೊತ್ತು ಹೇಳಲಿ?" ಎಂದು.



ಹೀಗೆ ರತನ್ ಟಾಟಾನಿಗೆ ಧಾರೆ ಎರೆದಿದ್ದು ಭಟ್ಟಾಚಾರ್ಯರವರ ಪಿತ್ರಾರ್ಜಿತ ಆಸ್ತಿಯೇನಲ್ಲ, ಬದಲಾಗಿ ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಿದ್ದ ಫಲವತ್ತಾದ ಸಾವಿರಾರು ರೈತರ ನೆಲವನ್ನು.

ಇದಿಷ್ಟು ಸಾಲದೆಂಬಂತೆ ಈಗ ನಂದಿಗ್ರಾಮದಲ್ಲಿ ಬರೋಬ್ಬರಿ 14,000 ಎಕರೆಗಳನ್ನು ಇಂಡೋನೇಷಿಯಾದ ಸಲೀಮ್ ಕಂಪನಿಗೆ ನೀಡಲು ಬುದ್ಧದೇವ ಭಟ್ಟಾಚಾರ್ಯ ಮುಂದಾಗಿದ್ದಾರೆ. ಇದರ ವಿರುದ್ಧವೂ ಅಲ್ಲಿನ ಜನ ಪ್ರತಿಭಟಿಸಲಾರಂಭಿಸಿದಾಗ ಭಟ್ಟಾಚಾರ್ಯ ಮತ್ತೆ ರಾಗ ಎಳೆದಿದ್ದು "ನಕ್ಸಲರು ಮತ್ತು ಮುಸ್ಲಿಂ ಭಯೋತ್ಪಾದಕರು ತಲೆಹರಟೆ ಮಾಡುತ್ತಿದ್ದಾರೆ. ಇವರನ್ನು ಮಟ್ಟ ಹಾಕಬೇಕು" ಎಂದು. ಹಾಗೆಯೇ ಮೊನ್ನೆ ಮಟ್ಟ ಹಾಕಿದ್ದಾರೆ, ಸುಮಾರು ಐವತ್ತಕ್ಕೂ ಹೆಚ್ಚು ಅಮಾಯಕರನ್ನು ಗುಂಡಿಟ್ಟು ಕೊಲ್ಲಿಸಿದ್ದಾರೆ.

ಈ ಹಿಂದೆ ಹೇಳಿರುವಂತೆ ಹಿಂದುತ್ವ ವಿರೋಧಿಗಳನ್ನು ನಕ್ಸಲರು ಎಂದೂ, ಮುಸಲ್ಮಾನರನ್ನು ಭಯೋತ್ಪಾದಕರೆಂದೂ ಹೇಗೆ ಸಂಘ ಪರಿವಾರ ಬಣ್ಣಿಸುತ್ತೋ ಹಾಗೆಯೇ ಇವತ್ತು ಬುದ್ಧದೇವ ಭಟ್ಟಾಚಾರ್ಯ ಕೂಡ ತಮ್ಮ ವಿರೋಧಿಗಳನ್ನು ನಕ್ಸಲರು ಮತ್ತು ಮುಸ್ಲಿಮ್ ಭಯೋತ್ಪಾದಕರು ಎಂದು ಕರೆಯುತ್ತಿದ್ದಾರೆ. ಆದರೆ ಇದಕ್ಕಿಂತಲೂ ಮುಖ್ಯವಾದ ಅಂಶ ಇಲ್ಲಿದೆ. ಅದೇನೆಂದರೆ ನಮ್ಮ ದೇಶದ ಜನರಿಂದಲೇ ಅವರ ನೆಲ, ಜಲವನ್ನು ಕಿತ್ತುಕೊಂಡು ವಿದೇಶಿ ಕಂಪನಿಗಳಿಗೆ ಮಾರುವುದು.

ಅಲ್ಲ, ಇಂತಹ ಘನಕಾರ್ಯಕ್ಕೆ ಅದ್ಯಾಕೆ ಮಹಾತ್ಮಗಾಂಧಿ ಮತ್ತು ಸಾವಿರಾರು ಜನ ಬ್ರಿಟಿಷರ ವಿರುದ್ಧ ಹೋರಾಡಿ, ಜೀವ ತೆತ್ತು, ರಕ್ತ ಹರಿಸಿ, ಬಂಧನಕ್ಕೊಳಗಾಗಿ ಸ್ವಾತಂತ್ರ್ಯವನ್ನು ಪಡೆಯಬೇಕಿತ್ತು? ಬ್ರಿಟಿಷರು ನಮ್ಮನ್ನು ಲೂಟಿ ಮಾಡುತ್ತಿದ್ದಂತೆಯೇ ಇವತ್ತು ನಮ್ಮ ಈ ದೊಡ್ಡ 'ಪ್ರಜಾಪ್ರಭುತ್ವ'ದಲ್ಲಿ 'ಜನಪ್ರತಿನಿಧಿಗಳೇ' ಹೀಗೆ ನಮ್ಮ ದೇಶವನ್ನು ತುಂಡುತುಂಡಾಗಿ ವಿದೇಶಿ ಕಂಪನಿಗಳಿಗೆ ಮಾರುತ್ತಾರೆಂದರೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅರ್ಥ ಇದೆಯೇ?

ನಿಜವಾಗಲೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆಯೇ? ಇಂದು ನಂದಿಗ್ರಾಮದಲ್ಲಾಗುತ್ತಿರುವುದನ್ನು ನೋಡಿದರೆ ಸ್ವಾತಂತ್ರ್ಯ ಸಿಕ್ಕಿಲ್ಲ ಎಂದೇ ಹೇಳಬೇಕಾಗುತ್ತದಲ್ಲದೆ. ಇವತ್ತು ಹೊಸ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಾರಂಭಿಸಬೇಕಿದೆ ಎಂದೂ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಿದೆ.

ಇದೆಲ್ಲ ದೂರದ ಪಶ್ಚಿಮ ಬಂಗಾಳದ ಮಾತಾಯಿತು. ನಮ್ಮ ಕರ್ನಾಟಕದಲ್ಲೇ ಏನಾಗುತ್ತಿದೆ ನೋಡಿ. ಪೊಲೀಸ್ ಅಧಿಕಾರಿಯೊಬ್ಬನ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಿದ್ದಕ್ಕೆ, ಮೇಲುವರ್ಗದ ಧಾರ್ಮಿಕ ನಂಬಿಕೆಗಳನ್ನು ಪ್ರಶ್ನಿಸಿದ್ದಕ್ಕೆ ಬಿ.ವಿ. ಸೀತಾರಾಮ್ ಮತ್ತು ಅವರ ಪತ್ನಿ ರೋಹಿಣಿ ಎಂಬ ಪತ್ರಕರ್ತರನ್ನು ಇಲ್ಲಿನ ಪೊಲೀಸರು ಬಂಧಿಸಿದರು. ಅಷ್ಟೇ ಅಲ್ಲ ಅವರಿಬ್ಬರ ವಿರುದ್ಧ ಬೊಟ್ಟ ದೂರುಗಳನ್ನು ದಾಖಲಿಸಿಕೊಂಡು ಹಿಂಸೆ ನೀಡಿದರು. ಇದೇ ಪೊಲೀಸರು ಹಲವು ದಿನಗಳ ಹಿಂದೆ ಮೂಲ್ಕಿ ರಫೀಕ್ ಎಂಬುವವನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದರು.

ಇದೆಲ್ಲದರ ಅರ್ಥವೇನು? ಪೊಲೀಸರು ಯಾರನ್ನು ಬೇಕಾದರೂ ಕೊಲ್ಲಬಹುದು, ಯಾರನ್ನು ಬೇಕಾದರೂ ಬಂಧಿಸಬಹುದು, ಯಾರೂ ಅವರನ್ನು ಪ್ರಶ್ನಿಸಬಾರದೆಂಬುದಷ್ಟೇ. ಇದನ್ನು ಸ್ವಾತಂತ್ರ್ಯ ಎನ್ನಲಾಗುತ್ತದೆಯೇ? ಪ್ರಜಾಪ್ರಭುತ್ವ ಎಂದು ಕರೆಯಲಾಗುತ್ತದೆಯೇ?

ಎಲ್ಲಿಯತನಕ ಬುದ್ಧದೇವ ಭಟ್ಟಾಚಾರ್ಯನಂತಹ ಎಡಪಂಥಿಯ ರಾಜಕಾರಣಿಗಳಿರುತ್ತಾರೋ, ಎಲ್ಲಿಯತನಕ ನಾಗರಾಜಶೆಟ್ಟಿ ತರಹದ ಬಲಪಂಥೀಯ ಸಚಿವರಿರುತ್ತಾರೋ, ಅಲ್ಲಿಯತನಕ ನಮ್ಮ ನೆಲ, ಜಲದ ಮೇಲೆ ನಮಗೆ ಯಾವ ಹಕ್ಕು ಇರುವುದಿಲ್ಲ, ಪ್ರಜೆಗಳಾಗಿ ನಮ್ಮ ಹಕ್ಕುಗಳಿಗೆ ಕಿಂಚಿತ್ತೂ ಬೆಲೆ ಇರುವುದಿಲ್ಲ, ಅಷ್ಟೇ ಅಲ್ಲ, ಕುವೆಂಪು, ಗಾಂಧಿ, ಬಸವಣ್ಣ ಎಲ್ಲರೂ ಕೇವಲ ಫೋಟೋಗಳಲ್ಲಿ ಪುಸ್ತಕದಲ್ಲಿ ಶವಗಳಾಗಿರುತ್ತಾರೆ....

ನಮ್ಮಲ್ಲಿ ಅದೆಷ್ಟೋ ಬುದ್ಧಿಜೀವಿಗಳು, ಬರಹಗಾರರು, ಹೋರಾಟಗಾರರು, 1975 ರಲ್ಲಿ ಇಂದಿರಾಗಾಂಧಿ ಹೇರಿದ್ದ ತುರ್ತುಪರಿಸ್ಥಿತಿ ವಿರುದ್ಧ ಪ್ರತಿಭಟಿಸಿದ್ದರು. ಜನರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಂಡಿದ್ದ, ತಮಗೆ ಇಷ್ಟವಿಲ್ಲದವರನ್ನು ಬಂಧಿಸಿದ್ದ, ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದ, ಅಮಾನುಷ ದೌರ್ಜನ್ಯಗಳನ್ನು ಎಸಗಿದ್ದ, ಲೈಸೆನ್ಸ್ ರಾಜ್ ಮೂಲಕ ಅಂಧಾದರ್ಬಾರು ನಡೆಸಿದ್ದ ಇಂದಿರಾ ಗಾಂಧಿಯನ್ನು ಉಗ್ರವಾಗಿ ಖಂಡಿಸಿದ್ದರು.

ಅವತ್ತು ಅಧಿಕೃತವಾಗಿ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗಿತ್ತು. ಆದರೆ ಇವತ್ತು ಅನಧಿಕೃತವಾಗಿ, ತುರ್ತುಪರಿಸ್ಥಿತಿಯನ್ನು ಜಾರಿಗೆ ತರಲಾಗಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲೇ ಜನಪ್ರತಿನಿಧಿಗಳು ಇದನ್ನು ಮಾಡಿದ್ದರೂ "ಈಗೇನು ತುರ್ತುಪರಿಸ್ಥಿತಿ ಇಲ್ಲ" ಎಂದೇ ನಂಬಿರುವವರೆಲ್ಲಾ fool's paradise ನಲ್ಲಿ ಬದುಕುತ್ತಿದ್ದಾರೆ.

ಏಕೆಂದರೆ ಅಂದಿನ MISA ಕಾಯಿದೆಗಿಂತಲೂ ಕಠೋರವಾದ TADA ಬಂತು, ಅದನ್ನೂ ಮೀರಿಸುವಂತಹ POTA ಈಗ ಜಾರಿಗೆ ಬಂದಿವೆ. ಅವತ್ತಿನ ಲೈಸೆನ್ಸ್ ರಾಜ್ ಜಾಗದಲ್ಲಿ ಜಾಗತೀಕರಣ-ಖಾಸಗೀಕರಣ-ಉದಾರೀಕರಣ ಎಂಬ ಮೂರು ಭೂತಗಳು ಬಂದಿವೆ, ಅಲ್ಲಿ ಪಶ್ಚಿಮ ಬಂಗಾಳದಲ್ಲಿ ಸರ್ಕಾರದ ತಿಜೋರಿಗೆ ನಷ್ಟವಾದರೂ ಪರವಾಗಿಲ್ಲ ಭೂಮಿಯನ್ನು ಬಂಡವಾಳಶಾಹಿಗಳಿಗೆ ನೀಡುತ್ತೇವೆ ಎಂದು ಸರ್ಕಾರ ಪಟ್ಟು ಹಿಡಿದಿದ್ದರೆ, ಇಲ್ಲಿ ಅಧಿಕಾರದಲ್ಲಿರುವವರು ಗಣಿ ಹಗರಣ, ಲ್ಯಾಂಡ್ ಹಗರಣದಲ್ಲಿ ಮುಳುಗಿ ರಾಜ್ಯವನ್ನೇ ಮನೆ ಆಸ್ತಿ ಮಾಡಿಕೊಳ್ಳತೊಡಗಿದ್ದಾರೆ.

ಹಣ-ಹೆಂಡ ಹರಿಸಿ ಚುನಾವಣೆ ಎಂಬ ಸರ್ಕಸ್‌ನಲ್ಲಿ ಗೆದ್ದವರನ್ನು ನಿಜವಾಗಲೂ ಜನಪ್ರತಿನಿಧಿಗಳು ಎಂದು ಕರೆಯಲಾಗುತ್ತದೆಯೇ, ನಮ್ಮದೂ ಒಂದು ಪ್ರಜಾಪ್ರಭುತ್ವ ಎಂದು ಹೆಮ್ಮೆ ಪಡಲಾಗುತ್ತದೆಯೇ?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವುದೇ ಈ ನಿಮ್ಮ ಪತ್ರಿಕೆಯ ಜವಾಬ್ದಾರಿಯಾಗಿದೆ. ಕಳೆದ ಎರಡು ವರ್ಷಗಳಿಂದ ನಾವು ಇದನ್ನು ಸಾಧ್ಯವಾದಷ್ಟು ಮಾಡಿಕೊಂಡು ಬಂದಿದ್ದೇವೆ ಅನ್ನಿಸುತ್ತಿದೆ. ಈ ವಿಶೇಷಾಂಕ ಕೂಡ ಆ ಪ್ರಯತ್ನದ ಮುಂದುವರಿಕೆ. ಮನರಂಜಿಸುವ ಕತೆ-ಕವನಗಳನ್ನು ಮಾತ್ರ ಪ್ರಕಟಿಸಿ ವಿಶೇಷಾಂಕ ಎಂದು ಕರೆಯುವ ಬದಲಾಗಿ ನಮ್ಮ ಸುತ್ತಲೂ ನಡೆಯುತ್ತಿರುವ ವಿದ್ಯಮಾನಗಳಿಗೆ ಸಂಬಂಧಿಸಿರುವ ಲೇಖನಗಳನ್ನು ಮಾತ್ರವಲ್ಲ ಅವುಗಳನ್ನು ಬಿಂಬಿಸುವ ಕತೆ-ಕವನಗಳೂ ಈ ವಿಶೇಷಾಂಕದಲ್ಲಿದ್ದು ಈ ಸಂಚಿಕೆಯನ್ನು ನಿಜವಾಗಲೂ ವಿಶೇಷವಾಗಿಸಿವೆ.

ಇದನ್ನು ರೂಪಿಸಲು ನೆರವಾದ ಎಲ್ಲ ಬರಹಗಾರರಿಗೂ, ಎರಡು ವರ್ಷ ನಮ್ಮ ಕೈಹಿಡಿದು ಸಹಾಯ ಮಾಡಿದ ನಮ್ಮ ಓದುಗ ಮಿತ್ರರಿಗೂ, ನಮ್ಮ ಸಂಸ್ಥೆಯ ಆಧಾರಸ್ತಂಭಗಳಾಗಿರುವ ಏಜಂಟರಿಗೂ, ಮತ್ತು ಎಲ್ಲ ಒತ್ತಡಗಳ ನಡುವೆಯೂ ಎಂದೂ ಪತ್ರಿಕೆ ತಡವಾಗದೆ ಹೊರಬರಲು ನನ್ನೊಂದಿಗೆ ಶ್ರಮಿಸುವ ನಮ್ಮ ಸಿಬ್ಬಂದಿಗೂ ಧನ್ಯವಾದಗಳು....

ಮತ್ತು ಯುಗಾದಿಯ ಶುಭಾಶಯಗಳು....

-ಗೌರಿ ಲಂಕೇಶ್


ತೇಜಸ್ವಿನಿ ಗೌಡರ ಬಣಕ್ಕೆ ಜಂಪ್!

ಕನಕಪುರ ಲೋಕಸಭಾ ಸದಸ್ಯೆ ತೇಜಸ್ವಿನಿ ಶ್ರೀರಮೇಶ್ ಕಾಂಗ್ರೆಸ್‌ಗೆ ಟಾಟಾ ಹೇಳಲು ಈಗಿನಿಂದಲೇ ತಯಾರಿ ಶುರು ಮಾಡಿರುವಂತೆ ಕಾಣುತ್ತಿದೆ. ಕಾಂಗ್ರೆಸ್‌ನ ಯಾವೊಬ್ಬ ಶಾಸಕರೊಂದಿಗೂ ಸೌಹಾರ್ದಯುತ ರಾಜಕೀಯ ಸಂಬಂಧವಿಟ್ಟುಕೊಳ್ಳದ ತೇಜಸ್ವಿನಿಗೆ ಈಗ ರಾಜಕೀಯ ಮಿತ್ರರೆಂದರೆ ಇಬ್ಬರೆ. ಒಬ್ಬರು ಚನ್ನಪಟ್ಟಣದ ಕಾಂಗ್ರೆಸ್ ಶಾಸಕ ಸಿ.ಪಿ. ಯೋಗೇಶ್ವರ್. (ಅವರ ಇದು ಆಟಕ್ಕುಂಟು ಲೆಕ್ಕಕ್ಕಿಲ್ಲದಂತಹ ನಂಟು.) ಇನ್ನೊಬ್ಬರೆಂದರೆ ಜಾತ್ಯತೀತ ದಳದ ದೇವೇಗೌಡರ ಕುಟುಂಬ. ಇದು ಬರೀ ಆಟಕ್ಕಲ್ಲ ಭವಿಷ್ಯದ ರಾಜಕೀಯ ಲೆಕ್ಕಾಚಾರಗಳನ್ನು ಹಾಕಿಯೇ ಸ್ವತಃ ತೇಜಸ್ವಿನಿಯೇ ಇಡುತ್ತಿರುವ ಹೆಜ್ಜೆಯಾಗಿದೆ. ಮುಂದೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದೇಹೋದರೆ ಜೆಡಿಎಸ್‌ನಿಂದ ದೊಡ್ಡಬಳ್ಳಾಪುರ ಅಸೆಂಬ್ಲಿಗೆ ಸ್ಪರ್ಧಿಸಬಹುದೆಂಬ ಲೆಕ್ಕಾಚಾರ ತೇಜಸ್ವಿನಿಯದ್ದು.



ರಾಜಕೀಯದ ಗಂಧಗಾಳಿಯೂ ಗೊತ್ತಿರದಿದ್ದ ಪತ್ರಕರ್ತೆ ತೇಜಸ್ವಿನಿಯನ್ನು ಕರೆತಂದು ಎಂಪಿಯಾಗಿಸಿದ್ದೇ ಡಿ.ಕೆ. ಶಿವಕುಮಾರ್ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಈಗ ಡಿಕೆಗೆ ತೇಜಸ್ವಿನಿ ತಲೆ ಕಂಡರಾಗುತ್ತಿಲ್ಲ. ದೇವೇಗೌಡರನ್ನೇ ಸೋಲಿಸಿ ಸಂಸದೆಯಾದ ತಕ್ಷಣ ತಾನೊಬ್ಬ ದೊಡ್ಡ ನಾಯಕಿಯಾಗಿಬಿಟ್ಟೆ ಎಂದು ಭ್ರಮಿಸಿಕೊಂಡ ತೇಜಸ್ವಿನಿ ತನ್ನ ಕ್ಷೇತ್ರದ ಕಾಂಗ್ರೆಸ್ ಶಾಸಕರು ಹಾಗೂ ಕಾರ್ಯಕರ್ತರನ್ನೇ ಅಸಡ್ಡೆ ಮಾಡಿಬಿಟ್ಟರು. ಯಾರಿಗೂ ಕಿಲುಬು ಕಾಸಿನ ಮರ್ಯಾದೆ ನೀಡದೆ "ನನಗೆ ದೆಹಲಿಯಲ್ಲಿ ಅವರು ಗೊತ್ತು, ಇವರು ಗೊತ್ತು" ಎನ್ನುತ್ತಾ ಬೂಸಿ ಬಿಡತೊಡಗಿದ್ದರು. ಇದನ್ನೆಲ್ಲಾ ನೋಡುವಷ್ಟು ನೋಡಿ ಸಹಿಸಿ ಸಾಕಾದ ಕಾಂಗ್ರೆಸ್ಸಿಗರೇ ಈಗ ತೇಜಸ್ವಿನಿ ಬಾಲ ಕಟ್ ಮಾಡಲು ನಿಂತು ಬಿಟ್ಟಿದ್ದಾರೆ. ಮಾಗಡಿಯ ಎಚ್.ಎಂ. ರೇವಣ್ಣ ರಾಮನಗರದ ಸಿ.ಎಂ. ಲಿಂಗಪ್ಪ ಕನಕಪುರ-ಸಾತನೂರಿನಲ್ಲಿ ಡಿ.ಕೆ. ಶಿವಕುಮಾರ್ ತಮ್ಮ ಕ್ಷೇತ್ರದಲ್ಲೆಲ್ಲೂ ತೇಜಸ್ವಿನಿ ಕಾಲಿಡದಂತೆ ಮಾಡಿಬಿಟ್ಟಿದ್ದಾರೆ. ಬರೀ ಎಂಪಿ ಫಂಡಿನ ಪರ್ಸೆಂಟೇಜ್ ಡೀಲುಗಳಲ್ಲೇ ಮುಳುಗಿರುವ ತೇಜಸ್ವಿನಿಗೆ ಮುಂದಿನ ಎಲೆಕ್ಷನ್‌ನಲ್ಲಿ ತನಗೆ ಕಾಂಗ್ರೆಸ್ ಟಿಕೆಟ್ ಕೊಡುವುದಿಲ್ಲ ಎಂಬ ಡೌಟು ಬಂದಿದ್ದೇ ತಡ, ಸೀದಾ ಹೋಗಿ 'ಅಪ್ಪಾಜಿ' ಎಂದು ದೇವೇಗೌಡರ ಕಾಲು ಹಿಡಿದುಕೊಂಡಿದ್ದಾರೆ.

ಗೌಡರಿಗೂ ಈಗ ದೊಡ್ಡಬಳ್ಳಾಪುರದಲ್ಲಿ ಜಾಲಪ್ಪನವರನ್ನು ಹೆಣೆಯಲು ಯಾರನ್ನಾದರೂ ಛೂ ಬಿಡಬೇಕಿತ್ತು. ಕೂಗುಮಾರಿ ತೇಜಸ್ವಿನಿ ಅದಕ್ಕೆ ಸರಿಯಾದ ಕ್ಯಾಂಡಿಡೇಟ್ ಎಂಬುದು ಗೌಡರ ಯೋಚನೆ. ಹೀಗೆ ಪರಸ್ಪರ ನೀ ನನಗಿದ್ದರೆ ನಾ ನಿನಗೆ ಎನ್ನುತ್ತಾ ಗೌಡ-ತೇಜಸ್ವಿನಿಯ ನಂಟು ಬಲಗೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಗಳೂ ಸಿಗುತ್ತಿವೆ. ಮೊನ್ನೆ ಮಾರ್ಚ್ 14ರ ಬುಧವಾರ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಅನಿತಾ ತಮ್ಮ ಮ್ಯಾರೇಜ್ ಆನಿವರ್ಸರಿ ಆಚರಿಸಿಕೊಂಡಾಗ ಹೋಗಿ ವಿಶ್ ಮಾಡಿದವರ ಪೈಕಿ ಕಾಂಗ್ರೆಸ್‌ನ ತೇಜಸ್ವಿನಿಯ ಮುಖವೂ ಇತ್ತು. ಅಷ್ಟೇ ಅಲ್ಲ ರಾಮನಗರದಲ್ಲಿ ನಡೆದ ಅಭಿವೃದ್ಧಿ ಕಾರ್ಯಕ್ರಮದ ಸಭೆಯೊಂದರಲ್ಲಿ ಕುಮಾರಸ್ವಾಮಿಯನ್ನು ತೇಜಸ್ವಿನಿ ಬಾಯಿಗೆ ಬಂದಂತೆ ಹೊಗಳಿದ್ದರು. ಹಾಗಾಗಿ ಸಿ.ಎಂ. ಲಿಂಗಪ್ಪನ ಗುಂಪು ತೇಜಸ್ವಿನಿಯನ್ನು ಒಮ್ಮೆ ತಡವಿಕೊಂಡು ಹೀನಾಮಾನ ತೆಗಳಿತ್ತು.



ಇತ್ತ ದೊಡ್ಡಬಳ್ಳಾಪುರದಲ್ಲಿ ಏನಾಗಿದೆಯೆಂದರೆ ಜಾಲಪ್ಪ ಸಂಸದರಾದ ಮೇಲೆ ಅವರ ಮಗ ನರಸಿಂಹಸ್ವಾಮಿ ಕಾಂಗ್ರೆಸ್‌ನಿಂದ ಶಾಸಕರಾಗಿದ್ದಾರೆ. ಜಾಲಪ್ಪಗೂ-ಗೌಡರಿಗೂ ಈಗ ಹಾವು ಮುಂಗುಸಿಯಷ್ಟು ದ್ವೇಷ. ಇವರಿಬ್ಬರೂ 1982 ರಿಂದಲೂ ಒಂದೇ ಪಾರ್ಟಿಯಲ್ಲಿದ್ದುಕೊಂಡು ರಾಜಕೀಯ ಮಾಡಿಕೊಂಡು ಬಂದಿದ್ದವರು. ಜಾಲಪ್ಪ ದಕ್ಷ ಆಡಳಿತಗಾರನೆಂದು ಸಾಬೀತುಮಾಡಿದ್ದವರು. ಆದರೆ ದೇವೇಗೌಡ ಎಂಥ ಸಣ್ಣ ಮನುಷ್ಯನೆಂದರೆ ತಾನು ಪ್ರಧಾನಿಯಾದಾಗ ಸಂಸದ ಜಾಲಪ್ಪನಿಗೆ ಕೆಲಸಕ್ಕೆ ಬಾರದ ಖಾತೆಯೊಂದಕ್ಕೆ ರಾಜ್ಯ ಮಂತ್ರಿ ಮಾಡಲು ಹೊರಟಿದ್ದರು. ಆದರೆ ಈ ಜಾಲಪ್ಪ ಎಂತಾ ಖಡಕ್ ರಾಜಕಾರಣಿ ಎಂದರೆ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲೇ ಗೌಡನಿಗೆ ಉಗಿದು ತಿರುಗಿಬಿದ್ದರು. ಆಗಲೇ ಗೌಡರು ವಿಧಿಯಿಲ್ಲದೆ ಜಾಲಪ್ಪಾಗೆ ಜವಳಿ ಖಾತೆ ಕ್ಯಾಬಿನೆಟ್ ಸಚಿವ ಸ್ಥಾನ ನೀಡಬೇಕಾಯಿತು. ಅವತ್ತಾದ ಅವಮಾನ, ಜಾಲಪ್ಪನ ಬಗ್ಗೆ ಇರುವ ಭಯ ಗೌಡ ಕುಟುಂಬದವರನ್ನು ಈಗಲೂ ಕಾಡುತ್ತಿದೆ.

ಜಾಲಪ್ಪ ಸಂಸದರಾದಾಗ ಖಾಲಿ ಬಿದ್ದ ದೊಡ್ಡಬಳ್ಳಾಪುರ ಅಸೆಂಬ್ಲಿಗೆ ಚುನಾವಣೆ ನಡೆದಾಗ ಜಾಲಪ್ಪ ತಮ್ಮ ಶಿಷ್ಯ ಆರ್.ಜಿ. ವೆಂಕಟಾಚಲಯ್ಯಗೆ ಟಿಕೆಟ್ ಕೊಡಿಸಿ ನಿಲ್ಲಿಸಿದ್ದರು. ಹೇಗಾದರೂ ಮಾಡಿ ವೆಂಕಟಾಚಲಯ್ಯನನ್ನು ಈಗ ಸೋಲಿಸಿಬಿಟ್ಟರೆ ಎಂದೆಂದೂ ಜಾಲಪ್ಪನ ಸೊಕ್ಕು ಮುರಿದಂತೆಯೇ ಸೈ ಎಂದು ಅವತ್ತು ಕುಮಾರಸ್ವಾಮಿಯೇ ಅಖಾಡಕ್ಕಿಳಿದು ಸ್ಕೆಚ್ ಹಾಕಿದ್ದರು. ತೂಬುಗೆರೆ ನರಸಿಂಹಯ್ಯ ಎಂಬ ದುರ್ಬಲ ಆಸಾಮಿಯನ್ನು ಎಳೆತಂದು 20 ಲಕ್ಷ ರೂ. ಹಣವನ್ನು ಪಂಪ್ ಮಾಡಿ ಜಾಲಪ್ಪ ವಿರುದ್ಧ ಛೂ ಬಿಟ್ಟಿದ್ದರು. ಆದರೆ ಗೌಡಾ ಫ್ಯಾಮಿಲಿ ಏನೆಲ್ಲಾ ಲಾಗ ಹೊಡೆದರೂ ಸೋಲು ಒಪ್ಪಿಕೊಳ್ಳಬೇಕಾಯಿತು. ವೆಂಕಟಾಚಲಯ್ಯ ನಂತರ ಜಾಲಪ್ಪನ ಮಗ ನರಸಿಂಹಸ್ವಾಮಿ ಈಗ ಕ್ಷೇತ್ರದ ಶಾಸಕ-ಇನ್ನೊಬ್ಬ ಮಗ ಸುಧಾಕರ ನಗರಸಭಾ ಅಧ್ಯಕ್ಷನಾಗಿದ್ದಾನೆ. ದೊಡ್ಡಬಳ್ಳಾಪುರ ಪೂರ್ತಿ ಈಗ ಜಾಲಪ್ಪ ಫ್ಯಾಮಿಲಿಯ ಕೋಟೆಯಂತಾಗಿ ಹೋಗಿದೆ.

ಪಾಪ, ಗೌಡರಿಗೆ ತೇಜಸ್ವಿನಿ ಮೂಲಕ ಈ ಕೋಟೆಗೆ ಮುತ್ತಿಗೆ ಹಾಕಿಸುವ ಲೆಕ್ಕಾಚಾರವಿದೆ.

ತೇಜಸ್ವಿನಿಗೆ ತಾನೆ ಬೇರೆ ಗತಿ ಏನಿದೆ ಹೇಳಿ?

-ಈಶ

ಪ್ರಾಣಲಿಂಗ ಶಿವಸಾಲಿ ಅಂಡ್ ಕಂಪನಿಯ ನಿವೇಶನ ನಾಟಕ

ದಾವಣಗೆರೆ

ದಾವಣಗೆರೆ ನಗರಸಭೆಯ ಆವರಣದಲ್ಲಿ ನಿವೇಶನಗಳಿಗಾಗಿ ಹಾಹಾಕಾರದ ಜಾತ್ರೆ ಮತ್ತೆ ಶುರುವಾಗಿದೆ. ಸಕ್ಕರೆ ಸಚಿವ ಎಸ್.ಎ. ರವೀಂದ್ರನಾಥ್ ನಗರಸಭೆಯ 35ನೇ ವಾರ್ಡಿನ ನಗರವಾಸಿಗಳಿಗೆ 4000 ನಿವೇಶನಗಳನ್ನು ನೀಡುತ್ತೇವೆ ಎಂದು ಹೇಳಿದ ಕೆಲದಿನಗಳಲ್ಲಿ ನಿವೇಶನಗಳಿಗಾಗಿ ಅರ್ಜಿ ಹಾಕಲು ಜನರ ನೂಕುನುಗ್ಗಲು ಪ್ರಾರಂಭವಾಗಿದೆ. ನಗರಸಭೆಯ ನಾಲ್ಕು ಕಡೆ ಅರ್ಜಿ ಫಾರಂಗಳನ್ನು ಕೊಡುತ್ತಿದ್ದರೂ ಹೆಣ್ಣುಮಕ್ಕಳಾದಿಯಾಗಿ ಒಬ್ಬರ ಮೇಲೊಬ್ಬರು ಬಿದ್ದು ಅರ್ಜಿ ಫಾರಂಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇಂದಿಗೆ 27ನೇ ವಾರ್ಡಿನ ನಿವಾಸಿಗಳು ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಅರ್ಜಿಗಳನ್ನು ಪಡೆದುಕೊಂಡು ನಗರಸಭೆಗೆ ನೀಡಿದ್ದಾರೆ. ಇನ್ನು 9ನೇ ವಾರ್ಡಿನ ಜನ ಈ ಅರ್ಜಿಗಳಿಗಾಗಿ ದಿನಬಿಟ್ಟು ದಿನ ಮುಗಿಬೀಳಲಿದ್ದಾರೆ.

'ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ' ಯೋಜನೆಯಡಿಯಲ್ಲಿ ಈ ನಿವೇಶನಗಳನ್ನು ಕೊಡಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಈ ನಿವೇಶನಗಳ ಹಂಚಿಕೆಗಾಗಿ ದಾವಣಗೆರೆಯ ನಾಲ್ಕು ದಿಕ್ಕುಗಳಲ್ಲಿ ಅಂದರೆ: ಆವರಗೆರೆ, ಕುಂದವಾಡ, ಯರಗುಂಟೆ, ಬೇಳವನೂರುಗಳಲ್ಲಿ ಮತ್ತು ನೂರು ಎಕರೆ ಜಮೀನನ್ನು ಖರೀದಿಸಿ ನಾಲ್ಕು ಸಾವಿರ ನಿವೇಶನಗಳನ್ನಾಗಿ ವಿಂಗಡಿಸಿ ನಿವೇಶನರಹಿತರಿಗೆ ಹಂಚುವುದು ನಗರಸಭೆಯ ಮುಂದಿರುವ ಸದ್ಯದ ಪ್ಲಾನು.


ವಾಸ್ತವವೇನೆಂದರೆ ಅಧಿಕೃತವಾಗಿ ಇನ್ನು ಯಾವುದೇ ಜಮೀನನ್ನು ಕೊಂಡಿಲ್ಲ! ಜಮೀನು ಕೊಳ್ಳದೇ, ನಿವೇಶನಗಳನ್ನಾಗಿ ವಿಂಗಡಿಸದೇ ಜನರನ್ನು ಮಾತ್ರ ಗಾಳಿಯಲ್ಲಿ ಸರ್ಕಸ್ ಮಾಡಿಸುತ್ತಿದ್ದಾರೆ. ಜಮೀನು ಕೊಳ್ಳುವುದು ಯಾವಾಗ? ನಿವೇಶನಕ್ಕಾಗಿ ನೀಡಿದ ಅರ್ಜಿಗಳು ವಿಲೇವಾರಿಯಾಗಿ ನಿವೇಶನಗಳ ಹಂಚಿಕೆಯಾಗುವುದು ಯಾವಾಗ? ಎಲ್ಲರಿಗೂ ಸೈಟು ಸಿಗುತ್ತದಾ? ಇಂದು ಅರ್ಜಿದಾರರನ್ನು ಕೇಳಿದರೆ ಕೆಲವರು ಹಣೆಯ ಮೇಲೆ ಬೆರಳನ್ನು ಸರಿಸಿ 'ಅದೃಷ್ಟ ಇದ್ರೆ ಸಿಗಬಹುದು' ಎಂದರೆ, ಹಲವರು 'ನಗರಸಭೆಗೆ ದುಡ್ಡು ಕಡಿಮೆ ಯಾಗೇತಿ ನಮ್ಮಿಂದ ವಸೂಲಿ ಮಾಡ್ತಿದಾರೆ' ಎಂದು ಹೇಳುತ್ತಿದ್ದಾರೆ.

ನಗರಪಾಲಿಕೆ ಆಯುಕ್ತ ಪ್ರಾಣಲಿಂಗ ಶಿವಸಾಲಿ 'ಈಗಾಗಲೇ ಹತ್ತು ಎಕರೆ ಜಮೀನನ್ನು ಕೊಂಡಿದ್ದೇವೆ' ಎಂದು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ಮತ್ತು ಸಚಿವ ಎಸ್.ಎ. ರವೀಂದ್ರನಾಥ್ 'ಶೀಘ್ರದಲ್ಲಿಯೇ ಸೈಟುಗಳನ್ನು ಹಂಚಿಬಿಡುತ್ತೇವೆ' ಎಂದು ಹೇಳುತ್ತಿದ್ದಾರೆ. ಒಂದೇ ಕುಟುಂಬದಲ್ಲಿ ಐದಾರು ಮಂದಿ ಅರ್ಜಿ ಹಾಕಿದ್ದಾರಲ್ಲ? ಎಂದರೆ 'ಸೈಟು ಕೊಡ್ತಿವಿ ಅಂದ್ರೆ ಸಾವಿರಾರು ಅರ್ಜಿ ಹಾಕುತ್ತಾರೆ... ನಾವೇನು ಮಾಡೋಕಾಗುತ್ತೆ' ಎನ್ನುವ ಸಚಿವ ರವೀಂದ್ರನಾಥ್‌ರಿಗೆ 'ಮೇ ತಿಂಗಳಲ್ಲಿ ಬರಲಿರುವ ನಗರಸಭಾ ಚುನಾವಣಾ ತಂತ್ರವೇನಾದರೂ ಈ ಸೈಟು ಹಂಚಿಕೆಯಲ್ಲಿದೆಯಾ' ಅಂದರೆ 'ಎಲ್ಲಾ ಪಕ್ಷಗಳೂ ಇದನ್ನೇ ಮಾಡೋದು....' ಎಂದು ಯಾವುದೇ ಎಗ್ಗಿಲ್ಲದೇ ಹೇಳುತ್ತಾರೆ. ಅಧಿಕಾರಿಗಳ ಹಾರಿಕೆಯ ಉತ್ತರ, ರಾಜಕಾರಣಿಗಳ ಉಡಾಫೆ ನೀತಿಯಿಂದಾಗಿ ನಗರದ ನಿವಾಸಿಗಳು ಘಾಸಿಗೊಳ್ಳುವುದಂತೂ ಖಚಿತವಾಗಿದೆ.

ಒಂದು ಅರ್ಜಿ ಫಾರಂಗೆ 10 ರೂ. ಫೋಟೋ ತೆಗೆಸಲು 10 ರೂ. ಅರ್ಜಿಯನ್ನು ತುಂಬಿಸಲು 5 ರೂ. ಬಂದು ಹೋಗುವ ಊಟದ ಖರ್ಚು ಕನಿಷ್ಟವೆಂದರೂ 25 ರೂ. ಅಂದು ಕಳೆದುಕೊಳ್ಳುವ ಒಂದು ದಿನದ ಕೂಲಿ 50 ರೂ. ಹೀಗೆ ಒಂದು ಅರ್ಜಿ ಹಾಕಲು ಕನಿಷ್ಠ 100 ರೂ. ಖರ್ಚಾಗುತ್ತದೆ. ಬಹಳ ಕಡಿಮೆಯೆಂದರೂ 60 ರಿಂದ 70 ಸಾವಿರ ಮಂದಿ ಈಗ ನಿವೇಶನಕ್ಕಾಗಿ ಅರ್ಜಿ ಹಾಕುತ್ತಾರೆ. ಆಗ ಏನಿಲ್ಲವೆಂದರೂ 70 ಲಕ್ಷ ರೂ.ಗಳನ್ನು ನಿವೇಶನದ ಅರ್ಜಿ ಕೊಡುವುದಕ್ಕಾಗಿಯೇ ಖರ್ಚು ಮಾಡುತ್ತಾರೆ. ಇಷ್ಟೆಲ್ಲ ಖರ್ಚು ಮಾಡಿಕೊಂಡ ಜನರ ನಿವೇಶನದ ಕನಸೇನಾಗಬಹುದು?


ಜಿಲ್ಲಾಧಿಕಾರಿ ದ್ಯಾಬೇರಿ

ಈ ಪ್ರಕ್ರಿಯೆಯಲ್ಲಿ ನಿವೇಶನಗಳನ್ನು ಹಂಚುವುದೇ ಇಲ್ಲ ಎನ್ನಲಾಗದು-ಹಂಚುತ್ತಾರೆ. ಆದರೆ ಯಾರಿಗೆ? ಬಿಜೆಪಿ-ಜೆಡಿಎಸ್ ಪಕ್ಷದವರು ಹಂಚಿಕೆಯ ಕೋಟಾದ ಸಿಂಹಪಾಲನ್ನು ಪಡೆದು ಕಾಂಗ್ರೆಸ್‌ನವರಿಗೂ ಸ್ವಲ್ಪ ಮಟ್ಟನ ಪಾಲನ್ನು ಕೊಡುತ್ತಾರೆ- ಈ ಎಲ್ಲಾ ಪಕ್ಷದವರು ತಾವು ಕಸಿದುಕೊಂಡ ಕೋಟಾದಲ್ಲಿ ತಮಗೆ ಇಷ್ಟಬಂದವರಿಗೆ ಮಾತ್ರ ನಿವೇಶನಗಳನ್ನು ನೀಡುತ್ತಾರೆ. ಆಗ ಯಾವುದೇ ನೆಲೆ ಇಲ್ಲದೆ ನಿವೇಶನಕ್ಕಾಗಿ ಅರ್ಜಿ ಹಾಕಿದ ಬಡವರ ಅರ್ಜಿಗಳು ನಗರಸಭೆಯ ಕಸದ ಬುಟ್ಟಿಯನ್ನು ಸೇರುತ್ತವೆ. ಅರ್ಹ ಬಹುಪಾಲು ನಿವೇಶನರಹಿತರು ಖಾಯಂ ಆಗಿ ವಂಚನೆಗೊಳಗಾಗುತ್ತಾರೆ ಎನ್ನುವುದು ಬಹುತೇಕ ಅರ್ಜಿದಾರರ ಅಭಿಪ್ರಾಯ-ಇದು ವಾಸ್ತವವೂ ಹೌದು.


ಸಕ್ಕರೆ ಸಚಿವ ರವೀಂದ್ರನಾಥ್

ಕೆಲವು ತಿಂಗಳುಗಳ ಹಿಂದೆ ಚೌಡೇಶ್ವರಿ ನಗರದಲ್ಲಿ ಸೈಟುಗಳನ್ನು ಹಂಚುತ್ತೇವೆಂದು ಅನಧಿಕೃತ ವ್ಯಕ್ತಿಗಳು ದಾವಣಗೆರೆ ತಾಲ್ಲೂಕು ಕಚೇರಿ ಆವರಣದಲ್ಲಿ ಅಡ್ಡೆ ಹಾಕಿಕೊಂಡು 50 ರೂ.ಗೊಂದರಂತೆ ಅರ್ಜಿಯನ್ನು ಮಾರಾಟ ಮಾಡಿದರು. ಈ ಅರ್ಜಿಯನ್ನು ಪಡೆಯಲು ಸಹಸ್ರಾರು ಜನ ಸೇರಿ ನೂಕುನುಗ್ಗಲು ಪ್ರಾರಂಭವಾಗಿ ಕೊನೆಗೆ ಪೊಲೀಸರಿಂದ ಲಾಠಿ ಚಾರ್ಜ್ ಕೂಡ ನಡೆಯಿತು. ಆದರೆ ಅಷ್ಟೊತ್ತಿಗಾಗಲೇ ಸಾವಿರಾರು ಜನರು ಅರ್ಜಿಗಳನ್ನು ನೀಡಿ ಲಕ್ಷಾಂತರ ರೂ.ಗಳನ್ನು ಕಳೆದುಕೊಂಡಿದ್ದರು. ಕೊನೆಗೆ ಜನರು ಪಡೆದ ಅರ್ಜಿಗಳು ಅಧಿಕೃತವಲ್ಲವೆಂದು ಆಡಳಿತವರ್ಗದವರು ತಳ್ಳಿ ಹಾಕಿದರು. ಅನಧಿಕೃತವಾಗಿ ಅರ್ಜಿಗಳನ್ನು ಮಾರಿ ಗಂಟು ಮಾಡಿಕೊಂಡವರು ಯಾವುದೇ ಅಡಚಣೆ ಇಲ್ಲದೇ ತಿರುಗಾಡುತ್ತಿದ್ದಾರೆ. ಆದರೆ ನಿವೇಶನಕ್ಕಾಗಿ ಅರ್ಜಿ ಹಾಕಿದ ಜನರು ಮಾತ್ರ ಘೋರವಾದ ವಂಚನೆಗೊಳಗಾಗಿದ್ದಾರೆ.

ಜನರು ವಂಚನೆಗೊಳಗಾದ ಬೆನ್ನಲ್ಲೇ ಜಿಲ್ಲಾಡಳಿತವು ನಿವೇಶನಗಳನ್ನು ನೀಡುತ್ತೇವೆ ಎಂದು ಈಗ ಜನರನ್ನು ನಗರಸಭೆಗೆ ಆಕರ್ಷಿಸುತ್ತಿದೆ. ಈಗಲಾದರೂ ನ್ಯಾಯವಾದ ನಿವೇಶನ ಹಂಚಿಕೆಯಾಗದಿದ್ದರೆ ವಂಚನೆಗೊಳಗಾದ ಬಡವರ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಬರೆ ಎಳೆಸಿಕೊಂಡ ಜನರ ಗಾಯದ ಉರಿ ಮೇ ತಿಂಗಳಲ್ಲಿ ನಡೆಯಲಿರುವ ನಗರಸಭಾ ಚುನಾವಣೆಯಲ್ಲಿ ಖಚಿತವಾಗಿ ವ್ಯಕ್ತವಾಗಲಿದೆ.

-ಚಂದ್ರಶೇಖರ ತೋರಣಘಟ್ಟ

ಹನಿ ನೀರಾವರಿ ಅಧಿಕಾರಿಗೆ ಬಿತ್ತು ಹೊಡೆತ

ಚಿತ್ರದುರ್ಗ

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿ ಹನಿ ನೀರಾವರಿಗೆಂದು ಸರ್ಕಾರ ಬಿಡುಗಡೆ ಮಾಡಿದ ಒಂದು ಕೋಟಿ ಎಂಬತ್ತೊಂಭತ್ತು ಲಕ್ಷ ರೂಪಾಯಿಯವನ್ನು ಫ್ರಾಡು ಡ್ರಿಪ್ ಏಜೆನ್ಸಿದಾರರ ಜೊತೆ ಕೈಜೋಡಿಸಿ ನುಂಗಿ ನೀರು ಕುಡಿದ ಹೊಸದುರ್ಗ ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ದೇವೇಂದ್ರಪ್ಪ ರೊಚ್ಚಿಗೆದ್ದ ರೈತರಿಂದ ಗೂಸಾ ತಿಂದು ಹೋದವನು ಹದಿನೈದು ದಿನಗಳಾದರೂ ಪತ್ತೆಯಾಗಿಲ್ಲ.

ದೇವೇಂದ್ರಪ್ಪ ಅಮೇಧ್ಯ ತಿಂದಿರುವುದು ಹಾದಿರಂಪ-ಬೀದಿರಂಪವಾಗಿ ಇಡೀ ಹಗರಣವೇ ಬಟಾಬಯಲಾದರೂ ದೇವೇಂದ್ರಪ್ಪನನ್ನು ಇದುವರೆಗೂ ಬಂಧಿಸದಿರುವುದು ಅಚ್ಚರಿ ಮೂಡಿಸಿದೆ. ದೇವೇಂದ್ರಪ್ಪನನ್ನು ಬಲಿ ಹಾಕಿ ತಾನು ಸೇಫಾದರೆ ಸಾಕೆಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕದಿರೇಗೌಡ ತಂತ್ರ ರೂಪಿಸುತ್ತಿದ್ದಾನೆ.


ಈ ಪ್ರಕರಣ ಮಾತ್ರ ರೈತರನ್ನು ಬೆಚ್ಚಿ ಬೀಳಿಸಿದೆ. ಹೊಸದುರ್ಗ ತೋಟಗಾರಿಕಾ ಇಲಾಖೆಗೆ 2003-04 ರಿಂದ ಪ್ರಸಕ್ತ ಸಾಲಿನವರೆಗೆ ಬಿಡುಗಡೆಯಾಗಿರುವ ಎರಡೂವರೆ ಕೋಟಿ ಸಬ್ಸಿಡಿಯನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಇದರಲ್ಲಿ 2006-07 ನೇ ಸಾಲಿಗೆ ಬಿಡುಗಡೆಯಾಗಿರುವ ಸಹಾಯಧನದ ಮೊತ್ತವೇ ಒಂದು ಕೋಟಿ ಎಂಬತ್ತೊಂಭತ್ತು ಲಕ್ಷ ರೂಪಾಯಿಗಳು.

ಹನಿ ನೀರಾವರಿ ಅಳವಡಿಸಿಕೊಂಡ ರೈತರು ಸಹಾಯಧನಕ್ಕಾಗಿ ಕಚೇರಿಗೆ ಅಲೆಯುತ್ತಿದ್ದರೆ ದೇವೇಂದ್ರಪ್ಪ ಬರೀ ಸಬೂಬುಗಳನ್ನೇ ಹೇಳುತ್ತಾ ಸಾಗಹಾಕುತ್ತಿದ್ದ. ಅಸಲಿ ಸಂಗತಿಯೆಂದರೆ ನಾಲ್ಕು ತಿಂಗಳ ಹಿಂದೆಯೇ ಬಿಡುಗಡೆಯಾಗಿದ್ದ ಒಂದು ಕೋಟಿ ಎಂಭತ್ತೊಂಭತ್ತು ಲಕ್ಷ ರೂ.ವನ್ನು ಫಲಾನುಭವಿ ರೈತರ ನಕಲಿ ಸಹಿ ಮಾಡಿ ಈ ದೇವೇಂದ್ರಪ್ಪ ಮತ್ತು ಫ್ರಾಡು ಏಜೆನ್ಸಿದಾರರು ತಿಂದು ಹಾಕಿದ್ದರು. ಇದು ರೈತರ ಗಮನಕ್ಕೇ ಬಂದಿಲ್ಲ.

ಶಂಕರಪ್ಪ ಎಂಬ ರೈತರೊಬ್ಬರಿಗೆ ತೋಟಗಾರಿಕೆಯ ಇಲಾಖೆಯ ಅಧಿಕಾರಿಗಳೇ ಕರೆದು ಸಬ್ಸಿಡಿ ಹಣ ಪಾವತಿಸಿದ ವಿಷಯ ತಿಳಿದು ರೈತರು ರೊಚ್ಚಿಗೆದ್ದು ಕಚೇರಿಗೆ ಮುತ್ತಿಗೆ ಹಾಕಿದಾಗ ಇಡೀ ಹಗರಣ ಬಯಲಾಗಿದೆ. ಬಿಡುಗಡೆಯಾಗಿದ್ದ ಅಷ್ಟು ಸಹಾಯಧನವನ್ನು ಫಲಾನುಭವಿಗಳ ಬದಲಿಗೆ ಏಜೆನ್ಸಿದಾರರ ಹೆಸರಿಗೆ ಚೆಕ್ ನೀಡಿ ಹಣ ಡ್ರಾ ಮಾಡಿಕೊಳ್ಳಲಾಗಿದೆ. ಅದೂ ಒಬ್ಬಿಬ್ಬರು ರೈತರದಲ್ಲ, ಬರೋಬ್ಬರಿ 447 ರೈತರ ಹೆಸರಿಗೆ ಬಂದ ಹಣ ಅದು.

ಹೊಳಲ್ಕೆರೆಯ ವೆಂಕಟೇಶ್ವರ ಡ್ರಿಪ್ ಇರಿಗೇಷನ್, ಎಸ್.ಆರ್. ಏಜೆನ್ಸಿ, ಲಕ್ಷ್ಮೀ ಏಜೆನ್ಸಿ, ಹೊಸದುರ್ಗದ ಬನಶಂಕರಿ ಪೈಪ್ ಲೈನ್ಸ್, ಲೋಹಿತ್ ಎಂಟರ್‌ಪ್ರೈಸಸ್, ಅನಂತರೆಡ್ಡಿ ಇವರ ಹೆಸರಿನ ಏಜೆನ್ಸಿಗಳಿಗೆ ಚೆಕ್ ವಿತರಿಸಲಾಗಿದೆ. ಈ ಏಜೆನ್ಸಿದಾರರು ಫಲಾನುಭವಿಗಳ ನಕಲಿ ಸಹಿ ಮಾಡಿ ಹಣ ಡ್ರಾ ಮಾಡಿಕೊಂಡಿದ್ದಾರೆ. ರೈತರ ಆವಾಜಿಗೆ ತತ್ತರಿಸಿದ ದೇವೇಂದ್ರಪ್ಪ ತಪ್ಪೊಪ್ಪಿಕೊಂಡು ಹೇಗಾದರೂ ಬಚಾವಾಗಬೇಕೆಂದು ರಾತ್ರೋರಾತ್ರಿ ತಪ್ಪಿಸಿಕೊಂಡಿದ್ದಾನೆ. ಇದುವರೆಗೂ ಆತನ ಸುಳಿವೇ ಇಲ್ಲ.

ಹೊಸದುರ್ಗಕ್ಕೆ ಹೋಗಿ ರೈತರ ಅಹವಾಲು ಕೇಳಿದ ಜಿಲ್ಲಾಧಿಕಾರಿ ಅಮರನಾರಾಯಣ ದೇವೇಂದ್ರಪ್ಪನ



ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಲು ಸೂಚನೆ ನೀಡಿದರೂ ಉಪನಿರ್ದೇಶಕ ಕದಿರೇಗೌಡ-ದೇವೇಂದ್ರಪ್ಪನ ಉಸಾಬರಿಗೆ ಹೋಗದೆ ಫಲಾನುಭವಿ ರೈತರು ಮತ್ತು ಫ್ರಾಡು ಏಜೆನ್ಸಿದಾರರ ನಡುವೆ ರಾಜಿ ಕಬೂಲಿಗೆ ನಿಂತಿದ್ದಾನೆ. ಕದಿರೇಗೌಡ ಮತ್ತು ಫ್ರಾಡು ಏಜೆನ್ಸಿದಾರರು ರೈತರನ್ನು ತಣ್ಣಗಾಗಿಸುವ ಎಲ್ಲಾ ತಂತ್ರಗಳನ್ನೂ ಬಳಸುತ್ತಿದ್ದಾರೆ. ಜಾತಿ ಮುಖಂಡರು, ರಾಜಕಾರಣಿಗಳು, ಸ್ವಾಮೀಜಿಗಳು.... ಹೀಗೆ ಎಲ್ಲರನ್ನೂ ಎಡತಾಕಿ ರೈತರಿಗೆ ಅಷ್ಟೋ ಇಷ್ಟೋ ಕೊಟ್ಟು ಸುಮ್ಮನಿರಿಸುವ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯೂ ಆಗಿದ್ದಾರೆ.

ಹಾಗೆಂದು ಪ್ರಕರಣ ಕೈಬಿಡುವ ಹಾಗಿಲ್ಲ. ಈ ದೇವೇಂದ್ರಪ್ಪ ಮತ್ತು ಫ್ರಾಡು ಏಜೆನ್ಸಿದಾರರು ತಾಲ್ಲೂಕು ಕಚೇರಿಯಲ್ಲಿ ರೈತರ ಪಹಣಿಗಳನ್ನು ಪಡೆದು ನಕಲಿ ದಾಖಲೆ ಸೃಷ್ಟಿಸಿ ಲಕ್ಷಾಂತರ ರೂ. ಲಪಟಾಯಿಸಿದ್ದಾರೆ. ಬಹಳ ಮುಖ್ಯವಾಗಿ ಅನುಷ್ಠಾನ ದೃಢೀಕರಣ ಪತ್ರ, ಕಾಮಗಾರಿ ಪರಿಶೀಲನಾ ದೃಢೀಕರಣ ಪತ್ರದಲ್ಲಿ ನಕಲಿ ಸಹಿ ಹಾಕಿರುವುದನ್ನು ದೇವೇಂದ್ರಪ್ಪನೇ ಒಪ್ಪಿಕೊಂಡಿದ್ದಾನೆ. ಬಿಡುಗಡೆಯಾದ 60 ಲಕ್ಷ ರೂ.ವನ್ನು ಡಿಸಿಸಿ ಬ್ಯಾಂಕ್‌ನ ಹೊಳಲ್ಕೆರೆ ಶಾಖೆಯಲ್ಲಿ ಒಂದೇ ದಿನ ಡ್ರಾ ಮಾಡಿಕೊಳ್ಳಲಾಗಿದೆ. ಇದರಲ್ಲಿ ಬ್ಯಾಂಕ್ ನೌಕರರೂ ಶಾಮೀಲಾಗಿರುವ ಸಾಧ್ಯತೆಗಳಿವೆ.

ಉಪನಿರ್ದೇಶಕರು ಹಣ ಬಿಡುಗಡೆ ಮಾಡುವಾಗ ಪ್ರತಿ ಹತ್ತು ಪ್ರಕರಣಗಳಲ್ಲಿ ಯಾವುದೇ ಎರಡು ಪ್ರಕರಣಗಳನ್ನು ತಪಾಸಣೆ ನಡೆಸಿ ರೈತರ ಹೆಸರಿಗೆ ಕ್ರಾಸ್ ಚೆಕ್ ಮೂಲಕ ಹಣ ನೀಡಬೇಕೆಂಬ ನಿಯಮವಿದ್ದರೂ ಏಜೆನ್ಸಿದಾರರ ಹೆಸರಿಗೆ ಚೆಕ್‌ಗಳನ್ನು ಹೇಗೆ ನೀಡಲಾಯಿತು ಎಂಬುದರ ತನಿಖೆ ಆಗಬೇಕು. ಕದಿರೇಗೌಡ ದೇವೇಂದ್ರಪ್ಪನ ಮೇಲೆ ಶಿಸ್ತುಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿ ಕೈ ತೊಳೆದುಕೊಂಡರೆ ತಾನು ಬಚಾವ್ ಎಂದು ಭಾವಿಸಿದಂತಿದೆ. ಆದರೆ ಈ ಪ್ರಕರಣ ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ನಡೆದಿದೆ. ಈ ಪ್ರಕರಣ ವರದಿಯಾಗುವ ಮುನ್ನ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಗೊಂಡನಹಳ್ಳಿ, ಮಾಡನಾಯಕನಹಳ್ಳಿ, ಸಿದ್ದವನದುರ್ಗದಲ್ಲೂ ಇಂತಹ ಪ್ರಕರಣಗಳು ನಡೆದಿದ್ದು ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಲಾಗಿತ್ತು. ಇದು ಕದಿರೇಗೌಡನಿಗೂ ಗೊತ್ತು. ಇದೆಲ್ಲಾ ಯಾವಾಗ ತನ್ನ ಕೊರಳಿಗೆ ಸುತ್ತಿಕೊಳ್ಳುತ್ತಿದೆಯೋ ಎಂಬ ಆತಂಕದಲ್ಲಿದ್ದಾನೆ.

ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ ಜಿಲ್ಲೆಯಲ್ಲಿ ಕೆಲಸಗಾರ ಶಾಸಕರೆಂದೇ ಗುರುತಿಸಲ್ಪಟ್ಟವರು. ಅವರ ಕ್ಷೇತ್ರದಲ್ಲೇ ಇಂಥದ್ದೊಂದು ಗೋಲ್‌ಮಾಲ್ ಹೇಗೆ ನಡೆಯಿತೆಂಬುದೇ ಕುತೂಹಲಕರ. ಜನವರಿ ತಿಂಗಳಲ್ಲೇ ತಾವು ಈ ಬಗ್ಗೆ ಲೋಕಾಯುಕ್ತರಿಗೆ ಪತ್ರ ಬರೆದು ವರ್ಗಾವಣೆ ರಾಜಕೀಯ ಒತ್ತಡ ತಂದರೂ ಪ್ರಯೋಜನವಾಗಿಲ್ಲ ಎಂದು ಹೇಳಿಕೆ ನೀಡಿದರೂ ಜನರಿಗೆ ಅದು ಸೂಕ್ತ ಉತ್ತರ ಅನ್ನಿಸಿಲ್ಲ. ಈ ಪ್ರಕರಣವನ್ನು ಜಿಲ್ಲಾ ಪಂಚಾಯ್ತಿಯ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸದಂತೆ ಒತ್ತಡ ತರುತ್ತಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ. ಗೋವಿಂದಪ್ಪ ಈ ಒತ್ತಡಗಳಿಗೆ ಮಣಿಯಬಾರದು ಈಗ ಜಿಲ್ಲಾ ಪಂಚಾಯ್ತಿಗೆ ಸಿಇಓ ಆಗಿ ಬಂದಿರುವ ರಂಗಸ್ವಾಮಿ ಒಂದಿಷ್ಟು ಬಿಗಿ ಹಿಡಿತವುಳ್ಳವರು ಎಂಬ ಅಭಿಪ್ರಾಯಗಳಿವೆ. ಇಡೀ ಜಿಲ್ಲೆಯಲ್ಲಿ ಬಿಡುಗಡೆಯಾಗಿರುವ ಸಹಾಯಧನ, ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಿ ಜರುಗಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಬೇಕು. ಮೊದಲು ತಲೆ ಮರೆಸಿಕೊಂಡಿರುವ ದೇವೇಂದ್ರಪ್ಪನನ್ನು ಹಿಡಿದುತರಬೇಕು.

ಹಿಂದೆ ಇದೇ ತೋಟಗಾರಿಕಾ ಇಲಾಖೆಯಲ್ಲಿ ಕೋಟ್ಯಂತರ ರೂಪಾಯಿ ಸಹಾಯಧನ ಕಬಳಿಸಿದ ಪ್ರಕರಣವನ್ನು ಸಿಓಡಿಗೆ ವಹಿಸಲಾಗಿತ್ತು. ಆಮೇಲೆ ಏನಾಯಿತೆಂಬುದು ಯಾರಿಗೂ ಗೊತ್ತಿಲ್ಲ. ಆ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳೆಲ್ಲಾ ಬಡ್ತಿ ಪಡೆದು ಮಜಾ ಉಡಾಯಿಸುತ್ತಿದ್ದಾರೆ. ಕೆಲವರು ನಿವೃತ್ತಿಯಾಗಿದ್ದಾರೆ. ಫ್ರಾಡು ಏಜೆನ್ಸಿದಾರರು ಫ್ರಾಡುಗಳನ್ನು ಮಾಡುತ್ತಲೇ ಇದ್ದಾರೆ. ಈ ಪ್ರಕರಣವೂ ಅದೇ ಜಾಡು ಹಿಡಿಯಬಾರದು.

-ವರದಿಗಾರ

ಸಹಾಯಧನ- ಏನು ಎತ್ತ?

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಕೇಂದ್ರ ಸರ್ಕಾರದ ಒಂದು ಯೋಜನೆ. ಈ ಯೋಜನೆಯಡಿ ಹನಿ ನೀರಾವರಿ ಅಳವಡಿಸಿಕೊಂಡ ರೈತರಿಗೆ ಕೇಂದ್ರ ಸರ್ಕಾರ 75%, ರಾಜ್ಯ ಸರ್ಕಾರ 25% ರಷ್ಟು ಒಟ್ಟು ಶೇ.75 ರಷ್ಟು ಸಹಾಯಧನ ಸಿಗುತ್ತದೆ. ರೈತರು ತಮ್ಮ ವಗಣಿ, ಅಧಿಕೃತ ಏಜೆನ್ಸಿದಾರರಿಂದ ಹನಿ ನೀರಾವರಿ ಪರಿಕರ ಖರೀದಿಸಿದ ರಸೀದಿ ಪಡೆದು ತೋಟಗಾರಿಕಾ ಇಲಾಖೆಗೆ ಅರ್ಜಿ ಸಲ್ಲಿಸಬೇಕು. ಅಧಿಕಾರಿಗಳು ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಬೇಕು. ಇಲ್ಲಿ ಡ್ರಿಪ್ ಇರಿಗೇಷನ್ ಏಜನ್ಸಿದಾರ ರೈತರು ಖರೀದಿಸಿದ ಪರಿಕರಗಳಿಗೆ ರಸೀದಿ ಕೊಡುವುದಷ್ಟೇ ಕೆಲಸ. ಇಡೀ ಪ್ರಕ್ರಿಯೆಯಲ್ಲಿ ಏಜನ್ಸಿದಾರರು ಇಲಾಖೆಯ ಮೆಟ್ಟಿಲು ಕೂಡಾ ಹತ್ತುವಂತಿಲ್ಲ.

ಮೋಸವಾಗುವುದೆಲ್ಲಿ? ಹನಿ ನೀರಾವರಿ ಸಹಾಯಧನಕ್ಕೆ ರೂಪಿಸಲಾಗಿರುವ ನಿಯಮಾವಳಿಗಳು ಸಾಮಾನ್ಯ ರೈತರಿಗೆ ಅರ್ಥವಾಗದಷ್ಟು ಸಂಕೀರ್ಣವಾಗಿವೆ. ಈ ರಿಸ್ಕ್ ಫ್ಯಾಕ್ಟರುಗಳೇ ರೈತರನ್ನು ಅಧಿಕಾರಿಗಳು-ಏಜನ್ಸಿದಾರರ ವಂಚನೆಯ ಬಲೆಗೆ ಸಿಲುಕಿಸುತ್ತವೆ. ಏಜೆನ್ಸಿದಾರರೇ ಖುದ್ದು ಅರ್ಜಿಗಳನ್ನು ಸೂಕ್ತ ದಾಖಲೆಗಳನ್ನು ಹೊಂದಿಸಿ ಅಧಿಕಾರಿಗಳ ಜೊತೆ ಕೈಜೋಡಿಸಿ ಮಧ್ಯವರ್ತಿಗಳ ಕೆಲಸ ಮಾಡುತ್ತಾರೆ. ಇಲ್ಲಿ ರೈತ ಹೆಸರಿಗೆ ಮಾತ್ರ. ಬಿಡುಗಡೆಯಾದ ಸಹಾಯಧನದಲ್ಲಿ 30 ಅಥವಾ 40 ಪರ್ಸೆಂಟ್ ರೈತರಿಗೆ ಉಳಿದ 60 ಪರ್ಸೆಂಟ್ ಏಜೆನ್ಸಿದಾರರು/ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ಪಾಲಾಗುತ್ತದೆ. ಮಧ್ಯವರ್ತಿ ಏಜೆನ್ಸಿದಾರರಿಲ್ಲದೇ ಹನಿ ನೀರಾವರಿ ಸಹಾಯಧನ ಪಡೆಯುವುದು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇದೆ. ಹಾಗಾಗಿಯೇ ರೈತರು ತಮ್ಮ ಹೆಸರಿನಲ್ಲಿ ನಡೆಯುವ ಅಗಾಧ ಮೋಸ ಗೊತ್ತಿದ್ದರೂ ಈ ವಂಚನೆಯ ಬಲೆಗೆ ಬಿದ್ದು ಪಾಲಿಗೆ ಬಂದದ್ದು ಪಡೆಯುತ್ತಾರೆ. ಈ ಹಗಲು ಮೋಸದ ಬಗ್ಗೆ ಯಾವ ಜಿಲ್ಲಾ ಪಂಚಾಯ್ತಿ ಸದಸ್ಯನೂ, ಶಾಸಕನೂ ತುಟಿ ಬಿಚ್ಚುವುದಿಲ್ಲ.

ಮುತಾಲಿಕನ 'ದೀಕ್ಷೆ' ಫ್ಲಾಪ್ ಆಯಿತು

ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಕಳೆದ ಮಾರ್ಚ್ 11 ರಂದು ಮೂರುಸಾವಿರ ಮಠದ ಆವರಣದಲ್ಲಿ ಪ್ರಮೋದ್ ಮುತಾಲಿಕ್ ಎಂಬ ಭಜರಂಗದಳದ ಮಾಜಿ ಕಪಿ 'ತ್ರಿಶೂಲ ದೀಕ್ಷೆ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ. ಈಗ 'ಶ್ರೀರಾಮ ಸೇನೆ' ಎಂಬ ಹೊಸ ಸಂಘಟನೆಯನ್ನು ಹುಟ್ಟುಹಾಕಿರುವ ಮುತಾಲಿಕ್ ಈ ದೀಕ್ಷೆ ಕಾರ್ಯಕ್ರಮಕ್ಕೆ ಹತ್ತು ಸಾವಿರ ಯುವಕರು ಬರುತ್ತಾರೆಂದು ಹೇಳಿದ್ದ. ಆದರೆ ಬಂದದ್ದು ಕೇವಲ 800 ಜನ! ಮುತಾಲಿಕನಿಗೆ ಮುಖಭಂಗವೋ ಮುಖಭಂಗ! ಆದರೂ ಅವನ್ಯಾರೋ ಬಿದ್ದರೆ ಮೀಸೆ ಮಣ್ಣಾಗಲಿಲ್ಲ ಅಂದನಂತಲ್ಲ, ಹಾಗೆಯೇ ಮುತಾಲಿಕನೂ ತನ್ನ ಈ ಕಾರ್ಯಕ್ರಮವನ್ನು ನಡೆಸಿದ್ದಾನೆ.

ಈ ತ್ರಿಶೂಲ ದೀಕ್ಷೆ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದೆಂದು ಪ್ರಗತಿಪರರು, ದಲಿತರು, ಮುಸ್ಲಿಮ್ ಯುವಕರು ಮತ್ತು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯವರು ಹುಬ್ಬಳ್ಳಿ-ಧಾರವಾಡದ ಪೊಲೀಸ್ ಕಮೀಷನರ್‌ಗೆ ಮನವಿ ಸಲ್ಲಿಸಿದ್ದರು ಮತ್ತು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದ್ದರು. ಇದನ್ನು ಕಂಡು ಪೊಲೀಸ್ ಕಮೀಷನರ್ "ತ್ರಿಶೂಲ ದೀಕ್ಷೆಗೆ ಅನುಮತಿ ನೀಡುವುದಿಲ್ಲ" ಎಂದರೆ, ಸ್ವತಃ ಮುತಾಲಿಕ್ "ಹತ್ತು ಸಾವಿರ ಜನರಿಗೆ ತ್ರಿಶೂಲ ನೀಡುವುದಿಲ್ಲ, ಸ್ವಾಮೀಜಿಯವರಿಂದ ಸಾಂಕೇತಿಕವಾಗಿ ಕೆಲವರಿಗೆ ಮಾತ್ರ ನೀಡುತ್ತೇವೆ" ಎಂದು ರಾಗ ಬದಲಿಸಿದ್ದ. ಅವನ ಮಾತನ್ನು ನಂಬಬೇಡಿ ಎಂದು ಪ್ರಗತಿಪರರು ಕಮೀಷನರ್ ನಾರಾಯಣ ನಡುಮನಿಗೆ ಹೇಳಿದಾಗ "ತ್ರಿಶೂಲ ದೀಕ್ಷೆಗೆ ಅವಕಾಶ ನೀಡಿಲ್ಲ, ಹಿಂದೂ ಸಂಗಮ ಸಮಾವೇಶಕ್ಕೆ ಮಾತ್ರ ಅವಕಾಶ ನೀಡಿದ್ದೇವೆ. ಹಾಗೇನಾದರೂ ತ್ರಿಶೂಲಗಳನ್ನು ಹಂಚಿದರೆ ಅವರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ಅವರನ್ನು ಬಂಧಿಸುತ್ತೇವೆ" ಎಂದು ಹೇಳಿದರು. ಆದರೆ ಕಾರ್ಯಕ್ರಮ ನಡೆದ ದಿನದಂದು ಗೋಣಿ ಚೀಲದಲ್ಲಿ ತ್ರಿಶೂಲಗಳನ್ನು ಮುತಾಲಿಕನ ಕಪಿ ಪಡೆ ತಂದದ್ದು ಅದನ್ನು ಬಹಿರಂಗವಾಗಿಯೇ ದಯಾನಂದ ಸ್ವಾಮಿ ವಿತರಿಸಿದ್ದು ಮಾತ್ರ ನಡುಮನಿ ಸಾಹೇಬರಿಗೆ ಕಾಣಿಸಲೇ ಇಲ್ಲ!

ಮುತಾಲಿಕನ ಅವಘಡಗಳು ಇಲ್ಲಿಗೇ ನಿಲ್ಲಲಿಲ್ಲ. ಇದೇ ಸಭೆಗೆ ಆಗಮಿಸಿದ್ದ ನಾಥೂರಾಮ್ ಗೋಡ್ಸೆಯ ಮಗಳಾದ ಹಿಮಾನಿ ಎಂಬಾಕೆ ಮಹಾತ್ಮ ಗಾಂಧಿಯವರ ಹತ್ಯೆಯನ್ನು ಬಹಿರಂಗವಾಗಿ ಸಮರ್ಥಿಸಿಕೊಂಡರೆ, ಪುಣೆಯ ಸಾವರ್ಕರ್ ಪ್ರತಿಷ್ಠಾನದ ಸಂಚಾಲಕ ಡಾ. ಅಭಿರಾಮ ಎಂಬಾತ "ತ್ರಿಶೂಲ ದೀಕ್ಷೆ ಅಪರಾಧವಲ್ಲ, ಸಿಖ್ ಸಮುದಾಯದವರು ಶಸ್ತ್ರ ಧರಿಸುವುದನ್ನು ಪ್ರಧಾನಿ ಮನಮೋಹನ್ ಸಿಂಗ್ ನಿಷೇಧಿಸುತ್ತಾರ?" ಎಂದು ಸವಾಲೊಡ್ಡಿದ. "ಪೊಲೀಸ್ ಲಾಠಿ, ಬಂದೂಕುಗಳು ವಿಫಲಗೊಂಡಿವೆ. ದೇಶ, ಧರ್ಮದ ರಕ್ಷಣೆಗೆ ತ್ರಿಶೂಲ ದೀಕ್ಷೆ ಅನಿವಾರ್ಯ" ಎಂದೂ ಹೇಳಿದ. ಇವರ ಜೊತೆ ವೇದಿಕೆಯನ್ನು ಅಲಂಕರಿಸಿದ್ದ ಮಹಾಕಾಳಿ ಚಕ್ರೇಶ್ವರ ಪೀಠದ ವಿದ್ಯಾಹಂಸ ಸ್ವಾಮೀಜಿ ತಾನೊಬ್ಬ ಸ್ವಾಮಿ ಎನ್ನುವುದನ್ನೂ ಮರೆತು ರಾಜಕಾರಣಿಗಳು ಮತ್ತು ಪೊಲೀಸರ ಮೇಲೆ ಅವಾಚ್ಯ ಶಬ್ದಗಳ ಬೈಗುಳಗಳನ್ನೇ ಸುರಿಮಳೆಗೈದ. 'ಜೋಗಿ' ಚಿತ್ರದಲ್ಲಿ 'ಹೊಡಿಮಗ ಹೊಡಿಮಗ' ಹಾಡನ್ನು ಹಾಡಿರುವವರಲ್ಲಿ



ಒಬ್ಬನಾದ ಗುರುರಾಜ ಹೊಸಕೋಟೆ ತ್ರಿಶೂಲದ ಮೇಲೆ ಹಾಡನ್ನು ಹಾಡಿ ಅಲ್ಲಿದ್ದ ಪಡ್ಡೆಗಳನ್ನು ರಂಜಿಸಿದ.

ಈ ಕಾರ್ಯಕ್ರಮಕ್ಕೆ ಹಾಜರಾಗಬೇಕಿದ್ದ ಮೂರು ಸಾವಿರ ಮಠದ ಸ್ವಾಮಿ ಗೈರುಹಾಜರಾಗಿದ್ದರ ಹಿಂದೆ ಬಿಜೆಪಿ ಮತ್ತು ಸಂಘಪರಿವಾರದ ಕಾಣದ ಕೈ ಇದ್ದದ್ದು ಸ್ಪಷ್ಟವಾಗಿತ್ತು. ಹಿಂದೂ ಸಮಾಜೋತ್ಸವದಲ್ಲಿ ಸಂಘಪರಿವಾರ ಮತ್ತು ಬಿಜೆಪಿ ಮುತಾಲಿಕನನ್ನು ಕಡೆಗಣಿಸಿದ್ದವು. ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲೆಂದೇ ಆತ ಈ ತ್ರಿಶೂಲ ದೀಕ್ಷೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ. ಆದರೆ ಈ ಕಾರ್ಯಕ್ರಮವೂ ಫ್ಲಾಪ್ ಆಯಿತು.

ಈ ಹಿಂದೆ ಮುತಾಲಿಕನ ಬೆನ್ನಿಗೆ ತಾಗಿಕೊಂಡೆ ಇರುತ್ತಿದ್ದ ಮನೋಜ್ ಹಾನಗಲ್ ಎಂಬ ವಕೀಲ ಎಲ್ಲೂ ಕಾಣಿಸಿಕೊಳ್ಳದಿದ್ದುದು ಅಚ್ಚರಿ ಮೂಡಿಸಿತು. ಈಗ ಆತನ ಸ್ಥಾನಕ್ಕೆ ಫತ್ತೇವಾಲಿ ದರ್ಗಾದ ಜಾಗವನ್ನು ಕಬಳಿಸಿದ ಡಾ. ಶಿವಕುಮಾರ್ ತಲವಾಯಿ ಬಂದಿದ್ದಾನೆ. ಹಿಂದೂ- ಮುಸಲ್ಮಾನರ ನಡುವೆ ಜಗಳ ಹಚ್ಚುವುದರಲ್ಲಿ ಈತನದ್ದು ಎತ್ತಿದ ಕೈ.

ಪ್ರಮೋದ್ ಮುತಾಲಿಕ ತನ್ನ ಭಾಷಣದಲ್ಲಿ "ಹಿಂದೂ ಯುವಕರು ನಿರ್ವೀರ್ಯರಾಗಿದ್ದಾರೆ. ಅವರಿಗೆ ಶಕ್ತಿ ತುಂಬಬೇಕಾದರೆ ತ್ರಿಶೂಲ ನೀಡುವುದು ಅಗತ್ಯವಾಗಿದೆ" ಎಂದೆಲ್ಲ ತಲೆಕೆಟ್ಟವನ ಶೈಲಿಯಲ್ಲಿ ಮಾತನಾಡಿದ.

ತನ್ನ ಇಲಾಖೆಯನ್ನು ಬೈಯುತ್ತಿದ್ದರೂ, ಅನುಮತಿ ಇಲ್ಲದೆ ತ್ರಿಶೂಲವನ್ನು ವಿತರಿಸುತ್ತಿದ್ದರೂ ಅದನ್ನೆಲ್ಲ ಸುಮ್ಮನೆ ನೋಡುತ್ತಾ ನಿಂತಿದ್ದ ಡಿಸಿಪಿ ವಿಲ್ಸನ್‌ರವರ ತಲೆಗೇನಾದರೂ ಏಟು ಬಿದ್ದಿತ್ತಾ ಎಂದು ಹುಬ್ಬಳ್ಳಿ ಮತ್ತು ಧಾರವಾಡದ ಜನ ಮುಸಿಮುಸಿ ನಗುತ್ತಾ ಕೇಳುತ್ತಿದ್ದಾರೆ. ಅದರಲ್ಲಿ ಅಚ್ಚರಿ ಏನು?


ಎಸ್.ಕೆ. ಉಮೇಶ್


ತೊದ್ಲು ಮಂಜನ ಪುಣ್ಯವೂ...
ಇನ್ಸ್‌ಪೆಕ್ಟರ್ ಉಮೇಶ್ ಪಾಪವೂ

ಕೊಲ್ಲಲು ಬಂದವನು ಯಾರಾದರೇನು?

ಪೊಲೀಸನ ಕಣ್ಣಿಗೆ ಕ್ರಿಮಿ ಕ್ರಿಮಿಯೆ. ತೊದ್ಲು ಮಂಜ, ಕಿರಿಕ್ ಮಂಜ. ಆಟೋ ಮಂಜ, ಜ್ಯೂಸ್ ಮಂಜ, ಹೀಗೆ ಮಂಜಾದಿ ಮಂಜರೆಲ್ಲ ಸೇರಿ ಪೊಲೀಸ್ ಠಾಣೆಯ ಪಕ್ಕದಲ್ಲೇ ನಿಂತು ಸೈಟ್ಟು ಹಾಕಿದಾಕ್ಷಣ ಪಾಪ ಪುಣ್ಯವಾಗಿ ಬಿಡುತ್ತಾ?

ಇದು ಪ್ರಶ್ನೆ. ತೊದ್ಲು ಮಂಜ ಇನ್ನೇನು ಸಿಸಿಬಿಗೆ ಬಂದು ಶರಣಾಗುವಷ್ಟರಲ್ಲೇ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಉಮೇಶ್ ಎತ್ತೊಯ್ದು ಗುಂಡು ಹಾರಿಸಿದ್ದು ಮಹಾಪರಾಧ ಎಂಬುದು ಒಂದೆಡೆಯ ಕುಚೋದ್ಯವಾದರೆ ಸಿಕ್ಕಿಬಿದ್ದ ತೊದ್ಲು ಮಂಜ, ಕಿರಿಕ್ ಮಂಜಾದಿಗಳೆಲ್ಲ ಪುಣ್ಯಕೋಟಿಯ ಮರಿಮಕ್ಕಳು ಎಂಬುದು ಇನ್ನೊಂದು ಮೂಲೆಯ ಹುನ್ನಾರ.

ಹಕೀಕತ್ತಿಷ್ಟೇ. ಇದೇ ಮಾರ್ಚ್ 7 ರ ಅಪರಾಹ್ನ ಕಾಟನ್‌ಪೇಟೆಯ ಸೂಪರ್ ಟಾಕೀಸ್ ಎದುರು ಮಾಗಡಿರಸ್ತೆ ಕಡೆಯಿಂದ ಬರುತ್ತಿದ್ದ ಸ್ಯಾಂಟ್ರೋ ಕಾರೊಂದನ್ನು ಹೊಂಚಿ ಕುಳಿತಿದ್ದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ತಂಡ ನಡುರಸ್ತೆಯಲ್ಲೇ ಮುತ್ತಿಗೆ ಹಾಕುತ್ತದೆ. ನಾಲ್ವರು ಕಾರಲ್ಲೇ ಸಿಕ್ಕಿಬಿದ್ದರೆ ಮುಂದೆ ಕೂತಿದ್ದ ಇಬ್ಬರು ಒಂದೊಂದು ದಿಕ್ಕಿಗೆ ಓಡಲಾರಂಭಿಸುತ್ತಾರೆ. ಅವರಲ್ಲಿ ಒಬ್ಬನನ್ನು ಅಟ್ಟಿಸಿಕೊಂಡು ಹೋದ ಇನ್ಸ್‌ಪೆಕ್ಟರ್ ಉಮೇಶ್ ಆತನ ಕಾಲಿಗೆ ಗುಂಡು ಹಾರಿಸುತ್ತಾರೆ. ಮತ್ತೊಬ್ಬನನ್ನು ಇನ್ನಿಬ್ಬರು ಕ್ರೈಂ ಪೇದೆಗಳು ಹಿಡಿದು ಹಾಕುತ್ತಾರೆ. ಹಾಗೇ ಗುಂಡೇಟು ತಿಂದವನೇ ತೊದ್ಲು ಮಂಜ.


ಒಂಟೆ

ಸದ್ಯ ಇಡೀ ತೊದ್ಲು ಮಂಜನ ಗ್ಯಾಂಗ್ ಜೈಲು ಪಾಲಾದರೆ, ಅಂಥ ಪುಣ್ಯಾತ್ಮನ ಮೇಲೆ ಇನ್ಸ್‌ಪೆಕ್ಟರ್ ಉಮೇಶ್ ಗುಂಡು ಹಾರಿಸಿದ್ದೇ ಮಹಾಪರಾಧ, ಹಿಡಿಯದೇ ಬಿಟ್ಟಿದ್ದರೆ ಆತನ ಇಡೀ ಗ್ಯಾಂಗ್ ಸಿಸಿಬಿ ಪೊಲೀಸರ ಮುಂದೆ ಶರಣಾಗಿಬಿಡುತ್ತಿತ್ತು, ಶರಣಾಗಲು ಬಂದವರನ್ನು ಇನ್ಸ್‌ಪೆಕ್ಟರ್ ಉಮೇಶ್ ಎಳೆದೊಯ್ದು ಅನ್ಯಾಯ ಮಾಡಿದ್ದಾರೆ ಎಂದು ಕೆಲವರು ತರ್ಕಿಸುತ್ತಿದ್ದಾರೆ.

ಬೆಂಗಳೂರಿನ ಗ್ಯಾಂಗ್‌ವಾರ್‌ನ ತೀವ್ರತೆಯೇ ಹಾಗಿದೆ. ಕ್ರೈಂ ಡಿಸಿಪಿ ರವಿಕಾಂತೇಗೌಡರಾಗಲಿ, ಸಿಸಿಬಿಯ ಎಸಿಪಿ ಶಿವರಾಂ ಆಗಲಿ, ರೌಡಿ ನಿಗ್ರಹ ದಳದ ರೇವಣ್ಣ ನಂಜುಂಡೇಗೌಡಾದಿಗಳಾಗಲಿ ಯಾವತ್ತೂ ಒಂದು ಗ್ಯಾಂಗಿನ ಪರವಹಿಸಿದವರಲ್ಲ, ಹಾಗೇ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್. ಶುರುವಿನಿಂದಲೂ ಒಬ್ಬೊಬ್ಬರದು ಒಂದೊಂದು ಗ್ಯಾಂಗಿನ ಬೇಟೆಗೆ ಸೀಮಿತವಾಗಿಬಿಟ್ಟಿದೆ. ಯಾವತ್ತು ಕೆಂಗೇರಿಯಲ್ಲಿ ಸೂರಿ-ಟೋನಿಯ ಜೋಡಿ ಕೊಲೆ ನಡೆದು ಹೋಯಿತೋ ಬೆಂಗಳೂರಿನ ಬಹುತೇಕ ಪೊಲೀಸ್ ಠಾಣೆಗಳು ಕಾಮಾಕ್ಷಿಪಾಳ್ಯದ ಕ್ರಿಮಿ ಪೆದ್ದಗುಂಡನ ಬೆನ್ನಿಗೆ ಬಿದ್ದವಾದರೂ ಅಂತಿಮವಾಗಿ ಆತನನ್ನು ಹಿಡಿದದ್ದು ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್.

ಹಾಗೊಮ್ಮೆ ಉಮೇಶ್ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಪರ ವಹಿಸಿದ್ದೇ ಆಗಿದ್ದರೆ ಪೆದ್ದಗುಂಡನನ್ನು ಎನ್‌ಕೌಂಟರ್ ಮಾಡಿ ಕೊಲ್ಲುವುದು ಅವರಿಗೆ ಕಷ್ಟವೇನಾಗಿರಲಿಲ್ಲ, ಹಾಗಂಥ ಉಮೇಶ್ ದುಡುಕಲಿಲ್ಲ, ಪೆದ್ದಗುಂಡನನ್ನೂ ಆತನ ಗ್ಯಾಂಗನ್ನೂ ಸಮಾ ರಿಪೇರಿ ಮಾಡಿ ಜೈಲಿಗೆ ಗುದುಮಿದ್ದಾರೆ. ಬೇರೆ ಯಾವುದೇ ಪೊಲೀಸ್ ಅಧಿಕಾರಿಗೂ ಸಿಗದ ಪೆದ್ದಗುಂಡ ಅದ್ಹೇಗೆ ಉಮೇಶ್ ಕೈಗೇ ಸಿಕ್ಕಿಬಿದ್ದ ಎಂಬುದಕ್ಕೆ ಉತ್ತರ ಅಂತಿದ್ದರೆ ಅದು ಅವರ ಪರಿಶ್ರಮವೆ.

ಅತೀವ ಚಾಕಚಕ್ಯತೆಯಿಂದ ತಮ್ಮದೇ ಇನ್‌ಫಾರ್ಮೆಂಟುಗಳನ್ನು ರೌಡಿ ಗ್ಯಾಂಗ್ ಒಂದರ ಒಳಕ್ಕೆ ಇನ್‌ಫಿಲ್‌ಟ್ರೇಟ್ ಮಾಡಿ ಅವರ ಪ್ರತಿ ಚಲನವಲನಗಳ ಬಗ್ಗೆ ಕ್ಷಣಕ್ಷಣಕ್ಕೂ ಮಾಹಿತಿ ಪಡೆಯುವ ಹೈಟೆಕ್ ತಾಂತ್ರಿಕತೆ ಉಮೇಶ್‌ಗೆ ಸಿದ್ಧಿಸಿಬಿಟ್ಟಿದೆ.


ಆವತ್ತು ಪೆದ್ದುಗುಂಡ ಸಿಕ್ಕಿಬಿದ್ದನಾದರೂ ಆತನ ನೆಟ್‌ವರ್ಕ್ ಪೂರ್ತಿ ಸಿಕ್ಕಿಬಿದ್ದಿರಲಿಲ್ಲ, ಹಾಗಂಥ ಅಷ್ಟಕ್ಕೇ ಕೈಚೆಲ್ಲುವುದು ಉಮೇಶ್ ಜಾಯಮಾನವಲ್ಲ. ಪೆದ್ದಗುಂಡನ ನೆಟ್‌ವರ್ಕ್‌ನ ಒಳಕ್ಕೆ ತೂರಿಸಿದ್ದ ತಮ್ಮ ಇನ್‌ಫಾರ್ಮೆಂಟುಗಳಿಂದ ಜೈಲಲ್ಲೇ ಕೂತು ಎಲ್ಲವನ್ನೂ ನಿಯಂತ್ರಿಸುತ್ತಿದ್ದ ಸುನೀಲನ ಜಾಲದ ಬಗ್ಗೆ ಮಾಹಿತಿ ಬರತೊಡಗಿದೆ. ಆ ಪೈಕಿ ಒಂದು ತೊದ್ಲು ಮಂಜನ ಗ್ಯಾಂಗ್, ಮತ್ತೊಂದು ಬೆಂಕಿಯ ಪಟಾಲಂ, ಮಗದೊಂದು ಕೊರಂಗು ಆನಂದನ ಪಡೆ, ಮಗದೊಂದು ಕತ್ರಿಗುಪ್ಪೆ ಮುನಿಯ ಗ್ಯಾಂಗ್.

ಈ ಪೈಕಿ ಮೊದಲು ಸಿಕ್ಕಿದ್ದೇ ಕತ್ರಿಗುಪ್ಪೆ ಮುನಿಯ ಗ್ಯಾಂಗ್. ಇದೇ ಹೊತ್ತಿಗೆ ಸುನೀಲನ ಬಲಗೈ ಬಂಟ ಒಂಟೆ, ಅನಾಲಿ, ವೇಡಿ, ಪೀಟ ಸಂತೋಷ ಜೈಲಿಂದ ಬಿಡುಗಡೆಯಾಗಿ ಬಂದಿದ್ದಾರೆ. ಉಮೇಶ್ ಇವರ ಚಲನವಲನದ ಬಗ್ಗ ಅಷ್ಟೊಂದು ಕಣ್ಣಿಡಲಿಲ್ಲ. ಇವರಿಗಿಂತಲೂ ಮುಖ್ಯವಾಗಿ ಬೆಳಕಿಗೆ ಬಾರದೇ ಒಂದೊಂದಾಗಿ ಸುಪಾರಿ ಕೊಲೆಗಳನ್ನು ಮಾಡುತ್ತಿದ್ದ ತೊದ್ಲು ಮಂಜನನ್ನು ಮಟ್ಟ ಹಾಕಬೇಕಿತ್ತು.

ಫೆಬ್ರವರಿ 15 ಕ್ಕೆ ಇಡೀ ಸುನೀಲನ ಗ್ಯಾಂಗ್ ಪರಪ್ಪನ ಅಗ್ರಹಾರ ಜೈಲಿಗೆ ಬಂದು, ಅಲ್ಲಿ ಸುನೀಲನನ್ನು ಭೇಟಿ ಮಾಡಿ ಆತನ ಆದೇಶದ ಮೇರೆಗೆ ಮೈಸೂರಿನಲ್ಲೊಂದು ಸುಪಾರಿ ಕೊಲೆ ಮಾಡುವ ಬಗ್ಗೆ ಫೆಬ್ರವರಿ 8 ಕ್ಕೇ ಉಮೇಶ್‌ಗೆ ಮಾಹಿತಿ ಸಿಕ್ಕಿದೆ. ಸುನೀಲನ ಆದೇಶದ ಮೇರೆಗೆ ಫೆಬ್ರವರಿ 15 ಕ್ಕೆ ತೊದ್ಲು ಮಂಜ, ಜ್ಯೂಸ್ ಮಂಜ, ರಘು, ಅವಿನಾಶ್, ಹ್ಯಾಟಿ ಮರಿಯಪ್ಪನ ಪಾಳ್ಯದ ಕೃಷ್ಣ, ಕುಮರೇಶ, ಕಾಟು, ಬಲರಾಮ, ಫ್ಯಾನು, ಪೀಣ್ಯದ ಸೆಲ್ಯೂಶನ್ನು, ಹರಿಶ್ಚಂದ್ರ ಘಾಟಿನ ಬೋಂಡಾ ನಾಗ ಮುಂತಾದವರೆಲ್ಲ ಪರಪ್ಪನ ಅಗ್ರಹಾರ ಜೈಲಿನ ಸುತ್ತಮುತ್ತ ಸೇರುತ್ತಿದ್ದಂತೆ ಇನ್ಸ್‌ಪೆಕ್ಟರ್ ಉಮೇಶ್ ಪಡೆ ದಾಳಿ ಮಾಡುತ್ತದೆ.

ಈ ಪೈಕಿ ತೊದ್ಲು ಮಂಜನನ್ನು ಸ್ವತಃ ಇನ್ಸ್‌ಪೆಕ್ಟರ್ ಉಮೇಶ್ ಅಟ್ಟಿಸಿಕೊಂಡು ಹೋಗಿದ್ದಾರೆ. ಹಾಗೇ ಪರಪ್ಪನ ಅಗ್ರಹಾರ ಜೈಲಿನ ಬಳಿಯಿಂದ ಚೆಲ್ಲಾಪಿಲ್ಲಿಯಾದ ಸುನೀಲನ ಗ್ಯಾಂಗ್ ಮತ್ತೆ ಜಮೆಯಾಗುವುದು ಗೋರಿಪಾಳ್ಯದ ಮಾಜಿ ಕಾರ್ಪೊರೇಟರ್ ಆರಿಫ್ ಪಾಷಾನ ಮನೆಯಲ್ಲಿ, ಆನಂತರ ಎಲ್ಲರೂ ಸುನೀಲನ ಆದೇಶದ ಮೇರೆಗೆ ಮೈಸೂರಿಗೆ ಹೋಗಿ ಸುಪಾರಿ ಕೊಲೆಯೊಂದಕ್ಕೆ ಕೈಹಾಕುತ್ತಾರಾದರೂ ಅಲ್ಲಿ ಸಣ್ಣದೊಂದು ಆಕ್ಸಿಡೆಂಟ್ ಮಾಡಿಕೊಂಡು ಯಡವಟ್ಟು ಮಾಡಿಕೊಳ್ಳುತ್ತಾರೆ. ಮತ್ತೆ ಮಾರ್ಚ್ ಐದರಂದು ಪ್ರಕಾಶ್‌ನಗರದ ಮರಿಯಪ್ಪನ ಪಾಳ್ಯದಲ್ಲಿ ಸುನೀಲನ ಒಂದು ಬೆಟಾಲಿಯನ್ ಜಮೆಯಾಗುತ್ತದೆ. ಜೈಲಿನಲ್ಲಿ ಕೂತೇ ತನ್ನ ಬಂಟ ವಿನಿ ಎಂಬಾತನ ಮೂಲಕ ಲಗ್ಗೆರೆಯ ಬಾಬು ಎಂಬಾತನನ್ನು ಮುಗಿಸಲು ಸುನೀಲ ಆದೇಶ ಕೊಡುತ್ತಾನೆ.

ಇದು ಕೂಡ ಇನ್ಸ್‌ಪೆಕ್ಟರ್ ಉಮೇಶ್ ಗಮನಕ್ಕೆ ಬಂದು ಇನ್ನೇನು ಲಗ್ಗೆರೆ ಬಾಬುವನ್ನು ತೊದ್ಲು ಮಂಜನ ಗ್ಯಾಂಗ್ ಮುಗಿಸಬೇಕೆನ್ನುವಷ್ಟರಲ್ಲಿ ಅಲ್ಲಿಗೂ ಉಮೇಶ್ ನೇತೃತ್ವದ ಪೊಲೀಸ್ ಪಡೆ ದಾಳಿ ನಡೆಸುತ್ತದೆ. ಮಿಕ್ಕೆಲ್ಲರೂ ಎಸ್ಕೇಪ್ ಆಗುತ್ತಾರಾದರೂ ತೊದ್ಲು ಮಂಜನ ಪರಮಾಪ್ತ ಆರಿಫ್ ಮಾತ್ರ ಸಿಕ್ಕಿಬೀಳುತ್ತಾನೆ. ಆತ ಕೊಟ್ಟ ಮಾಹಿತಿಯ


ಬೋನಿಗೆ ಬಿದ್ದ ತೊದ್ಲು ಮಂಜನ ಗ್ಯಾಂಗ್

ಮೇರೆಗೆ ಪ್ರಕಾಶ್ ನಗರದ ಮೋರಿ ಬಳಿ ಮತ್ತೆ ಜಮೆಯಾಗಿದ್ದ ತೊದ್ಲು ಮಂಜನ ಗ್ಯಾಂಗಿನ ಮೇಲೆ ಉಮೇಶ್ ಮೂರನೇ ದಾಳಿ ನಡೆಸುತ್ತಾರಾದರೂ ಇಡೀ ಗ್ಯಾಂಗ್ ಮೋರಿಗೆ ಬಿದ್ದು ಪರಾರಿಯಾಗಬಿಡುತ್ತಾನೆ.

ಅದರ ಮರುದಿನ ಅಂದರೆ ಮಾರ್ಚ್ 7 ರಂದು ಸುನೀಲನ ಬಲಗೈ ಬಂಟ ರೋಹಿತ್ ಉರ್ಫ್ ಒಂಟೆ, ಮಾರ್ಕೆಟ್ ವೇಡಿ, ಅನಾಲಿ ಮುಂತಾದವರು ಸಿಸಿಬಿಗೆ ಹಾಜರಿ ಹಾಕಿ ಹೋಗಲು ಬಂದರೆ, ಅವರ ರಕ್ಷಣೆಗೆಂದು ಇಡೀ ತೊದ್ಲು ಮಂಜನ ಗ್ಯಾಂಗ್ ರಾಯನ್ ಸರ್ಕಲ್‌ನಲ್ಲಿ ಜಮೆಯಾಗುವ ಮಾಹಿತಿ ಉಮೇಶ್‌ಗೆ ಸಿಕ್ಕಿದೆ. ಸಿಸಿಬಿಗೆ ಬಂದಿದ್ದು ಒಂಟೆಯ ಗ್ಯಾಂಗ್ ಮಾತ್ರವಾದರೆ ಅವರ ರಕ್ಷಣೆಗೆಂದು ಸಿಸಿಬಿಯ ಸುತ್ತ ಜಮೆಯಾಗುವುದು ತೊದ್ಲು ಮಂಜನ ಉದ್ದೇಶ. ಅದನ್ನು ಮುಗಿಸಿ ಲಗ್ಗೆರೆ ಬಾಬುವನ್ನು ಮುಗಿಸುವ ಕಾರ್ಯಕ್ರಮವನ್ನು ತೊದ್ಲು ಮಂಜ ಹಾಕಿಕೊಂಡಿದ್ದಾನೆ. ಅದಕ್ಕೆಂದೇ ಮಲ್ಲೇಶ್ವರದಲ್ಲಿ ಗ್ಯಾಂಗ್ ಜಮೆಯಾಗಿ ಮಾಗಡಿ ರಸ್ತೆಯ ಮೂಲಕ ಸೂಪರ್ ಟಾಕೀಸಿನತ್ತ ಕಾರೊಂದರಲ್ಲಿ ಬರುತ್ತಿದ್ದಂತೆ ಇನ್ಸ್‌ಪೆಕ್ಟರ್ ಉಮೇಶ್ ದಾಳಿ ಮಾಡಿದ್ದಾರೆ. ಹಿಡಿಯಲು ಹೋದ ಉಮೇಶ್ ಮೇಲೆ ತಿರುಗಿ ಬಿದ್ದ ತೊದ್ಲು ಮಂಜನಿಗೆ ಗುಂಡು ಬಿದ್ದಿದೆ. ಆತನ ಜೊತೆ ಬಂದಿದ್ದ ಕಿರಿಕ್ ಮಂಜ, ಆಟೋ ಮಂಜ, ಜ್ಯೂಸ್ ಮಂಜ, ಶ್ರೀನಿವಾಸ, ಪ್ರಕಾಂತ್ ಕುಮಾರ್, ವೆಂಕಟಾಚಲಪತಿ ಎಲ್ಲರನ್ನೂ ಸಮಾ ರಿಪೇರಿ ಮಾಡಿ ಜೈಲಿಗೆ ದಬ್ಬಿದ್ದಾರೆ.


ಸೈಲೆಂಟ್ ಸುನೀಲ

ದುರಂತವೆಂದರೆ ತೊದ್ಲು ಮಂಜ ದೊಡ್ಡ ರೌಡಿಯೇ ಅಲ್ಲ, ಕೇವಲ ಎರಡೇ ಎರಡು ಕೊಲೆಗಳನ್ನಷ್ಟೇ ಮಾಡಿದ್ದ. ಆತನ ಜೊತೆಗಿದ್ದವರ್‍ಯಾರೂ ಹತ್ತಾರು ಕೊಲೆಗಳನ್ನು ಮಾಡಿರದೇ ಸಣ್ಣಪುಟ್ಟ ರಾಬರಿಗಳಲ್ಲಿದ್ದವರು ಮಾತ್ರ. ಇಂಥಾ ನಿಷ್ಪಾಪಿಗಳನ್ನು ಹಿಡಿದು ಜೈಲಿಗೆ ದಬ್ಬಿದ್ದೇ ಮಹಾಪರಾಧ, ಇದಕ್ಕೆ ಇನ್ಸ್‌ಪೆಕ್ಟರ್ ಸುಪಾರಿ ಪಡೆದಿದ್ದಾರೆ ಎಂಬುದು ಸೈಲೆಂಟ್ ಸುನೀಲನ ಸುನೀಲನ ಗ್ಯಾಂಗಿನ ಬೊಬ್ಬೆ.

ಹಾಗಾದರೆ ಮಾರ್ಚ್ 6 ರಂದು ಲಗ್ಗೆರೆ ಬಾಬುವನ್ನು ಕೊಲ್ಲಲು ಇದೇ ತೊದ್ಲು ಮಂಜನ ಗ್ಯಾಂಗ್ ಹೋಗಿದ್ದು, ಅಲ್ಲಿಗೆ ಇನ್ಸ್‌ಪೆಕ್ಟರ್ ದಾಳಿ ನಡೆಸಿದ್ದು, ದಾಲಿಯಲ್ಲಿ ಮಂಜ ಮೋರಿ ಹೊಕ್ಕ ಕೂತಿದ್ದು, ಜೊತೆಗಿದ್ದ ಆರಿಫ್ ಸಿಕ್ಕಿಬಿದ್ದಿದ್ದು ಎಲ್ಲವೂ ಸುಳ್ಳೆ? ಈ ಬಗ್ಗೆ ತೊದ್ಲು ಮಂಜ ಮತ್ತು ಜೈಲಿನಲ್ಲಿರುವ ಸುನೀಲರ ಟೆಲಿಫೋನ್ ಸಂಭಾಷಣೆಯ ಬಗ್ಗೆ ಬೊಬ್ಬಿಡುವವರು ಏನನ್ನುತ್ತಾರೆ? ಮೈಸೂರಿನಲ್ಲೊಂದು ಸುಪಾರಿ ಮಾಡಲು ಹೋಗಿದ್ದ ತೊದ್ಲು ಮಂಜನ ಪಡೆಯನ್ನು ಮುಟ್ಟದೇ ಬಿಡಬೇಕಿತ್ತೆ? ಇದೇ ಗ್ಯಾಂಗ್ ಕೊಲ್ಲಲು ಹೋಗಿದ್ದ ಲಗ್ಗೆರೆ ಬಾಬು ಮೈಸೂರಿನ ಆಸಾಮಿ ಮತ್ತು ಒಂಟೆ ಜೈರಾಮ ಇವರ್‍ಯಾರೂ ಗೋಪಾಲಯ್ಯನ ಸಹಚರರೇನಲ್ಲ, ಅಂಥವರನ್ನು ಕೊಲ್ಲಲು ಹೊರಟು ಅದನ್ನು ಪೊಲೀಸರು ತಡೆದರೆ ಅದಕ್ಕೆ ಗೋಪಾಲಯ್ಯ ಸುಪಾರಿ ಕೊಟ್ಟು ಎಂದು ಬಚಾವಾಗುವುದು ಸುನೀಲನ ಗ್ಯಾಂಗಿನ ಲೇಟೆಸ್ಟ್ ತಂತ್ರ.

ತಮ್ಮೆಲ್ಲಾ ದುಷ್ಕೃತ್ಯಗಳನ್ನು ಗೋಪಾಲಯ್ಯನ ದುಷ್ಮನಿಗೆ ಹೋಲಿಸುವುದು, ಅದನ್ನು ಮಟ್ಟಹಾಕಿದ ಪೊಲೀಸ್ ಅಧಿಕಾರಿಗಳನ್ನು ಗೋಪಾಲಯ್ಯನ ಪರವಹಿಸಿದ್ದಾರೆಂದು ದೂರುವುದು ತುಂಬ ಸುಲಭ. ಆದರೆ ಇನ್ಸ್‌ಪೆಕ್ಟರ್ ಉಮೇಶ್ ತಮ್ಮೆಲ್ಲಾ ಕಾರ್ಯಾಚರಣೆಗಳನ್ನು ದಾಖಲೆಗಳನ್ನಿಟ್ಟುಕೊಂಡೇ ಮಾಡಿರುತ್ತಾರೆಂಬುದು ಮಾತ್ರ ಈ ಕ್ರಿಮಿಗಳಿಗೆ ಗೊತ್ತಿಲ್ಲ, ಜೈಲಿಂದ ಸುನೀಲ ಕೊಟ್ಟ ಆದೇಶ, ಆತನ ಜೊತೆ ತೊದ್ಲು ಮಂಜ ಮಾತಾಡಿದ್ದು, ತೊದ್ಲು ಮಂಜನ ಗ್ಯಾಂಗ್ ಅಮಾಯಕ ಗೃಹಿಣಿಯರನ್ನು ಪೀಡಿಸಿದ್ದು, ಕೈಬಾಂಬ್ ತರಿಸಿದ್ದು ಎಲ್ಲದಕ್ಕೂ ಇನ್ಸ್‌ಪೆಕ್ಟರ್ ಉಮೇಶ್ ಬಳಿ ದಾಖಲೆಗಳಿವೆ.

ಇವತ್ತು ರವಿ ಪೂಜಾರಿ ಕೂಡಾ ಬೆಂಗಳೂರಿನಲ್ಲಿ ಗ್ಯಾಂಗ್ ಕಟ್ಟಿಕೊಂಡು ಎಂಟ್ರಿ ಪಡೆಯಲು ನೋಡುತ್ತಿದ್ದಾನೆ. ಇಂಥ ಪರಿಸ್ಥಿತಿಯಲ್ಲಿ ಬೆಂಗಳೂರನ್ನು ಆದಷ್ಟು ರೌಡಿಮುಕ್ತವಾಗಿಸುವುದು ಸೂಕ್ತವಲ್ಲವೇ?

-ವರದಿಗಾರ



ಮುಬಾರಕ್ ಆಲಿ ಯಾರಿಗೆ ನೆಂಟ?

ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಹಿತಕಾಯುವುದಕ್ಕೆಂದೇ ತೊದ್ಲು ಮಂಜನ ಗ್ಯಾಂಗನ್ನು ಉಮೇಶ್ ಮಟ್ಟ ಹಾಕಿದ್ದೇ ನಿಜವಾಗಿದ್ದರೆ, ಇನ್ಸ್‌ಪೆಕ್ಟರ್ ಉಮೇಶ್ ತಮ್ಮ ವ್ಯಾಪ್ತಿಗೆ ಬರದೇ ಇದ್ದರೂ ನೀಲಸಂದ್ರದ ರೌಡಿ ಮುಬಾರಕ್ ಆಲಿಯನ್ನೇಕೆ ಹಿಡಿಯಬೇಕಿತ್ತು, ತಮಾಷೆಯೆಂದರೆ ಇಷ್ಟೆಲ್ಲಾ ರಕ್ತಪಾತದ ನಂತರವೂ ಈತನಕ ಮುಬಾರಕ್ ಆಲಿಯ ಬಗ್ಗೆ ರೌಡಿಷೀಟನ್ನೇ ಪೊಲೀಸರು ತೆರೆದಿರಲಿಲ್ಲ, ಉಮೇಶ್ ಈಗ ಆ ಕೆಲಸ ಮಾಡಿದ್ದಾರೆ. ಮುಬಾರಕ್ ಆಲಿ ಸುನೀಲನ ಪರವೂ, ಅಲ್ಲ ಗೋಪಾಲಯ್ಯನ ದುಶ್ಮನ್ನೂ ಅಲ್ಲ.

ತಮಗೆ ಸಂಬಂಧ ಪಡೆದೇ ಹೋದರೆ ಸಿಕ್ಕ ಮಾಹಿತಿಯನ್ನು ಆಧರಿಸಿ ಕೆಂಚ ವೆಂಕಟೇಶನನ್ನು ಕೊಲ್ಲಲು ಹೊರಟಿದ್ದ ಪಪ್ಪಾಯಿ ಎಂಬ ರೌಡಿಯನ್ನು ಉಮೇಶ್ ಏಕೆ ಬಂಧಿಸಬೇಕಿತ್ತು? ಕಾಮಾಕ್ಷಿಪಾಳ್ಯದ ಮತ್ತೊಬ್ಬ ರೌಡಿ ದಿನಿ ಉರ್ಫ್ ದಿನೇಶನ ಬಗ್ಗೆ ಸಿಕ್ಕ ಮತ್ತೊಂದು ಮಾಹಿತಿಯನ್ನಾಧರಿಸಿ ಏಕೆ ಕ್ರಮ ಕೈಗೊಳ್ಳಬೇಕಿತ್ತು?

ಬೆಂಗಳೂರಿನ ನೆಮ್ಮದಿಗಾಗಿ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಇದ್ಯಾವುದನ್ನೂ ಮಾಡಕೂಡದು ಎಂದರೆ ಅದನ್ನು ಮಾಡಬೇಕಿದ್ದವರೇಕೆ ಕೈಕಟ್ಟಿ ಕೂರುತ್ತಾರೆ? ಅವರ್‍ಯಾರೂ ಮಾಡದ್ದನ್ನು ಮಾಡಿದ್ದೇ ಉಮೇಶ್ ಮಾಡಿದ ತಪ್ಪೆ?

ಮುದ್ದೇಗೌಡರ ಫ್ಯಾಮಿಲಿಯೂ, ಶತ್ರು ನಿರ್ನಾಮ ಮಂತ್ರವೂ

ಭೆರತ ಖಂಡೇ, ಕರ್ನಾಟಕ ದೇಶದೊಳ್ ಆಳುತಿರ್ಪ ಮೆಸರ್ಸ್ ಮುದ್ದೇಗೌಢ ಅಂಡ್ ಸನ್ಸ್ ಇತ್ತೀಚಿಗೆ ತಿಂಗಳಿಗೆರಡಾವರ್ತಿ ನೆರೆಯ ತಮಿಳುನಾಡಿನ ಮಧುರೈ ಪಟ್ಟಣಕ್ಕೆ ಬಿಜಯಂಗೈಯುತ್ತಿರುವ ಕಾರಣವೇನೆಂಬುದು ನಿಮಗೇನಾದರೂ ಗೊತ್ತೆ?

ಇಲ್ಲವಾ!

ಹಾಗಿದ್ದರೆ ಕೇಳಿ....

ಬೆಂಗಳೂರಿನಿಂದ ದಕ್ಷಿಣ-ಪೂರ್ವಕ್ಕಿರುವ ಅರ್ಥಾತ್ ದೇವಮೂಲೆಯಲ್ಲಿರುವ ಮಧುರೈ ಪಟ್ಟಣವು ಪುರಾತನ ದೇವಸ್ಥಾನಗಳಿರುವ ಪವಿತ್ರ ಭೂಮಿ ಎಂಬ ನಂಬುಕೆ ಮುದ್ದೇಗೌಡರದ್ದು. ಇಂಡಿಯಾ ದೇಶದ ಬಹುಶಕ್ತಿಶಾಲಿ ದೇವರುಗಳು ಪುರಾತನಕಾಲದಿಂದಲೂ ತಮ್ಮ ಹೆಂಡಂದಿರ ಸಮೇತ ಅಲ್ಲೇ ಸೆಟಲ್ ಆಗಿರುವುದು ತಮಗೆಲ್ಲರಿಗೂ ವೇದ್ಯವಾದ ಸಂಗತಿಯೇ ಆಗಿದೆ.

ಶ್ರೀಯುತ ಮುದ್ದೇಗೌಡರ ಪದ್ಮನಾಭನಗರದ ಮನೆಯ ಬಾಗಿಲಿನಿಂದ ಪೂರ್ವದಿಕ್ಕಿಗೆ 90 ಡಿಗ್ರಿ ನೇರದಲ್ಲಿ ವಾಸಿಸುತ್ತಿರುವ ಈ ದೇವರುಗಳ ಕೃಪೆ ದೊರೆತಲ್ಲಿ ತಮ್ಮ ರಾಜಕೀಯ ಶತ್ರುಗಳನ್ನು ನಿರ್ನಾಮ ಮಾಡುವುದು ಸುಲಭ ಎಂಬುದಾಗಿ ಮುದ್ದೇಗೌಡ ಅಂಡ್ ಸನ್ಸ್‌ಗಳು ನಂಬಿದ್ದಾರೆ. ಮುದ್ದೇಗೌಡ್ರು ಸಬ್‌ಓವರ್‌ಸೀಯರ್ ಆಗಿದ್ದ ಆ ಕಾಲದಲ್ಲಿ ಹಾಗೂ ರಾಜಕೀಯಕ್ಕಿಳಿದ ನಂತರ ಹಾಸನ ಜಿಲ್ಲೆಯ ಲೋಕಲ್ ಮಂತ್ರವಾದಿಗಳನ್ನಷ್ಟೇ ಅವಲಂಬಿಸಿಕೊಂಡಿದ್ದರು. ನಂತರ ಅವರು ರಾಜಕೀಯದಲ್ಲಿ ಮೇಲಕ್ಕೇರಿದಂತೆ ಆದಿಚುಂಚನಗಿರಿಯ ಕಾಲಭೈರವೇಶ್ವರನ ಮೊರೆ ಹೋದರು. ಆದರೆ ಅವರಿಗೆ ಅಲ್ಲಿ ಹೆಚ್ಚು ಕಾಲ ನಿಲ್ಲಲಾಗಲಿಲ್ಲ, ಅದಕ್ಕೆ ಕಾರಣವೇನೆಂದರೆ ಮುದ್ದೇಗೌಡ್ರಿಗೆ ತಮ್ಮ ಏಳಿಗೆಗಿಂತ ಪರರ ವಿನಾಶವೇ ಮುಖ್ಯವಾಗಿತ್ತು, ಹಾಗಾಗಿ ಬೆಂಗಳೂರಿನ ಚಂಭಟ್ಟ, ಹಲ್ಲಿ ಶಕುನ, ಗಿಳಿಶಾಸ್ತ್ರ ಕವಡೇ ಶಾಸ್ತ್ರದವರನ್ನೆಲ್ಲಾ ಸುತ್ತು ಹಾಕಿಕೊಂಡು ಈಗ ಶತ್ರು ನಿಗ್ರಹ ಪರಿಣಿತರನ್ನು ಹುಡುಕಿಕೊಂಡು ಮಧುರೈನತ್ತ ಸಾಗಿ ಹೋಗಿದ್ದಾರೆ. ಅಲ್ಲಿ ತಿಂಗಳಿಗೊಂದಾವರ್ತಿ ಕುಟುಂಬಸಮೇತ ಹೋಗಿ ಬರುತ್ತಾ ಪೂರ್ಣಿಮಿಯಂದು ತಮ್ಮ ಕುಟುಂಬದ ಏಳಿಗೆಗಾಗಿ ಪೂಜೆಗಳನ್ನು, ಅಮಾವಾಸ್ಯೆಯಂದು ತಮ್ಮ ಶತ್ರುಗಳ ನಿಗ್ರಹಕ್ಕಾಗಿ ಹೋಮ ಹವನಗಳನ್ನು ನಡೆಸುತ್ತಿದ್ದಾರೆಂದು ನಂಬಲನರ್ಹ ಮೂಲಗಳಿಂದ ತಿಳಿದು ಬರುತ್ತಿದೆ. ಮುದ್ದೇಗೌಡರ ಎಡಗೈ ಬಂಟ why S.V. ಚಿತ್ತ ಎಂಬ ವಿಪ್ರೋತ್ತಮನು ದುರ್ಬೀನು ಹಾಕಿಕೊಂಡು ಶೋಧಿಸಿ ಅತ್ಯುತ್ತಮ ಪುರೋಹಿತರನ್ನು ಹುಡುಕಿಕೊಟ್ಟಿದ್ದಾನೆ ಎನ್ನಲಾಗಿದೆ.

ಇನ್ನು ಮಧುರೈ ಪಟ್ಟಣದಲ್ಲೇನು ನಡೆಯುತ್ತಿದೆ ಎಂಬ ವಿಚಾರಕ್ಕೆ ಬರುವುದಾದರೆ....

ಮುದ್ದೇ ಫ್ಯಾಮಿಲಿಯ ಸದಸ್ಯರ ಹಿತರಕ್ಷಣೆ ಮೊದಲ ಆದ್ಯತೆಯ ವಿಚಾರ. ಈ ಕುಟುಂಬದ ಸುಮಾರಸ್ವಾಮಿ ಎಂಬಾತ ಅನಿರೀಕ್ಷಿತವಾಗಿ ಕರ್ನಾಟಕ ರತ್ನಸಿಂಹಾಸನಾ ಧೀಶ್ವರನಾದ. ಅನೇಕ ವರ್ಷಗಳಿಂದ ಊಟವನ್ನೇ ಕಂಡಿರದಿದ್ದವನಂತೆ ಅರ್ಜೆಂಟಾಗಿ ಸಿಕ್ಕಿದ್ದನ್ನೆಲ್ಲಾ ತಿಂದ ಪರಿಣಾಮ ಹೊಟ್ಟೆ ಕೆಟ್ಟು ಊರೆಲ್ಲಾ ಗಬ್ಬುನಾತ ಹರಡಿತು. ಇದಕ್ಕೆ Sumaru Swamy ಹೆಸರಿನಲ್ಲಿ ಕೇವಲ 2A ಗಳಿರುವುದೇ ಕಾರಣ ಎಂದು ಅಂಕಿತಜ್ಞನೊಬ್ಬ ಹೇಳಲಾಗಿ ಅವರ ಹೆಸರನ್ನು Sumaaru Swamy ಎಂಬ ಬದಲಿಸಿ 3A ಅಕ್ಷರಗಳು ಬರುವ ಹಾಗೆ ಮಾಡಲಾಯಿತು. ಆದರೆ ಇದರಿಂದೇನೂ ಪ್ರಯೋಜನವಾಗಲಿಲ್ಲ, ಬದಲಾಗಿ ಮುದ್ದೇ ಫ್ಯಾಮಿಲಿಯ ಬಾಲ, ಮುಂಜ, ರೇವು, ಆನಿ, ಕವಿ ಮುಂತಾದವರೂ ಇಡೀ ಕರ್ನಾಟಕವನ್ನೇ ಬಾಳೆಎಲೆ ರೀತಿ ಹರಡಿಕೊಂಡು ಒಟ್ಟಿಗೆ ಭೋಜನಕ್ಕೆ ಕುಳಿತು ಹೊಟ್ಟೆ ಬಿರಿಯುವಂತೆ ಮೇಯ್ದು ಪರಿಣಾಮ ಪರಿಸ್ಥಿತಿ ಇನ್ನೂ ಶೋಚನೀಯ ವಾಗಿ ಹೋಯಿತು. ಇವರೆಲ್ಲರ ರೋಗಗಳನ್ನು 'ಲಂಕೇಶ್' ಎಂಬ ವೈದ್ಯರು ಪತ್ತೆಹಚ್ಚಿ ಸಾರ್ವಜನಿಕ ರಿಗೆಲ್ಲಾ ವರದಿ ಮಾಡಿದ್ದರಿಂದ ಮುದ್ದೇಗೌಡರ ಕುಟುಂಬದ ಮಾನವೆಲ್ಲಾ ಹರಾಜಾಗಿ ಹೋಯಿತು. ಈಗ ಸಿಬಿಐ ಎಂಬ ಇನ್ನೊಂದು ಸಾರ್ವಜನಿಕ ಆರೋಗ್ಯ ಕೇಂದ್ರವು ಮುದ್ದೇಗೌಡರ ಇಡೀ ಫ್ಯಾಮಿಲಿಯ ಸ್ಕ್ಯಾನಿಂಗ್, ಎಕ್ಸ್‌ರೇ, ರಕ್ತ ಮೂತ್ರ ಪರೀಕ್ಷಿಸುವ ಕಾಲ ಹತ್ತಿರ ಬರುತ್ತಿದೆ.



ಈ ಕೆಟ್ಟ ಬೆಳವಣಿಗೆಗಳಿಗೆಲ್ಲಾ ತಮ್ಮ ಗ್ರಹಗತಿಗಳೇ ಕಾರಣವೆಂದು ನಂಬಿರುವ ಮುದ್ದೇಗೌಡ್ರು ಈಗ ಮಧುರೈಗೆ ಹೋಗಿ ಸಂಕಟ ನಿವಾರಣ ಹವನ ಮಾಡಿಸುತ್ತಿದ್ದಾರಂತೆ.

ಇನ್ನು ಶತ್ರು ನಿಗ್ರಹ ಹಾಗೂ ನಿರ್ನಾಮದ ವಿಚಾರಕ್ಕೆ ಬರುವುದಾದರೆ....

ಕಾಂಗ್ರೆಸ್ ಪಾರ್ಟಿಯ ಡಿ.ಕೆ. ಶಿವಕುಮಾರ್, ಖರ್ಗೆ, ಸಿದ್ಧರಾಮಯ್ಯನವರ ಫೋಟೋಗಳು ಮಧುರೈ ಪುರೋಹಿತರ ಕೈ ಸೇರಿವೆಯಂತೆ. ಅಷ್ಟೂ ಸಾಲದೆಂಬಂತೆ ಮುದ್ದೇಗೌಡ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಹಿರಿಯ ಅಧಿಕಾರಿಗಳಾದ ಚೆಲುವ, ಚೆನ್ನಿಗ ಮುಂತಾದವರ ಫೋಟೋಗಳನ್ನು ಪುರೋಹಿತರಿಗೆ ಕೊಟ್ಟು ಇವರಿಗೆಲ್ಲಾ ತಕ್ಕ ಶಾಸ್ತಿ ಮಾಡುವಂತೆ ಸೂಚಿಸಲಾಗಿದೆಯಂತೆ. ಬಲ್ಲ ಮೂಲಗಳ ಪ್ರಕಾರ ಲಂಕೇಶ್ ವಾರಪತ್ರಿಕೆ ನಾಶವಾಗಲೆಂತಲೂ ಒಂದು strong ಪೂಜೆ ಏರ್ಪಾಡಾಗಲಿದೆ.

ಈ ಪೂಜಾ ವಿಧಾನಗಳೇನೆಂಬುದನ್ನು ಆಸಕ್ತರಿಗೂ ಹಾಗೂ ಅಜ್ಞಾನಿಗಳಿಗೂ ಇಲ್ಲಿ ವಿವರಿಸಲಾಗಿದೆ.

ಒಂದು ಆರಡಿ-ನಾಲ್ಕಡಿಯ ದೊಡ್ಡ ಯಜ್ಞಕುಂಡ. ನಾಯಿ ಹೊಡೆಯುವ ಕೋಲಿನ ಸೈಜಿನ ಪುರೋಹಿತನೊಬ್ಬ ಮಂತ್ರ ಒದರುತ್ತಾ ಅಲ್ಲಿ ಬೆಂಕಿ ಎಬ್ಬಿಸುತ್ತಾನೆ. ಪಕ್ಕದಲ್ಲೇ ಶ್ರೀಮಾನ್ ಮುದ್ದೇಗೌಡ್ರೂ ನಿಂತಿರುತ್ತಾರೆ. ಮತ್ತವರ ಪಕ್ಕ ಭಂಟ ಚಿತ್ತನ ಕೈಲಿ A4 ಸೈಜಿನ ಆರೆಂಟು ಜನರ ಫೋಟೋಗಳಿರುತ್ತವೆ. ಈ ಚಿತ್ತ ಒಂದೊಂದೇ ಫೋಟೋ ಎತ್ತಿ ಮುದ್ದೇಗೌಡ್ರ ಕೈಗೆ ಕೊಡುತ್ತಾ ಹೋದಂತೆ ಅವರು ಅವನ್ನು ಹರಿದರಿದು ಬೆಂಕಿಗೆ ಹಾಕುತ್ತಾ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಒಂದೇ ಸಮನೆ ನಾಯಿ ಬೊಗಳಿದಂತೆ ಮಂತ್ರಗಳು ಕೇಳಿಬರುತ್ತಿರುತ್ತವೆ.

ಆ.... ಇದೇನ ನ್ಯಾಯ ಅಂದ್ರಾ!

ಜನ ಸಾಯ್ತಾ ಇದಾರೆ ಅಂದ್ರಾ....?!

ಕಾವೇರಿ ತೀರ್ಪು, ಬರಗಾಲ, ಜನರಿಗೆ ಕುಡಿಯೋ ನೀರಿಲ್ಲ... ಅಂದ್ರಾ!!!

ಮುದ್ದೇಗೌಡ ಅಂಡ್ ಸನ್ಸ್‌ಗೆ ಸ್ವಲ್ಪ ಟೈಂ ಸಿಕ್ಕರೆ ಇವೆಲ್ಲಕ್ಕೂ ಇನ್ನೊಂದು ಹೋಮ ಮಾಡಿಸಿ ಎಲ್ಲಾ ಸರಿ ಮಾಡ್ತಾರೆ ಬಿಡಿ. ■

ನಂದಿಗ್ರಾಮದಲ್ಲೊಂದು ನರಮೇಧ!

ಹೌದು. ಸಿಂಗೂರು-ನಂದಿಗ್ರಾಮಗಳು ರಕ್ತ ಹರಿಸುತ್ತಲೇ ಇವೆ. ಈ ರಕ್ತದ ಹರಿವನ್ನು ಹೆಚ್ಚಿಸುವುದಕ್ಕೆ ಅಲ್ಲಿ ಮತ್ತೊಂದು ನರಮೇಧ ನಡೆದಿದೆ. ಮೊನ್ನೆ ಬುಧವಾರ ತಮ್ಮ ಭೂಮಿ, ಬದುಕು ರಕ್ಷಣೆಗಾಗಿ ಹೋರಾಡುತ್ತಿದ್ದ ಈ ಹಳ್ಳಿಯ ಅಮಾಯಕ ರೈತ, ಮಹಿಳೆ, ಮಕ್ಕಳ ಮೇಲೆ ಏಕಾಏಕಿ ಗುಂಡು ಹಾರಿಸಿದ ಪೊಲೀಸರು 25 ಜನರನ್ನು ಅಮಾನುಷವಾಗಿ ಕೊಂದು ಹಾಕಿದ್ದಾರೆ. ಹೀಗೆ ಕೊಲೆಯಾದವರಲ್ಲಿ ಬಹುತೇಕರು ಮಹಿಳೆಯರು ಮತ್ತು ಮಕ್ಕಳು. ಸತ್ತ ಜನರ ಶವಗಳನ್ನು ಇನ್ನೂ ಹುಡುಕಿ ಹೊರತರಲಾಗುತ್ತಿದೆ. ಈ ಪತ್ರಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಸತ್ತವರ ಸಂಖ್ಯೆ ಸುಮಾರು 30 ಆಗಬಹುದು ಎಂಬ ಒಂದು ಅಂದಾಜಿದೆ. ಪಶ್ಚಿಮ ಬಂಗಾಳದ ಜನರು ತಥಾಕಥಿಥ ಕಮ್ಯೂನಿಸ್ಟ್ ಪಕ್ಷವನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದಕ್ಕೆ ಪ್ರತಿಯಾಗಿ ಆ ಪಕ್ಷ ಮತ್ತು ಸರಕಾರ ಜನತೆಗೆ ಕೊಟ್ಟ ಉಡುಗೊರೆ ಇದು. ತಮ್ಮನ್ನು ಆರಿಸಿ ಕಳಿಸಿದ ಜನತೆಗೆ ಹಿಡಿ ಅನ್ನ, ಒಂದು ಗ್ಲಾಸು ನೀರು ಕೊಡಲಾಗದಿದ್ದರೂ ಅವರನ್ನು ಗುಂಡಿಕ್ಕಿ ಕೊಲ್ಲುವ ಮೂಲಕ ಒಂದಿಷ್ಟು ಜನಸಂಖ್ಯೆಯನ್ನಾದರೂ ಕಡಿಮೆ ಮಾಡಿತಲ್ಲ!

ರಕ್ತಸಿಕ್ತ ಅಧ್ಯಾಯಕ್ಕೆ ಮುನ್ನುಡಿ

ಪಶ್ಚಿಮ ಬಂಗಾಳದ ಪೂರ್ವ ಮಿಡ್ನಾಪುರ ಜಿಲ್ಲೆಯ ಸಾಮಾನ್ಯ ಊರುಗಳು ನಂದಿಗ್ರಾಮ ಮತ್ತು ಸಿಂಗೂರು. ಇವು ಒಂದು ವರ್ಷದ ಹಿಂದಿನತನಕ ಭಾರತದ ಲಕ್ಷಾಂತರ ಹಳ್ಳಿಗಳಂತೆ ಬಡತನ, ಕಷ್ಟ, ದುಃಖ, ನೋವು, ನಲಿವುಗಳನ್ನು ತನ್ನೊಳಗೇ ನುಂಗಿಕೊಂಡು ಯಾರ ಗಮನವನ್ನೂ ಸೆಳೆಯದಂತೆ ಮೌನವಾಗಿ ಬದುಕು ಸಾಗಿಸಿದ್ದ ಹಳ್ಳಿಗಳು. ಇಲ್ಲಿನ ಜನರು ತಾವು ಮುಂದೊಂದು ದಿನ ರಕ್ಕಸ ಪೊಲೀಸ್ ಅಟ್ಟಹಾಸಕ್ಕೆ ಬಲಿಯಾಗಬಹುದೆಂದು, ಜೀವನಾಧಾರವಾಗಿದ್ದ ತಮ್ಮ ಊರುಗಳ ರಣಭೂಮಿಯೋ, ಮಸಣ ಭೂಮಿಯೋ ಆಗುತ್ತದೆಂದು ಪ್ರಾಯಶಃ ಯಾರೂ ಎಣಿಸಿರಲಿಲ್ಲ. ಆದರೆ ಯಾವಾಗ ಟಾಟಾ ಮತ್ತು ಸಲೀಂ ಎಂಬ ದೇಶೀ-ವಿದೇಶೀ ಉದ್ಯಮಪತಿಗಳ ವಕ್ರದೃಷ್ಟಿ ಈ ಊರುಗಳ ಮೇಲೆ ಬಿತ್ತೋ ಜನರು ಎಣಿಸದಿದ್ದುದೆಲ್ಲವೂ ವಾಸ್ತವವಾಗಿ ಹೋಯಿತು.

ಸಿಂಗೂರಿನಲ್ಲಿ ರತನ್ ಟಾಟಾ ಒಂದು ಸಾವಿರ ಎಕರೆ ಕೇಳಿದ್ದು, ಭಟ್ಟಾಚಾರ್ಯ ಅದನ್ನು ದಯಪಾಲಿಸಿದ್ದು, ಜನ ಪ್ರತಿಭಟಿಸಿದ್ದು, ಕೊನೆಗೆ ಹಲವಾರು ಅಮಾಯಕರು ಪೊಲೀಸರ ಗುಂಡೇಟಿಗೆ ಬಲಿಯಾಗಿದ್ದು ಈ ರಕ್ತಸಿಕ್ತ ಅಧ್ಯಾಯದ ಮೊದಲನೆ ಭಾಗ, ನಂದಿಗ್ರಾಮ ಎರಡನೆ ಭಾಗ.

'ವಿಶೇಷ ಆರ್ಥಿಕ ವಲಯ' ಎಂಬ ಮಾರಿ

ನಂದಿಗ್ರಾಮ ಪ್ರದೇಶದಲ್ಲಿ ಹಲ್ದಿಯಾ ಬಂದರಿನ ಎದುರಿಗಿರುವ ಸುಮಾರು ಹದಿನಾಲ್ಕು ಸಾವಿರ ಎಕರೆ ಫಲವತ್ತಾದ ಜಮೀನಿನಲ್ಲಿ ವಿಶೇಷ ಆರ್ಥಿಕ ವಲಯ (SEZ) ವನ್ನು ಸ್ಥಾಪಿಸಬೇಕೆಂಬ ಪ್ರಸ್ತಾವ ಕಳೆದ ವರ್ಷದ ಡಿಸೆಂಬರ್‌ನಿಂದಲೂ ಕೇಳಿಬಂತು. ಈ ಜಾಗವು ಎರಡು ನದಿಗಳ ನಡುವಿನ ಪ್ರದೇಶವಾದ್ದರಿಂದ ಸತತ ನೀರಿನ ಸೌಕರ್ಯವಿರುವ ವ್ಯವಸಾಯಯೋಗ್ಯ ಫಲವತ್ತಾದ ಭೂಮಿಯಾಗಿದೆ. ಯಥೇಚ್ಛವಾಗಿ ನೀರನ್ನು ಬೇಡುವ ಕೈಗಾರಿಕೆಗಳ ಸ್ಥಾಪನೆಗೂ ಇದು ಹೇಳಿಮಾಡಿಸಿದ ಜಾಗವಾಗಿದೆ. ಇದನ್ನೆಲ್ಲ ಲೆಕ್ಕ ಹಾಕಿದ ಇಂಡೋನೇಷ್ಯಾದ ಸಲೀಂ ಗ್ರೂಪ್ ಎಂಬ ಉದ್ಯಮ ಸಂಸ್ಥೆ ಅಲ್ಲೊಂದು ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸುವ ಪ್ರಸ್ತಾವವನ್ನು ಸಲ್ಲಿಸಿತು.

ಆದರೆ ತಮ್ಮ ಫಲವತ್ತಾದ ವ್ಯವಸಾಯ ಭೂಮಿಯನ್ನು ಹೀಗೆ ಬಡಿಗಾಸಿಗೆ ನೀಡಲು ಅಲ್ಲಿನ ರೈತ ಸಮುದಾಯ ಸುತಾರಾಂ ಒಪ್ಪಲಿಲ್ಲ. ಸರಕಾರದ ಈ ಕ್ರಮದ ವಿರುದ್ಧ



ದೊಡ್ಡ ದೊಡ್ಡ ಪ್ರತಿಭಟನೆಗಳು ನಡೆದವು, ಅಮಾಯಕರ ರಕ್ತವೂ ಹರಿಯಿತು. ಲಾಭ ಪಡೆದುಕೊಳ್ಳುವುದಕ್ಕೋ ಏನೋ ಅಲ್ಲಿಯತನಕ ಸುಮ್ಮನಿದ್ದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಅಷ್ಟೇ ಅಲ್ಲ, ಸಿಪಿಐ(ಎಂ)ನ ಸಹಭಾಗಿ ಸಿಪಿಐ ಪಕ್ಷ ಕೂಡ ವಿಶೇಷ ಆರ್ಥಿಕ ವಲಯದ ಈ ಪ್ರಸ್ತಾವವನ್ನು ವಿರೋಧಿಸತೊಡಗಿದವು. ಒಟ್ಟಾರೆಯಾಗಿ ನಂದಿಗ್ರಾಮ ಭೂ ಆಕ್ರಮಣ ವಿರೋಧದ ಸಂಕೇತವಾಗಿ ಬಿಟ್ಟಿತು. ಜನವರಿಯ ಹೊತ್ತಿಗೆ ಅಲ್ಲಿ ಹೆಚ್ಚುಕಡಿಮೆ ಒಂದು ಅಂತರ್ಯುದ್ಧದ ಪರಿಸ್ಥಿತಿ ನಿರ್ಮಾಣವಾಯಿತು. ಈ ಯುದ್ಧ ನಡೆದದ್ದು ಮತ್ತು ನಡೆಯುತ್ತಿರುವುದು ಸಿಪಿಐ(ಎಂ) ಪಕ್ಷ, ಅದರ ನಾಯಕತ್ವದ ಪಶ್ಚಿಮ ಬಂಗಾಳ ಸರ್ಕಾರ, ಅದರ ಕ್ರೂರ ಪೊಲೀಸ್ ಪಡೆ ಹಾಗೂ ನಿಶಸ್ತ್ರಧಾರಿ ಅಮಾಯಕ ಅನ್ನದಾತರ ನಡುವೆ.

ಯಾವಾಗ ನಂದಿಗ್ರಾಮದಲ್ಲಿ ನಿಜವಾಗಿಯೂ ಒಂದು ಅಂತರ್ಯುದ್ಧ ಏರ್ಪಟ್ಟೇ ಬಿಟ್ಟಿತೋ, ಆಗ ಬುದ್ಧದೇವ ಚಾಲಾಕಿತನದಿಂದ ಪ್ಲೇಟು ತಿರುಗಿಸಿದ. "ಅಲ್ಲಿನ ಜನರಿಗೇನೇ ಆ ಪ್ರಾಜೆಕ್ಟ್ ಬೇಡವೆಂದ ಮೇಲೆ ನನಗೆ ಯಾಕೆ ಬೇಕು— ಅದನ್ನು ಬೇರೆ ಕಡೆ ವರ್ಗಾಯಿಸುತ್ತೇನೆ" ಎಂದು ಫೆಬ್ರವರಿಯಲ್ಲಿ ನಾಟಕ ಶುರು ಮಾಡಿದ. ಸಿಪಿಐ(ಎಂ)ನ ಬಾಸ್ ಪ್ರಕಾಶ್ ಕಾರಟ್ ಕೂಡ ನಂದಿಗ್ರಾಮದಲ್ಲಿ ಈಗ ಸದ್ಯಕ್ಕೆ ಯಾವ ಯೋಜನೆಯೂ ಇಲ್ಲ ಅಂತ ಬೊಗಳೆ ಬಿಟ್ಟು ಬುದ್ಧನ ಹೆಗಲ ಮೇಲೆ ಕೈಯಿಟ್ಟ. ನಂದಿಗ್ರಾಮದಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಹೊರಡಿಸಲಾಗಿದ್ದ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು.

ಮತ್ತೆ ಯಾಕೆ ಈ ನರಮೇಧ?

ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಹೊರಡಿಸಿದ್ದ ಅಧಿಸೂಚನೆಯನ್ನು ವಾಪಸ್ಸು ಪಡೆದ ಮೇಲೂ ಈ ಭೀಕರ ನರಮೇಧ ಯಾಕೆ? ಏಕೆಂದರೆ, ವಾಸ್ತವದಲ್ಲಿ ಆ ಅಧಿಸೂಚನೆಯನ್ನು ವಾಪಸ್ಸು ಪಡೆದೇ ಇರಲಿಲ್ಲ! ವಾಪಸ್ಸು ಪಡೆಯುತ್ತೇವೆಂದು ಫೆಬ್ರವರಿಯಲ್ಲಿ ಬುದ್ಧ ಬಿಟ್ಟದ್ದು ಕೇವಲ ಬೊಗಳೆ ಮಾತಾಗಿತ್ತು, ಇದನ್ನರಿತ ನಂದಿಗ್ರಾಮದ ಸುತ್ತಮುತ್ತಲಿನ ಸುಮಾರು 350 ಹಳ್ಳಿಗಳ ಜನ ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದ್ದರು. ಪ್ರತಿಭಟನೆ ನಡೆಸಿದಾಗಲೆಲ್ಲಾ ಪೊಲೀಸರ ಮತ್ತು ಸಿಪಿಐ(ಎಂ) ಗೂಂಡಾ ಪಡೆಯ ಕ್ರೂರ ದಮನವನ್ನು ಆ ಜನ ಎದುರಿಸಿದ್ದರು. ಹಾಗಾಗಿ ಆ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು, ಸಂಪರ್ಕ ಜಾಲಗಳನ್ನು ಜನ ಎಲ್ಲೆಂದರಲ್ಲಿ ಸ್ವಯಂಪ್ರೇರಿತರಾಗಿ ಕಡಿದು ಹಾಕಿದ್ದರು. ರಸ್ತೆಗಳಿಗೆ ಅಡ್ಡಲಾಗಿ ದೊಡ್ಡ ದೊಡ್ಡ ಕಾಲುವೆಗಳನ್ನು ತೋಡಿ, ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಸುರಿದು ಪೊಲೀಸರ ಮತ್ತು ಸಿಪಿಐ(ಎಂ)ನ ಗೂಂಡಾ ಪಡೆ ಆ ಪ್ರದೇಶಕ್ಕೆ ಬಾರದಂತೆ ತಡೆದಿದ್ದರು.

ಬುದ್ಧ ಆ ಜಾಗಕ್ಕೆ ಶಸ್ತ್ರಸಜ್ಜಿತರಾದ ಸುಮಾರು 5,000ಕ್ಕೂ ಹೆಚ್ಚು ಪೊಲೀಸರನ್ನು, ಅರೆ ಸೇನಾಪಡೆಯನ್ನು ಕಳಿಸಿದ. ಪೊಲೀಸರ ಘನಂಧಾರಿ ಕೆಲಸದಲ್ಲಿ ಸಹಕಾರ ಮಾಡಲು ಸಿಪಿಐ(ಎಂ)ನ ಸಾಹಸಿ ಸೇವಯುವಕರ ಗೂಂಡಾ ಪಡೆಯನ್ನೂ ಜೊತೆಗೆ ಕಳುಹಿಸಿದ್ದ.

ಪೊಲೀಸ್, ಸಿಪಿಐ(ಎಂ) ಗೂಂಡಾಗಳ ಈ ಜಂಟಿ ನರಮೇಧ ಪಡೆ ನಂದಿಗ್ರಾಮಕ್ಕೆ ಮೂರು ಕಡೆಯಿಂದ ಮುತ್ತಿಗೆ ಹಾಕಿತು. ನಿಶಸ್ತ್ರವಾಗಿ ನೆರೆದಿದ್ದ ಅಮಾಯಕ ಜನರ ಮೇಲೆ ಗುಂಡಿನ ಮಳೆಗರೆಯುತ್ತಲೇ ಈ ಪಡೆ ಮುಂದುವರೆಯಿತು. ಸುರಿಯುತ್ತಿರುವ ಗುಂಡಿನ ಮಳೆಗೆ ತಮ್ಮ ಎದೆಗಳನ್ನು ಒಡ್ಡುತ್ತಾ ತರಗೆಲೆಗಳಂತೆ ಉದುರಿ ಬೀಳುತ್ತಿದ್ದರು ಅಮಾಯಕ ರೈತರು, ಮಹಿಳೆಯರು, ಮಕ್ಕಳು! ಕೆಲವೇ ನಿಮಿಷಗಳಲ್ಲಿ 22 ಹೆಣಗಳು ಸಿಕ್ಕವು. ಇನ್ನೂ ವರದಿಗಳು ಬರುತ್ತಲೇ ಇವೆ. ಸಾವಿನ ಸಂಖ್ಯೆ ಏರುತ್ತಲೇ ಇದೆ. ಗಾಯಗೊಂಡವರ ಸಂಖ್ಯೆಯನ್ನಂತೂ ಕೇಳಲೇಬೇಡಿ. ಇದು ಸ್ವತಂತ್ರ ಭಾರತ ಕಂಡ ಜಲಿಯನ್ ವಾಲಾಬಾಗ್.

ನಂದಿಗ್ರಾಮದಲ್ಲಿ ನಡೆಯುತ್ತಿರುವ ಮನುಷ್ಯರ ಮಾರಣ ಹೋಮದ ಭೀಕರತೆ ಹೊರಜಗತ್ತಿಗೆ ಗೊತ್ತಾಗದಿರಲೆಂದು ಆ ಪ್ರದೇಶಕ್ಕೆ ಹೋಗದಂತೆ ಎಲ್ಲಾ ಮಾಧ್ಯಮದವರನ್ನು ನಿರ್ಬಂಧಿಸಲಾಗಿದೆ. ಈ ಕೆಲಸವನ್ನು ವ್ಯವಸ್ಥಿತವಾಗಿ ಮಾಡುತ್ತಿರುವವರೆಂದರೆ ಸಿಪಿಐ (ಎಂ)ನ ಗೂಂಡಾ ಪಡೆ! ಅಧಿಕಾರಿಗಳ ನೆರವಿನೊಂದಿಗೆ ನಂದಿ ಗ್ರಾಮಕ್ಕೆ ಹೋಗುವ ಎಲ್ಲಾ ರಸ್ತೆಗಳಲ್ಲೂ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ಪ್ರತಿ ಚೆಕ್‌ಪೋಸ್ಟ್‌ನಲ್ಲಿ 100-150 ಸಿಪಿಐ(ಎಂ)ನ ಗೂಂಡಾಗಳನ್ನು ಇಡಲಾಗಿದೆ. ಯಾರಾದರೂ ಪತ್ರಕರ್ತರು, ಟಿವಿ ವರದಿಗಾರರು ಬಂದರೆ ಅಲ್ಲಿಂದಲೇ ವಾಪಾಸ್ ಕಳಿಸಲಾಗುತ್ತದೆ.

ಹಾಗಿದ್ದಾಗ್ಯೂ, ಮಾಧ್ಯಮದವರು ಚಂಡಿಪುರದ ಮಾರ್ಗವಾಗಿ ನಂದಿಗ್ರಾಮಕ್ಕೆ ಹೋಗಲು ಪ್ರಯತ್ನಿಸಿದಾಗ ದಿಢೀರನೆ ಪ್ರತ್ಯಕ್ಷರಾದ 100-150 ಜನ ಸಿಪಿಐ(ಎಂ) ಗೂಂಡಾಗಳು, "ನಿಮಗೆ ನಿಮ್ಮ ಪ್ರಾಣದ ಮೇಲೆ ಆಸೆ ಇದ್ದರೆ, ಇಲ್ಲಿಂದ ತಕ್ಷಣ ವಾಪಸ್ಸು ಹೊರಟುಹೋಗಿ. ಕಳೆದೆರಡು ತಿಂಗಳುಗಳಿಂದ ನಾವು ನಿಮ್ಮನ್ನು ಯಾವುದೇ ಅಭ್ಯಂತರವಿಲ್ಲದೇ ಒಳಗೆ ಬಿಟ್ಟಿದ್ದೇವೆ. ಈಗ ನಾವು ಕೆಲಸ ಮಾಡಲು ನಮ್ಮನ್ನು ಬಿಡಿ" ಎಂದು ಆವಾಜ್ ಹಾಕಿದ್ದಾರೆ.

ಇದನ್ನು ನೋಡಿ ಪಶ್ಚಿಮ ಬಂಗಾಳದ ತಥಾಕಥಿತ ಕಮ್ಯೂನಿಸ್ಟ್ ನಾಡಿನಲ್ಲಿ ಎಂತಹ ಮಾದರಿಯ ಪ್ರಜಾತಂತ್ರ ಅಸ್ತಿತ್ವದಲ್ಲಿದೆ ಎಂಬುದನ್ನೇ ನೀವೇ ಯೋಚಿಸಿ.

ಈ ವರದಿ ಬರೆಯುತ್ತಿರುವ ಈ ಹೊತ್ತಿನಲ್ಲೂ ಅಂದರೆ ಪೊಲೀಸ್ ಫೈರಿಂಗ್ ನಡೆದು 24 ಗಂಟೆಗಳಾದ ಮೇಲೂ ನಂದಿಗ್ರಾಮದಲ್ಲಿ ಗುಂಡಿನ ಸದ್ದು ನಿಂತಿಲ್ಲ. ಅಲ್ಲಿನ ಟಯರ್ ಗ್ಯಾಸುಗಳ ಕಮಟುವಾಸನೆ ಹೋಗಿಲ್ಲ. ಆಗಸದಲ್ಲಿ ಕಪ್ಪು ಹೊಗೆ ಇನ್ನೂ ಕಾಣುತ್ತಲೇ ಇದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳುತ್ತಿದ್ದಾರೆ. ಇನ್ನೂ ಏನೇನು ಭೀಭತ್ಸತೆಗಳನ್ನು ನೋಡಬೇಕಿದೆಯೋ?

-ಕುಮಾರ್ ಬುರಡಿಕಟ್ಟಿ

ಬಿಳಿದಾಳೆಯ ಹುಚ್ಚು ಬೆಳೆ

ಆರ್ಕ



ವ್ಯವಸಾಯಗಾರರ ಕಷ್ಟಗಳು ಹಾಗೂ ಉದ್ದೇಶರಹಿತ ಬದುಕಿಗೆ ದೂಡಲ್ಪಟ್ಟ ಯುವಜನತೆ ಒಂದು ಹಳ್ಳಿಯ ಅವಸಾನ ಮತ್ತು ಅಸಹಾಯಕತೆಗಳಿಗೆ ಹೇಗೆ ತುತ್ತಾಗುತ್ತಾರೆಂಬ ನಿರೂಪಣೆಯಿದು.....

"Ask him to tell more about Arka"

-ನಾನು ಕೂಡಲೇ ಅದನ್ನು ಕನ್ನಡಕ್ಕೆ ಭಾಷಾಂತರಿಸಿ ಚೆಲುವಣ್ಣನಿಗೆ ತಲುಪಿಸಿದೆ. ಆರ್ಕ ಎಂಬುದು ಈಗ್ಗೆ 70-80 ವರ್ಷಗಳ ಹಿಂದೆ ಒಡ್ನು ಗುಡ್ಡೆಯಂತಾ ಬರಡು ಭೂಮಿಯಲ್ಲಿ ಬೆಳೆಯಲಾಗುತ್ತಿದ್ದ ಒಂದು ಬೆಳೆ. ನಮ್ಮ ಊರಿನ ಹಿರಿಯ ರೈತಜ್ಜ ಚೆಲುವಣ್ಣ ಸ್ವತಃ ಆರ್ಕ ಬೆಳೆಯುತ್ತಿದ್ದವನು. ರಾಗಿಯಂತದ್ದೇ ಒಂದು ಆಹಾರ ಬೆಳೆಯಾಗಿದ್ದ ಆರ್ಕ ಈಗ ಎಲ್ಲೂ ಕಾಣಸಿಗುವುದಿಲ್ಲ ಬಿಡಿ. ಸಾಮೆ, ನವಣೆಗಳದ್ದೂ ಅದೇ ಕತೆ.

ಚೆಲುವಣ್ಣ ಹೇಳುತ್ತಿದ್ದ ಆರ್ಕದ ವಿವರಗಳಿಗೆ ಸ್ಥಳದಲ್ಲೇ ಮತ್ತೆ ಇಂಗ್ಲಿಷ್ ಲೇಪನ ನೀಡಿ ನಾನು ತಲುಪಿಸಬೇಕಿದ್ದುದು ನ್ಯಾನ್ಸಿಗೆ. ಕೃಷಿ ವಿಜ್ಞಾನಿಯಾಗಿದ್ದ ಈ ನ್ಯಾನ್ಸಿ ಲೂಸ್‌ಮೋರ್ ಫ್ರಾನ್ಸ್ ದೇಶದವಳು. ಕರ್ನಾಟಕದ ದೇಸಿ ಕೃಷಿ ಪದ್ಧತಿ, ಬೆಳೆ, ನೀರು-ಕರಾವುಗಳ ಬಗ್ಗೆ ಹಾಗೂ ಹೈಬ್ರೀಡ್ ಕೃಷಿ ವಿಧಾನಗಳಿಂದ ಒಟ್ಟಾರೆ ಇಳುವರಿ, ಮಣ್ಣಿನ ಗುಣಗಳ ಮೇಲೆ ಯಾವ ಪರಿಣಾಮ ಆಗಿದೆ ಎಂದು ಅಧ್ಯಯನ ಮಾಡುವುದು ನ್ಯಾನ್ಸಿಯ ಉದ್ದೇಶ. ಕನಕಪುರ ತಾಲ್ಲೂಕಿನ ನಮ್ಮ ಊರು ಬಿಳಿದಾಳೆ ಹಾಗೂ ಸುತ್ತಲಿನ ಆರಳಗಡಕಲು, ಮಂಜಾಲನತ್ತ, ವೀರಯ್ಯನ ದೊಡ್ಡಿ ಗ್ರಾಮಗಳು ನ್ಯಾನ್ಸಿಯ ಕಾರ್ಯ ಕ್ಷೇತ್ರವಾಗಿದ್ದವು.

ಆರ್ಕ ಬೆಳೆ ಬಗ್ಗೆ ಚೆಲುವಣ್ಣ ಹೇಳಿದ್ದು ನಿಜಕ್ಕೂ ಬೆರಗು ಹುಟ್ಟಿಸುವ, ವಿಷಾದದ ಸಂಗತಿಗಳಾಗಿದ್ದವು.


ಬೇರೆ ಯಾವುದೇ ಬೆಳೆ ಹಾಕಲೂ ಯೋಗ್ಯವಲ್ಲದ ಕೊನೆಗೆ ಹುರುಳಿ ಚೆಲ್ಲಲೂ ಆಗದ ಜಾಗದಲ್ಲಿ ಆಗ ಆರ್ಕ ಬೆಳೆಯುತ್ತಿದ್ದರಂತೆ. ಉಳಲು ಭೂಮಿ ಇರದವರು, ತಿನ್ನಲು ಏನೂ ಗತಿ ಇರದವರು ಊರಂಚಿನ ಕಾಡು ಸವರಿ ಚೂರು ಜಾಗ ಮಾಡಿಕೊಂಡು ಈ ಆರ್ಕ ಬೆಳೆದುಕೊಂಡು ತಿನ್ನಬೇಕಿತ್ತು. ಆದರೆ ಆರ್ಕದ ಸಮಸ್ಯೆ ಶುರುವಾಗುತ್ತಿದ್ದುದು ಅದನ್ನು ಆಹಾರವಾಗಿ ತಿನ್ನಲು ಕುಳಿತಾಗ.

"ಉಚ್ ಆರ್ಕ ಅಂತಾ ಒಂದೈತೆ ಸಾಮಿ, ಅದನ್ನೇನಾದ್ರೂ ಬೇಯಿಸ್ಕೊ ಅಂದ್ರೆ ಬಲೇ ತಾಪತ್ರ" ಎಂದ ಚೆಲುವಣ್ಣ, ಅವನ ಪ್ರಕಾರ ಆರ್ಕದಲ್ಲಿ ಹುಚ್ಚು ಆರ್ಕ ಮತ್ತೆ ಒಳ್ಳೇ ಆರ್ಕ ಎಂಬ ಎರಡು ವಿಧ ಇತ್ತಂತೆ. ವಿಚಾರ ಏನೆಂದರೆ ಬೇಯಿಸಿ ತಿನ್ನದ ಹೊರತು ಇವೆರಡರ ನಡುವಿನ ವ್ಯತ್ಯಾಸ ಅವತ್ತಿನ ರೈತರಿಗೆ ಗೊತ್ತಾಗುತ್ತಿರಲಿಲ್ಲ. ಹುಚ್ಚು ಆರ್ಕ ಧಾನ್ಯ ಬೆರೆತ ಆರ್ಕ ಅಡುಗೆ ತಿಂದವರಿಗೆ ಕೂಡಲೇ ಹೊಟ್ಟೆ ಉಬ್ಬರಿಸಿಕೊಂಡು ತೇಲುಗಣ್ಣು ಮೇಲುಗಣ್ಣಾಗುತ್ತಿದ್ದರಂತೆ. ಅಮಲೇರಿದವರಂತೆ ಗಂಟೆಗಟ್ಟಲೆ ತೂರಾಡುತ್ತಾ ವಾಂತಿ ಬೇಧಿ ಎಲ್ಲಾ ಆಗಿಬಿಡುತ್ತಿತ್ತು. ಹಾಗಂತ ಈ ಬಡ ಕೃಷಿಕರು ಆರ್ಕ ತಿನ್ನದೇ ಇರುವಂತಿರಲಿಲ್ಲ. ಅವತ್ತಿನ ಮಟ್ಟಿಗೆ ಅವರಿಗೆ ಇದ್ದಿದ್ದೇ ಆರ್ಕ. ರಾಗಿಯೂ ಲಕ್ಸೂರಿ ಎಂಬ ಸ್ಥಿತಿ. ಈ ಹುಚ್ಚು ಆರ್ಕದ ಕಾಟದಿಂದ ಪಾರಾಗಲು ಅವರೇ ಒಂದು ಪರಿಹಾರ ಕಂಡುಕೊಂಡಿದ್ದರು. ಆರ್ಕ ಬೇಯಿಸಿದ ನಂತರ ಕುಟುಂಬದ ಒಬ್ಬರಿಗೆ ಮಾತ್ರ ಅದನ್ನು ತಿನ್ನಲು ಬಿಡುವುದು. ನಂತರ ಕೆಲ ಹೊತ್ತು ಕಾದು ತಿಂದವನು ನಾರ್ಮಲ್ ಆಗಿದ್ದರೆ ಉಳಿದವರೂ ತಿನ್ನುವುದು, ಅಕಸ್ಮಾತ್ ಮೊದಲು ತಿಂದವನ ಹೊಟ್ಟೆ ಊದಿಕೊಳ್ಳಲು ಶುರುವಾದರೆ ಇಡೀ ಅಡುಗೆ ಬಿಸಾಡಿ ಇನ್ನೊಮ್ಮೆ ಆರ್ಕ ಅಡುಗೆಯನ್ನೇ ಬೇಯಿಸುವುದು. ಕನಿಷ್ಠ ಅದರಲ್ಲಾದರೂ ಹುಚ್ಚು ಆರ್ಕ ಕಾಳುಗಳು ಇರದಿದ್ದರೆ ಊಟ ಮಾಡಬಹುದಲ್ಲ ಎಂಬ ಲೆಕ್ಕಾಚಾರ ಅದು.

ಇದೆಂಥ ವಿಚಿತ್ರ ಧಾನ್ಯ ಇದು ಎಂದು ನಾನೂ ನ್ಯಾನ್ಸಿ ಚರ್ಚಿಸುತ್ತಾ ಕೊನೆಗೆ "ಆರ್ಕ ತಿಂದು ಹೆಚ್ಚು ಕಡಿಮೆಯಾದ್ರೆ, ಆಗ ಏನ್ ಮಾಡ್ತಿದ್ರಿ" ಎಂದು ಕೇಳಿದೆವು.

"ಮಾಡೋದೇನು. ಗಾಳಿ (ದೆವ್ವ) ಮೆಟ್ಕೊಂಡದೆ ಅಂತಾ ಉಣಸೇ ಬರ್ಲು ತಗೊಂಡು ಚಚ್ಚುತ್ತಿದ್ರೊ ಹುಣಸೇ ಹಣ್ಣು ಕಲಸಿ ಗೊಟ್ಟಾ ಎತ್ತುತ್ತಿದ್ರೊ" ಎಂದ ಚೆಲುವಣ್ಣ.

ಆರ್ಕ ಅಡುಗೆ ತಿನ್ನಲು ಯೋಗ್ಯವಾಗಿದೆಯೇ ಎಂದು ಮೊದಲು ತಿಂದು ಅವತ್ತು ಹೊಟ್ಟೆ ಕೆಡಿಸಿಕೊಳ್ಳುತ್ತಿದ್ದವರ ದುಃಸ್ಥಿತಿ ನೆನೆದು ನಮಗೆ ಬೇಸರವಾಯಿತು.


ಪಾರ್ವತೀಶ

ಮೊನ್ನೆ ನಮ್ಮೂರಿನ ಪಕ್ಕದ ಹುಣಸನಹಳ್ಳಿಯ ರೈತಮಿತ್ರ ರಾಜಣ್ಣನವರ ಜೊತೆ ನಾನು ಈ ಹುಚ್ಚು ಆರ್ಕರ ವಿಚಾರ ಕೇಳಿದಾಗ ಅವರು ಕೊಟ್ಟ ವಿವರಣೆ ಸರಿ ಎನಿಸಿತು.

ಈ ಆರ್ಕ ಬೆಳೆಗೆ ಹೆಚ್ಚು ನೀರು ಬೇಕಿಲ್ಲ, ಸ್ವಲ್ಪ ಜಾಸ್ತಿ ಮಳೆ ಬಿದ್ದರೂ ಬಲಿತ ಧಾನ್ಯ ನೆಂದು ಒದ್ದೆಯಾಗಿ ಅರಳಿಕೊಂಡು ತಕ್ಷಣ ಬೂಸ್ಟ್ ಬೆಳೆಯುತ್ತಿತ್ತಂತೆ. ಕಟಾವು ಮಾಡುವಾಗ ರೈತರು ಇದನ್ನೇನು ಗಮನಿಸುತ್ತಿರಲಿಲ್ಲ. ಹಾಗಾಗಿ ಆರೋಗ್ಯವಂತ ಆರ್ಕ ತೆನೆ ಹಾಗೂ ಬೂಸ್ಟ್ ಬೆಳೆದಿದ್ದವು ಎರಡೂ ಬೆರೆತು ಒಟ್ಟಿಗೆ ರೈತರ ಮನೆ ಸೇರುತ್ತಿದ್ದವು.

ಹುಚ್ಚು ಆರ್ಕ ಎಂದು ರೈತರು ಭಯಪಡುತ್ತಿದ್ದದ್ದು ಈ ಬೂಸ್ಟು ಹತ್ತಿದ ಕಾಳುಗಳ ಬಗ್ಗೆ. ಆಶ್ಚರ್ಯವೇನೆಂದರೆ ನಮ್ಮೂರಿನ ಸಹಜೀವಿಗಳೇ ಆಗಿರುವ ಕಾಡಾನೆಗಳೂ ಆಗೆಲ್ಲಾ ಈ ಹುಚ್ಚು ಆರ್ಕ ಮೇಯ್ದು ಅಮಲೇರಿದಂತೆ ತೂರಾಡುತ್ತಾ ಓಡಾಡುತ್ತಿದ್ದುದನ್ನು ಊರಿನ ಹಿರಿಯಜ್ಜಗಳು ಈಗಲೂ ನೆನಪಿಸಿಕೊಳ್ಳುತ್ತಾರೆ.

ಈ ಆರ್ಕ ಬೆಳೆ ಈಗಿಲ್ಲ, ಅಂದರೆ ಅವತ್ತಿನ ಕಷ್ಟಕರ ದಿಕ್ಕೆಟ್ಟ ಜೀವನ, ಅಸಹಾಯಕತೆಗಳಿಂದ ಸೃಷ್ಟಿಯಾಗುತ್ತಿದ್ದ ಅಮಲು ಹಾಗೂ ತಾಪತ್ರಯಗಳೂ ಈಗಿಲ್ಲ. ಆದರೆ ಅವು ಬೇರೆಬೇರೆ ರೂಪದಲ್ಲಿ ಮುಂದುವರೆಯುತ್ತಿವೆ. ಇವೆಲ್ಲಾ 'ಇವತ್ತಿನ ಪೀಳಿಗೆಯುವರ ಕಷ್ಟ ಅಸಹಾಯಕತೆಗಳೆನ್ನಬಹುದು. ಇಸ್ಪೀಟು, ಸಾರಾಯಿ ಮತ್ತು ಬೆಂಗಳೂರಿನ ರೌಡಿ ಚಟುವಟಿಕೆಗಳ ಬಗ್ಗೆ ಅಪಾರ ಆಸಕ್ತಿಗಳೇ ಇವತ್ತಿನ ನಮ್ಮೂರಿನ ಸುತ್ತಲಿನ ಹುಡುಗರ ಪ್ರಧಾನ ಆಸಕ್ತಿ, ಇವರೆಲ್ಲಾ ಇನ್ನೊಂದು ರೀತಿಯ ಆಧುನಿಕ ಆರ್ಕ ಬೆಳೆ ಇದ್ದಂತೆ.

ಯುವಕರ ವಿದ್ಯಾಭ್ಯಾಸ

ಹೀಗೇ ನಾನೊಮ್ಮೆ ಊರಿಗೆ ಹೋಗಿದ್ದಾಗ ನನ್ನ ವಾರಿಗೆಯ ಹುಡುಗರ್‍ಯಾರೂ ಕಾಣಿಸಲಿಲ್ಲ, ನನ್ನ ಹೊಲದ ಗುಡಿಸಲಿಗೆ ಬಂದ ನಿರಂಜನ್‌ಗೆ "ಎಲ್ಲೋ ಚಂದ್ರಭೈರ, ಕೂಗಾಡಿ ರಾಜ, ವಿಜಿ ಯಾರೂ ಕಾಣ್ತಿಲ್ಲ" ಎಂದೆ. "ಅವ್ರೆಲ್ಲಾ ವಿದ್ಯಾಭ್ಯಾಸ ಮಾಡೂಕೋಗವ್ರೆ" ಎಂದುಬಿಟ್ಟ ನಿರಿ. ನನಗೆ ಶಾಕ್ ಆಯಿತು. ಮೂವತ್ತು, ನಲವತ್ತರ ವಯಸ್ಸಿನವರಾಗಿದ್ದ ಅವರಲ್ಲಿ ಕೆಲವರು ಸ್ಕೂಲಿನ ಮುಖವನ್ನೇ ನೋಡಿದವರಲ್ಲ, ಉಳಿದವರು ಮೂರನೇ ಕಳಾಸು, ಐದನೇ ಕಳಾಸಿಗೇ ಶಾಲೆಗೆ ಕೈಮುಗಿದಿದ್ದವರು. ಹೀಗಿರುವಾಗ ಕಾರ್ಯಕಾರಣ ಸಂಬಂಧವಿಲ್ಲದೆ ಏಕಾಏಕಿ ವಿದ್ಯಾಭ್ಯಾಸ ಶುರು ಮಾಡಿದ್ದಾರಲ್ಲ ಎಂದು ಗಾಬರಿಯಾಗಿ ಅವರಿದ್ದ ಸ್ಥಳ ಹುಡುಕಿಕೊಂಡು ಹೋದೆ. ಯಾರದ್ದೋ ಮನೆ ಪಕ್ಕ ತೆಂಗಿನಗರಿಯ ಛಾವಣಿ, ಬಿದಿರು ತಟಿಕೆಯ ಗೋಡೆ, ಸಗಣಿಯಿಂದ ಸಾರಿಸಿದ ತಣ್ಣನೆಯ ನೆಲದ ಮೇಲೆ ಚಾಪೆ ಹಾಸಿಕೊಂಡು ಏಳೆಂಟು ಜನ ವೃತ್ತಾಕಾರವಾಗಿ ಕುಳಿತಿದ್ದರು. ಇನ್ನೊಬ್ಬ ಒಂದು ಹಾಳೆ, ಪೆನ್ನು ಹಿಡಿದು ಶ್ರದ್ಧೆಯಿಂದ ಲೆಕ್ಕ ಬರೆದುಕೊಳ್ಳುತ್ತಿದ್ದ.

ಇಸ್ಪೀಟಾಟ ನಡೆದಿತ್ತು ಅಲ್ಲಿ!

ನಮ್ಮ ಕಡೆ ವಿದ್ಯಾಭ್ಯಾಸ ಅಂದರೆ ಇದೇನೇ!! ಹಗಲೂ ರಾತ್ರಿಯೆನ್ನದೆ ವ್ಯಸನಪೀಡಿತರಾದವರಂತೆ ಹೋಲ್‌ಸೇಲಾಗಿ ರಮ್ಮಿ, ಪರೇಲ್ ಆಡುತ್ತಿರುತ್ತಾರೆ. ಯುಗಾದಿ ಸೀಜನ್ ಬಂತೆಂದರೆ ದಂಡೆತ್ತಿ ಹೋಗುವ

ಕಾರಣವೇ ಇಲ್ಲದೆ ತನ್ಮಯತೆಯಿಂದ ಅಳುವ ಮಗು
ಪಕ್ಕದ ಮನೆ ಟೇಪ್ ರೆಕಾರ್ಡರ್‌ನಲ್ಲಿ ಲಲಿತಾ ಸಹಸ್ರನಾಮ

ಹತ್ತಕ್ಕೈದೇ ನಿಮಿಷ

ಕನ್ನಡಿಯ ಬಿಂಬದಲ್ಲಿ ಕಣ್ಣ ಕೆಳಗೆ ಕಪ್ಪು ವರ್ತುಲ
ನೋಡುತ್ತಾ ನಿಂತರೆ ಒಲೆಯ ಮೇಲೆ ಸೀದ ಉಪ್ಪಿಟ್ಟು

ಹತ್ತಕ್ಕೈದೇ ನಿಮಿಷ

ಇಲ್ಲಿಂದ ಆಫೀಸಿಗೆ ಐವತ್ತು ರುಪಾಯಿ ಆಟೋ
ತೆತ್ತ ದುಡ್ಡಿಗೆ ಇನ್ಕಂ ಟ್ಯಾಕ್ಸ್ ರಿಬೇಟೂ ಇಲ್ಲ

ಹತ್ತಕ್ಕೈದೇ ನಿಮಿಷ

ಆದ, ಆಗದ ಸುದ್ದಿ ಬಳಿದು ತರುವ ಘನ ಕಾಯಕ
ಇವತ್ತಿನ ಪತ್ರಿಕೆ ನಾಳೆ ಬೇಲ್‌ಪುರಿಗೆ ಪ್ಲೇಟು

ಹತ್ತಕ್ಕೈದೇ ನಿಮಿಷ.

ಹಕ್ಕಿ ಗೂಡು ಸೇರದೂರಿನಲ್ಲಿ ಕೀ ಬೋರ್ಡ್ ಟಕಟಕ
ಮೊಬೈಲ್ ರಿಂಗಣ, ' ಅಮ್ಮಾ ಇನ್ನೂ ಎಷ್ಟು ಹೊತ್ತು?'

ಹತ್ತಕ್ಕೈದೇ ನಿಮಿಷ.

ಮೆದು ಗಾದಿಗೊರಗಿದ ಮೈಮನದಲ್ಲಿ ಕ್ರಾಸ್ ಕನೆಕ್ಷನ್
ಕಾವೇರಿ ಕುದಿತ, ಬೆನ್ನಹುರಿಯಲ್ಲಿ ರಗ್ಗಿಗೆ ಬಗ್ಗದ ಚಳಿ

ಹತ್ತಕ್ಕೈದೇ ನಿಮಿಷ

ಬೆರಳ ಸಂದಿ ಸದ್ದಿಲ್ಲದೇ ಹರಿದುಹೋಗುವ ಗಳಿಗೆ
ಬಿಗಿ ಹಿಡಿದ ಮುಷ್ಟಿಯಲ್ಲಿ ಅರ್ತರೈಟಿಸ್ ನೋವು

ಹತ್ತಕ್ಕೈದೇ ನಿಮಿಷ..

■ ಬಾಗೇಶ್ರೀ



ವರಂತೆ ಗುಂಪು ಕಟ್ಟಿಕೊಂಡು ಊರೂರ ಮೇಲೆ ಹೋಗಿ ಜುಗಾರಿ ಜಾತ್ರೆ ನಡೆಸುತ್ತಿರುತ್ತಾರೆ. ಆಶ್ಚರ್ಯವೇನೆಂದರೆ ನಿಯತ್ತಿನಿಂದ ಗೇಯುವ ರೈತರಿಗಿಂತಲೂ ಈ ಇಸ್ಪೀಟು ವೀರರ ಜೇಬಿನಲ್ಲೇ ಜಾಸ್ತಿ ದುಡ್ಡಿರುತ್ತದೆ ಎಂಬುದು.

ಅರ್ಕ ತಿಂದವವಂತೆ ಸದಾ 'ವಿದ್ಯಾಭ್ಯಾಸದ' (ಇಸ್ಪೀಟಿನ) ಅಮಲಿನಲ್ಲೇ ಇರುವ ಇವರ ಪೈಕಿ ಕೆಲವರು ರ್‍ಯಾಂಕ್ ವಿದ್ಯಾರ್ಥಿಗಳಂತೆ ಫೇಮಸ್ ಆಗಿದ್ದಾರೆ. ಇಸ್ಪೀಟು ಶಿವಣ್ಣ ಎಂಬ ಅರವತ್ತು ವಯಸ್ಸಿನ ಒಬ್ಬರು ತಮ್ಮ ಜೀವನದ ಕನಿಷ್ಠ 50 ವರ್ಷ 'ವಿದ್ಯಾಭ್ಯಾಸ'ದಲ್ಲೇ ಕಳೆದಿದ್ದಾರೆ ಎನ್ನುವವರುಂಟು. ಅವರ ಹೆಸರೇ ಇಸ್ಪೀಟು ಶಿವಣ್ಣ ಎಂದಾಗಿದೆ ಎಂದ ಮೇಲೆ ನಾನು ಅದನ್ನು ನಂಬಲೇಬೇಕಾಯಿತು.

ಬಜಾರ್ ಯಾವ್ದಕ್ಕದೆ

ಒಂದು ದಿನ ನನ್ನ ಸೋದರ ಸಂಬಂಧಿ ನಿರಂಜನ ಫೋನ್ ಮಾಡಿ "ನಾವೊಂದು ಸಂಘ ಮಾಡನಾ ಅಂತಿದ್ದೀವಿ, ಕರುನಾಡ ಸೇನೆ ಪಟ್ಟಣಗೆರೆ ಜಯಣ್ಣನ ನಂಬರ್ ಇದ್ದಾತೆ" ಅಂದ. ಆತ ಯಾರೆಂಬುದು ನನಗೆ ಗೊತ್ತಿರಲಿಲ್ಲ. ಪಡುವಣಗೆರೆ ಜಯಣ್ಣ ಅಂತಾ ಒಬ್ಬ ಚೀಟರ್ ಡಬ್ಲಿಂಗ್, ಭೂ ಕಬಳಿಕೆ ದಂಧೆಯಲ್ಲಿರುವ ಬಗ್ಗೆ ಗೊತ್ತಿತ್ತು. ನಿರಂಜನ್ ಕೇಳಿದ್ದು ಯಾರನ್ನೋ ಎಂದುಕೊಂಡು ಸುಮ್ಮನಾದೆ. ಮತ್ತೆರಡೇ ದಿನಕ್ಕೆ ನಿರಂಜನ್ ಫೋನ್ ಮಾಡಿದ. "ಏನಾಯಿತೋ ನಿಮ್ಮ ಸೇನೆ" ಅಂದೆ.

"ಕರುನಾಡ ಸೇನೆಗೆ ಇವಾಗ ಬಜಾರ್ ಇಲ್ವಂತೆ, ಅವ್ರು ಫೈನಾನ್ಸೂ ಮಾಡಲ್ಲ, ಅದ್ಕೆ ರಕ್ಷಣಾ ವೇದಿಕೆ ಮಾಡ್ತೀವಿ" ಅಂದ. "ಅವ್ರೂ ಈಗ ಎರಡಾಗಿದೆ ಕಣೋ" ಅಂದೆ. "ಯಾರು ಕಾಸು ಕೊಡ್ತಾರೋ ಅವ್ರ ಸಂಘ ಮಾಡನಾ ಅಂತಾವ್ರೆ ಹುಡುಗ್ರು" ಎಂದು ತಮ್ಮ ಹೊಸ ಸಂಘದ ಧ್ಯೇಯೋದ್ದೇಶವನ್ನು ಮುಚ್ಚುಮರೆ ಮಾಡದೆ ವಿವರಿಸಿದ ನಿರಿ.

ಅವರೆಲ್ಲಾ ನನಗೆ ಗೊತ್ತಿದ್ದವರೆ. ತುಂಗಾ ಮೂಲ ಉಳಿಸಿ ಹೋರಾಟ, ಬಿದರಿನ ಕೊಳಾರ ಕೈಗಾರಿಕಾ ಮಾಲಿನ್ಯ ಹೋರಾಟ, ಬಾಬಾಬುಡನ್‌ಗಿರಿ ಚಳವಳಿಯಲ್ಲಿ ಭಾಗವಹಿಸಿದ್ದರು. ಸಾಹಿತ್ಯ, ರಾಜಕೀಯ ಗೊತ್ತಿರುವವರೂ ಇದ್ದರು. ಆದರೆ ಯಾವುದಕ್ಕೂ ದೃಢವಾಗಿ ಕಚ್ಚಿಕೊಳ್ಳದ ಪೈಕಿಯ ಜನ. ನಿರುದ್ದೇಶದಿಂದ ಕಾಲಾಯಾಪನೆ ಮಾಡುತ್ತಾ ಥ್ರಿಲ್ ಸಿಗುವುದೆಲ್ಲವನ್ನೂ ಮಾಡುತ್ತಿರುವವರು. ನನಗದು ಗೊತ್ತಾಗಿದ್ದು ಬೆಂಗಳೂರಿನ ಕೆಂಗೇರಿ ಹತ್ತಿರ ರೌಡಿ ತಿಮ್ಮೇನಹಳ್ಳಿ ಸೂರಿ ಕೊಲೆಯಾದಾಗ. ಇವನು ಬಿಳಿದಾಳೆ ಪಕ್ಕದ ಗೊಲ್ಲರ ದೊಡ್ಡಿಯವನೆಂದು ಆಮೇಲೆ ಗೊತ್ತಾಯಿತು. ಹಾಗಾಗಿ ಸೂರಿ ಶವವನ್ನು ತಂದು ಹಳ್ಳಿಯಲ್ಲೇ ಮಣ್ಣು ಮಾಡಿದ್ದರು. ಅವತ್ತು ಆ ಪ್ರಾಂತ್ಯದ ಜನ ತಮ್ಮಿಡೀ ಜೀವಮಾನದಲ್ಲೇ ಕಂಡಿರದಿದ್ದಷ್ಟು ಕಾರು ಬೈಕುಗಳನ್ನು ನೋಡಿದ್ದಾರೆ. ಸೂರಿಯ ಗೆಣೇಕಾರರ ಗಾಡಿಗಳವು. ಈ ಹುಡುಗರಿಗೆಲ್ಲಾ ಅವತ್ತು ಥ್ರಿಲ್ಲೋ ಥ್ರಿಲ್. ತಾವು ಪೇಪರ್‌ಗಳಲ್ಲಿ ಓದಿದ್ದ ಪ್ರಸಿದ್ಧ ರೌಡಿಗಳೆಲ್ಲಾ ತಮ್ಮೂರಿಗೆ ಬಂದಿದ್ದಾರೆ. ಅವರ ದರುಶನ ಭಾಗ್ಯ ಲಭಿಸಿದೆ ಎಂಬ ಸಂತೋಷ ಈ ಹುಡುಗರಿಗೆ.

ಆದರೆ ವಿಚಾರ ಅಷ್ಟು ಸರಳವಾಗಿರಲಿಕ್ಕಿಲ್ಲ ಎಂಬ ಅನುಮಾನ ಬಂದು ವಿಚಾರಿಸಿದರೆ ಬೆಂಗಳೂರಿನ ಭೂಗತ ಲೋಕದ ಕುಖ್ಯಾತ ಪಾತಕಿಗಳಾದ ಒಂಟೆ, ಸೈಕಲ್ ರವಿ ಮುಂತಾದವರೆಲ್ಲಾ ಆಗಾಗ್ಗೆ ಬಂದು ನಮ್ಮ ಊರಿನ ಅಕ್ಕಪಕ್ಕ ಠಿಕಾಣಿ ಹಾಕಿ ಹೋಗುತ್ತಿರುತ್ತಾರೆ ಎಂಬುದು ಗೊತ್ತಾಯಿತು. ಹಳ್ಳಿಗಾಡಿನ ನನ್ನ ಯುವ ಮಿತ್ರರೆಲ್ಲಾ ಈ ಪಾತಕಿಗಳಿಗೆ ಮೀನು, ಮಾಂಸ ಉಪಚಾರ ಮಾಡುತ್ತಾ, ಅವರ ಕಾರುಗಳಲ್ಲಿ ನಾಲ್ಕಾರು ದಿನ ಓಡಾಡುತ್ತಾ ತಾವೇನೋ ಸಾಧನೆ ಮಾಡಿದವರಂತೆ ಬೀಗುತ್ತಿರುತ್ತಾರೆ.

ಇದೊಂಥರಾ ಅರ್ಕ ಬೆಳೆ. ಹುಚ್ಚು ಅರ್ಕ ಕಾಳಿದ್ದಂತೆ ಮನೆಯ, ಊರಿನ ಸ್ವಾಸ್ಥ್ಯ ಕೆಟ್ಟು ಹೊಟ್ಟೆ ಉಬ್ಬರಿಸಿಕೊಳ್ಳುವಂತೆ ಮಾಡುವಂಥದ್ದು.

ಏಳು ನೂರು ಜನಸಂಖ್ಯೆಯ ಬಿಳಿದಾಳೆಯಿಂದ ಇವತ್ತು ಕನಿಷ್ಠ ಇನ್ನೂರು ಯುವಕರು ಬೆಂಗಳೂರು ಸೇರಿಕೊಂಡಿದ್ದಾರೆ. ಮುದುಕರು, ಹಿರಿಯ ತಲೆಮಾರಿನವರು ಹಾಗೂ ಚಿಕ್ಕ ಮಕ್ಕಳಷ್ಟೇ ಊರಿನಲ್ಲಿ ಕಾಣಸಿಗುವುದು. ಹತ್ತು ರೂಪಾಯಿ ಎಂಬುದು ಇವತ್ತಿಗೂ ಅತೀ ಬೆಲೆಯುಳ್ಳ ನೋಟಾಗಿಯೇ ಉಳಿದುಕೊಂಡಿದೆ. ದಿನಕ್ಕೆ ನೂರು ಲೀಟರ್ ಹಾಲು ಹಳ್ಳಿಯಿಂದ ಹೊರ ಹೋದರೆ 200 ಪ್ಯಾಕೆಟ್ ಸಾರಾಯಿ ಗ್ರಾಮ ಪ್ರವೇಶಿಸುತ್ತಿದೆ.

ಹಳೇ ರಾಗಿ ತರಲು ಹೋದವರ ಪಾಡು ತೀರಿ ಹೋಯಿತು ಬಿಡಿ. ಆದರೆ ಈಗ ಇವೆಲ್ಲವನ್ನು ನೋಡುತ್ತಿರುವ ಹಿರಿಯರಿಗೆ, ಹೊಸ ತಲೆಮಾರಿನವರು ಸಾರಾಯಿ, ಇಸ್ಪೀಟು ಹಾಗೂ ಭೂಗತರ ನಂಟಿನ ಅರ್ಕ ಬೆಳೆ ತೆಗೆಯುತ್ತಿರುವುದನ್ನು ನೋಡಬೇಕಾಗಿ ಬಂದಿದೆ. ■

ಯು.ಆರ್.ಅನಂತಮೂರ್ತಿ ಪ್ರತಿಕ್ರಿಯೆ

ಮನುಷ್ಯನ ಕ್ರೌರ್ಯದ ಪರಮಾವಧಿ

ಉದಯ ಟಿವಿಯಲ್ಲಿ ಆ ದೃಶ್ಯಗಳನ್ನು ನೋಡಿದಾಗಿನಿಂದ ನನಗೆ ಊಟವೇ ಸೇರುತ್ತಿಲ್ಲ, ಯಾವ ತಪ್ಪಿಗೆ ಅಂತ ಆ ಮೂಕ ಜೀವಿಗಳಿಗೆ ಈ ಶಿಕ್ಷೆ? ನೋಡಿದ್ರಾ; ಆ ಪಾಪದ ನಾಯಿಗಳಿಗೆ ಹೇಗೆ ವಿಷದ ಇಂಜೆಕ್ಷನ್ ಕೊಟ್ಟು ಕೊಲ್ತಾ ಇದ್ರು ಅಂತ...?

ಹೀಗೆನ್ನುತ್ತಲೇ ಕಣ್ಣೊರೆಸಿಕೊಂಡರು ಸಾಹಿತಿ ಯು.ಆರ್. ಅನಂತಮೂರ್ತಿ!


ಇತ್ತೀಚೆಗೆ ಟಿವಿಗಳಲ್ಲಿ ಪ್ರಸಾರಗೊಂಡ ಬೀದಿನಾಯಿಗಳ ಅಮಾನುಷ ಮಾರಣಹೋಮದ ದೃಶ್ಯಾವಳಿಗಳನ್ನು ಕಂಡು ಯಾರೆಷ್ಟು ಮರುಗಿದರೋ ಗೊತ್ತಿಲ್ಲ. ಆದರೆ ಅನಂತಮೂರ್ತಿ ಮಾತ್ರ ಅಕ್ಷರಶಃ ಕಣ್ಣೀರಿಟ್ಟಿದ್ದಾರೆ. ಗಳಗಳನೇ ಅತ್ತಿದ್ದಾರೆ. ಅವರ ಒಂದೊಂದು ಮಾತು ಮನುಷ್ಯ ಕ್ರೌರ್ಯಕ್ಕೆ ಹೇಳಿದ ಧಿಕ್ಕಾರದಂತಿತ್ತು.

ನೋಡಿದ್ರಾ....! ಹೇಗೆ ಮೋರಿ ಹೊಕ್ಕಿದ್ದ ಆ ಪಾಪದ ನಾಯಿಯನ್ನು ಬೆಂಕಿ ಹಚ್ಚಿ ಕೊಂದು ಹೊರಕ್ಕೆಳೆದರು ಅಂತ! ನೀವೇ ಹೇಳಿ. ನಮ್ಮ ಪುರಾಣದ ರಾಕ್ಷಸರೂ ಕೂಡ ಇಷ್ಟೊಂದು ಕ್ರೌರ್ಯ ಮೆರೆದಿರಲಿಲ್ಲ, ಯಾವ ನಾಯಿಯನ್ನು ಹಾಗೆ ಬೆಂಕಿ ಹಚ್ಚಿ ಕೊಂದರೋ ಅದಕ್ಕೂ ಮಗುವನ್ನು ಕಚ್ಚಿದ ನಾಯಿಗೂ ಯಾವ ಸಂಬಂಧವಿತ್ತು? ಮಗುವನ್ನು ಕಚ್ಚಿಕೊಂದ ನಾಯಿಗಳ ಮೃಗೀಯತೆಗೆ ಅದರದೇ ಆದ ಸಮರ್ಥನೆಯಿರಬಹುದು. ಆದರೆ ಮನುಷ್ಯ ಮಾಡಿದ ಈ ಕ್ರೌರ್ಯಕ್ಕೆ ಯಾವ ಸಮರ್ಥನೆಯುಂಟು?

ಕ್ಷಣಹೊತ್ತು ಮಾತನ್ನೇ ನಿಲ್ಲಿಸಿಬಿಟ್ಟರು ಅನಂತಮೂರ್ತಿ. ಮತ್ತೆ ಸಾವರಿಸಿಕೊಂಡವರಂತೆ ಹೇಳಲಾರಂಭಿಸಿದರು.

ಅಂಥಾ ದಂಡುಪಾಳ್ಯದ ಹಂತಕರನ್ನೇ ಏಕಾಏಕಿ ಕೊಲ್ಲಲು ಕಾನೂನಿನಲ್ಲಿ ಆಸ್ಪದವಿಲ್ಲ. ಆದರೆ ಬೀದಿನಾಯಿಗಳನ್ನು ಮಾತ್ರ ಸಣ್ಣದೊಂದು ವಿವೇಚನೆ ಕೂಡ ಮಾಡದೇ ಅಷ್ಟೊಂದು ಕ್ರೂರವಾಗಿ ಕೊಂದು ಹಾಕಿದ್ದೇವೆ. ನಿಜಕ್ಕೂ ವ್ಯಗ್ರ ಸ್ವಭಾವದ ನಾಯಿಗಳೇ ಆಗಿದ್ದರೆ ಅವುಗಳನ್ನು ದೊಡ್ಡಿಯಲ್ಲಿ ಕೂಡಿಡಬಹುದಿತ್ತು. ಆದರೆ ಮನುಷ್ಯ ಮಾಡಿದ್ದೇನು? ಕೈಗೆ ಸಿಕ್ಕ ಪಾಪದ ನಾಯಿಗಳನ್ನು ತಾನೇ ಕೊಂದು ಹಾಕಿರೋದು?

ಅಷ್ಟಕ್ಕೂ ಈ ಬೀದಿನಾಯಿಗಳೇನು ಆಕಾಶದಿಂದ ಉದುರಿಬಿದ್ದವೆ? ಅವುಗಳನ್ನು ಬೀದಿಗೆ ಹಾಕಿದ್ದು ಮನುಷ್ಯ. ಒಂದಲ್ಲಾ ಒಂದು ಕಾಲಕ್ಕೆ ಇವೆಲ್ಲ ಮನೆಯನಾಯಿಗಳಾಗೇ ಇದ್ದವು. ಕಾಲಕ್ರಮೇಣ ಪ್ರತಿಯೊಬ್ಬರ ಮನೆಗೂ 'ಫ್ರಿಜ್' ಅನ್ನೋ ತಂಗಳು ಪೆಟ್ಟಿಗೆ ಬಂದ ಮೇಲೆ ನಾಯಿಗಳಿಗೆ ಸಿಗುತ್ತಿದ್ದ ಚೂರುಪಾರು ಅನ್ನಕ್ಕೂ ಕುತ್ತು ಬಂತು. ಇದು ಜಾಗತೀಕರಣದ ದುಷ್ಫಲವಷ್ಟೆ. ಬರುಬರುತ್ತ ಮನುಷ್ಯ ಎಷ್ಟು ಸ್ವಾರ್ಥಿಯಾಗುತ್ತಿದ್ದಾನೆಂದರೆ, ತನ್ನ ಸುಖ ಮತ್ತು ತನ್ನ ಸಂಪತ್ತಿನ ಹಿತರಕ್ಷಣೆಯ ಹೊರತಾಗಿ ಆತನಿಗೆ ಮತ್ತೇನೂ ಬೇಕಿಲ್ಲ, ಹಿಂದಾದರೆ ಜನಕ್ಕೆ 'ಕೇರಿ' ಅನ್ನೋ ಕಲ್ಪನೆ ಇತ್ತು, ಆಯಾ ಕೇರಿಯ ಜನ ತಾವೆಲ್ಲ ಒಂದೇ ಮನೆಯವರಂತಿದ್ದು ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಹೆಗಲು ಕೊಡುತ್ತಿದ್ದರು. ಇದು ನಮ್ಮ ಕೇರಿಯ ನಾಯಿ, ನಮ್ಮನ್ನು ಕಾಯುತ್ತದೆ ಎಂದು ಪ್ರತಿಮನೆಯವರು ಆ ಕೇರಿಯ ನಾಯಿಗಳಿಗೆ ಅನ್ನ ಹಾಕುತ್ತಿದ್ದರು.



ಈಗೇನಾಗಿದೆ ನೋಡಿ, ಸಿಕ್ಕಾಪಟ್ಟೆ ಅಪಾರ್ಟ್‌ಮೆಂಟುಗಳು ಬಂದಿವೆ. ಕಾರ್ ಪಾರ್ಕ್ ಮಾಡಿ ತನ್ನ ಫ್ಲಾಟ್ ಹೊಕ್ಕಿ ಬಿಟ್ಟನೆಂದರೆ ಪಕ್ಕದ ಮನೆಯಲ್ಲಿ ಕೊಲೆ ನಡೆಯುತ್ತಿದ್ದರೂ ಈತ ತಲೆ ಕೆಡಿಸಿಕೊಳ್ಳುವುದಿಲ್ಲ. ಇದು ಪಕ್ಕಾ ಕಾರ್ಪೊರೇಟ್ ಮೆಂಟಾಲಿಟಿ. ನಿಧಾನವಾಗಿ ಮೇಲ್ವರ್ಗದ ಜನ ಯಾವೊಂದು ಪ್ರಾಣಿಯ ಜೊತೆಗೂ ಸಂಬಂಧವೇ ಬೇಡದಂತೆ ತಮ್ಮ ಸ್ವಭಾವದಲ್ಲೇ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ನಾಯಿಯನ್ನು ಸಮಾಜದಿಂದ ಹೊರಗಿಡಿ ಎನ್ನುವ ಇದೇ ಮಂದಿ ನಾಳೆದಿನ ಭಿಕ್ಷುಕರು, ನಾಳಿದ್ದು ಫುಟ್‌ಪಾತ್ ವ್ಯಾಪಾರಿಗಳು ಇರಕೂಡದು ಅಂತ


ವುದರಿಂದ ಆತ ಕ್ರಮೇಣ ರಾಕ್ಷಸನಾಗುತ್ತಿದ್ದಾನೆ. ಈಗ ಏನು ನಾಯಿಗಳ ವಿರುದ್ಧ ಸಮೂಹ ಸನ್ನಿ ಹಬ್ಬಿದೆಯೋ ಅದನ್ನು ಹುಟ್ಟು ಹಾಕಿದ್ದೇ ಪತ್ರಿಕೆ ಮತ್ತು ಟಿವಿಗಳು. ವಿವೇಚನೆ ಅನ್ನೋದು ಮನುಷ್ಯನಿಗಲ್ಲದೇ ಮೃಗಗಳಿಗೆ ಬರಲು ಸಾಧ್ಯವೇ? ಬೀದಿನಾಯಿಗಳ ದುರ್ಗತಿಯನ್ನು ನಾನೂ ಅಧ್ಯಯನ ಮಾಡಿದ್ದೇನೆ. ಬೆಂಗಳೂರು ವಿಪರೀತ ಬೆಳೆದಿರುವುದರಿಂದ ಈ ಟ್ರಾಫಿಕ್ ಜಾಮ್, ಭೂಕಬಳಿಕೆ, ವಿಪರೀತ ಜನದಟ್ಟಣೆಯಿಂದಾಗಿ ಅವುಗಳ ಸಂಚಾರ ಸ್ವಾತಂತ್ರ್ಯವನ್ನೇ ನಾವು ಕಿತ್ತುಕೊಂಡಿದ್ದೇವೆ. ಕಸದ ತೊಟ್ಟಿಗಳನ್ನೆಲ್ಲ ಎತ್ತಿಸಿ, ತಂಗಳನ್ನವನ್ನೂ ಬಿಡದೇ ನಾಯಿಗಳನ್ನು ಹಸಿವಿಗೆ, ಬೀದಿಗೆ ದಬ್ಬಿದ್ದೇವೆ. ಅವುಗಳ ಮರಿಗಳನ್ನು ಎತ್ತಿಕೊಂಡು ಹೋಗುವ ಮಕ್ಕಳು ಆಟವಾಡಿ ಎಲ್ಲೆಲ್ಲೋ ಬಿಸಾಡುತ್ತಿದ್ದಾರೆ. ಬೀದಿನಾಯಿಗಳು ವ್ಯಗ್ರಗೊಳ್ಳಲು ಮನುಷ್ಯನ ಕ್ರೌರ್ಯವೇ ಕಾರಣ ಎಂಬುದನ್ನು ಯಾರೂ ಏಕೆ ಅರ್ಥ ಮಾಡಿಕೊಳ್ಳುತ್ತಿಲ್ಲ.

ಹಾಗೇ ನೋಡಿದರೆ ಪುರಾತನ ಮನುಷ್ಯನ ಮೊದಲ ಸ್ನೇಹಿತನೇ ನಾಯಿ. ಆತ ಜಾನುವಾರುಗಳನ್ನು ಸಾಕತೊಡಗಿದ್ದು ಕೃಷಿಗೆ ಇಳಿದನಂತರವೇ. ಈಗ ಮನುಷ್ಯನ ಸ್ವಭಾವದಲ್ಲೇ ಬದಲಾವಣೆ ಆಗಿರುವುದರಿಂದ ನಾಯಿಗಳ ಸ್ವಭಾವದಲ್ಲೂ ಬದಲಾವಣೆ ಬಂದಿದೆ ಅನ್ನೋದನ್ನ ಮನುಷ್ಯ ಏಕೆ ಅರ್ಥ ಮಾಡಿಕೊಳ್ಳುತ್ತಿಲ್ಲ?



ಮನುಷ್ಯನಿಗೂ ಮೃಗಕ್ಕೂ ವ್ಯತ್ಯಾಸವೇ ಬೇಡವೆ? ದಯವೇ ಧರ್ಮದ ಮೂಲವಯ್ಯ ಅನ್ನೋದನ್ನ ಇಡೀ ವಿಶ್ವಕ್ಕೇ ಸಾರಿದ್ದು ಕನ್ನಡಿಗರು. ಇಂಥಾದೊಂದು ಹತ್ಯಾಕಾಂಡವನ್ನು ಕಂಡೂ ಕರ್ನಾಟಕದ ಒಬ್ಬನೇ ಒಬ್ಬ ಮಠಾಧೀಶನೂ ಇದನ್ನು ಖಂಡಿಸುತ್ತಿಲ್ಲ ಅಂದರೆ ಅವರು ತಮ್ಮ ಸಂತತ್ವವನ್ನು ಕಳೆದುಕೊಂಡಿದ್ದಾರೆ ಅಂತಲೇ ಅರ್ಥ. ಇಸ್ಲಾಂ ಹೇಳುವ 'ಹಲಾಲ್' ಅನ್ನು ನಾವು ಹಿಂಸೆ ಅಂದುಕೊಳ್ಳುತ್ತೇವೆ. ಆದರೆ ಮಹ್ಮದ್ ಪೈಗಂಬರ್ ಇದನ್ನು ಜಾರಿಗೆ ತಂದದ್ದೇ ಹಿಂಸೆಗೆ ವಿರೋಧವಾಗಿ. ಒಂದು ಪ್ರಾಣಿಯನ್ನು ಕೊಲ್ಲುವಾಗ ಅದನ್ನು ಮತ್ತೊಂದು ಪ್ರಾಣಿ ನೋಡಕೂಡದು. ಕೊಲ್ಲುವ ಪ್ರಾಣಿಯ ಎದುರಿಗೆ ಕತ್ತಿಯನ್ನು ಮಸೆಯಬಾರದು. ಅದರ ದೇಹದ ಯಾವ ಭಾಗವನ್ನು ಕತ್ತರಿಸುತ್ತೇವೋ, ಆ ಭಾಗದಿಂದ ಕತ್ತರಿಸಿದಾಗ ಅದಕ್ಕೆ ಹೆಚ್ಚು ನೋವಾಗಬಾರದು. ಇದು ಹಲಾಲ್‌ನ ಉದ್ದೇಶ.

ಇದೂ ಕೂಡ ಮನುಷ್ಯ ಮಾಂಸ ತಿಂದು ಬದುಕಲೇಬೇಕಾದ ಅನಿವಾರ್ಯ ಪರಿಸ್ಥಿತಿಯಿದ್ದ ಮರುಭೂಮಿ ಪ್ರದೇಶದ ಪರಿಸ್ಥಿತಿಗೆಂದೇ ಪೈಗಂಬರ್ ಜಾರಿಗೆ ತಂದ ಹಿಂಸಾ ವಿರೋಧಿ ಪದ್ಧತಿ. ಇದು ಯಾರಿಗೆ ಅರ್ಥವಾಗುತ್ತೆ?



ಪಟ್ಟು ಹಿಡಿಯೋಲ್ಲ ಅಂತ ಏನು ಗ್ಯಾರಂಟಿ?

ಇದು ಮನುಷ್ಯ ಸ್ವಾರ್ಥ ಮತ್ತು ಕ್ರೌರ್ಯದ ಪರಮಾವಧಿ. ನಾನು ಕೇಳಿಕೊಳ್ಳೋದಿಷ್ಟೇ, ಕರ್ನಾಟಕದ ಯಾವುದೇ ಬೀದಿಯ ನಿವಾಸಿಗಳಲ್ಲಿ ಇನ್ನೂ ಮನುಷ್ಯತ್ವ ಅನ್ನೋದು ಉಳಿದಿದ್ದರೆ ಅವರೆಲ್ಲ ಇದು ನಮ್ಮ ಬೀದಿಯ ನಾಯಿ, 'ಇದು ನಮಗೆ ಸೇರಿದ್ದು' ಅಂತ ಘೋಷಣೆ ಮಾಡಬೇಕು. ಅವುಗಳನ್ನು ಬೀದಿಯ ನಾಯಿಗಳು ಅಂತ ಕರೆಯೋದೇ ಅಮಾನವೀಯ. ಅವು ಕೇರಿ ನಾಯಿಗಳು. ಇನ್ನೂ ಮಾನವೀಯವಾಗಿ ಹೇಳಬೇಕೆಂದರೆ ಅವು ಸಮುದಾಯದ ನಾಯಿಗಳು ಅರ್ಥಾತ್ community dogs. ಜನರಲ್ಲಿ ಕೇವಲ ಮನೆ ಪ್ರಜ್ಞೆ ಸಾಲದು ಕೇರಿಯ ಪ್ರಜ್ಞೆ ಬೆಳೆದಾಗ ಮಾತ್ರ ಇದು ಸಾಧ್ಯವಾಗುತ್ತೆ.

ಹಳ್ಳಿಗಳಲ್ಲಿ ಇವತ್ತಿಗೂ ಕೇರಿ ಪ್ರಜ್ಞೆ ಇಲ್ಲವೆ? ಕೆಲ ರೈತರು ತಮ್ಮ ಮೊದಲ ತುತ್ತನ್ನು ನಾಯಿಗೆ ತೆಗೆದಿಟ್ಟೇ ಊಟ ಮಾಡುತ್ತಿದ್ದರಲ್ಲವೆ? ನಗರದ ಜನಕ್ಕೆ ಏನಾಗಿದೆ? ಹಿಂದಾದರೆ ಮನೆಯಲ್ಲಿ ಉಳಿದದ್ದು ನಾಯಿಗೆ ಸಿಗುತ್ತಿತ್ತು. ನಾಯಿಗಳು ಮನುಷ್ಯನ ಸಹಜ ದಯಾವಂತಿಕೆಯ ಮೇಲೆ ಬದುಕುತ್ತಿದ್ದವು. ಮಹಾತ್ಮಾ ಗಾಂಧೀಜಿ ಒಂದು ನಾಗರಿಕತೆಯ ಯೋಗ್ಯತೆಯನ್ನು ಅಲ್ಲಿನ ಜನ ಪ್ರಾಣಿಗಳನ್ನು ಹೇಗೆ ನಡೆಸಿಕೊಳ್ಳುತ್ತಾರೆ ಅನ್ನೋದರ ಮೇಲೆ ನಿರ್ಧರಿಸಬೇಕು ಎಂದಿದ್ದರು. ನಮ್ಮಲ್ಲಿ ಉಪನಯನ ಮಾಡುವಾಗಲೂ 'ನೀನು ನಾಯಿಗೆ ಕಲ್ಲು ಹೊಡೆಯೋದನ್ನು ಬಿಟ್ಟಾಗಲೇ ಮನುಷ್ಯನಾದೆ ಅಂತ ಅರ್ಥ' ಎಂದು ಬೋಧಿಸುವುದಿಲ್ಲವೆ?

ಪ್ರಾಣಿದಯೆ ಅನ್ನೋದು ನಮ್ಮೆಲ್ಲಾ ಧರ್ಮದಲ್ಲೂ ಇದೆ. ಆದರೆ ಮನುಷ್ಯನ ಜೀವನ ಕ್ರಮವೇ ಬದಲಾಗುತ್ತಿರು

ಮಗು ಸತ್ತಿದ್ದು ನಿಜಕ್ಕೂ ದುಃಖಕರವೆ. ಮನುಷ್ಯನ ಪಾಪಕ್ಕೆ ಮಕ್ಕಳು ಬಲಿಯಾಗುತ್ತಿವೆಯಷ್ಟೇ. ಅದಕ್ಕೆ ಸರಿಯಾದ ಕಾರಣವನ್ನು ಯೋಚಿಸಬೇಕಿತ್ತು, ಆದರೆ ಮಕ್ಕಳನ್ನೇ ತಿಂದವರನ್ನು ಇನ್ನೂ ನಾವೇಕೆ ಶಿಕ್ಷೆ ಮಾಡಿಲ್ಲ? ಎಲ್ಲೋ ಕೆಲ ನಾಯಿಗಳು ಇಂಥ ಕೃತ್ಯವೆಸಗಿದರೆ ಮನುಷ್ಯನಾದವನು ತನ್ನಲ್ಲಿ ಏನು ತಪ್ಪಿದೆ ಅಂತ ವಿವೇಚಿಸಬೇಕೆ ಹೊರತು ಪಾಪದ ನಾಯಿಗಳ ಮಾರಣಹೋಮವಲ್ಲ, ಈಗೇನು ನಾಯಿಗಳ ಮಾರಣಹೋಮ ನಡೆದಿದೆಯೋ ಅದರಿಂದಾಗಿ ಇಡೀ ವಿಶ್ವದಲ್ಲೇ ಕನ್ನಡಿಗರು ಕೊಲೆಗಡುಕರು ಎಂಬ ಅಪಖ್ಯಾತಿ ಬಂದುಬಿಟ್ಟಿದೆ.

ನಮಗೆ ನಾಯಿಗಳ ಮೇಲಿನ ಪ್ರೀತಿಯೇ ಹೊರಟು ಹೋಯಿತೆಂದರೆ ಮನುಷ್ಯನ ಪ್ರೀತಿಸುವ ಶಕ್ತಿಯೇ ನಾಶವಾಗಿದೆ ಎಂದಲ್ಲವೇ ಅರ್ಥ?

ತಮಗೆ ತಾವೇ ಪ್ರಶ್ನೆ ಕೇಳಿಕೊಂಡಂತೆ ಆಕಾಶ ದಿಟ್ಟಿಸಿದ ಅನಂತಮೂರ್ತಿ ಕ್ಷಣಹೊತ್ತು ಮೌನವಾದರು.

ಕುವೆಂಪು ಕಾದಂಬರಿಗಳಲ್ಲಿ ನಾಯಿಗಳ ಅದೆಷ್ಟು ಪಾತ್ರಗಳಿಲ್ಲ? ಅವರ ಕಾನೂರ ಹೆಗ್ಗಡತಿ ಕಾದಂಬರಿಯಲ್ಲೇ ಪಾತ್ರವೊಂದರ ಹೆಸರೇ ನಾಯಿಗುತ್ತಿ! ಇಂಥ ನಾಯಿಗುತ್ತಿಗಳು ಬೆಂಗಳೂರಿನ ಪ್ರತಿ ಕೊಳಗೇರಿಗಳಲ್ಲೂ ಇರುತ್ತಾರೆ. ಬಡವರಿರುವಲ್ಲೇ ಏಕೆ ಬೀದಿನಾಯಿಗಳು ಹೆಚ್ಚಾಗಿರುತ್ತವೆ? ಅವರಲ್ಲಿ ಇನ್ನೂ ಮನುಷ್ಯತ್ವ ಉಳಿದಿರೋದಕ್ಕೆ ತಾನೆ? ಇವತ್ತು ನಾಯಿ ಬೇಡ ಅನ್ನೋರು ಇವತ್ತಲ್ಲ ನಾಳೆ ಖಂಡಿತ ಬೆಂಗಳೂರಿನಲ್ಲಿ ಬಡವರಿರಕೂಡದು ಅನ್ನುವುದಿಲ್ಲವೆ? ಹೋಗಲಿ ಸರ್ಕಾರಕ್ಕಾದರೂ ವಿವೇಚನೆ ಬೇಡವೆ? ಈ ರೀತಿ ನಿರುಪದ್ರವಿ ನಾಯಿಗಳನ್ನು ಅಷ್ಟೊಂದು ಕ್ರೌರ್ಯದಿಂದ ಕೊಂದಿದ್ದಾರಲ್ಲ; ಅದನ್ನು ನೋಡಿಯೂ ನಮ್ಮ ಮಠಾಧಿಪತಿಗಳು ಸುಮ್ಮನಿದ್ದಾರಲ್ಲ; ದಯವೇ ಧರ್ಮದ ಮೂಲವಯ್ಯ ಅನ್ನೋದನ್ನೇ ಇವರೆಲ್ಲ ಮರೆತುಬಿಟ್ಟರಾ?

ಪಾಪದ ನಾಯಿಗಳ ಮಾರಣಹೋಮದ ಪಾಪದಲ್ಲಿ ನಾವೆಲ್ಲರೂ ಪಾಲುದಾರರಾ?

ಅನಂತಮೂರ್ತಿಯವರ ಈ ಪ್ರಶ್ನೆ ಇಡೀ ಮನುಷ್ಯ ಸಂಕುಲಕ್ಕೇ ಕೇಳಿದ ಪ್ರಶ್ನೆಯಂತಿಲ್ಲವೆ?


–ಡಾ. ಸೋಮನಾಥ್



ಸಮುದ್ರಮಟ್ಟ ಏರಿ ಜಲಾವೃತಗೊಳ್ಳಲಿರುವ ದ್ವೀಪ



ಹವಳದ ದಂಡೆಗಳಿಗೆ ಹಿಡಿದಿರುವ ರೋಗ



ತಾಪಮಾಲಿನ್ಯವನ್ನು ತಾಳಲಾರದೆ ಪ್ರಾಣಬಿಟ್ಟಿರುವ ಹಿಮಕರಡಿ

ಬಿಸಿಪ್ರಳಯದ ಆಜೂಬಾಜು?



ನಾವೂ ಪ್ರಗತಿ ಸಾಧಿಸಬೇಕೆಂದು ಹೊರಟರೆ ನಮ್ಮ ಭೂಮಿಗೆ ಅಷ್ಟು ಧಾರಣ ಶಕ್ತಿ ಇದೆಯೆ? ಅಮೆರಿಕದಲ್ಲೇನೊ ಶೇಕಡಾ 99 ಜನರು ನಗರವಾಸಿಗಳಾಗಿದ್ದಾರೆ. ನಮ್ಮಲ್ಲಿ ಅದು ಸಾಧ್ಯವೆ? ಟಾಟಾ ಕಂಪನಿ ವರ್ಷಕ್ಕೆ ಲಕ್ಷ ಹೊಸ ಕಾರುಗಳನ್ನು ಉತ್ಪಾದಿಸುತ್ತ ಹೋದರೆ, ಅವೆಲ್ಲವೂ ನಮ್ಮ ನಗರಗಳಲ್ಲೇ ಗಿರಕಿ ಹೊಡೆಯುತ್ತಿದ್ದರೆ ನಗರವಾಸಿಗಳ ಬದುಕಿನ ಸ್ಥಿತಿ ಏನಾದೀತು? ಇನ್ನೂ ಹನ್ನೊಂದು ಅಲ್ಟ್ರಾ ಸೂಪರ್ ಥರ್ಮಲ್ ಶಕ್ತಿ ಸ್ಥಾವರಗಳನ್ನು ದೇಶದ ವಿವಿಧ ಕಡೆ ಸ್ಥಾಪಿಸುವುದಾಗಿ ಕೇಂದ್ರ ಸರಕಾರ ಹೇಳಿದೆ. ಕಲ್ಲಿದ್ದಲು, ಪೆಟ್ರೋಲು ಉರಿಸಿ ಒಂದು ಯುನಿಟ್ ವಿದ್ಯುತ್ ಉತ್ಪಾದನೆ ಮಾಡುವಾಗ ಏಳು ಯುನಿಟ್‌ಗಳಷ್ಟು ಶಕ್ತಿ ಸೆಖೆಯ ರೂಪದಲ್ಲಿ ವಾತಾವರಣಕ್ಕೆ ಸೇರುತ್ತದೆ. ಒಂದೊಂದು ಶಕ್ತಿ ಸ್ಥಾವರದಿಂದಲೂ ಹೊಮ್ಮುವ ತಾಪಮಾಲಿನ್ಯ, ಜಲಮಾಲಿನ್ಯ, ವಾಯು ಮಾಲಿನ್ಯ ಮತ್ತು ಹಾರುಬೂದಿಯ ರೂಪದಲ್ಲಿ ನೆಲಮಾಲಿನ್ಯವನ್ನು ಲೆಕ್ಕ ಹಾಕಿದರೆ, ನಮ್ಮ ನಿಸರ್ಗದ ಧಾರಣ ಶಕ್ತಿ ಎಷ್ಟಿರಬೇಕು?

ಇಪ್ಪತ್ತೈದು ವರ್ಷಗಳ ಹಿಂದೆ ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ವರದಿ ಬರತೊಡಗಿತ್ತು. ಉತ್ತರ ಧ್ರುವ ಪ್ರದೇಶದ ಹಿಮ ಹಾಸು ವೇಗವಾಗಿ ಕರಗುತ್ತಿದೆ; ಹಿಮ ಕರಡಿಗಳು ಎಸ್ಕಿಮೊ ತಾಂಡಾಗಳ ಕಡೆಗೆ ವಲಸೆ ಬರುತ್ತಿವೆ ಅಂತ. 'ಭೂಮಿ ಬಿಸಿಯಾಗುತ್ತಿದೆ, ಎಲ್ಲ ರಾಷ್ಟ್ರಗಳೂ ಸೇರಿ ರಕ್ಷಣಾ ಕ್ರಮ ಕೈಗೊಳ್ಳೋಣ' ಎಂಬ ದನಿ ಹತ್ತು ವರ್ಷಗಳ ಹಿಂದೆ ಕೇಳಿಬಂತು. ಯಾವ ಯಾವ ದೇಶ ಏನೇನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಕ್ಯೋಟೊ ಒಪ್ಪಂದ ರೂಪುಗೊಂಡಿತು. ಬಹುಪಾಲು ರಾಷ್ಟ್ರಗಳು ಆ ಒಪ್ಪಂದಕ್ಕೆ ಸಹಿ ಹಾಕಿದವು. ಅಮೆರಿಕ, ಆಸ್ಟ್ರೇಲಿಯಾ ಬಿಟ್ಟು.

ಅದೇ ವೇಳೆಗೆ ಭೂಮಿ ಕಾವೇರುತ್ತಿರುವ ಬಗ್ಗೆ ವರದಿಗಳು ದಕ್ಷಿಣ ಧ್ರುವ ಪ್ರದೇಶದ ಕಡೆಯಿಂದಲೂ ಬರತೊಡಗಿದ್ದವು. ಕೋಲಾರ ಜಿಲ್ಲೆಯಷ್ಟು ವಿಶಾಲ ಗಾತ್ರದ ಹಿಮದ ಹಾಸು ಅಂಟಾರ್ಟಿಕಾದಿಂದ ಪ್ರತ್ಯೇಕಗೊಂಡು ಸಮುದ್ರದಲ್ಲಿ ತೇಲುತ್ತ ಹೊರಟದೆ ಎಂದು. ಬಿಳಿಶಾರ್ಕ್‌ಗಳು ತಂಡೋಪತಂಡವಾಗಿ ಉತ್ತರ ದಿಕ್ಕಿಗೆ ವಲಸೆ ಹೊರಟಿವೆ ಎಂದು. ವಿಶ್ವಸಂಸ್ಥೆ ಈ ಸಂಗತಿಯನ್ನು ತುಸು ಗಂಭೀರವಾಗಿ ಪರಿಗಣಿಸಿ, ನಾನಾ ದೇಶಗಳ ಐನೂರಕ್ಕೂ ಹೆಚ್ಚು ವಿಜ್ಞಾನಿಗಳ ಅಧ್ಯಯನ ಸಮಿತಿಯನ್ನು ನೇಮಕ ಮಾಡಿತು.

ಭೂಮಿಯ ಸರಾಸರಿ ತಾಪಮಾನ ಹೀಗೇ ಏರುತ್ತಿದ್ದರೆ ಪರಿಣಾಮ ಏನೇನು? ಮುಖ್ಯವಾಗಿ, ಹಿಮಪರ್ವತಗಳು ಕರಗುವುದರಿಂದ ಸಮುದ್ರದ ಮಟ್ಟ ಮೆಲ್ಲಗೆ ಏರುತ್ತದೆ. ಸಮುದ್ರದ ನೀರೂ ಕೊಂಚ ಬಿಸಿ ಆಗುವುದರಿಂದ ಸಾಗರಗಳೂ ಮೆಲ್ಲಗೆ ಪ್ರಸರಣಗೊಂಡು ನೀರಿನ ಮಟ್ಟ ಇನ್ನಷ್ಟು ಏರುತ್ತದೆ. ಕರಾವಳಿಯ ಅಂಚಿನ ಜನರು ಕ್ರಮೇಣ ಗುಳೆ ಹೋಗಬೇಕಾಗುತ್ತದೆ. ಇಡೀ ನಗರಗಳೇ ಜಲಾವೃತ ಆಗುತ್ತವೆ. ಸಮುದ್ರಮಟ್ಟದಿಂದ ಒಂದೆರಡು ಮೀಟರ್‌ನಷ್ಟು ಎತ್ತರದಲ್ಲಿರುವ ಮಡಗಾಸ್ಕರ್, ಮಾರಿಷಸ್, ಟುವಾಲು ಮುಂತಾದ ದ್ವೀಪಗಳು ಮುಳುಗಿ ಹೋಗುತ್ತವೆ. ನದಿಯ ಮುಖದಲ್ಲಿರುವ ಬಾಂಗ್ಲಾದಂತಹ ಸಪಾಟು ದೇಶಗಳ ಶೇಕಡಾ 60 ಭಾಗ ಜಲಾವೃತ ಆಗುತ್ತದೆ. ಹಿಮ ಪರ್ವತಗಳು ಕರಗುತ್ತ ಹೋದಂತೆ ಸಿಂಧೂ, ಗಂಗಾ, ಬ್ರಹ್ಮಪುತ್ರ ನದಿಗಳು ಮೊದಲು ಕೆಲವರ್ಷ ಸದಾ ತುಂಬು ಪ್ರವಾಹದಿಂದ ಹರಿದು ನಂತರ ಬತ್ತಿ ಹೋಗುತ್ತವೆ. ಎಲ್ಲ ಹಿಮದ ಹಾಸುಗಳೂ ಕರಗಿದರೆ ಜಗತ್ತಿನೆಲ್ಲೆಡೆ ಸಮುದ್ರಮಟ್ಟ ಏಳು ಮೀಟರಿನಷ್ಟು ಏರುತ್ತದೆ. ನದಿಕೊಳ್ಳಗಳಲ್ಲಿ ಸಮುದ್ರದ ನೀರು ಒತ್ತುವುದರಿಂದ ಈ ಹಿಮಾಲಯದ ನದಿಗಳು ಹಿಮ್ಮೊಗ ಹರಿಯಲು ತೊಡಗುತ್ತವೆ.

ಆತಂಕ ಪಡಬಾರದ ಸಂಗತಿ ಏನೆಂದರೆ, ಇವೆಲ್ಲ ತೀರಾ ನಿಧಾನಕ್ಕೆ, ಅಂದರೆ 100-200-300 ವರ್ಷಗಳಲ್ಲಿ ಸಂಭವಿಸುವ ಉತ್ಪಾತಗಳು. ಆದರೆ ಅದೇ ಆತಂಕಕ್ಕೆ ಕಾರಣವಾಗುತ್ತವೆ. ಏಕೆಂದರೆ, ಜನರು ಭೂಮಿಯನ್ನು ಇನ್ನಷ್ಟು ಬಿಸಿ ಮಾಡುವಂಥ ತಮ್ಮ ನಿತ್ಯದ ಕ್ರಿಯೆಗಳಲ್ಲಿ ನಿರಾತಂಕವಾಗಿ ತಲ್ಲೀನರಾಗಿರುತ್ತಾರೆ. ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿನ ಶಕ್ತಿಯ ಬಳಕೆ ಹೆಚ್ಚುತ್ತಲೇ ಹೋಗುತ್ತದೆ. ವಾಯುಮಂಡಲ ದಿನದಿನಕ್ಕೆ ಮಲಿನವಾಗುತ್ತಲೇ ಹೋಗುತ್ತದೆ. ಅರಣ್ಯಗಳ ಮಾರಣಹೋಮ ಎಂದಿನಂತೆ ನಡೆಯುತ್ತಲೇ ಇರುತ್ತದೆ. ಸರಕಾರಗಳು ಕ್ರಮ ಕೈಗೊಳ್ಳಲಿ ಎಂಬ ಧೋರಣೆ ಇಂದಿನಂತೆ ಮುಂದೆಯೂ ಚಾಲ್ತಿಯಲ್ಲಿರುತ್ತದೆ.

ಜನರ ಸೌಲಭ್ಯಗಳ ಮೇಲೆ ಕಡಿವಾಣ ಹಾಕಲು ಯಾವ ಜನಪ್ರತಿನಿಧಿಯೂ ಧೈರ್ಯ ಮಾಡುವುದಿಲ್ಲವಾದ್ದರಿಂದ ಬೇರೆ ರಾಷ್ಟ್ರಗಳ ಸರಕಾರಗಳು ಮೊದಲು ಕ್ರಮ ಕೈಗೊಳ್ಳಲಿ; ಮಾಲಿನ್ಯ ನಿಯಂತ್ರಣ ಮಾಡಬಲ್ಲ ಹೊಸ ತಂತ್ರಜ್ಞಾನವನ್ನು ಶ್ರೀಮಂತ ದೇಶಗಳು ನಮಗೆ ಉಚಿತವಾಗಿ ಕೊಡಲಿ ನಾವೇಕೆ ಚಿಂತಿಸಬೇಕು? ಎಂಬ ಧೋರಣೆಯೇ ಚಾಲ್ತಿಯಲ್ಲಿರುತ್ತದೆ.


ಭೂಮಿ ಆದಾಗಲೇ ಬಿಸಿಯಾಗಿತ್ತು. 1998ರ ವೇಳೆಗೆ ಯುರೋಪ್‌ನಲ್ಲಿ ಅಲ್ಲಲ್ಲಿ ತುಸು ಹಾಹಾಕಾರ ಎದ್ದಿತು. ಆಲ್ಪ್ಸ್ ಪರ್ವತಶ್ರೇಣಿಯಲ್ಲಿ ಬರ್ಫದ ಮೇಲೆ ಜಾರಾಟ (ಸ್ಕೀಯಿಂಗ್) ಮಾಡಲು ಬರುವವರಿಗೆ ಹಿಮವೇ ಸಿಗುತ್ತಿಲ್ಲ ಎಂದು. ಸ್ಕೀಯಿಂಗ್ ಕ್ರೀಡೆಯನ್ನೇ ಆಧರಿಸಿದ ಉದ್ಯಮಗಳು ನೆಲಕಚ್ಚತೊಡಗಿವೆ ಎಂಬ ದೂರು ಕೇಳಿಬಂತು. ಅಮೆರಿಕದ ನಾಸಾ ಸಂಸ್ಥೆ ತಾನಾಗಿ ಮಾಹಿತಿ ಸಂಗ್ರಹಣೆಗೆ ತೊಡಗಿತು. ಬಾಹ್ಯಾಕಾಶದಿಂದ ತಿಂಗಳಿಗೆ ಎರಡು ಬಾರಿ ಹಿಮ ಪ್ರದೇಶಗಳ ಛಾಯಾಚಿತ್ರ ತೆಗೆದು ಅಲ್ಲಾಗುತ್ತಿರುವ ಬದಲಾವಣೆಗಳನ್ನು ದಾಖಲು ಇಡಲು ಆರಂಭಿಸಿತು. ತಾಂಜಾನಿಯಾದ ಕಿಲಿಮಂಜಾರೊ ಹಿಮಪರ್ವತ ಶೇಕಡಾ 80ರಷ್ಟು ನಗ್ನವಾಗಿದ್ದು ಕಂಡುಬಂತು. ಅಮೆರಿಕದ ಉತ್ತರದಲ್ಲಿರುವ ಮೊಂಟಾನಾ ಹಿಮಸರೋವರಕ್ಕೆ 1910ರ ದಾಖಲೆಗಳ ಪ್ರಕಾರ 150 ಹಿಮನದಿಗಳು ಬಂದು ಸೇರುತ್ತಿದ್ದವು. ಈಗ ನೋಡಿದರೆ ಕೇವಲ 32 ಹಿಮನದಿಗಳು ಅವೂ ಕ್ಷೀಣವಾಗಿ ಹರಿಯುತ್ತಿರುವುದು ಗೊತ್ತಾಯಿತು. 'ಗ್ರೀನ್‌ಹೌಸ್ ಇಫೆಕ್ಟ್' ಎಂಬ ಪದ ಚಾಲ್ತಿಗೆ ಬಂತು.

2003ರಲ್ಲಿ ಯುರೋಪ್‌ನಲ್ಲಿ ಕೋಲಾಹಲ. ಹಿಂದೆಂದೂ ಕಂಡುಕೇಳರಿಯದಷ್ಟು ವಿಪರೀತ ಸೆಖೆ. ಅನುಕೂಲಸ್ಥ ಜನರೆಲ್ಲ ಹಿರಿಯರನ್ನು ಮನೆಯಲ್ಲೇ ಬಿಟ್ಟು ತಂಪು ಸ್ಥಳಗಳಿಗೆ ಗುಳೆ ಹೋಗಿದ್ದಾರೆ. ಮನೆಯಲ್ಲಿದ್ದ ಮುದಿ ಜೀವಗಳು ಹೈರಾಣಾಗಿದ್ದಾರೆ. ಅವರನ್ನು ಆಸ್ಪತ್ರೆಗೆ ಸಾಗಿಸಬೇಕಾದ ಸಿಬ್ಬಂದಿ ಕೂಡ ರಜೆ. ಅತಿ ಸೆಖೆಯಿಂದ ಪತಪತನೆ ಸಾವು. ನೆದರ್‌ಲ್ಯಾಂಡ್ಸ್‌ನಲ್ಲಿ ಸಾವಿರ ಸಾವು. ಪೋರ್ಚುಗಲ್‌ನಲ್ಲಿ 1300, ಫ್ರಾನ್ಸ್‌ನಲ್ಲಿ ಅಂದಾಜು ಹತ್ತು ಸಹಸ್ರ ಜನರ ಮರಣ. ಪ್ಯಾರಿಸ್‌ನಲ್ಲಿ ಶವಪೆಟ್ಟಿಗೆಗಳ ಅಭಾವ. ಶವಾಗಾರದಲ್ಲೂ ಹೆಣ ಇಡಲು ಸ್ಥಳ ಇಲ್ಲದೆ ಕೆಲವು ಶವಗಳನ್ನು ತಾತ್ಕಾಲಿಕವಾಗಿ ಹೂತಿಟ್ಟು ಸಂಬಂಧಿಕರು ಬಂದಮೇಲೆ ಮತ್ತೆ ತೆಗೆದು ಶಾಸ್ತ್ರೋಕ್ತವಾಗಿ ಹೂಳಲಾಗುತ್ತದೆಂದು ನಗರಪಾಲಿಕೆ ಘೋಷಣೆ. ಅರವತ್ತು ವರ್ಷಗಳ ಹಿಂದಿನ ಪ್ಲೇಗಿನ ನಂತರ ಇಷ್ಟೊಂದು ಸಂಖ್ಯೆಯಲ್ಲಿ ನೈಸರ್ಗಿಕ ಕಾರಣಗಳಿಂದ ಒಟ್ಟೊಟ್ಟಾಗಿ ಸತ್ತಿರಲಿಲ್ಲ.

ಅದೇ ವರ್ಷ ಪೃಥ್ವಿಯ ಎಲ್ಲೆಡೆ ಅತಿವೃಷ್ಟಿ ಅನಾವೃಷ್ಟಿಯ ರಣ ದುಂದುಭಿ. ಇಂಡೋನೇಷ್ಯಾದಲ್ಲಿ ಬರಗಾಲ. ಪಕ್ಕದ ಕೊರಿಯಾ, ಚೀನಾಗಳಲ್ಲಿ ಚಂಡಮಾರುತ, ಅತಿವೃಷ್ಟಿ. ಆಸ್ಟ್ರೇಲಿಯಾದಲ್ಲಿ ಭೀಕರ ಬರಗಾಲ. ಹಸುಗಳ ಹಾಲು ಹಿಂಡಲೂ ಸರಕಾರಿ ನಿಷೇಧ (ಹಿಂಡಿದರೆ ಹಾಲಿನ ಪುಡಿಯೇ ಬಂದೀತೆಂದು ಅಮೆರಿಕದಲ್ಲಿ ಜೋಕು). ಕ್ಯೋಟೊ ಒಪ್ಪಂದಕ್ಕೆ ಈಗಲಾದರೂ ಸಹಿ ಹಾಕುವಂತೆ ಅಲ್ಲಿನ ಪ್ರಧಾನಿಗೆ ನಾಗರಿಕರ ಒತ್ತಾಯ.

ಇತ್ತ ಅಮೆರಿಕದಲ್ಲೂ 'ಗ್ರೀನ್ ಹೌಸ್ ಗ್ಯಾಸ್' (ಮುಖ್ಯವಾಗಿ ಇಂಗಾಲದ ಡೈಆಕ್ಸೈಡ್, ನೈಟ್ರಸ್ ಆಕ್ಸೈಡ್, ಮಿಥೇನ್ ಅನಿಲ ಮತ್ತು ನೀರಿನ ಆವಿ) ಗಳ ವಿಸರ್ಜನೆಗೆ ಸರಕಾರವೇ ಲಗಾಮು ಹಾಕಬೇಕೆಂದು ಎಲ್ಲರಿಂದ ಒಕ್ಕೊರಲಿನ ಒತ್ತಾಯ. ಆದರೆ ಬುಷ್ ಸರಕಾರದ ಮೇಲೆ ಪೆಟ್ರೋಲಿಯಂ ಇಂಡಸ್ಟ್ರಿಗಳ ಬಿಗಿ ಹಿಡಿತ ಇದ್ದುದರಿಂದ, ಕ್ರಮ ಕೈಗೊಳ್ಳಲು ಅಮೆರಿಕದ ನಕಾರ. ಚೀನಾ, ಭಾರತ, ಬ್ರೆಜಿಲ್‌ನಂಥ ವರ್ಧಮಾನ ದೇಶಗಳು ಬಹುದೊಡ್ಡ ಪ್ರಮಾಣದಲ್ಲಿ ಪೆಟ್ರೋಲಿಯಂ ಬಳಕೆ ಮಾಡುತ್ತಿವೆ. ಅವೂ ಸಂಪನ್ಮೂಲ ಬಳಕೆಯ ಮೇಲೆ ಲಗಾಮು ಹಾಕಲಿ ಎಂಬ ಧೋರಣೆ. ಬಸ್, ಟ್ರೇನ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವೆ?

ಈ ಮಧ್ಯೆ "ರನ್‌ಅವೇ ರಿಯಾಕ್ಷನ್" ಮತ್ತು "ಟಿಪ್ಪಿಂಗ್ ಪಾಯಿಂಟ್" ಎಂಬ ಹೊಸ ಪರಿಕಲ್ಪನೆಗಳನ್ನು ವಿಜ್ಞಾನಿಗಳು ಮುಂದೊಡ್ಡುತ್ತಾರೆ. ಉರುಳಲು ಹೊರಟ ಬಂಡೆಯನ್ನು ಆರಂಭದಲ್ಲೇ ತಡೆಯದಿದ್ದರೆ, ಅದರ ಆಘಾತಕ್ಕೆ ಇನ್ನಷ್ಟು ಬಂಡೆಗಳು ಉರುಳತೊಡಗುತ್ತವೆ ತಾನೆ? ಧ್ರುವಪ್ರದೇಶದಲ್ಲಿ ಹಿಮದ ಹಾಸು ಕರಗಲು ತೊಡಗಿದರೆ, ಅದರ ಕೆಳಗೆ ಹೂತಿರುವ ಮೀಥೇನ್ ಸರೋವರ ಗಳು ವಾತಾವರಣಕ್ಕೆ ತೆರೆದುಕೊಳ್ಳುತ್ತವೆ. ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಗ್ರೀನ್‌ಹೌಸ್ ಅನಿಲಗಳನ್ನು ವಾಯುಮಂಡಲಕ್ಕೆ ಕಕ್ಕುತ್ತವೆ. ಸಮುದ್ರದಲ್ಲಿ ಉಷ್ಣ ಪ್ರವಾಹಗಳು ದಿಕ್ಕು ಬದಲಿಸಿ, ಋತುಮಾನಗಳು ಪಲ್ಲಟಗೊಳ್ಳುತ್ತವೆ. ಮಳೆ ಬೀಳುವ ಪ್ರದೇಶಗಳು ಮರುಭೂಮಿ ಆಗುತ್ತವೆ. ಶುಷ್ಕ ಪ್ರದೇಶಗಳಲ್ಲಿ ಅತಿವೃಷ್ಟಿ, ಚಂಡಮಾರುತಗಳ ಸಂಖ್ಯೆ ಹೆಚ್ಚುತ್ತದೆ. ಭಾರೀ ಸಂಖ್ಯೆಯಲ್ಲಿ ಜನ, ಜಾನುವಾರು, ಚರಾಸ್ತಿಗಳೊಂದಿಗೆ ಗುಳೆ ಹೊರಡುವ ಪ್ರಕ್ರಿಯೆಯಲ್ಲೇ ಇನ್ನಷ್ಟು ಮಾಲಿನ್ಯ, ಹಸಿರುನಾಶ ಹೆಚ್ಚುವುದರಿಂದ ಭೂಮಿಯ ತಾಪಮಾನ ಮತ್ತಷ್ಟು ಏರುತ್ತದೆ. ಈಗಲೇ ತುರ್ತಾಗಿ ನಿಯಂತ್ರಣ ಕ್ರಮ ಕೈಗೊಳ್ಳದಿದ್ದರೆ, ಮುಂದೆ ನಿಯಂತ್ರಣವೇ ಅಸಾಧ್ಯ ಎಂಬ ಸ್ಥಿತಿ ತಲೆದೋರುತ್ತದೆ. ಗ್ರೀನ್‌ಹೌಸ್ ಅನಿಲಗಳ ವಿಸರ್ಜನೆಯನ್ನು ಪೂರ್ತಿ ನಿಲ್ಲಿಸಿದರೂ ಬಿಸಿಯುಗ ನಿರಂತರ ಮುಂದುವರೆಯುತ್ತದೆ. ಈಚೆಗಷ್ಟೆ ಆಸ್ಕರ್ ಪ್ರಶಸ್ತಿಯನ್ನು ಗೆದ್ದ 'ಒಂದು ಅಪಥ್ಯ ಸತ್ಯ' (ಎನ್ ಇನ್‌ಕನ್ವೀನಿಯಂಟ್ ಟ್ರೂಥ್) ಹೆಸರಿನ ಸಾಕ್ಷ್ಯಚಿತ್ರದಲ್ಲಿ ಇಂಥ ಭೀಕರ ಸಾಧ್ಯತೆಗಳನ್ನೆಲ್ಲ ತೋರಿಸಲಾಗಿದೆ. ಅಮೆರಿಕದ ಮಾಜಿ ಉಪಾಧ್ಯಕ್ಷ ಅಲ್ ಗೋರ್ ನಿರ್ಮಿಸಿದ ಚಿತ್ರ ಅದು.



ನಾಗೇಶ್ ಹೆಗ್ಡೆ

ಇವೆಲ್ಲ ಕಪೋಲಕಲ್ಪಿತ ಅಲ್ಲವೇನ್ರೀ? ಜನರನ್ನು ಹೆದರಿಸಿ, ಸ್ತೋಮತಲ್ಲಣ ಹುಟ್ಟಿಸುವ ಪಾಶ್ಚಾತ್ಯರ ಹುನ್ನಾರ ಅಲ್ಲವೇನ್ರಿ ಇದು? ಅಮೆರಿಕದವರು ನಮಗಿಂತ ಹತ್ತು ಪಟ್ಟು ಹೆಚ್ಚು ವಿದ್ಯುತ್ತನ್ನು ಬಳಸುತ್ತಾರೆ. ಸೂಪರ್ ಹೈವೇಗಳಲ್ಲಿ ನಮಗಿಂತ ಇಪ್ಪತ್ತು ಪಟ್ಟು ಹೆಚ್ಚು ವಾಹನಗಳನ್ನು ಓಡಿಸುತ್ತಾರೆ. ನಾವೂ ಆ ಮಟ್ಟಕ್ಕೆ ಪ್ರಗತಿ ಸಾಧಿಸಿಬಿಟ್ಟರೆ ತಮ್ಮ ಐಷಾರಾಮ ಬದುಕಿಗೆ ಧಕ್ಕೆ ಬಂದೀತೆಂದು ಅವರು ಹೀಗೆಲ್ಲ ಪ್ರಚಾರ ಮಾಡ್ತಾ ಇಲ್ಲವೇನ್ರೀ ಎಂದು ನೀವು ಪ್ರಶ್ನಿಸಬಹುದು.


ಹಾಗೊಮ್ಮೆ ನಾವೂ ಊಹಿಸೋಣ. ಬಿಸಿಪ್ರಳಯದ ಅಧ್ಯಯನ ಮಾಡಲೆಂದು ವಿಶ್ವಸಂಸ್ಥೆಯ ಆದೇಶದ ಮೇರೆಗೆ ಒಂದು ಸಮಿತಿ ರಚನೆಯಾಗಿತ್ತಲ್ಲ? ಬದಲಾಗುತ್ತಿರುವ ಹವಾಮಾನದ ಅಧ್ಯಯನಕ್ಕೆ ಅಂತರರಾಷ್ಟ್ರೀಯ ಸಮಿತಿಯಲ್ಲಿ 154 ದೇಶಗಳ ಐದುನೂರಕ್ಕೂ ಹೆಚ್ಚು ವಿಜ್ಞಾನಿಗಳಿದ್ದಾರೆ. ನಮ್ಮವರೇ ರಾಜೇಂದ್ರ ಪಚೌರಿ ಅದರ ಅಧ್ಯಕ್ಷರು. ಈಚೆಗೆ ಪ್ಯಾರಿಸ್ಸಿನಲ್ಲಿ ಈ ಸಮಿತಿ ತನ್ನ ವರದಿಯನ್ನು ಬಹಿರಂಗ ಮಾಡಿದೆ. ಅದರ ಪ್ರಕಾರ ಮನುಷ್ಯರ ಚಟುವಟಿಕೆಗಳಿಂದಾಗಿ ಕ್ರಿ.ಶ. 2100ರ ವೇಳೆಗೆ ಭೂಮಿಯ ಸರಾಸರಿ ತಾಪಮಾನ 13 ಡಿಗ್ರಿ ಸೆಲ್ಸಿಯಸ್‌ಷ್ಟು ಏರುವ ಸಾಧ್ಯತೆ ಇದೆ. ಕಳೆದ ಒಂದು ನೂರು ವರ್ಷಗಳಲ್ಲಿ ಇದು ಕೇವಲ 1.3 ಡಿಗ್ರಿ ಸೆ. ಏರಿದೆ. ಅಷ್ಟರಿಂದಲೇ ಅನೇಕ ವಿಧದ ಉತ್ಪಾತಗಳು ಸಂಭವಿಸಿವೆ. ಅನೇಕ ದೇಶಗಳಿಗೆ ಚುರುಕು ಮುಟ್ಟಿದೆ. ಇಡೀ ಭೂಮಿಯೇ ಏಕತ್ರವಾಗಿ ಕ್ರಮ ಕೈಗೊಳ್ಳಬೇಕಾದ ಸಂದರ್ಭ ಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಸಮುದ್ರ ಮಟ್ಟದಿಂದ ಒಂದು ಮೀಟರ್ ಎತ್ತರದವರೆಗೆ ಯಾರಿಗೂ ಮನೆ ಕಟ್ಟಲು ಬಿಡಬಾರದು; ಹತ್ತು ಕೋಟಿಗೂ ಹೆಚ್ಚು ಜನರು ಗುಳೆ ಹೊರಡಬೇಕಾಗಿ ಬರುವುದರಿಂದ 'ಪರಿಸರ ನಿರಾಶ್ರಿತರು' ಎಂಬ ಪದಕ್ಕೆ ಸರಿಯಾದ ಮಾನದಂಡ ನಿಗದಿ ಮಾಡಬೇಕು ಎಂದೂ ಶಿಫಾರಸು ಮಾಡಿದೆ. ಆದಷ್ಟು ಶೀಘ್ರವಾಗಿ ಪೆಟ್ರೋಲಿಯಂ ಉತ್ಪನ್ನಗಳ ಬದಲಿಯಾಗಿ ಜಲಜನಕ ಆಧರಿತ ಶಕ್ತಿಮೂಲಗಳನ್ನು ಬಳಕೆಗೆ ತರಬೇಕು; ಇಂಗಾಲದ ಡೈಆಕ್ಸೈಡ್ ಕಕ್ಕುವುದನ್ನು ಕ್ರಮೇಣ ಕಡಿಮೆ ಮಾಡುತ್ತ ಹೋಗಬೇಕು ಎಂದು ಅದು ಹೇಳಿದೆ. ಸಹಜವಾಗಿ ಪೆಟ್ರೋಲಿಯಂ ಉತ್ಪಾದಕರಿಗೆ ಈ ಸಂಗತಿ ಚುರುಕು ಮುಟ್ಟಿಸಿದೆ.

ಬಿಸಿಪ್ರಳಯ ಎಂಬುದು ಪಾಶ್ಚಾತ್ಯ ಹುನ್ನಾರವೇ ಇದ್ದೀತೆಂದೂ, ಇತರ ದೇಶಗಳ ವಿಜ್ಞಾನಿಗಳು ಸಂಗ್ರಹಿಸಿದ ಜ್ಞಾನ, ವಿಶ್ಲೇಷಣೆಗೆ ಬಳಸುವ ಚಿತ್ರಗಳು, ತಾಪಮಾನದ ಏರಿಕೆ ಅಳೆಯಲು ಬಳಸುವ ಉಪಕರಣ ಎಲ್ಲವೂ ಪಾಶ್ಚಾತ್ಯರದೇ ಇದ್ದೀತೆಂದೂ ಒಂದೊಮ್ಮೆ ಊಹಿಸೋಣ. ನಾವೂ ಅವರಷ್ಟೇ ಪ್ರಗತಿ ಸಾಧಿಸಬೇಕೆಂದು ಹೊರಟರೆ ನಮ್ಮ ಭೂಮಿಗೆ ಅಷ್ಟು ಧಾರಣ ಶಕ್ತಿ ಇದೆಯೆ? ಅಮೆರಿಕದಲ್ಲೇನೊ ಶೇಕಡಾ 99 ಜನರು ನಗರವಾಸಿಗಳಾಗಿದ್ದಾರೆ. ನಮ್ಮಲ್ಲಿ ಅದು ಸಾಧ್ಯವೆ? ಟಾಟಾ ಕಂಪನಿ ವರ್ಷಕ್ಕೆ ಲಕ್ಷ ಹೊಸ ಕಾರುಗಳನ್ನು ಉತ್ಪಾದಿಸುತ್ತ ಹೋದರೆ, ಅವೆಲ್ಲವೂ ನಮ್ಮ ನಗರಗಳಲ್ಲೇ ಗಿರಕಿ ಹೊಡೆಯುತ್ತಿದ್ದರೆ ನಗರವಾಸಿಗಳ ಬದುಕಿನ ಸ್ಥಿತಿ ಏನಾದೀತು? ಇನ್ನೂ ಹನ್ನೊಂದು ಅಲ್ಟ್ರಾ ಸೂಪರ್ ಥರ್ಮಲ್ ಶಕ್ತಿ ಸ್ಥಾವರಗಳನ್ನು ದೇಶದ ವಿವಿಧ



ರುತದಿಂದ ನಾಶವಾಗಿರುವ ಮನೆ

ಕಡೆ ಸ್ಥಾಪಿಸುವುದಾಗಿ ಕೇಂದ್ರ ಸರಕಾರ ಹೇಳಿದೆ. ಕಲ್ಲಿದ್ದಲು, ಪೆಟ್ರೋಲು ಉರಿಸಿ ಒಂದು ಯುನಿಟ್ ವಿದ್ಯುತ್ ಉತ್ಪಾದನೆ ಮಾಡುವಾಗ ಏಳು ಯುನಿಟ್‌ಗಳಷ್ಟು ಶಕ್ತಿ ಸೆಖೆಯ ರೂಪದಲ್ಲಿ ವಾತಾವರಣಕ್ಕೆ ಸೇರುತ್ತದೆ. ಒಂದೊಂದು ಶಕ್ತಿ ಸ್ಥಾವರದಿಂದಲೂ ಹೊಮ್ಮುವ ತಾಪಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯ ಮತ್ತು ಹಾರುಬೂದಿಯ ರೂಪದಲ್ಲಿ ನೆಲಮಾಲಿನ್ಯವನ್ನು ಲೆಕ್ಕ ಹಾಕಿದರೆ, ನಮ್ಮ



ನಗ್ನಗೊಳ್ಳುತ್ತಿರುವ ಕಿಲಿಮಂಜಾರೋ ಹಿಮಪರ್ವತಗಳು

ನಿಸರ್ಗದ ಧಾರಣ ಶಕ್ತಿ ಎಷ್ಟಿರಬೇಕು?

ಬಿಸಿ ಪ್ರಳಯದ ಕಲ್ಪನೆಯೇ ತಳಬುಡ ಇಲ್ಲದ್ದು ಎಂದು ವಾದಿಸುವವರು ಪಾಶ್ಚಾತ್ಯ ದೇಶಗಳಲ್ಲೂ ಇದ್ದಾರೆ. ಪೆಟ್ರೋಲಿಯಂ ಕಂಪನಿಗಳ ಪರವಾಗಿ ಸಂಶೋಧನೆ ಮಾಡುವ ಕೆಲವು ವಿಜ್ಞಾನಿಗಳು 'ತಾಪಮಾನದ ಈಗಿನ ಏರಿಕೆ ತಾತ್ಕಾಲಿಕ' ಎಂದು ವಾದಿಸುತ್ತಾರೆ. ಹಿಂದೆಯೂ ಪ್ರತಿ ಒಂದು ಲಕ್ಷ ವರ್ಷಗಳಿಗೊಮ್ಮೆ ಹೀಗೆ ಹಿಮ ಪರ್ವತಗಳು ತುಸು ಮಟ್ಟಿಗೆ ಕರಗಿ ಮತ್ತೆ ಭೂಮಿ ಸುಸ್ಥಿತಿಗೆ ಮರಳಿದೆ ಎನ್ನುತ್ತಾರೆ. ಇನ್ನು ಕೆಲವು ತಜ್ಞರ ಪ್ರಕಾರ ಗ್ರೀನ್ ಹೌಸ್ ಎಫೆಕ್ಟ್‌ಗೂ, ಪೆಟ್ರೋಲು/ಡೀಸೆಲ್ ಉರಿಸುವುದಕ್ಕೂ ಸಂಬಂಧವೇ ಇಲ್ಲ, ಸೂರ್ಯನ ಕಲೆಗಳು ಉಗ್ರವಾಗಿವೆ, ಆದ್ದರಿಂದ ಬಿಸಿಲಿನ ಚುರುಕು ಏರುತ್ತಿದೆ; ನಮ್ಮ ಭೂಮಿಯಲ್ಲಷ್ಟೇ ಅಲ್ಲ, ಮಂಗಳ ಲೋಕದಲ್ಲೂ ಸೆಖೆ ಏರುತ್ತಿದೆ ಎನ್ನುತ್ತಾರೆ.

ಬಿಸಿ ಪ್ರಳಯಕ್ಕೆ ಮನುಷ್ಯನೇ ಕಾರಣನಾಗಿರಲಿ ಅಥವಾ ಸೂರ್ಯನೇ ಕಾರಣನಾಗಿರಲಿ, ಅದನ್ನು ತಡೆಯಲು ನಾವು ಕೈಗೊಳ್ಳಬೇಕಾದ ಕ್ರಮಗಳು ಭೂಮಿಗೆ ಇನ್ನಷ್ಟು ಕೆಡುಕನ್ನಂತೂ ಉಂಟುಮಾಡುವುದಿಲ್ಲ, ತಜ್ಞರು ಶಿಫಾರಸು ಮಾಡುವ ಉಪಾಯಗಳೆಂದರೆ: ಇಂಗಾಲದ ಡೈಆಕ್ಸೈಡನ್ನು ಹೀರಿಕೊಳ್ಳಬಲ್ಲ ಹಸಿರು ವಲಯಗಳನ್ನು ವಿಸ್ತರಿಸಬೇಕು. ಅಂದರೆ ಅರಣ್ಯಗಳನ್ನು ಬೆಳೆಸಬೇಕು. ಶಕ್ತಿಯ ಅಂದಾದುಂದಿ ವೆಚ್ಚವನ್ನು ನಾವು ಕಡಿಮೆ ಮಾಡಬೇಕು. ಓಡಾಟಕ್ಕೆ ವ್ಯಕ್ತಿಗತ ವಾಹನಗಳ ಬದಲು ಸಮೂಹ ಸಂಚಾರ ಸಾಧನಗಳನ್ನೇ ಬಳಸಬೇಕು. ಭೂಮಿಯ ಒಡಲಿನಿಂದ ಹೊರತೆಗೆದ ಪೆಟ್ರೋಲು, ಕಲ್ಲಿದ್ದಲಿನ ಬದಲು, ಭೂಮಿಯ ಹೊರಗಡೆ ಇರುವ ನೀರು, ಗಾಳಿ, ಬಿಸಿಲು ಮತ್ತು ಸಾಗರದ ಅಲೆಯಂಥ ಶಕ್ತಿಮೂಲಗಳೇ ನಮ್ಮ ಚಟುವಟಿಕೆಗಳಿಗೆ ಆಧಾರವಾಗಬೇಕು.

ಭೂಮಿ ಬಿಸಿಯಾಗುತ್ತ ಹೋದರೆ ನೀರು, ಗಾಳಿ, ಬಿಸಿಲು ಈ ಮೂರು ಶಕ್ತಿಗಳೇ ಮನುಷ್ಯನನ್ನು ಮುಳುಗಿಸಬಹುದು. ಈ ಶಕ್ತಿಗಳನ್ನೇ ದುಡಿಸಿಕೊಂಡಲ್ಲಿ ಮನುಷ್ಯ ಉಳಿಯಬಹುದು. ಆತನಿಂದಾಗಿ ನಲುಗಿದ ಜೀವ ಸಂಕುಲವೂ ಉಳಿಯಬಹುದು.?

* ಲೇಖಕರು ಖ್ಯಾತ ಪರಿಸರವಾದಿ

ತಾರತಮ್ಯ ನ್ಯಾಯ


ತೀಸ್ತಾ ಸೆತಲ್ವಾಡ್



2006 ರ ಜುಲೈನಲ್ಲಿ ಮುಂಬೈ ರೈಲುಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟದ ಹಲವು ತಿಂಗಳುಗಳ ನಂತರ ಹಾಗೂ 1993 ರ ಮಾರ್ಚ್ 12 ರಂದು ಸರಣಿ ಬಾಂಬ್ ಸ್ಫೋಟಗಳು ಮುಂಬೈ (ಅಂದಿನ ಬಾಂಬೆ)ಯನ್ನು ನಡುಗಿಸಿದ ಹದಿಮೂರು ವರ್ಷಗಳ ನಂತರ ಅದಕ್ಕೆ ಸಂಬಂಧಿಸಿದ ತೀರ್ಪನ್ನು ಇದೇ ಮಾರ್ಚ್ ತಿಂಗಳಲ್ಲಿ ನೀಡಲಾಗಿದೆ. ಈಗ ಸುಮಾರು 100 ಕ್ಕೂ ಹೆಚ್ಚು ಆರೋಪಿಗಳು ಶಿಕ್ಷೆಗಾಗಿ ಕಾಯುತ್ತಿದ್ದಾರೆ. ಬಾಂಬ್‌ಗಳನ್ನು ಸ್ಫೋಟಿಸಿದ ದುಷ್ಕರ್ಮಿಗಳಿಗೆ ನೀಡಲಾದ ಶಿಕ್ಷೆಯು ಆ ಸರಣಿ ಬಾಂಬ್ ಸ್ಫೋಟಗಳಲ್ಲಿ ತಮ್ಮ ಆತ್ಮೀಯರನ್ನು ಕಳೆದುಕೊಂಡ 200 ಕುಟುಂಬಗಳಿಗೆ ನ್ಯಾಯವನ್ನು ದೊರಕಿಸುವ ಒಂದು ಅಗತ್ಯ ಕ್ರಮವಾದರೂ ಭಾರತದ ಕಾಸ್ಮೋಪಾಲಿಟನ್ ಮೆಕ್ಕಾವನ್ನು ಡಿಸೆಂಬರ್ (1992) ಮತ್ತು ಜನವರಿ (1993) ಗಳು ಹರಿದು ಛಿದ್ರಛಿದ್ರ ಮಾಡಿದ್ದರ ಹಿಂದಿದ್ದ ಸತ್ಯಾಸತ್ಯತೆಗಳೇನು ಎಂಬುದನ್ನು ಮುಂಬೈ ಮತ್ತು ಭಾರತ, ಎರಡೂ ಇವತ್ತು ನೆನಪಿಸಿಕೊಳ್ಳಬೇಕಾದ್ದು ಅವಶ್ಯಕವಾಗಿದೆ.

1992 ರ ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ರಾಷ್ಟ್ರೀಯ ಭಯೋತ್ಪಾದನೆಯ ಪ್ರಧಾನ ದುಷ್ಕೃತ್ಯವೊಂದು ಸಂಪೂರ್ಣ ಸಾರ್ವಜನಿಕರ ಎದುರಿನಲ್ಲೇ ನಡೆಯಿತು. ಚಾರಿತ್ರಿಕವಾದ ಒಂದು ಮಸೀದಿಯನ್ನು ರಕ್ಕಸಾಚರಣೆಯೊಂದಿಗೆ ನೆಲಸಮ ಮಾಡಲಾಯಿತು. ಆ ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಈ ವಿಧ್ವಂಸಕ ಕೃತ್ಯದ ವಿಜಯೋತ್ಸವಕ್ಕಾಗಿ ಮೊದಲ ಮೆರವಣಿಗೆಯನ್ನು ಮುಂಬೈನ ಧಾರಾವಿ ಪ್ರದೇಶದಲ್ಲಿ ನಡೆಸಲು ಅವಕಾಶ ನೀಡಲಾಯಿತಲ್ಲದೆ, ಅದನ್ನು ಯಶಸ್ವಿಯಾಗಿಯೂ ನಡೆಸಲಾಯಿತು. ಆ ಮೆರವಣಿಗೆಯ ಸಮಯದಲ್ಲಿ ವಿಜಯೋತ್ಸವದ ಘೋಷಣೆಗಳನ್ನು (ಇವುಗಳಲ್ಲಿ ಸಾಮಾನ್ಯವಾಗಿ ಇಡೀ ಮುಸ್ಲಿಂ ಸಮುದಾಯಕ್ಕೆ ಕಪ್ಪು ಮಸಿ ಬಳಿಯುವ ಘೋಷಣೆಗಳು ಸೇರಿಕೊಂಡಿದ್ದವು) ಕೂಗಲಾಯಿತು. ಅಯೋಧ್ಯೆಯಲ್ಲಿ ನಡೆಸಿದ್ದ ಆಕ್ರಮಣವನ್ನು ಸಂಭ್ರಮಿಸುವುದಕ್ಕಾಗಿ ಆ ಭಾನುವಾರದ ಸಂಜೆಯವರೆಗೂ ಅಂತಹುದೇ 'ರಾಮ ಪದುಕಗಳ' ಮೆರವಣಿಗೆಗಳನ್ನು ಮಹಾನಗರದ ಪೈಧೋನಿ ಮತ್ತಿತರ ಭಾಗಗಳಲ್ಲಿ ನಡೆಸಲಾಯಿತು.

(ಉಲ್ಲೇಖ: 1992-93 ರ ಮುಂಬೈ ಗಲಭೆಗಳು ಮತ್ತು 1993 ರ ಸರಣಿ ಬಾಂಬ್ ಸ್ಫೋಟ ಕುರಿತಾದ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಆಯೋಗದ ವಿಚಾರಣಾ ವರದಿ.)



1992, ಡಿಸೆಂಬರ್ 7 ರಿಂದ, ಜಾತ್ಯತೀತ ಭಾರತ ಪ್ರಭುತ್ವದ ಅನಾದರಕ್ಕೊಳಗಾಗಿ ತೀವ್ರವಾಗಿ ಕುಪಿತಗೊಂಡ ಕೆಲವು ಮುಸ್ಲಿಂ ಗುಂಪುಗಳು ಪ್ರತಿಭಟನೆ ಗಿಳಿದವಲ್ಲದೆ ಸಾರ್ವಜನಿಕ ಆಸ್ತಿಯನ್ನು ನಾಶಗೊಳಿಸಿದ ಕೆಲವು ಘಟನೆಗಳೂ ನಡೆದವು. ಆದರೆ, ಬಹುತೇಕ ಮಾಧ್ಯಮಗಳು ಮಾತ್ರ ಕುಪಿತ ಮುಸ್ಲಿಮರನ್ನೇ ಮೊದಲು ಕಲ್ಪಿಸಿದ ಆಪಾದನೆಗೆ ಗುರಿ ಮಾಡಿದವೇ ಹೊರತು ಡಿಸೆಂಬರ್ 6 ಮತ್ತು ತದನಂತರದ ವಿಜಯೋತ್ಸವಗಳ ಮೂಲಕ ನಡೆಸಲಾದ ಉದ್ರೇಕಗಳನ್ನು ಗಣನೆಗೂ ತೆಗೆದುಕೊಳ್ಳದೇ ನಿರ್ಲಕ್ಷಿಸಿದವು.

ಮಾನವಹಕ್ಕು ಸಂಘಟನೆಗಳು ನಡೆಸಿದ ಸವಿಸ್ತಾರದ ತನಿಖೆಗಳು ಹಾಗೂ ಅಂತಿಮವಾಗಿ ಅಧಿಕೃತ ಶ್ರೀಕೃಷ್ಣ ಆಯೋಗವು ಹೊರತಂದ ವರದಿಗಳು ಪೊಲೀಸ್ ಹಾಗೂ ರಾಜಕೀಯ ಪ್ರಭಾವವಿರುವ ವ್ಯಕ್ತಿಗಳನ್ನೇ ದೂಷಿಸಿದವು. ಹಾಗಾಗಿ, ಬಾಂಬ್ ಸ್ಫೋಟದ ಕೇಸಿನಲ್ಲಿ ಇತ್ತೀಚೆಗೆ ನೀಡಲಾದ ಶಿಕ್ಷೆಗಳು ಭಾರತದ ವ್ಯವಸ್ಥೆಯು ಅಪರಾಧದ ವಿರುದ್ಧ ಅದರಲ್ಲೂ ವಿಶೇಷವಾಗಿ ನಿಷ್ಕರುಣ ಗುಂಪು ಅಪರಾಧಿಗಳ ವಿರುದ್ಧ ಎಲ್ಲರಿಗೂ ನ್ಯಾಯ ಒದಗಿಸುತ್ತದೆಂಬ ಸಂದೇಶವನ್ನೇನೋ ರವಾನಿಸುತ್ತದೆಯಾದರೂ, ಕಣ್ಣಿಗೆ ಕುಕ್ಕುವಂತಹ ಕೊರತೆಯೊಂದು ಹಾಗೆಯೇ ಉಳಿದುಕೊಳ್ಳುತ್ತದೆ: ಡಿಸೆಂಬರ್ 1992 ಮತ್ತು ಜನವರಿ 1993 ರ ಗುಂಪು ಹಿಂಸಾಚಾರದಲ್ಲಿ ನಿಷ್ಪಕ್ಷವಾಗಿ ಗುರುತಿಸಬಹುದಾದ ಅಪರಾಧಿಗಳು ಶಿಕ್ಷೆಗೊಳಗಾಗದೇ ಹೇಗೆ ಬಚಾವಾಗುಳಿದರು?


ಈ ಹಿಂಸಾಚಾರದ ಬಗ್ಗೆ ಅಧಿಕೃತ ತನಿಖೆಯನ್ನು ಕೈಗೊಂಡ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಹೇಳುವುದೇನೆಂದರೆ: "ಗಲಭೆಗಳಿಗೂ ಮತ್ತು 1993, ಮಾರ್ಚ್ 12 ರ ಬಾಂಬ್ ಸ್ಫೋಟಗಳಿಗೂ ಇರುವ ಒಂದು ಸಾಮಾನ್ಯ ಕೊಂಡಿ ಎಂದರೆ ಮೊದಲನೆಯದು ಎರಡನೆಯದರ ಕಾರಣಕಾರಿ ಅಂಶವೆಂಬಂತೆ ತೋರುತ್ತದೆ... ಸರಣಿ ಬಾಂಬ್ ಸ್ಫೋಟಗಳು ಅಯೋಧ್ಯ ಮತ್ತು ಬಾಂಬೆಗಳಲ್ಲಿ ಕ್ರಮವಾಗಿ ಡಿಸೆಂಬರ್ 1992 ಮತ್ತು ಜನವರಿ 1993 ರಲ್ಲಿ ನಡೆದ ಒಟ್ಟಾರೆ ಘಟನಾವಳಿಗಳಿಗೆ ಪ್ರತಿಕ್ರಿಯೆಗಳಾಗಿದ್ದವು." ಶ್ರೀಕೃಷ್ಣ ಆಯೋಗವು ತೀರ್ಮಾನಕ್ಕೆ ಬಂದಿದ್ದೇನೆಂದರೆ: "ಸರ್ಕಾರ ಮತ್ತು ಪೊಲೀಸರ ವಿರುದ್ಧ ಬಹುತೇಕ ಮುಸ್ಲಿಂ ಯುವಕರಿಗಿದ್ದ ಕೋಪೋದ್ರೇಕವನ್ನು ಪಾಕಿಸ್ತಾನ ಬೆಂಬಲಿತ ರಾಷ್ಟ್ರ ವಿರೋಧಿ ಶಕ್ತಿಗಳು ಬಳಸಿಕೊಂಡಿವೆ. ಪ್ರತೀಕಾರ ತೆಗೆದುಕೊಳ್ಳುವಂತೆ ಅವರನ್ನು ಬ್ರೇನ್‌ವಾಷ್ ಮಾಡಿ, ಸಂಚನ್ನು ಹೆಣೆದು ದಾವೂದ್ ಇಬ್ರಾಹಿಂನ ಸೂಚನೆಯ ಮೇರೆಗೆ ಅತೀ ಪ್ರಮುಖ ಪ್ರತಿಷ್ಠಾಪನೆಗಳ ಮತ್ತು ಹಿಂದೂ ಪ್ರದೇಶಗಳ ಬಳಿ ಹೇಗೆ ಬಾಂಬುಗಳನ್ನು ಸಿಡಿಸಬೇಕೆಂಬ ತರಬೇತಿಯನ್ನು ಮುಸ್ಲೀಮರಿಗೆ ನೀಡಿ ಆ ಸಂಚನ್ನು ಜಾರಿ ಮಾಡಿ ಹೊಸ ಸುತ್ತಿನ ಗಲಭೆಗಳನ್ನು ಸೃಷ್ಟಿಸಲಾಯಿತು. ಇಬ್ಬರು-ಮೂವರನ್ನು ಹೊರತುಪಡಿಸಿ ಉಳಿದೆಲ್ಲಾ ಆರೋಪಿಗಳು ಮುಸ್ಲಿಮರು ಎಂಬುದರಲ್ಲಿ ಹಾಗೂ ಭಾರತ-ವಿದೇಶಗಳೆರಡರಲ್ಲಿಯೂ ಈ ಸಂಚಿನಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದವರು ಮುಸ್ಲಿಮರೇ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ" ಎಂದು ವರದಿ ಹೇಳುತ್ತದೆ.

ಬಾಂಬ್ ಸ್ಫೋಟದ ಮೊಕದ್ದಮೆಯಲ್ಲಿನ 45 ಕ್ಕೂ ಹೆಚ್ಚು ಆರೋಪಿಗಳು ಎಲ್ಲಾ ನಾಗರಿಕರಿಗೂ ಮತ್ತು ಮುಂಬೈನಾದ್ಯಂತ ಇರುವ ಎಲ್ಲಾ ನ್ಯಾಯಶಾಸ್ತ್ರಜ್ಞರಿಗೂ ಪತ್ರವೊಂದನ್ನು ಬರೆದಿದ್ದಾರೆ. ಈ ಪತ್ರವು ಕೆಲವು ಸರಳ ಹಮಾಲಿಗಳು (ಅಪರಾಧದಲ್ಲಿ ಇವರ ಭಾಗವಹಿಸುವಿಕೆ ಎಂದರೆ ಅಪರಾಧದಲ್ಲಿ ಬಳಸಲಾದ ವಸ್ತುಗಳನ್ನು ಒಳಗೊಂಡ ಪಾರ್ಸಲ್‌ಗಳನ್ನು ಅವುಗಳಲ್ಲಿ ಏನಿದೆ ಎಂಬ ಅರಿವಿಲ್ಲದಂತೆ ಸಾಗಿಸಿದ್ದಷ್ಟೆ) ಮತ್ತು ಅಪರಾಧದ ಬಗ್ಗೆ ಯಾವುದೇ ಸುಳಿವು ಗೊತ್ತಿರದ ಕೆಲವು ಮಹಿಳೆಯರು ಮಾಡಿದ ಒಂದು ಗಾಢ ಮನವಿಯಾಗಿದೆ. ತಮ್ಮ ಅಪರಾಧದ ಬಗ್ಗೆ ವಿಚಾರಣೆಗೆ ಮುನ್ನವೇ ತಮ್ಮ ಬಗ್ಗೆ ನಿರ್ಧಾರ ಮಾಡಿದ ವ್ಯವಸ್ಥೆಗೆ ತಾವು ಬಲಿಪಶುಗಳಾಗಿದ್ದೇವೆಂದೂ, 14 ವರ್ಷಗಳ ಸುದೀರ್ಘ ವಿಚಾರಣೆಯೂ ಕೂಡ ಶಿಕ್ಷೆ ವಿಧಿಸುವ ಮುನ್ನವೇ ನೀಡಿದ ಶಿಕ್ಷೆಯಾಗಿದೆ ಎಂದೂ ಆ ಪತ್ರದಲ್ಲಿ ಅವರು ವಾದಿಸಿದ್ದಾರೆ. ಅವರಿಗೆ ತಮ್ಮ ಕುಟುಂಬದವರೊಂದಿಗೆ ಯಾವುದೇ ಸಂಪರ್ಕವಿರಿಸಿಕೊಳ್ಳುವುದನ್ನೂ ನಿರಾಕರಿಸಲಾಗಿತ್ತು. ನಟ ಸಂಜಯ್‌ದತ್, ತಾನು ನಿಷಿದ್ಧ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡಿದ್ದು ಕೇವಲ ಆತ್ಮರಕ್ಷಣೆಗಾಗಿ ಎಂದು ತಪ್ಪೊಪ್ಪಿಕೊಂಡಿದ್ದಕ್ಕೇ ಆತನನ್ನು ಟಾಡಾ ಆರೋಪದಿಂದ ಮುಕ್ತಗೊಳಿಸಿತ್ತು ವ್ಯವಸ್ಥೆ. ಆದರೆ ಆತನಿಗಿಂತ ಎಷ್ಟೋ ಪಾಲು ಸಣ್ಣ ದುಷ್ಪ್ರೇರಣೆ ಮಾಡಿದ 91 ಆರೋಪಿಗಳಿಗೆ ಮಾತ್ರ ದತ್ ಗೆ ತೋರಿಸಿದ್ದಷ್ಟು ಸಮಾನ ಉದಾರ ಮನೋಭಾವ ತೋರಿಸದಿದ್ದಷ್ಟು ಯಾವ ನ್ಯಾಯ?

ಪ್ರಾಸಂಗಿಕವಾಗಿ, ಟಾಡಾ ನ್ಯಾಯಾಲಯವು ತನ್ನ ವಿಚಾರಣೆಯ 14 ನೇ ವರ್ಷದ ಉತ್ತರಾರ್ಧದಲ್ಲಿ ಅಪರಾಧ ಮತ್ತು ಅಮಾಯಕತೆಯ ಬಗ್ಗೆ ತನ್ನ ತೀರ್ಪನ್ನು ಉಚ್ಚರಿಸಲು ಪ್ರಾರಂಭಿಸಿದಾಗ ಸುಮಾರು 96 ಆರೋಪಿಗಳು ಜಾಮೀನಿನ ಮೇಲಿದ್ದರು. ಟಾಡಾ ನ್ಯಾಯಾಲಯವು ಅವರನ್ನು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಕರೆದಾಗ ಅವರೆಲ್ಲರೂ ಮರುಕ್ಷಣದಲ್ಲಿಯೇ ಶರಣಾಗತರಾದರು. ಇದು ಅಪರಾಧಿಗಳ ವರ್ತನೆಯಲ್ಲ.

ಈ ತೀರ್ಪು ಹೊರಬರುವುದರೊಂದಿಗೆ 1993, ಮಾರ್ಚ್ 12 ರಂದು ನಡೆದ ಬಾಂಬ್ ಭಯೋತ್ಪಾದನೆ ಸಾರ್ವಜನಿಕರಿಗೆ ಮತ್ತೊಮ್ಮೆ ನೆನಪಿಸಿದೆ. ಆದರೆ 1992 ರ ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆದ ಗುಂಪು ಭಯೋತ್ಪಾದನೆಯನ್ನು ಮತ್ತೆ ಸಾರ್ವಜನಿಕರಿಗೆ ನೆನಪಿಸಿ ಅದು ಯಾಕಾಗಿ ನಡೆಯಿತೆಂಬುದನ್ನು ಮತ್ತೆ ಹೇಳಿ ಖಂಡಿಸುವ ಅಗತ್ಯವಿದೆ. ಒಂದು ಸಮೂಹ ಭಯೋತ್ಪಾದನೆಯೇ ಆದ, ಬಾಬರೀ ಮಸೀದಿಯ ಧ್ವಂಸಕ್ಕೆ ದುಷ್ಪ್ರೇರಣೆ ನೀಡಿದ ಯಾವೊಬ್ಬ ಅಪರಾಧಿಗೂ ಈವರೆಗೆ ಶಿಕ್ಷೆಯಾಗಿಲ್ಲ, ಅಷ್ಟೇ ಅಲ್ಲ, ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೇಶದಾದ್ಯಂತ ಆದ ಆಸ್ತಿಪಾಸ್ತಿ ನಾಶ ಮಾಡಿ ಜೀವಹಾನಿ ಮಾಡಿದ ಯಾರಿಗೂ ಇವತ್ತಿಗೂ ಶಿಕ್ಷೆಯಾಗಿಲ್ಲ.


1992, ಡಿಸೆಂಬರ್ 6 ಭಾರತದ ಆತ್ಮಕ್ಕೆ ಬರೆ ಇಟ್ಟಿದ್ದರೆ (ಆಗ 'ಇಂಡಿಯಾ ಟುಡೆ' ಯ ಸಂಪಾದಕೀಯ ಬರೆದಂತೆ) 1992 ರ ಡಿಸೆಂಬರ್ 8 ರಿಂದ 1993 ರ ಜನವರಿ 20 ರ ತನಕ ನಮ್ಮನ್ನು ಬಲಾತ್ಕಾರವಾಗಿ ಬಂಧಿಸಿಟ್ಟ ಕ್ರೂರ ಸಮೂಹ ಹಿಂಸಾಚಾರವು ಬಾಂಬೆಯ ಆತ್ಮವನ್ನೇ ಶಾಶ್ವತವಾಗಿ ಭೀತಿಗೆ ಒಳಪಡಿಸಿದೆ. ಅಂದು ಜರ್ಮನಿಯ ನಾಜಿಗಳಿಗೆ ಹೋಲಿಸತಕ್ಕಂತಹ ಗುಂಪುಗಳು ರಸ್ತೆರಸ್ತೆಗಳಲ್ಲಿ ಆರ್ಭಟಿಸಿದ್ದವು (ನ್ಯಾಯಶಾಸ್ತ್ರಜ್ಞ ಪಿ.ಎ. ಪಾಲ್ಕಿವಾಲ ಮತ್ತು ಬಾಂಬೆ ಹೈಕೋರ್ಟಿನ ನ್ಯಾಯಮೂರ್ತಿ ಭಕ್ತವಾರ್ ಲೆಂಟಿನ್ ಹೇಳಿದಂತೆ). ಆ ಗಲಭೆಕೋರ ಗುಂಪುಗಳು ಲೂಟಿಯಲ್ಲಿ, ಕೊಲೆ, ಸುಲಿಗೆಗಳಲ್ಲಿ, ಅಷ್ಟೆ ಏಕೆ ಅತ್ಯಾಚಾರಗಳಲ್ಲಿ ತೊಡಗಿದ್ದರೆ, ಬಾಂಬೆ ಪೊಲೀಸರು ಕಂಡೂಕಾಣದಂತೆ ಕಣ್ಮುಚ್ಚಿಕೊಂಡಿದ್ದರು. ಅದಕ್ಕಿಂತಲೂ ಕೆಟ್ಟದ್ದೆಂದರೆ, ಬಾಂಬೆ ಹೊತ್ತಿ ಉರಿಯುತ್ತಿದ್ದರೆ, ರಾಜಕೀಯ ನಾಯಕತ್ವ ಅದನ್ನು ನೋಡುತ್ತಾ ನಿಂತಿತ್ತು.



'ನ್ಯಾಯ ಎಲ್ಲರಿಗೂ ಸಿಗಲಿ, ಅನ್ಯಾಯ ಯಾರಿಗೂ ಆಗದಿರಲಿ' ಎಂಬ ಸೂತ್ರದ ಮೇಲೆಯೇ ಸ್ವತಂತ್ರ ಭಾರತವನ್ನು ಕಲ್ಪಿಸಿ ಕಟ್ಟಲಾಗಿದೆ. ಬಾಂಬ್ ಭಯೋತ್ಪಾದನೆಯ ನೈಜ ಅಪರಾಧಿಗಳನ್ನು ಶಿಕ್ಷಿಸಿದಷ್ಟೇ ದೃಢ ನಿರ್ಧಾರದಿಂದ 1992 ಮತ್ತು 1993 ರಲ್ಲಿ ಗುಂಪು ಭಯೋತ್ಪಾದನೆ ನಡೆಸಿದ ಜನರಿಗೂ ಶಿಕ್ಷೆ ಆಗಬೇಕಿದೆ. ಇಲ್ಲವಾದರೆ ಭಾರತ ಗಣರಾಜ್ಯವು ತಾರತಮ್ಯ ನ್ಯಾಯದ ಸಮಾಧಿಗಳ ಮೇಲೆ [illegible] ನಡೆಯುತ್ತಿರುತ್ತದೆ.

* ಲೇಖಕರು [illegible] ಸಹ ಸಂಪಾದಕರಾಗಿದ್ದಾರೆ

ನೀಲು ಕಾವ್ಯ: ವಿಭಿನ್ನ ಮುಖಗಳು





ಕಿ.ರಂ. ನಾಗರಾಜ

ಪ್ರೀತಿಯ ಲಂಕೇಶರು ಎಂಬತ್ತರ ದಶಕದಿಂದ ಪತ್ರಿಕೆಯ ಕೊನೆಯವರೆಗೆ ಬರೆಯುತ್ತಲೇ ಇದ್ದ 'ನೀಲು' ರಚನೆಗಳನ್ನು ಒಟ್ಟುಗೂಡಿಸಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ, ಭಿನ್ನವಾದ ಹೊಣೆಗಾರಿಕೆ. ಲಂಕೇಶರೇ ತಮ್ಮ ಜೀವಿತಾವಧಿಯಲ್ಲಿ ಇದನ್ನು ಪ್ರಕಟಿಸಲು ಮುಂದಾಗಿದ್ದರೆ ಯಾವ ಸ್ವರೂಪವನ್ನು ಪಡೆಯುತ್ತಿತ್ತೋ ಗೊತ್ತಿಲ್ಲ. ಈ ರಚನೆಗಳನ್ನು ಹೇಗೆ ಪ್ರೊಜೆಕ್ಟ್ ಮಾಡಬಹುದು ಎಂಬ ಮಾತು ಬಂದಾಗ ಅವರು ಬೇರೆ ಬೇರೆ ಕಲ್ಪನೆಗಳನ್ನು ಇಟ್ಟುಕೊಂಡಂತೆ ಅವರ ಮಾತುಗಳು ಇರುತ್ತಿದ್ದವು. ಈಗ ಗೌರಿ ಲಂಕೇಶ್ ನೀಲು ರಚನೆಗಳನ್ನು ಮೇಷ್ಟ್ರು ಬರೆದ ಕಾಲಕ್ರಮದಲ್ಲಿಯೇ ಪ್ರಕಟಿಸುತ್ತಿದ್ದಾರೆ. ಆ ಹೊತ್ತು ಓದಿ ಅಭ್ಯಾಸಮಾಡುತ್ತಿದ್ದವರಿಗೆ ಈ ಸಂಗ್ರಹ ಪ್ರಿಯವಾಗುತ್ತದೆ ಎಂಬ ಭರವಸೆ ನನಗಿದೆ. ಹಾಗೆಯೇ ಅನಂತರದ ಪೀಳಿಗೆಯ ಓದುಗರಿಗೂ ಈ ರಚನೆಗಳು ಹೊಸತನವನ್ನು, ಬೆರಗನ್ನು ಉಂಟುಮಾಡುತ್ತವೆಂದು ನಾನು ನಂಬುತ್ತೇನೆ.

ಲಂಕೇಶರು ತಮ್ಮ ತಾರುಣ್ಯದಲ್ಲಿ ಕವಿತೆ ಹಾಗೂ ವಿಮರ್ಶೆಯ ಮೂಲಕ ಸಾಹಿತ್ಯದಲ್ಲಿ ತೊಡಗಿದವರು. ಆನರ್ಸ್ ಓದುತ್ತಿದ್ದಾಗಲೇ 'ಇಂಚರ ಮತ್ತು ಇತರ ಕವನಗಳು' ಎಂಬ ಪುಟ್ಟ ಸಂಕಲನವನ್ನು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ ಪ್ರಕಟಿಸಿತು. ಇದಕ್ಕೆ ಗುರು ಜೆ.ಪಿ. ರಾಜರತ್ನಂ ಪ್ರೇರಣೆ. ಆ ಕಾಲಕ್ಕೆ ಬೇಂದ್ರೆಯವರ ಕಾವ್ಯವನ್ನು ಕುರಿತು 'ದುಃಖಕಸ್ತೂರಿ' ಎಂಬ ಪರಿಣಾಮಕಾರಿ ಲೇಖನವನ್ನೂ ಬರೆದರು. ಅನಂತರ 'ಬಿಚ್ಚು' ಕವನ ಸಂಕಲನ, ಅನಂತರದಲ್ಲಿ ಆಗಿಂದಾಗ್ಗೆ ಬರೆದ ಅನೇಕ ಕವನಗಳು, ಅನುವಾದ-ಪ್ರೇರಣೆಯ ಕವನಗಳು ಒಂದುಗೂಡಿ 'ಚಿತ್ರ ಸಮೂಹ' ಸಂಕಲನ ಹೊರಬಂದಿತು. ಈ ಸಂಕಲನದಲ್ಲಿ ಅನೇಕ ನೀಲು ರಚನೆಗಳು ಸೇರಿವೆ. ಲಂಕೇಶರು ಕತೆ, ನಾಟಕ, ಕಾದಂಬರಿ, ಸಿನಿಮಾ, ಪತ್ರಿಕೆ ಈ ಕ್ಷೇತ್ರಗಳಲ್ಲಿ ತೊಡಗಿಕೊಂಡರೂ ಕವಿತೆ ಅವರ ವ್ಯಕ್ತಿ ಚೈತನ್ಯದ ಅಂಗವಾಗಿ ಹರಿಯುತ್ತಿರುವುದನ್ನು ಓದುಗರು ಅನುಭವಿಸಿ ತಿಳಿಯುತ್ತಾರೆಂದೇ ನನ್ನ ಅನಿಸಿಕೆ.

ಈ ತನಕ ನೀಲು ರಚನೆಗಳೆಂದು ಹೇಳಿಕೊಂಡು ಬಂದಿದ್ದೇನೆ. ಈ ರಚನೆಗಳು ಲಂಕೇಶರ ಕವಿಮನಸ್ಸು ನಿರಂತರವಾಗಿ ನಿರ್ಮಿಸುತ್ತ ಬಂದ ಸಮಗ್ರಾರ್ಥ ರೂಪದ ಕಾವ್ಯ ಎಂದೇ ನನ್ನ ಗಾಢವಾದ ಗ್ರಹಿಕೆಯಾಗಿದೆ. ಹೀಗಾಗಿ ಲಂಕೇಶರ ಪ್ರತಿಭೆಯ ಎಲ್ಲಾ ಸೂಕ್ಷ್ಮತೆ, ಸುತ್ತಣ ವಿದ್ಯಮಾನಗಳನ್ನು, ಮನುಷ್ಯ ವ್ಯಾಪಾರಗಳನ್ನು ಪರಿಶೀಲಿಸಿ ಅದಕ್ಕೆ ಮಾತು ಕೊಡುವ ಕೌಶಲ್ಯ ಈ ಕಾವ್ಯದಲ್ಲಿದೆ.

ನೀಲು ಕಾವ್ಯದ ವಿಸ್ತಾರ ತುಂಬ ಆಶ್ಚರ್ಯಕರವಾದದ್ದು. ಸ್ಥೂಲವಾದ ಎಣಿಕೆಯ ಪ್ರಕಾರ ಸುಮಾರು ಹದಿನೆಂಟು ಸಾವಿರ ಸಾಲುಗಳ ಬರಹವಾಗುತ್ತದೆ. ವಾರಕ್ಕೆ ಸರಾಸರಿ ಇಪ್ಪತ್ತು ಸಾಲುಗಳಂತೆ ಇಪ್ಪತ್ತು ವರ್ಷಗಳ ತುಂಬ ಹಬ್ಬಿಕೊಂಡದ್ದು. ಈ ಕಾಲಮಾನದಲ್ಲಿ ನಮ್ಮ ಆಸುಪಾಸಿನಲ್ಲಿ ಇಷ್ಟು ವ್ಯಾಪಕವಾದ ಕಾವ್ಯ ರಚನೆಯಾದದ್ದು ಅಪರೂಪ.



ಬರವಣಿಗೆಯನ್ನು ಗಂಭೀರವಾಗಿ ಪ್ರೀತಿಸಿದ ಲೇಖಕ ಅದರ ಮೇಲೆ ತನ್ನದೇ ಆದ ಹತೋಟಿಯನ್ನು ಸ್ಥಾಪಿಸಿಕೊಳ್ಳುತ್ತಾನೆ. ತಾನು ಬರೆಯುತ್ತಿರುವುದರ ಆಶಯ, ಹೇಳಲೇಬೇಕಾದ ಕಾಲದ ಒತ್ತಡ, ತನ್ನ ಸಾಮರ್ಥ್ಯದ ಸಾಧ್ಯತೆ ಹಾಗೂ ಅದರ ಮಿತಿಗಳನ್ನು ಬಲ್ಲವನಾಗಿರುತ್ತಾನೆ. ಈ ನೆಲೆಯನ್ನು ಲಂಕೇಶ್-ಕಾವ್ಯ ಕತೆ, ನಾಟಕ, ವಿಮರ್ಶೆ, ಪತ್ರಿಕೆಯ ವಿಸ್ತಾರ ಹರವಿನ ಬರಹಗಳಲ್ಲಿ ವಿಶೇಷವಾಗಿ ಗುರುತಿಸಬಹುದಾಗಿದೆ. ಕಾವ್ಯದ ಬಗೆಗೆ ಅವರದೇ ಆದ ನಿಲುವುಗಳು, ಅದರ ತಾಜಾತನ, ಗಾಂಭೀರ್ಯದ ದೃಷ್ಟಿ-ಧೋರಣೆಗಳನ್ನು ಅಕ್ಷರ ಹೊಸ ಕಾವ್ಯದ ಸಂಪಾದನೆಯಲ್ಲಿಯೂ ಕಾಣುತ್ತೇವೆ.


ನೀಲು ಕಾವ್ಯವನ್ನು ಬಿಡಿಯಾಗಿ ಓದಬಹುದು, ಒಂದಕ್ಕೆ ಒಂದನ್ನು ಸಂಬಂಧಕ್ಕೆ ತಂದುಕೊಂಡು ಓದಬಹುದು. ಪ್ರತಿ ಓದುಗರೂ ತಮ್ಮ ತಮ್ಮ ರೀತಿಯಲ್ಲಿ ವರ್ಗೀಕರಿಸಿಕೊಂಡು ಓದಬಹುದು. ಕೊನೆಗೆ ತಮ್ಮ ತಮ್ಮ ಇಚ್ಛೆ, ಆಸಕ್ತಿಗೆ ಅನುಗುಣವಾಗಿ ಈ ಕಾವ್ಯದೊಂದಿಗೆ ತಮ್ಮದೇ ಆದ ಸಂಬಂಧವನ್ನು ಸ್ಥಾಪಿಸಿಕೊಳ್ಳಬಹುದು. ನೀಲು ಕಾವ್ಯ ಕಳೆದ ಇಪ್ಪತ್ತು ವರ್ಷಗಳಲ್ಲಿ ಕವಿತೆಯನ್ನು ಓದುವ ಹೊಸ ಪೀಳಿಗೆಯನ್ನೇ ಸೃಷ್ಟಿಸಿರುವುದನ್ನು ನಾನು ಗಮನಿಸಿದ್ದೇನೆ. ಕವಿತೆಯೆಂದರೆ ಬಹಳ ಪ್ರಯತ್ನದಿಂದ, ಯಾರಾದರೂ ಅದನ್ನು ತಿಳಿದವರಿಂದ ವಿವರಿಸಿಕೊಂಡು ಅನುಭವಿಸಬೇಕೆಂಬ ಅಪಕಲ್ಪನೆಯನ್ನು ದೂರಮಾಡಿರುವ ಯಶಸ್ಸು ನೀಲು ಕಾವ್ಯಕ್ಕಿದೆ. ನೀಲು ಕಾವ್ಯವನ್ನು ಓದಿ ಪದ್ಯ ಹೊಸೆದ, ಹೊಸೆಯುತ್ತಿರುವವರ ಸಂಖ್ಯೆಯೂ ಅಪಾರ. ಈ ಹೊತ್ತಿನ ಹುಡುಗರ, ಹುಡುಗಿಯರ ರಚನೆಯ ವಲಯವನ್ನು ಸಮರ್ಥಿಸುವ, ಪ್ರಶ್ನಿಸುವ ಒಂದು [illegible] ಗಂಭೀರವಾದುದಾಗಿದೆ. ಯಾವ [illegible]ಗಲಿ

ಪನ್ ಮಾಡುವ, ಒತ್ತಾಯಪೂರ್ವಕವಾಗಿ ಪನ್ ಮಾಡುವ, ಆಶ್ಚರ್ಯ ಮೂಡಿಸುವ ಜಡ್ಡುಗಟ್ಟಿದ ಪ್ರಾಸ-ಅಂಥ ಸರ್ಕಸ್ಸನ್ನು ಬಿಡಿಸಿ ವಿವರಿಸುವ ರಚನೆಗಳು ನಾಡಿನ ತುಂಬ ವ್ಯಾಪಿಸಿವೆ. ಇದಕ್ಕೆ ನನ್ನ ವಿರೋಧವೇನೂ ಇಲ್ಲ, ಎಲ್ಲಾ ಕಾಲದಲ್ಲೂ ಇಂಥ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ.

ನೀಲು ಕವಿತೆಗಳ ಜೀವಗುಣ ಇರುವುದು- ಈ ಕವಿತೆಗಳು ಯಾವ ಒತ್ತಾಯವೂ ಇಲ್ಲದೆ ತನಗೆ ತಾನೇ ಓದುಗರೊಂದಿಗೆ ಸಹಜ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದರಲ್ಲಿ ಇದೆ. ಈ ಸಾಲುಗಳನ್ನು ನೋಡಿ:

ಹುಟ್ಟು ಹಠವಾದಿಯೊಬ್ಬ
ಕವಿಯಾಗಲು ಪಣತೊಟ್ಟು
ನಿತ್ಯ ಪದಭೇದಿಯಲ್ಲಿ ಬಳಲಿ
ಹಲ್ಲು ಕಡಿಯುತ್ತಿದ್ದಾಗ
ವಸಂತದ ಮಾವಿನ ಮರ
ಕೋಗಿಲೆಯ ಕಂಠದಲ್ಲಿ ಹಾಡಿ
ತನಗೇ ಗೊತ್ತಿಲ್ಲದೆ
ಕವಿಯಾಯಿತು

ಹಠಕ್ಕೆ ಬಿದ್ದವನೊಬ್ಬನ ಪದಭೇದಿ, ಬಳಲಿಕೆಯ ಎದುರಿಗೆ ವಸಂತದ ಮಾವಿನ ಮರವೇ ಕೋಗಿಲೆಯ ಕಂಠದಲ್ಲಿ ಹಾಡಿ ಕವಿಯಾಗಿಬಿಟ್ಟಿತು. ಅಸಹಜ ಯಾವುದು? ಸಹಜ ಯಾವುದು? ಎಂಬ ಪ್ರಶ್ನೆಯನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಈ ಸಾಲುಗಳು ಸೃಷ್ಟಿಶೀಲತೆಯ ಗಾಂಭೀರ್ಯವನ್ನು ಲಾಘವ ರೂಪಕದಲ್ಲಿ ಕಟ್ಟಿದೆ. ಜೊತೆಗೆ ಬೇಂದ್ರೆಯವರ ಗಿಡ ಗಂಟೀಯಾ ಕೊರಳೊಳಗಿಂದ ಹೊರಟಿತು ಹಕ್ಕಿಗಳ ಹಾಡು ಎಂಬ ಪ್ರಖ್ಯಾತ ಸಾಲನ್ನು ನೆನಪಿಗೆ ತರುತ್ತಿದೆ. ಕಾವ್ಯದಲ್ಲಿ ಆಸಕ್ತಿಯನ್ನು ಕೆರಳಿಸುವ ಅಂಶವೆಂದರೆ ಅಂತರ್ ಸಂಬಂಧ. ಅನೇಕ ಅಂತರ ಸಂಬಂಧಗಳನ್ನು ಜೋಡಿಸುವ, ಹಾಗೆ ಜೋಡಿಸುವುದರ ಮೂಲಕ ಹೊಸ ಸಂಬಂಧಗಳನ್ನು ಕಾಣಿಸುವ ರೀತಿ. ಯಾವುದು ಮೂಲ? ಯಾವುದರ ಆಧಾರ ಎಂಬುದಲ್ಲ.




ಕಿ.ರಂ. ನಾಗರಾಜ

ನೀಲು ಜೀವನೋತ್ಸಾಹದ ಚಿಲುಮೆಯಾಗಿರುವುದರೊಂದಿಗೆ ಬೇಸರ, ಏಕಾಂತ, ವಿಷಾದ, ಮೌನ, ಸಂತೋಷ, ನವಿರು, ಕಾಮ-ಕಾಮನೆಗಳನ್ನು ಸ್ಫೋಟಿಸುವವಳು.

ನೀಲು ಯಾರು ಎಂದು ಕೇಳಿದಿರಾ?
ಹುಣ್ಣಿಮೆಯ ಬೆಳದಿಂಗಳು ಕಾಮಿನಿಯಲ್ಲಿ
ಪ್ರೇಮ ಉಕ್ಕಿಸಿದ ವೇಳೆ
ಇನಿಯನಿಲ್ಲದ ಹಾಸಿಗೆಯಲ್ಲಿ
ಬಿಕ್ಕಳಿಸಿ ಅತ್ತು ಅವನಿಗಾಗಿ ಕಾದು
ಆತ ಹಿಂದಿರುಗುವ ಹೊತ್ತಿಗೆ ಅಮಾವಾಸ್ಯೆ
ಕವಿದಿತ್ತು ಮತ್ತೆ ಬೆಳದಿಂಗಳ
ಹುಣ್ಣಿಮೆಗೆ ಕಾಯುತ್ತಾ
ಅವಳು ಇಟ್ಟ ನಿಟ್ಟುಸಿರಲ್ಲಿ
ಹುಟ್ಟಿದವಳು ನೀಲು

ಅರ್ಥಕ್ಕೆ ಒದಗಿ ಬರದೆ, ವಿಶ್ಲೇಷಣೆಗಷ್ಟೇ ಸೀಮಿತವಾಗದೆ ಅನುಭವದ ನಿರಂತರ ವಿಸ್ತರಣೆಗೆ ಭಿತ್ತಿಯನ್ನು ನಿರ್ಮಿಸುವುದೇ ಕವಿತೆ. ಈ ಕವಿತೆಯು ಕಾಮ, ಪ್ರೇಮ, ಬಿಕ್ಕಳಿಕೆ, ಬೆಳದಿಂಗಳು, ಕಾಮಿನಿ, ಇನಿಯ, ಅಮಾವಾಸ್ಯೆ ನಿಟ್ಟುಸಿರು, ಹುಟ್ಟು-ಹೀಗೆ ಸಂಬಂಧಗಳ ಹೆಣಿಗೆಯಿಂದ ರೂಪಕಗೊಂಡಿರುವುದನ್ನು ಕಾಣಬಹುದು.

ನೀಲು ಕಾವ್ಯದ ನಿರೂಪಕನಿಗೆ ವೈವಿಧ್ಯದಿಂದ ಕೂಡಿದ ಲೋಕದ ಅಸಂಖ್ಯ ಸಂಗತಿಗಳೊಂದಿಗೆ ಗಂಭೀರವಾದ ಆಸಕ್ತಿ ಇದೆ. ಚರಿತ್ರೆ, ಪುರಾಣ, ರಾಜಕೀಯ, ನೀತಿ-ಅನೀತಿ, ಸೃಜನಶೀಲತೆ, ಸಾಹಸ, ಆಟ, ಆಟದ ವಿವಿಧ ಬಗೆ-ಭಂಗಿಗಳು, ಯುದ್ಧ , ಜೂಜು, ಹಾದರ, ಬಡತನ, ಸಿರಿತನ ಹೀಗೆ ಅನೇಕ. ಆದರೆ ಇದ್ಯಾವುದೂ ನೇರವೂ ಅಲ್ಲ, ಸರಳವೂ ಅಲ್ಲ. ಈ ಎಲ್ಲಾ ಆಸಕ್ತಿಯಿಂದ ಕೂಡಿದ ಸಂಗತಿಗಳನ್ನು, ಅದರಿಂದ ಹುಟ್ಟಿದ ಅನುಭೂತಿಗಳನ್ನು ಸೂಕ್ಷ್ಮಪರಿಶೀಲನೆಗೆ ಒಡ್ಡಿ ರೂಪಕಗೊಳಿಸುವ, ಸಂಕೇತಗೊಳಿಸುವ ಪರಿಣತಿಯನ್ನು ಇಲ್ಲಿ ಕಾಣುತ್ತೇವೆ. ಯಾವುದೇ ಸಂಗತಿ, ವಿಷಯವನ್ನು ಮುಖಾಮುಖಿಯಾಗಿಸುವುದರಿಂದ ಸಿದ್ಧಿಸುವ ಪರಿಣಾಮವನ್ನು ನಿರೂಪಕ ಚೆನ್ನಾಗಿ ಬಲ್ಲ.



ಪ್ರಾಪಂಚಿಕ ಅನುಭವ, ಅನುಭೂತಿ, ಸಾಮಾನ್ಯತೆಗೆ ಸದಾ ಸಲ್ಲುವ ನೆಲೆಗಳನ್ನು ನಿರಾಕರಿಸಿ ಅಸಾಮಾನ್ಯವಾದದ್ದನ್ನು ನಿರೂಪಕ ಧ್ಯಾನಿಸುತ್ತಾನೆ. ಪರಿಚಿತ ಜಗತ್ತಿನ ಚಿತ್ರ ಸಮೂಹದ ಮೂಲಕವೇ ಅದರ ಅಸಂಖ್ಯವಾದ, ವಿಭಿನ್ನ ಕೋನಗಳು ಅನಾವರಣಗೊಳ್ಳುವಂತೆ ಹೇಳುವ ಕ್ರಮ ಈ ಒಟ್ಟು ರಚನೆಗಳ ಮೂಲದ್ರವ್ಯವಾಗಿದೆ. ನಿರೂಪಕನ ಆಸಕ್ತಿ ಲೋಕಾಭಿರಾಮವಾಗಿ, ಕಾರಣಗಳಿಲ್ಲದೆ ತೊಡಗುವಂಥವಲ್ಲ, ಸಾಮಾನ್ಯ ವಿವರಗಳಲ್ಲೇ ಅಂತಸ್ಥವಾಗಿರುವ ಥಟ್ಟನೆ ಕಾಣದ ಅನೇಕ ಸೂಕ್ಷ್ಮಗಳು ಹುದುಗಿರುವುದನ್ನು ಪಾರದರ್ಶಕ ಎನಿಸುವ ಭಾಷೆಯ ಬಳಕೆಯ ಮೂಲಕ ಹೇಳುವ ವಿನ್ಯಾಸ ಇಲ್ಲಿ ಎದ್ದು ಕಾಣುವ ಅಂಶವಾಗಿದೆ.

ಲೋಕಗ್ರಹಿಕೆಗಾಗಲಿ, ಜನಪ್ರಿಯ ನಂಬಿಕೆಗಳಿಗಾಗಲಿ ಲಂಕೇಶರು ಯಾವಾಗಲೂ ವಿರೋಧದ ನೆಲೆಯಲ್ಲಿಯೇ ನಿಂತವರು. ದೊಡ್ಡ ದೊಡ್ಡ ಮಾತಿನ ಬಲೂನನ್ನು ತಮ್ಮದೇ ಆದ ನಿಜದ ಸೂಜಿಮೊನೆಯಿಂದ ಚುಚ್ಚಿದವರು. ಇಡೀ ನೀಲು ಕಾವ್ಯದ ತುಂಬ ಪ್ರಶ್ನೆಗಳ ಸರಮಾಲೆಯೊಂದು ಹಬ್ಬಿಕೊಂಡಿದೆ. ಈ ಪ್ರಶ್ನೆಗಳು ನಿರೂಪಕನ ಪ್ರಶ್ನೆಗಳಾಗಿರದೆ ಓದುಗನ, ನಮ್ಮ ಸಂದರ್ಭದ ಹಲವು ಹನ್ನೊಂದು ಬಗೆಯ ಉತ್ತರಗಳಿಗೆ ತೆರೆದುಕೊಳ್ಳಬಹುದಾದ ಪ್ರಶ್ನೆಗಳು. ಒಂದು ಪ್ರಶ್ನೆ ಹೀಗಿದೆ:

ಮಂಡ್ಯದ ರೈತರು
ಕೃಷ್ಣರಾಜ ಸಾಗರದ ನೀರಿಗಾಗಿ
ತಲಕಾವೇರಿಯಲ್ಲಿ ಮಳೆ ಬೀಳುವಂತೆ
ಪ್ರಾರ್ಥಿಸುವುದು
ವಿಧಿ ಏರ್ಪಡಿಸಿದ
ಸಹಬಾಳ್ವೆಯ ಪಾಠವಲ್ಲವೆ?

ಹೀಗೆ ಮನೋಲೋಕದಲ್ಲಿ ಹುಟ್ಟುವ ಪ್ರಶ್ನೆಗಳನ್ನು 'ನೀಲು ಕಾವ್ಯ'ದ ತುಂಬ ಮೇಲಿಂದ ಮೇಲೆ ಕಾಣುತ್ತೇವೆ. ಗಂಡು-ಹೆಣ್ಣುಗಳಲ್ಲಿ ನಿರಂತರವಾಗಿ ಅನೇಕ ಮಟ್ಟಗಳಲ್ಲಿ ಮೈತಳೆಯುವ ಪ್ರಶ್ನೆಗಳನ್ನು ಇಲ್ಲಿ ಕಾಣಬಹುದು. ಹೆಣ್ಣು ಗಂಡನ್ನು ಕುರಿತು ತನ್ನಲ್ಲಿಯೇ ಚಿಂತಿಸುವ ಹಾಗೆಯೇ,



ಹೆಣ್ಣನ್ನು ಕುರಿತು ಗಂಡಿನಲ್ಲಿ ಮೂಡುವ ವಿಭಿನ್ನ ಅನಿಸಿಕೆಗಳನ್ನು ನೀಲು ಕಾವ್ಯದ ತುಂಬ ವಿವಿಧ ಆಕೃತಿಗಳಲ್ಲಿ ಕಾಣುತ್ತೇವೆ. ಗಂಡು-ಹೆಣ್ಣುಗಳಲ್ಲಿ ಹುದುಗಿರುವ ಅಗೂಢ ಮಾನಸಿಕ ಸ್ತರಗಳನ್ನು ಗಂಭೀರವಾಗಿ ಚಿಂತಿಸಿರುವ ಪರಿ ಇಲ್ಲಿನ ವಿಶೇಷ ಸಂಗತಿ. ಈ ಕಾವ್ಯದಲ್ಲಿ ನೋಡುವಿಕೆಯ ಸೂಕ್ಷ್ಮತೆ ಕೇವಲ ನೋಟಕ್ಕಷ್ಟೇ ಸೀಮಿತವಾಗದೆ ಆತಂಕ, ಭಯ, ಕಾತರ-ತಲ್ಲಣಗಳು ಸೇರಿಕೊಂಡಿದೆ.

ಮಾತುಗಳಿಗೆ ನರ್ತನದ
ಗಾಯನದ
ಎಳನಗೆಯ
ತಿಳಿಹಸಿರ, ಕೇವಲ ಕಮ್ಮನೆಯ
ಕಂಕುಳ ಬೆವರ ಸುವಾಸನೆಯ
ಕೊಡಲಾರದವ
ಕವಿಯಾಗಲಾರ

ಇಂಥ ಸಾಲುಗಳಲ್ಲಿ ನೀಲು ಕಾವ್ಯದ ನಿಲುವುಗಳ ಬಗ್ಗೆ ಒಂದಿಷ್ಟು ಹೊಳಹುಗಳು ದೊರೆತೀತು. ಈ ಸಾಲುಗಳನ್ನು ಗಮನಿಸಿ:

ಇಲ್ಲಿ ಫಲಿಸದ ಆಶೆಗಳು
ಮುಂದಿನ ಜನ್ಮದ
ಆಶೆ ಹುಟ್ಟಿಸಿ
ನನ್ನ ಕಾವ್ಯದ ಮೋಹಕ
ರೂಪಕಗಳಾಗದಿದ್ದರೆ ಎಲ್ಲ ವ್ಯರ್ಥ

ಈ ಕಾವ್ಯ ಹೇಳಿಕೆಗಳಿಗಿಂತ, ಮಾತುಗಾರಿಕೆಗಿಂತ ರೂಪಕ ಮಾರ್ಗದಲ್ಲಿ ಮುಂಚಲಿಸುವಂಥದ್ದು.

ಹಚ್ಚಹಸಿರು ತೋಪಿನ ಗೋರಿಯಿಂದ
ಕ್ಷಣ ಎದ್ದ ವೆಂಕಟಸ್ವಾಮಿ
ತನ್ನ ದೊಂಬರ ಮನದನ್ನೆಗೆ
ಮಾಸ್ತಿಯವರ ಜ್ಞಾನಪೀಠದ ಬಗ್ಗೆ
ಹೇಳಿ ಬೆಚ್ಚನೆ ಮುತ್ತಿಟ್ಟು ಮಲಗಿದನಂತೆ.

ಮಾಸ್ತಿಯವರ 'ವೆಂಕಟಸಾಮಿಯ ಪ್ರಣಯ' ಕತೆ ಎಷ್ಟು ಗಾಢವಾದ ಗ್ರಹಿಕೆಗೆ ಒಳಪಟ್ಟು ಕವಿತೆಯಾಗಿದೆ ಎಂಬುದು ಥಟ್ಟನೆ ಹೊಳೆಯುತ್ತದೆ. ನೀಲು ಕಾವ್ಯದಲ್ಲಿ ಮುಪ್ಪು, ಸಾವು, ಸಾರ್ವಜನಿಕ ಜೀವನ, ಜ್ಞಾನ, ಹಣ, ಅಂತಸ್ತು, ಹೀಗೆ ಅನೇಕ ದಿನನಿತ್ಯ ಎದುರಾಗುವ ಸಂಗತಿಗಳು ಮೇಲಿಂದ ಮೇಲೆ ಆವರ್ತನಗೊಂಡು ಮನುಷ್ಯ ಪರಿಸರದ ಎಲ್ಲ ನಿಗೂಢ ವಿಸ್ಮಯಗಳನ್ನು ಸ್ಪರ್ಶಿಸುತ್ತದೆ.

ಮುಪ್ಪು ಸಾವಿನ ತೀವ್ರ ಭಯವಿಲ್ಲದ
ದುಡಿವ ಬಡವನಾಗಿ ಜೀವಿಸತೊಡಗಿದ
ಖ್ಯಾತ ಟಾಲ್‌ಸ್ಟಾಯ್ ಕಂಡುಕೊಂಡದ್ದು
ಸಾವಿನ ಭಯವೇ
ಎಲ್ಲ ಕಲೆಗಳ, ಚಿಂತನೆಗಳ ಸ್ಫೂರ್ತಿ
****

ಮಕ್ಕಳು ತೊದಲುತ್ತ ಹೇಳುವುದ
ನಕ್ಕು ನಿರ್ಲಕ್ಷಿಸಬೇಡ
ಅಲ್ಲಿ ಮುಪ್ಪಿನವನ ಜ್ಞಾನಕ್ಕಿಂತ
ಸತ್ಯದ ರೇಖೆಗಳಿವೆ.

ಹೀಗೆ ನಿತ್ಯದ ವಿವರಗಳನ್ನು ಧ್ಯಾನಿಸಿ ಓದುಗ ಆಲೋಚಿಸುವಂತೆ ಮಾಡುವ, ಎದುರಿಸಲೇಬೇಕಾದ ಪ್ರಶ್ನೆಗಳಿಗೆ, ಅನಿಸಿಕೆಗಳಿಗೆ, ಮುಖಾಮುಖಿಯಾಗಬೇಕಾದ ತಂತರ್ಗಗಳಿಗೆ-ನೀಲು ಕಾವ್ಯ ಒಂದು ಭಿತ್ತಿಯನ್ನೊದಗಿಸಿಕೊಟ್ಟಿದೆ. ನೀಲು ಕಾವ್ಯ ಕವಿತೆಯನ್ನು ಕುರಿತು ಸೂಕ್ಷ್ಮವಾಗಿ, ಗಂಭೀರವಾಗಿ ಯೋಚಿಸುತ್ತದೆ.

ನೀಲುವಿನಂತೆ ಬರೆಯಲು ಬಯಸುವ
ಜಾಣೆಯರು
ನೀಲುವಿನಂತೆ ಭಯ, ಕಾತರ
ಆತಂಕ ಪಡುವುದ ಕಲಿಯಬೇಕು
*****


ಕವಿಯಾಗಲು ಬಯಸಿದ
ಚಾಣಾಕ್ಷ ಭಟ್ಟರು
ಕೋಗಿಲೆಯ
ಕತ್ತರಿಸಿ ತಿಂದದ್ದು
ಇತ್ತೀಚಿನ ಸುದ್ದಿ.

ಕಾವ್ಯ ಹೇಗಿರಬೇಕು, ಎಂತಿರಬೇಕು, ಯಾವುದು ನಿಜವಾದ ಕಾವ್ಯ ಇವೆಲ್ಲ ಯಾವುದೇ ಕಾಲಕ್ಕೂ ಮುಗಿಯದ ಜಿಜ್ಞಾಸೆ. ಇದನ್ನು ನೀಲು ಕಾವ್ಯ ಹೀಗೆ ಹೇಳುತ್ತಿದೆ.


ಈ ನನ್ನ ಸಾಲುಗಳನ್ನು
ಕವನಗಳೆಂದು ಹೇಗೆ ಕರೆಯಲಿ?
ನೀನೇ ಬಲ್ಲಂತೆ ಇವೆಲ್ಲ
ವಿರಹದ ಕಾತರದ ನಿರಾಶೆಯ ಚುಂಬನದ
ಆಲಿಂಗನದ ಗುರುತುಗಳು.
ಪ್ರಕೃತಿ ಸೂರ್ಯನನ್ನು ಸ್ವಾಗತಿಸುವಾಗ
ನಾನು ಕತ್ತಲೆಯ ಭಿತ್ತಿಯ ಮೇಲೆ
ಚಿತ್ರಿಸಿದ ನಿಟ್ಟುಸಿರುಗಳು.

ಹೀಗೊಂದು ಕೆಟ್ಟ ರಾಜಕೀಯ

ಜಿ. ರಾಮಕೃಷ್ಣ



ನಮ್ಮೆದುರು ಎರಡು ಪ್ರಸಂಗಗಳಿವೆ: ಒಂದು, ಹೈದರಾಬಾದಿನಲ್ಲಿ ರಾಮೋಜಿ ರಾವ್ ಅವರ ವ್ಯವಹಾರಗಳ ತನಿಖೆ; ಇನ್ನೊಂದು, ಮಂಗಳೂರಿನಲ್ಲಿ ಬಿ.ವಿ. ಸೀತಾರಾಂ ಮತ್ತು ರೋಹಿಣಿಯವರ ಬಂಧನ, ಕಾರಾಗೃಹ ವಾಸ ಮತ್ತು ಬೇಲ್ ಪಡೆದು ಹೊರಬರಲು ಹರಸಾಹಸ. ರಾಮೋಜಿ ರಾವ್ ವ್ಯವಹಾರ ಚತುರರು. ಸಾರ್ವಜನಿಕರಿಂದ ಅವರು ಕೋಟಿಗಟ್ಟಲೆ ಹಣ ಸಂಗ್ರಹಿಸಿ ತಮ್ಮ ಉದ್ಯಮಗಳಲ್ಲಿ ತೊಡಗಿಸಿದ್ದಾರೆ. ಹಾಗೆ ತೊಡಗಿಸಿದ ಹಣದಿಂದ ಉತ್ಪಾದನೆಯು ಯಾವ ಮಟ್ಟದಲ್ಲಿ ದೊರೆಯಬೇಕೋ ಆ ಮಟ್ಟದಲ್ಲಿ ದೊರೆಯದಿದ್ದಾಗ ಸಹಜವಾಗಿಯೇ ಠೇವಣಿ ಇಟ್ಟಿರುವವರು ಆತಂಕ ಅನುಭವಿಸುತ್ತಾರೆ. ಎಷ್ಟೋ 'ಬ್ಲೇಡ್ ಕಂಪನಿ'ಗಳನ್ನು ಕಂಡಿರುವ ಸರ್ಕಾರ ಸಾರ್ವಜನಿಕರ ಹಿತವನ್ನು ಸಂಪೂರ್ಣವಾಗಿ ಅಲಕ್ಷಿಸುವಂತಿಲ್ಲ. ಆದ್ದರಿಂದ ತನಿಖೆ ನಡೆಸುವುದು ಉಗ್ರ ಅಪರಾಧವಲ್ಲ. ತನಿಖೆಯು ಸಾರ್ವಜನಿಕರ ಹಿತ ಕಾಪಾಡಲು ನಡೆಯಿತೋ ಅಥವಾ ಅದರ ಮುಸುಕಿನಲ್ಲಿ ಕಾಂಗ್ರೆಸ್ ತನ್ನ ರಾಜಕೀಯದ ಆಟವನ್ನಾಡಿತೋ ಖಚಿತವಾಗಿ ಹೇಳಬರುವುದಿಲ್ಲ. ನಿಜಕ್ಕೂ ರಾಮೋಜಿರಾವ್ ಸಂಸ್ಥೆಗಳು ಸಾರ್ವಜನಿಕರ ಹಣ ಹಿಂದಿರುಗಿಸಲು ಅಸಮರ್ಥವಾದರೆ ಜನರು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವುದಿಲ್ಲವೆ? ಸರ್ಕಾರದ ದುರುದ್ದೇಶವು ಗಂಭೀರವಾಗಿದೆಯೆಂದು ಆಪಾದಿಸುವವರು ಈ ಪ್ರಸಂಗದಲ್ಲಿ ಪತ್ರಿಕಾ ಮಾಧ್ಯಮದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಆಂಧ್ರ ಪ್ರದೇಶ ಸರ್ಕಾರವು ಹಲ್ಲೆ ನಡೆಸಿದೆಯೆಂದು ದೂಷಿಸಿದ್ದಾರೆ. ಹಲವು ಪತ್ರಿಕೆಗಳು ಈ ಬಗ್ಗೆ ಖಚಿತವಾದ ನಿಲುವನ್ನು ತಾಳಿ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾವೆ.



ಸೀತಾರಾಂ ದಂಪತಿಗಳು

ಬಿ.ವಿ. ಸೀತಾರಾಂ ಎಂದಿಗೂ ರಾಮೋಜಿರಾವ್‌ಗೆ ಸಮವಲ್ಲ. ಅವರಲ್ಲಿ ಸಾರ್ವಜನಿಕರ ಅಥವಾ ಸ್ವಂತದ ಹಣ ಹೇರಳವಾಗಿ ಶೇಖರವಾಗಿಲ್ಲ; ಅವರಿಗೆ ರಾಜಕೀಯ ಬೆಂಬಲವೂ ಹೇಳಿಕೊಳ್ಳುವಷ್ಟು ಇಲ್ಲ. "ಹುಲಿ ಹಳ್ಳಕ್ಕೆ ಬಿದ್ದರೆ ನನ್ನದೂ ಒಂದು ಕಲ್ಲು" ಎಂಬ ಭಾವನೆ ತಾಳುವವರು ಸಾಕಷ್ಟಿರಬಹುದು. ಮಂಗಳೂರು-ಉಡುಪಿ ಜಿಲ್ಲೆಗಳಲ್ಲಿ ಅಂತಹ ವಾತಾವರಣ ನಿರ್ಮಾಣವಾಗಿದೆ. ಆದ್ದರಿಂದ 'ಕರಾವಳಿ ಅಲೆ'ಯ ಸಂಪಾದಕ ಸೀತಾರಾಂ ಮತ್ತು ಪ್ರಕಾಶಕಿ ಶ್ರೀಮತಿ ರೋಹಿಣಿ ಅವರನ್ನು ಪೊಲೀಸರು ಬಂಧಿಸಿ, ಒಂದಷ್ಟು ಓಬೀರಾಯನ ಕಾಲದ ಕಾನೂನು ನಿಯಮಾವಳಿಗಳ ಉಲ್ಲಂಘನೆಗಾಗಿ ಅವರ ಮೇಲೆ ಮೊಕದ್ದಮೆ ಹೂಡಿದರೆ ಬೆಟ್ಟಗಳು ನಡುಗುವುದಿಲ್ಲ. ದೊಡ್ಡ ಪತ್ರಿಕೆಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮಾತನ್ನಾಡಿ ಸರ್ಕಾರದ ವಿರುದ್ಧ ಕೆರಳುವುದಿಲ್ಲ. ಏನಿದ್ದರೂ ವೃತ್ತಿನಿರತ ಪತ್ರಕರ್ತರು ಪ್ರತಿಭಟಿಸಬೇಕು, ಹೋರಾಡಬೇಕು, ಮತ್ತು ಸಾರ್ವಜನಿಕರು ಅವರೊಡನೆ ಕೈ ಜೋಡಿಸಬೇಕು.

ಸೀತಾರಾಂ ಅವರ ತಥಾಕಥಿತ ಅಪರಾಧವು ಎಷ್ಟು ನಿಜ ಮತ್ತು ಎಷ್ಟು ಆರೋಪಿತ, ಎನ್ನುವುದು ಪ್ರಶ್ನೆ. ಮೊದಲಿಗೆ ಅವರ ಪತ್ರಿಕೆಯ ಕಚೇರಿಯನ್ನೂ ಅವರ ಮನೆಯನ್ನೂ ಒಂದು ಗುಂಪು ಧ್ವಂಸ ಮಾಡಿತ್ತು, ಆ ದುಷ್ಕೃತ್ಯವನ್ನೆಸಗಿದ್ದು "ಸುಸಂಸ್ಕೃತ" ಸಂಘ ಪರಿವಾರದವರು ಎಂಬುದು ರಾಜ್ಯದ ಗೃಹ ಸಚಿವರಿಗೆ ತಿಳಿದಿದೆ. ಆದರೆ ಅವರು ಯಾವ ಕಾನೂನುಕ್ರಮವನ್ನೂ ಕೈಗೊಳ್ಳುವ ಗೋಜಿಗೆ ಹೋಗಲಿಲ್ಲ. ಯಡಿಯೂರಪ್ಪ-ಅನಂತ್ ಕುಮಾರ್ ಪಕ್ಷದ ಮುಲಾಜಿನಿಂದ ಹೊರಬರಲು ಸಿದ್ಧರಿಲ್ಲದಿದ್ದರೆ ಹಾಗೆ ಕ್ರಮ ಕೈಗೊಳ್ಳುವ ಸಾಧ್ಯತೆ ಸೊನ್ನೆ. ಗುರೂಜಿ ಎಂ.ಎಸ್. ಗೋಲ್ವಾಲ್ಕರ್‌ರ ನೂರನೆಯ ವರ್ಧಂತಿಯನ್ನು ಆಚರಿಸಿದ ತರುವಾಯದಲ್ಲಿ ಗುರೂಜಿ ಶಿಷ್ಯರಿಗೆ ಸೀತಾರಾಂ ಮೇಲೆ ಸಿಟ್ಟೇಕೆ ಬಂತು?

ಒಂದು ಪತ್ರಿಕೆಯ ಕರ್ತವ್ಯ, ಜವಾಬ್ದಾರಿಗಳ ಕಲ್ಪನೆ ಇಲ್ಲೇ ಪ್ರಸ್ತುತವಾಗುವುದು. ಒಂದು ಘಟನೆಯನ್ನು ಅದು ಜರುಗಿದಂತೆ ವರದಿ ಮಾಡುವುದು ಯಾವಾಗ ಅಪರಾಧವೆನಿಸುತ್ತದೆ? ಈ ಸೂಕ್ಷ್ಮವಾದ ಪ್ರಶ್ನೆಗೆ ನಮ್ಮ ನ್ಯಾಯಮೂರ್ತಿಗಳು ಹತ್ತು ಭಿನ್ನ ಉತ್ತರಗಳನ್ನು ಕೊಟ್ಟಾರು. ಗುರೂಜಿ ವರ್ಧಂತಿಯು ಕೆಲವು ಮನಸ್ಸುಗಳಿಗೆ "ಹಿಂದೂ ಸಮಾಜೋತ್ಸವ" ಎಂಬಂತೆ ಕಂಡುಬಂದು ವಿಜೃಂಭಣೆಯಿಂದ ಸಭೆಗಳು ಆಯೋಜಿಸಲ್ಪಟ್ಟವು. ಮಂಗಳೂರಿನ ಸಭೆಯಲ್ಲಿ ಯಾರೋ ಒಬ್ಬ ಸ್ವಾಮಿಗಳಿದ್ದರು. ಅವರೇಕೆ ಅಲ್ಲಿ ಹೋದರೆಂಬುದು ಬೇರೆ ಪ್ರಶ್ನೆ. ಬಹುಶಃ ಅವರಿಗೆ ಆಹ್ವಾನವಿದ್ದೀತೆಂದು ತೋರುತ್ತದೆ. ಅವರಿಗೆ ಸರಿಯಾದ ಮರ್ಯಾದೆ ಕೊಡಲಾಗಲಿಲ್ಲವೆಂದು ಅವರು ಕೋಪಿಸಿಕೊಂಡರು. (ಸ್ವಾಮಿಗಳಿಗೆ ಕೋಪ ಬರುವುದು ಇಂಥದಕ್ಕೇ. ಮತಧಾರ್ಮಿಕ ಹಲ್ಲೆಯಲ್ಲಿ ಜನ ಸತ್ತರೆ ಅಥವಾ ಜನರನ್ನು ಕೊಂದರೆ ಅವರಿಗೆ ಕೋಪ ಉಕ್ಕಿದ್ದು ನಮಗೆ ತಿಳಿದುಬಂದಿಲ್ಲ).

ಕೋಪ ಪಡೆದುಕೊಂಡ ಸ್ವಾಮಿಗಳು ದುರ್ವಾಸರಂತೆ ಶಾಪ ಕೊಡಬಹುದಿತ್ತು, ಆಧುನಿಕ ಸ್ವಾಮಿಗಳಿಗೆ ಆ ಶಕ್ತಿ ಕ್ಷೀಣಿಸಿಹೋಗಿದೆ. ಆದ್ದರಿಂದ ಅವರು ವೇದಿಕೆಯಿಂದ ಇಳಿದುಹೋದರು. 'ಕರಾವಳಿ ಅಲೆ' ಇದನ್ನು ವರದಿ ಮಾಡಿತು. ಅದನ್ನು ಗೋಲ್ವಾಲ್ಕರ್ ವೃಂದ ಸಹಿಸಲಿಲ್ಲ; ಸೀತಾರಾಂ ಮನೆಯನ್ನು ಚಚ್ಚಿ ಹಾಕಲಾಯಿತು. ಆಗ ಪೊಲೀಸರು ಯಾರನ್ನೂ ಬಂಧಿಸಲಿಲ್ಲ, ಸಂಘ ಪರಿವಾರದ ಕೋಟೆಯಲ್ಲಿ ಹಾಗೆಲ್ಲಾ ಬಂಧಿಸುವುದು ಸರಿಯಲ್ಲವೆಂದು ಗೃಹಮಂತ್ರಿಗಳು ನಿರ್ಧರಿಸಿದ್ದಿರಬಹುದು. ಅಸಹನೆಯ ಮುದ್ದೆಗಳು ದೊಡ್ಡದಾಗತೊಡಗಿದವು. ಸೀತಾರಾಂ ಅವರಿಗೆ ಇನ್ನೊಂದು ಪೆಟ್ಟು ಕೊಡಬೇಕೆಂಬ ಅಭಿಲಾಷೆ ಇಮ್ಮಡಿಗೊಂಡಿತು. 'ಕರಾವಳಿ ಅಲೆ' ಯಾವುದೋ ಜೈನ ಮುನಿಗಳ ಬಗ್ಗೆ ಒಂದು ವರದಿ ಪ್ರಕಟಿಸಿದಾಗ "ಮಾನಸಿಕವಾಗಿ ಆಘಾತಕ್ಕೊಳಗಾದ" ಕೆಲವು ಮಂದಿ ಪೊಲೀಸರಿಗೆ ಆಪಾದನೆ ಪಟ್ಟಿ ಸಲ್ಲಿಸಿದರು. ಕೂಡಲೆ ಜಾಗೃತರಾದ ಪೊಲೀಸರು ಸೀತಾರಾಂ ಹಾಗೂ ರೋಹಿಣಿಯವರನ್ನು ಬಂಧಿಸಿ ಕತ್ತಲೆ ಕೋಣೆಗೆ ನೂಕಿದರು. ವಿಧಾನಸೌಧದ ಕಲ್ಲುಗಳಿಗೆ ಇದು ಕಾಣಲಿಲ್ಲ, ಕೇಳಿಸಲಿಲ್ಲ, ಇದನ್ನೇ ಜಾಣಕುರುಡು ಎನ್ನುತ್ತಾರೆ.

ನಮ್ಮ ದೇಶದಲ್ಲಿ ವ್ಯಾಪಕವಾಗಿ ಬಳಕೆಯಾಗುವ ಅಸ್ತ್ರ ಇದು: ಇಂತಹ ಹೇಳಿಕೆಯಿಂದ (ಅಥವಾ ಇಂತಹ ಪುಸ್ತಕದಿಂದ ಅಥವಾ ಇಂತಹ ಮೆರವಣಿಗೆಯಿಂದ) ನಮ್ಮ ಗುಂಪಿನವರ ಮನಸ್ಸಿಗೆ ಆಘಾತವಾಗಿದೆ. ಈ ಹೇಳಿಕೆ ಅಥವಾ ಕೃತ್ಯವು ದುರುದ್ದೇಶ ಹೊಂದಿದೆ, ಪ್ರಚೋದನೆ ನೀಡುತ್ತದೆ, ಶಾಂತಿ ಕದಡಬಹುದು, ಆದ್ದರಿಂದ ಅವರಿಗೆ ಶಿಕ್ಷೆ ನೀಡಿ. ದೂರು ಕೊಡುವವರ ಶ್ರೀಮಂತಿಕೆ, ವರ್ಚಸ್ಸು, ರಾಜಕೀಯ ಪ್ರಭಾವ ಮುಂತಾದವನ್ನು ಗಣನೆಗೆ ತೆಗೆದುಕೊಂಡು ಪೊಲೀಸರು ಕಾರ್ಯಮಗ್ನರಾಗುತ್ತಾರೆ ಇಲ್ಲವೆ ದೂರನ್ನು ಹರಿದುಹಾಕುತ್ತಾರೆ. ಅದೂ ನಮ್ಮ ಶ್ರೇಷ್ಠ ಕಾನೂನು ನಡವಳಿಕೆಯ ಒಂದು ಭಾಗ.

ಸೀತಾರಾಂ ಮತ್ತು ರೋಹಿಣಿ ಬಂಧಿಸಲ್ಪಟ್ಟಾಗ ಅಭಿವ್ಯಕ್ತಿ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯ ಇವುಗಳ ಹರಣವಾಗಲಿಲ್ಲವೆ? ಹಾಗಿದ್ದರೆ ಮಾಧ್ಯಮಗಳ ದೊಡ್ಡ ಜನ ತಮ್ಮ ಧ್ವನಿಯನ್ನು ಏರಿಸಲಿಲ್ಲವೇಕೆ? ಇದು ನಮ್ಮ ಪ್ರಜಾಪ್ರಭುತ್ವದ ವೈಖರಿ, ನಮ್ಮ ರಾಜಕೀಯದ ಲಕ್ಷಣ. ಸೀತಾರಾಂ ಬಂಧನದ ಬಗ್ಗೆ ರಾಜ್ಯ ಸಂಪುಟದ ಸಚಿವರಲ್ಲೊಬ್ಬರಾದ ಉಡುಪಿಯ ವಿ.ಎಸ್. ಆಚಾರ್ಯ ತಮ್ಮ ತೀರ್ಮಾನ ಪ್ರಕಟಿಸಿದ್ದಾರೆ: "ಸೀತಾರಾಂ ಅವರ 'ಕರಾವಳಿ ಅಲೆ' ಸಮಾಜದ ಎಲ್ಲ ವಿಭಾಗಗಳ ಮತಧಾರ್ಮಿಕ ಭಾವನೆಗಳನ್ನು ನೋಯಿಸಿದೆ. ಆ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಭಾವನೆಗಳು ಬಗಡಾಯಿಸಲು ಭಾಗಶಃ ಕಾರಣವಾಗಿದ್ದವು."


ಇಂತಹ ತೀರ್ಮಾನವನ್ನು ಸಚಿವರು ನೀಡಿರುವುದರ ಔಚಿತ್ಯದ ಪ್ರಶ್ನೆ ಒತ್ತಟ್ಟಿಗಿರಲಿ, ಅವರಿಗೆ ಈ ಬಗ್ಗೆ ಯಾವ ಪುರಾವೆ ದೊರೆತಿದೆ? ದೊರೆತಿದ್ದರೆ, ಸಕಾಲದಲ್ಲಿ ಮಧ್ಯ ಪ್ರವೇಶ ಮಾಡಿ ಬಗಡಾಯಿಸುವಿಕೆಯನ್ನು ತಡೆಗಟ್ಟಲಿಲ್ಲವೇಕೆ? ಬಾಬಾಬುಡನ್‌ಗಿರಿಯ ಸನ್ನಿವೇಶದ ಬಗ್ಗೆ ಮಾನ್ಯ ಆಚಾರ್ಯ ಅವರ 'ಪಕ್ಷಪಾತಿ'ಗಳು ನೀಡುವ ಹೇಳಿಕೆಗಳು, ಎಸಗುವ ಕೃತ್ಯಗಳು, ಮತಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತವೆಂದು ಆಚಾರ್ಯರಿಗೆ ಈವರೆಗೆ ತಿಳಿದುಬಂದಿಲ್ಲದಿರುವುದರ ಹಿಂದೆ ಏನೋ ಮರ್ಮವಿರಬೇಕು! "ಪತ್ರಿಕಾ ಸ್ವಾತಂತ್ರ್ಯ" ಎಂಬುದರ ಚೌಕಟ್ಟನ್ನು ಆಚಾರ್ಯರಿಗೆ ಪ್ರಿಯವಾಗುವಂತೆಯೇ ವ್ಯಾಖ್ಯಾನಿಸುವುದರ ಗುಟ್ಟು ಮತೀಯ ವಿದ್ವೇಷದ ಬಗ್ಗೆ ಅವರಿಗಿರುವ ಗಟ್ಟಿ ನಿರ್ಧಾರದ ಸೂಚನೆಯಾಗಿದೆ.

ಮಾನ್ಯ ಆಚಾರ್ಯ ಹಾಗೂ ಅವರ ಪರಿವಾರದ ವತಿಯಿಂದ ಒಂದು ಮಾಸಪತ್ರಿಕೆ ಪ್ರಕಟವಾಗುತ್ತದೆ. ಬೆಂಗಳೂರಿನ ಕೆಂಪೇಗೌಡ ನಗರದಲ್ಲಿರುವ ಉತ್ಥಾನ ಟ್ರಸ್ಟ್ ಅದನ್ನು ಪ್ರಕಟಿಸುತ್ತದೆ. ಆ ಪತ್ರಿಕೆಯ ಪ್ರತಿಯೊಂದು ಸಂಚಿಕೆಯಲ್ಲೂ ಗೋಪಾಲರಾವ ಹೇಜೇಬ್ ಎಂಬ ವಿದ್ವಾಂಸರು ವಿಷ ಕಾರುತ್ತಾರೆ, ಮುಸಲ್ಮಾನ ಅಲ್ಪಸಂಖ್ಯಾತರನ್ನು ಮನಸ್ವೀ ತೆಗಳುತ್ತಾರೆ, ಸ್ವೇಚ್ಛೆಯಿಂದ ಆರೋಪಗಳನ್ನು ಹೊರಿಸುತ್ತಾರೆ. ಒಂದು ಉದಾಹರಣೆ ನೀಡುವುದಾದರೆ, ಶ್ರೀ ಹೇಜೇಬ್ ಅವರು ಇತ್ತೀಚಿನ ಒಂದು ಸಂಚಿಕೆಯಲ್ಲಿ ರಾಜೇಂದ್ರ ಸಾಚಾರ್ ಸಮಿತಿ ವರದಿಯನ್ನು "ವಿಶ್ಲೇಷಿಸಿ" ತಮ್ಮ ಪ್ರಬುದ್ಧ ತಾತ್ವಿಕ ಅನಿಸಿಕೆಗಳನ್ನು ದಾಖಲಿಸಿದ್ದರು. ಅವರ ವಾದದ ಒಂದು ಭಾಗ ಹೀಗಿದೆ: ಮುಸಲ್ಮಾನ ಅಲ್ಪಸಂಖ್ಯಾತರು ಹಿಂದುಳಿದವರೆಂದು ಸಮಿತಿ ಹೇಳಿದೆ. ಆದರೆ ಅದು ನಿಜವಲ್ಲ, ಅದಕ್ಕೆ ಯಾವ ಪುರಾವೆಯೂ ಇಲ್ಲ. ಘಾಸಿಗೊಳಗಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವಂತೆ ಈವರೆಗೆ ಯಾವ ಮುಸಲ್ಮಾನನೂ ತನ್ನ ಪ್ರಾಣ ಕಳೆದುಕೊಂಡಿಲ್ಲ.


ನಮ್ಮ ದೇಶದಲ್ಲಿ ಘಾಸಿಗೊಂಡವರು ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳಬೇಕು, ಅಲ್ಲದಿದ್ದರೆ ಬೇರೆಯವರನ್ನು ಹತ್ಯೆ ಮಾಡಬೇಕು ಅಥವಾ ಬಂಧಿಸಿ ಕಾರಾಗೃಹದಲ್ಲಿರಿಸಬೇಕು! ವಿದ್ಯಾವಂತರು, ಸುಸಂಸ್ಕೃತರು, ಚರ್ಚೆಗಳಲ್ಲಿ ಹೀಗೆಲ್ಲಾ ಸುಲಭವಾಗಿ ಘಾಸಿಗೊಳಗಾಗುವಷ್ಟು ಮಂದಬುದ್ಧಿಯವರಾಗಬಾರದು. ನಮ್ಮ ದೇಶದ ಬೌದ್ಧಿಕ ಪರಂಪರೆಯಲ್ಲಿ ವಿನಾಕಾರಣ ಹೀನಾಯವಾಗಿ ತೆಗಳಿಕೆಗೆ ಪಾತ್ರರಾದವರು ಯಾರೂ ಅವರ ವಿರೋಧಿಗಳ ಕತ್ತನ್ನು ಕತ್ತರಿಸಲಿಲ್ಲ. ಬೌದ್ಧರು, ಲೋಕಾಯತರು, ಸಾಂಖ್ಯರು ಇವರಲ್ಲಿ ಪ್ರಮುಖರು-ವಾದಕ್ಕಾಗಿ ಒಂದು ಮಾತು ಹೇಳುವುದಾದರೆ, ಶ್ರೀ ಗೋಲ್ವಾಲ್ಕರ್ ಮತ್ತು ಅವರ ಅನುಯಾಯಿಗಳು ಎಷ್ಟೊಂದು ಪಂಗಡಗಳ ಅವಹೇಳನ ಮಾಡಿದ್ದಾರೆಂಬುದು ಮಾನ್ಯ ವಿ.ಎಸ್. ಆಚಾರ್ಯರಿಗೆ ತಿಳಿದಿರಬೇಕು. ಕಮ್ಯೂನಿಸ್ಟರನ್ನು ಎಂತೆಂತಹ ಮಾತುಗಳಲ್ಲಿ ನಿಂದಿಸಿದ್ದಾರೆ! ಹಾಗಿದ್ದರೆ ಕಮ್ಯೂನಿಸ್ಟರಿಗೆ ಭಾವನೆಗಳಿಲ್ಲವೆ, ಅವನ್ನು ಹೀಗೆ ನೋಯಿಸಬಹುದೆ? ಅವರೂ ಜೈನಧರ್ಮದ ಮುಂದಾಳುಗಳ ರೀತಿಯಲ್ಲಿ ಪೊಲೀಸರಿಗೆ ದೂರು ಕೊಡುತ್ತಾರೋ ಅಥವಾ ವಾಗ್ವಾದದಲ್ಲಿ ತೊಡಗಿಸಿಕೊಳ್ಳುತ್ತಾರೋ? ಬಂಡವಾಳಿಗರನ್ನು ಶೋಷಕರೆಂದು ಕರೆದರೆ ಅವರ ಮನಸ್ಸು ನೋಯಲಾರಂಭಿಸಿದರೆ ಏನು ಮಾಡುವುದು?

ಆದ್ದರಿಂದ ಇದು ಮನ ನೋಯುವ ಪ್ರಸಂಗವಲ್ಲ, ದ್ವೇಷ ಸಾಧಿಸುವ ಪ್ರಸಂಗ. ಅನ್ಯಾಕ್ರಮಣ ಶೀಲತೆಯ ಕುರುಹು ಇದು. ಅದು ಪ್ರಜಾಪ್ರಭುತ್ವಕ್ಕೆ ಮಾರಕವಾದದ್ದು. ಒಂದು ತಮಾಷೆಯ ಉದಾಹರಣೆ ನೋಡೋಣ. ಮಾನ್ಯ ಗೋಲ್ವಾಲ್ಕರ್ ಅವರು ರಾಷ್ಟ್ರಪ್ರಜ್ಞೆ, ರಾಷ್ಟ್ರಾಭಿಮಾನ ಇತ್ಯಾದಿಗಳನ್ನು ಕುರಿತು ಪ್ರಸ್ತಾಪ ಮಾಡುತ್ತಾರೆ. ಯಾರಿಗೆ ತಾನೆ ಇವು ಮೌಲ್ಯಗಳಲ್ಲ, ಆದರೆ ಅದು ದುರಭಿಮಾನವಾಗಿ ಪ್ರಕಟವಾಗಬಾರದು ಮತ್ತು ಅನ್ಯರ ಬಗ್ಗೆ ಅಗ್ಗದ ಮಾತನ್ನು ಆಡಬಾರದು, ಅಷ್ಟೆ. ಗೋಲ್ವಾಲ್ಕರ್ ಒಂದೆಡೆ ಹೀಗೆ ಹೇಳಿದ್ದಾರೆ: "ಮೋಕ್ಷಪ್ರಾಪ್ತಿ ಭಾರತದಲ್ಲಿ ಮಾತ್ರವೇ ಸಾಧ್ಯ. ಅನ್ಯ ದೇಶಗಳಲ್ಲಿ ಮಾಡಿದ ಸತ್ಕರ್ಮದ ಫಲಸ್ವರೂಪವಾಗಿ ಭಾರತದಲ್ಲಿ ಜನ್ಮ ಸಿಕ್ಕೀತು. ಅನಂತರ ಮುಕ್ತಿ ಸಿಗಬೇಕಾದುದು ಇಲ್ಲೇ. ಈ ಮಣ್ಣಿನ ಪಾವಿತ್ರ್ಯದಿಂದಲೇ ಭಗವಂತನ ಪ್ರಾಪ್ತಿ ಸಾಧ್ಯವಾದೀತು. ಇಲ್ಲಿ ಕ್ರಿಮಿಕೀಟಗಳ ಜನ್ಮ ಸಹ ಧನ್ಯವೆಂದು ಹೇಳುವುದೂ ಅದೇ ಕಾರಣದಿಂದಲೇ. ಈ ಸ್ಥಾನಮಹಾತ್ಮೆ ನಿಜಕ್ಕೂ ಒಪ್ಪಲೇಬೇಕಾದ ಸಂಗತಿ" (ರಾಷ್ಟ್ರದೇವೋಭವ, ಪುಟ 16). ಈ ಮಾತುಗಳನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು. ಬೇರೆ ಮಣ್ಣಿನವರು ಅವರ ಮಣ್ಣಿನ ಮಹತ್ವದ ಬಗ್ಗೆ ಇಂಥದೇ ಮಾತುಗಳನ್ನಾಡಿದರೆ ಮಾಪನಕ್ಕೆ ಯಾವ ಸಾಧನ ಬಳಸಬೇಕು. ಆದರೆ ಈ ಮಾತಿನ ಹಿಂದಿನ ಮೌಢ್ಯದ ಬಗ್ಗೆ ಟೀಕೆ ಮಾಡಿದರೆ ಶ್ರೀ ವಿ.ಎಸ್. ಆಚಾರ್ಯ ವೃಂದದ ಮನಸ್ಸಿಗೆ ನೋವಾಗಬಹುದೆಂದು ನಾವದನ್ನು ಸ್ವೀಕರಿಸಬೇಕೆ? ಸ್ವಲ್ಪ ಲಘುವಾಗಿ ಹೇಳಬಯಸುವುದಾದರೆ ನಮ್ಮ ಸಮಾಜ ಶಾಸ್ತ್ರಜ್ಞರಿಗೆ ಅರ್ಥವಾಗಿರದ ಭಾರತದ ಜನಸಂಖ್ಯಾ ಸ್ಫೋಟದ ಮರ್ಮ ಗೋಲ್ವಾಲ್ಕರ್ ಅವರಿಗೆ ತಿಳಿದಿದೆ. ಅದೂ ಅವರ ದಿವ್ಯ ತೇಜಸ್ಸಿನ ಪ್ರಭಾವವೇ ಇರಬಹುದು. ನಮ್ಮ ಜನಸಂಖ್ಯೆಯು ಅತಿ ವೇಗದಿಂದ ಹೆಚ್ಚುತ್ತಿರುವುದಕ್ಕೆ ನಮ್ಮ ದೇಶದ ಪಾವಿತ್ರ್ಯವೇ ಕಾರಣ. ಅನ್ಯ ದೇಶಗಳಲ್ಲಿ ಸತ್ಕರ್ಮ ಮಾಡುವವರು ಜಾಸ್ತಿ ಇರಬೇಕು; ಅಂತೆಯೇ ಮೋಕ್ಷಪ್ರಾಪ್ತಿಗೆ ತಹತಹಿಸುವವರ ಸಂಖ್ಯೆಯೂ ಜಾಸ್ತಿ. ಅಂತಹ ಆಕಾಂಕ್ಷೆಯವರೆಲ್ಲಾ ಎಲ್ಲೆಲ್ಲೋ ಸತ್ತು ಇಲ್ಲೇ ಹುಟ್ಟಬೇಕಲ್ಲ! ಭಗವಂತ, ಮೋಕ್ಷ, ಪಾವಿತ್ರ್ಯ, ಮಹಾತ್ಮೆ, ಪುಣ್ಯ ಇವೆಲ್ಲಕ್ಕೂ ನಮ್ಮದೇ ಗುತ್ತಿಗೆ ಎಂದಾಯಿತು. ಇದನ್ನೆಲ್ಲಾ ಮಾನ್ಯ ಮಾಡುವ ಆಚಾರ್ಯರ ಪಕ್ಷವು ನಮ್ಮ ದೇಶದ ಸಾರ್ವಭೌಮತ್ವವನ್ನು ಎಷ್ಟರಮಟ್ಟಿಗೆ ರಕ್ಷಿಸಿತೆಂದು ಅದರ ಅಧಿಕಾರದ ಅವಧಿಯಲ್ಲಿ ತೋರಿಸಿಕೊಟ್ಟಿದೆ. ಬಹುಶಃ ಇಂತಹದ್ದನ್ನೆಲ್ಲಾ ಸೀತಾರಾಂ ತಮ್ಮ ಪತ್ರಿಕೆಯಲ್ಲಿ ಚರ್ಚಿಸಿದ್ದು ಇವರ ಪಿತ್ತವನ್ನು ನೆತ್ತಿಗೇರಿಸಿರಬೇಕು.


ನಮ್ಮ ಸಂಸ್ಕೃತಿಯ ಹೆಗ್ಗಳಿಕೆಯು ಯಾವೊಂದು ಪಂಗಡದ ಖಾಸಗಿ ಸ್ವತ್ತೂ ಅಲ್ಲ, ಅದರಲ್ಲಿ ಸಮಪಾಲು ಭಾರತೀಯರಿಗೆಲ್ಲಾ ಇದೆ. ಇಂತಹ ಮತಧರ್ಮದವರು ಮಾತ್ರ ಭಾರತೀಯರೆಂದು ನಿಷ್ಕರ್ಷಿಸುವ ಹಕ್ಕು ಯಾರಿಗೂ ಇಲ್ಲ. ತಾರತಮ್ಯದ ಸಂಸ್ಕೃತಿಯನ್ನು ನಮ್ಮದೆಂದು ಹೇಳಿಕೊಂಡು ಅದನ್ನು ಬೆಳೆಸುವುದು ವಿವೇಕವಲ್ಲ. ಛಿದ್ರಗೊಂಡ ಭಾರತೀಯ ಸಮಾಜವು ಎದುರಾಳಿಗಳಿಂದ ಸೋಲನ್ನನುಭವಿಸಿದ್ದು ಚರಿತ್ರೆಯು ಕಲಿಸುವ ಪಾಠ; ಅಂತೆಯೇ ಶ್ರೇಷ್ಠ-ಕನಿಷ್ಠ ಎಂಬ ಸಾಮಾಜಿಕ ವಿಭಜನೆಯು ಅಪಾರ ಹಾನಿಯನ್ನುಂಟುಮಾಡಿದೆ. ಅಂತಹ ಹಾದಿಯನ್ನು ತ್ಯಜಿಸಿ ನಮ್ಮ ದೇಶದಲ್ಲೂ ಸತ್ಕರ್ಮದ ಸ್ಥಾಪನೆ ಮಾಡುವುದು ಆರೋಗ್ಯಕರ.



ಜೈನ ಮುನಿ ತರುಣ ಶ್ರೀ




ಗೋಲ್ವಾಲ್ಕರ್



ಮಂತ್ರಿ ವಿ.ಎಸ್. ಆಚಾರ್ಯ

ಸೀತಾರಾಂ ಅವರ ಬಂಧನದಲ್ಲಿರುವ ವಿಪರ್ಯಾಸವೇ ನಮಗೆ ಬುದ್ಧಿ ಹೇಳಬೇಕು. ಜೈನ ಮುನಿಗಳ ಬಗ್ಗೆ ಬರೆದದ್ದು ಸೀತಾರಾಂ ಅವರ ಅಪರಾಧವೆನ್ನುವುದಾದರೆ, ಅಹಿಂಸೆಯೇ ಪರಮ ಧರ್ಮವೆನ್ನುವ ಜೈನಮತದ ಪರವಾಗಿ ಸೀತಾರಾಂ ಕುಟುಂಬದ ಮೇಲೆ ಹರಿಯಬಿಟ್ಟಿರುವ ಹಿಂಸೆಯ ಬಗ್ಗೆ ಏನು ಹೇಳಬೇಕು? ಸತ್ಯವು ಅನೇಕ ಮುಖಗಳನ್ನು ಹೊಂದಿದೆ ಎನ್ನುವುದು ಜೈನದರ್ಶನದ ಒಂದು ಉತ್ಕೃಷ್ಟ ತಿಳಿವು. ಹಾಗಿದ್ದರೆ ಸೀತಾರಾಂ ಅವರ ಅಭಿಪ್ರಾಯವು ಜೈನಮುನಿಗಳಿಗೆ ಹೇಗೆತಾನೆ ಅಪಚಾರವೆಸಗುತ್ತದೆ? ಸಹನೆಯು ಜೈನತತ್ವದ ಸಾರವಾಗಿರುವಂತೆ ನಮ್ಮ ಪ್ರಜಾಪ್ರಭುತ್ವ ಧರ್ಮದ ಸಾರ ಕೂಡ ಆಗಿದೆ, ಆಗಿರಬೇಕು. ಇಷ್ಟಾಗಿ ಯಾವ ಜೈನ ಮುನಿಗಳ ಬಗ್ಗೆ ಸೀತಾರಾಂ ಬರೆದದ್ದು ಯಾರದೋ ಮನಸ್ಸಿಗೆ ಅಶಾಂತಿಯುಂಟು ಮಾಡಿ ಅವರಿಂದ ಬೇರೆ ಅಶಾಂತಿಯನ್ನು ಸೃಷ್ಟಿಸಿದೆಯೋ ಆ ಜೈನ ಮುನಿಗಳೇ ಸ್ವತಃ ಈ [illegible] ಬಗ್ಗೆ ಯಾವ ಭಾವನೆ [illegible] ವ್ಯಾರೆಂದು [illegible] ತಿಳಿಯುವಂತಿದ್ದರೆ [illegible]

ರೈತರ ಆತ್ಮಹತ್ಯೆ ಮತ್ತು ಮಧ್ಯಮವರ್ಗದ ನಿರ್ಲಿಪ್ತತೆ



ರಹಮತ್ ತರೀಕೆರೆ



ಕರ್ನಾಟಕದ ಈಚಿನ ಒಂದು ವೈರುಧ್ಯದ ಸಂಗತಿಯೆಂದರೆ ಇನ್ಫೋಸಿಸ್, ವಿಪ್ರೊ, ಬಯೋಕಾನ್ ಮುಂತಾದ ಕಂಪನಿಗಳು ತಮ್ಮ ಲಾಭವನ್ನು ಕೋಟಿಗಳ ಲೆಕ್ಕದಲ್ಲಿ ಘೋಷಿಸಿಕೊಳ್ಳುವುದು ಹಾಗೂ ಯಾವುದೋ ಹೆಸರೇ ಕೇಳಿರದ ಹಳ್ಳಿಯಲ್ಲಿ ರೈತನೊಬ್ಬ ಆತ್ಮಹತ್ಯೆ ಮಾಡಿಕೊಳ್ಳುವುದು. ಒಂದೇ ಪತ್ರಿಕೆಯಲ್ಲಿ ವಿರುದ್ಧ ಜಗತ್ತಿನ ಈ ಸುದ್ದಿಗಳು ಪ್ರಕಟವಾಗುತ್ತವೆ. ಇವು ಪ್ರಕಟವಾಗುವ ಬಗೆಯೂ ವಿಶಿಷ್ಟ. ಲಾಭ ಘೋಷಣೆಯ ಸುದ್ದಿ ಫೋಟೊ ಸಮೇತ ದೊಡ್ಡಕ್ಷರಗಳಲ್ಲಿದ್ದರೆ, ಆತ್ಮಹತ್ಯೆಯ ಸುದ್ದಿ ಅಕ್ಷರದಲ್ಲಿ ಚಿಕ್ಕದಾಗಿ ಒಳಪುಟಗಳಲ್ಲಿ ಇರುತ್ತದೆ. ಚಿತ್ರದ ಪರಿಣಾಮವನ್ನು ಅಕ್ಷರ ಮಾಡುವುದಿಲ್ಲ. ಹಾಗೆಂದು ಪೇಪರಿನವರಿಗೆ ರೈತನ ಫೋಟೊ ಹಾಕಬಾರದು ಎಂದಿಲ್ಲ. ಆದರೆ ಫೋಟೋಗಾಗಿ ಹೋಗುವುದೂ ಕಷ್ಟ ಎನಿಸುವ ಮೂಲೆಯಲ್ಲಿ ಅವರು ಸತ್ತಿರುತ್ತಾರೆ.

ಈ ವೈರುಧ್ಯವುಳ್ಳ ಸುದ್ದಿಗಳನ್ನು ಪೇಪರೋದುವ ಮಧ್ಯಮವರ್ಗದ ನಾವು, ಓದುವ ಮತ್ತು ಸ್ಪಂದಿಸುವ ಬಗೆ ಯಾವುದು? ಬಹುಶಃ ಇದು: ಆತ್ಮಹತ್ಯೆಯ ಸುದ್ದಿ ಅರೆಕ್ಷಣ ವಿಷಾದ ಹುಟ್ಟಿಸುತ್ತದೆ. ಆದರೆ ದಿನವೂ ಇದೇ ಸುದ್ದಿ ಓದುವ ಕಾರಣ ಅದು ಬಹಳ ಹೊತ್ತು ಕಾಡುವುದಿಲ್ಲ. (ಈ ಲೇಖನ ಬರೆಯುತ್ತಿರುವ ದಿನವೂ ಮೂಡಿಗೆರೆ ತಾಲೂಕಿನ ಹೆಮ್ಮಕ್ಕಿಯಲ್ಲಿ ಒಬ್ಬ ರೈತ ಜೀವ ತೆಗೆದುಕೊಂಡಿದ್ದಾನೆ.) ರೈತನ ಹೆಸರು, ವಯಸ್ಸು, ಊರು, ಕೊಂದುಕೊಂಡ ವಿಧಾನ ಇವುಗಳಲ್ಲಿ ವ್ಯತ್ಯಾಸಗಳಿರುತ್ತವೆ ಅಷ್ಟೇ- ಹೀಗಾಗಿ ಈ ಸಾಲಿನಲ್ಲಿ ಸತ್ತ ಎಷ್ಟನೇ ರೈತ ಎಂಬ ಅಂಕಿಅಂಶದತ್ತ ಒಮ್ಮೆ ನೋಡಿ ಪಕ್ಕದ ಇನ್ನೊಂದು ಸುದ್ದಿಗೆ ಕಣ್ಣು ಚಲಿಸಿಬಿಡುತ್ತದೆ.

ಆದರೆ ಲಾಭ ಗಳಿಸುವ ಕಂಪನಿಗಳ ಯಶಸ್ಸನ್ನು ಓದುವಾಗ ಇದು ಕರ್ನಾಟಕದ ಪ್ರಗತಿ ಎಂದು ಒಳಗೇ ಸಣ್ಣಗಿನ ಹೆಮ್ಮೆ ಮೊಳೆಯುತ್ತದೆ. ಇದರ ಜತೆಗೆ ಆಗಾಗ್ಗೆ ಪ್ರಕಟವಾಗುವ ಭಾರತದ ಸಿರಿವಂತರ ಪಟ್ಟಿಯಲ್ಲಿ ಕರ್ನಾಟಕದವರು ಎಷ್ಟು ಜನ ಎಂದು ಹುಡುಕಬೇಕೆನಿಸುತ್ತದೆ. ಕೆಲವು ಕಂಪನಿಗಳ ಮೂಲ ಕರ್ನಾಟಕವಾದರೂ ವ್ಯವಹಾರದ ದೃಷ್ಟಿಯಿಂದ ಅವು ಬಹುರಾಷ್ಟ್ರೀಯ. ಅವು ವಿದೇಶಗಳಲ್ಲಿ ತಮ್ಮ ಶಾಖೆ ತೆರೆವ ಹಾಗೂ ಮತ್ತೊಂದು ಕಂಪನಿ ಖರೀದಿಸುವ ಸಾಹಸ ಮಾಡುತ್ತವೆ. ಅದನ್ನು ಕನ್ನಡಿಗರ ದಿಗ್ವಿಜಯ ಎಂದು ತಿಳಿಯುತ್ತೇವೆ; ಇದೊಂದು ತರಹ ಚರಿತ್ರೆಯಲ್ಲಿ ಕರ್ನಾಟಕದ ದೊರೆಗಳು ದೂರರಾಜ್ಯಕ್ಕೆ ಹೋಗಿ ಸಾಧಿಸಿದ ಜಯವನ್ನು ಓದಿ ಪಡುವ ಹೆಮ್ಮೆಯಂತೆ. ಈ ಹೆಮ್ಮೆಗೆ ಸವತಿ ಮತ್ಸರದ ಆಯಾಮವೂ ಇರುತ್ತದೆ. ಅದೆಂದರೆ, ಯಾವುದೊ ಕಂಪನಿ ಬೆಂಗಳೂರು ಬಿಟ್ಟು ಹೈದರಾಬಾದಿಗೆ ಹೋಯಿತು ಎಂದರೆ ಕರುಬುವುದೂ; ರಸ್ತೆಯನ್ನೊ ಸಾರಿಗೆ ದಟ್ಟಣೆಯನ್ನೊ ಕಡಿಮೆ ಮಾಡದಿದ್ದರೆ ನಾವು ಬೆಂಗಳೂರು ಬಿಟ್ಟು ಬೇರೆಕಡೆ ಹೋಗುತ್ತೇವೆ ಎಂದು ಕಂಪನಿಗಳು ಸರ್ಕಾರಕ್ಕೆ ಬೆದರಿಕೆ ಹಾಕಿದಾಗ, 'ಪ್ರತಿಭಾ ಪಲಾಯನ' ಆಗುತ್ತದೆ ಎಂದು ಕನಲಿ ವಾಚಕರವಾಣಿಗೆ ಪತ್ರ ಬರೆಯುವುದೂ ಮಾಡುತ್ತೇವೆ; ನಮ್ಮ ಮಕ್ಕಳು ಐಟಿ ಕಂಪನಿಗಳಲ್ಲಿದ್ದರೆ, ಅಮೆರಿಕದಲ್ಲಿದ್ದರೆ, ನಮಗಿಂತ ದೊಡ್ಡ ವೇತನ ಪಡೆಯುತ್ತಿದ್ದರೆ, ಏನಾದರೂ ನೆಪತೆಗೆದು ಅಭಿಮಾನದಿಂದ ಹೇಳಿಕೊಳ್ಳುತ್ತೇವೆ. ಒಟ್ಟಿನಲ್ಲಿ ಮಧ್ಯಮವರ್ಗಕ್ಕೆ ಬೆಂಗಳೂರಿನ ಕೆಲವು ಕಂಪನಿಗಳು ಕರ್ನಾಟಕದ ಹೊಸ ಅಸ್ಮಿತೆಗಳಾಗಿಬಿಟ್ಟಿವೆ. ಮುಂದೊಂದು ದಿನ ದೇಶದ ಯಾವುದೇ ಭಾಗಕ್ಕೆ ಹೋಗಿ, ನಾವು ಇಂತಹ ಕಂಪನಿಯ ಊರಿನವರು ಎಂದು ಪರಿಚಯಿಸಿಕೊಳ್ಳುವ ಸ್ಥಿತಿ ಬಂದರೆ ಸೋಜಿಗವಿಲ್ಲ.

ಆದರೆ ಇದೇ ಕಾಲದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಅಥವಾ ಹೈದರಾಬಾದ್ ಕರ್ನಾಟಕದ ಹಳ್ಳಿಗಳಿಂದ ಮಳೆಯಿಲ್ಲದೆ, ಕೆಲಸವಿಲ್ಲದೆ ಜನ ಇರುವೆಗಳಂತೆ ಬೆಂಗಳೂರು, ಮಂಗಳೂರು, ಪೂನಾ, ಗೋವಾಗಳಿಗೆ ಗುಳೆ ಹೋಗುತ್ತಿರುವುದು ಒಂದು ಅಪಸ್ವರದಂತಾಗಿದೆ; ಈ ಗುಳೆಯ ಪ್ರಮಾಣ ಬಿಜಾಪುರ, ಗುಲಬರ್ಗ, ರಾಯಚೂರು ಭಾಗಗಳಿಂದ ಬೆಂಗಳೂರಿಗೆ ಬರುವ ಬಸ್ಸು ಅಥವಾ ರೈಲುಗಳಿಂದ ಇಳಿಯುವ ಜನರನ್ನು ಕಂಡರೆ ಗೊತ್ತಾಗುತ್ತದೆ. ಅವರ ಗುರುತು ಹಿಡಿಯುವುದೂ ಕಷ್ಟವಲ್ಲ, ಹೆಗಲಮೇಲಿ ರಸಗೊಬ್ಬರದ ಖಾಲಿಚೀಲಗಳಲ್ಲಿ ಪಾತ್ರೆ, ಹೆಂಚು, ಕೌದಿ, ಜೋಳ, ಬಟ್ಟೆಬರೆ ತುಂಬಿದ ಗಂಟುಮೂಟೆಗಳನ್ನು ಹೊತ್ತಿರುತ್ತಾರೆ. ವ್ಯಾಪಾರಿಗಳೂ ಉದ್ಯಮಿಗಳೂ ವಲಸೆ ಹೋಗುತ್ತಾರೆ; ಆದರವರು ಬಂಡವಾಳ ಮತ್ತು ತಂತ್ರಜ್ಞಾನದ ಜತೆ ಚಲಿಸುವವರು. ಅದು ಚಕ್ರವರ್ತಿ ಆಗುವವನು ಸೈನಿಕ ಶಕ್ತಿಯ ಜತೆ ಮಾಡುವ ದಂಡಯಾತ್ರೆಯಂತೆ. ಆದರೆ ಕೂಲಿಗಾಗಿ ಗುಳೆ ಹೋಗುವವರಲ್ಲಿ ಇರುವುದು ಕೇವಲ ಕೈಕಾಲುಗಳ ದೇಹ. ಅದುವೇ ಅವರ ಬಂಡವಾಳ. ಆದರೆ ಈ ದೇಹಗಳೂ ಈಗ ಸ್ವಹತ್ಯೆಗಳಲ್ಲಿ ಇಲ್ಲವಾಗುತ್ತಿವೆ.

ಒಂದೇ ನಾಡಿನಲ್ಲಿ ಸಂಭವಿಸುತ್ತಿರುವ ಈ ಲಾಭದ ಸಂಭ್ರಮ ಹಾಗೂ ಸಾವಿನ ದುಗುಡಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಕೃಷಿ ಮೇಲೆ ಕೈಗಾರಿಕೆ ಮಾಡುತ್ತಿರುವ ಸವಾರಿಯೆಂದೆ? ಹಳ್ಳಿಗಳನ್ನು ನಗರಗಳು ಹೀರುತ್ತಿವೆ ಎಂದೇ? ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆ ಇತರೆ ಆರ್ಥಿಕ ಕ್ಷೇತ್ರಗಳನ್ನು ತನ್ನ ಏಳಿಗೆಗಾಗಿ ಬಳಸಿಕೊಂಡು ಏಕಮುಖವಾಗಿ ಬೆಳೆಯುತ್ತಿದೆ ಎಂದೇ? ಪ್ರಭುತ್ವಗಳು ನಾಡಿನ ಅಸಹಾಯಕ ಸಮುದಾಯಗಳ ಕೈಬಿಟ್ಟವು ಎಂದೇ? ಇಷ್ಟಂತೂ ನಿಜ. ಕಷ್ಟ ಬಂತೆಂದು ಯಾವೊಬ್ಬ ದೊಡ್ಡ ಉದ್ಯಮಿಯೂ ಪ್ರಾಣಬಿಟ್ಟಿಲ್ಲ. ರೈತರು, ಕೂಲಿಕಾರರು, ಆದಿವಾಸಿಗಳು ಮಾತ್ರ ತಮ್ಮ ಭೂಮಿ, ಹುಟ್ಟಿ ಬೆಳೆದ ಊರು ಮತ್ತು ಕೊನೆಗೆ ಪ್ರಾಣವನ್ನು ನಾನಾ ಕಾರಣಕ್ಕಾಗಿ ತ್ಯಾಗ ಮಾಡುತ್ತಲೇ ಇದ್ದಾರೆ; ಅದು ಬಂಗಾಳದ ಸಿಂಗೂರ್, ಕೊಪ್ಪಳದ ಗಿಣಿಗೇರಾ, ಉಡುಪಿಯ ನಂದಿಕೂರು, ಕಾರಿಡಾರ್ ರಸ್ತೆಯ ಆಸುಪಾಸಿನ ಹಳ್ಳಿಗಳು, ಮಲೆನಾಡಿನ ಹಾಡಿ ಯಾವುದೇ ಇರಬಹುದು. ವ್ಯಂಗ್ಯವೆಂದರೆ ಕರ್ನಾಟಕದಲ್ಲಿ ರೈತರ ಭೂಮಿಯನ್ನು ಉದ್ಯಮಿಗಳು ಕೊಳ್ಳಲು ಅನುವಾಗುವಂತೆ ಭೂಕಾಯ್ದೆಯನ್ನು ತಿದ್ದುಪಡಿ ಮಾಡಿದವರು ಮಣ್ಣಿನ ಮಗ ದೇವೇಗೌಡರು!

> ಒಂದೇ ನಾಡಿನಲ್ಲಿ ಸಂಭವಿಸುತ್ತಿರುವ ಈ ಲಾಭದ ಸಂಭ್ರಮ ಹಾಗೂ ಸಾವಿನ ದುಗುಡಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಕೃಷಿ ಮೇಲೆ ಕೈಗಾರಿಕೆ ಮಾಡುತ್ತಿರುವ ಸವಾರಿಯೆಂದೇ? ಹಳ್ಳಿಗಳನ್ನು ನಗರಗಳು ಹೀರುತ್ತಿವೆ ಎಂದೇ? ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆ ಇತರೆ ಆರ್ಥಿಕ ಕ್ಷೇತ್ರಗಳನ್ನು ತನ್ನ ಏಳಿಗೆಗಾಗಿ ಬಳಸಿಕೊಂಡು ಏಕಮುಖವಾಗಿ ಬೆಳೆಯುತ್ತಿವೆ ಎಂದೇ? ಪ್ರಭುತ್ವಗಳು ನಾಡಿನ ಅಸಹಾಯಕ ಸಮುದಾಯಗಳ ಕೈಬಿಟ್ಟವು ಎಂದೇ? ಇಷ್ಟಂತೂ ನಿಜ. ಕಷ್ಟ ಬಂತೆಂದು ಯಾವೊಬ್ಬ ದೊಡ್ಡ ಉದ್ಯಮಿಯೂ ಪ್ರಾಣಬಿಟ್ಟಿಲ್ಲ. ರೈತರು, ಕೂಲಿಕಾರರು, ಆದಿವಾಸಿಗಳು ಮಾತ್ರ ತಮ್ಮ ಭೂಮಿ, ಹುಟ್ಟಿ ಬೆಳೆದ ಊರು ಮತ್ತು ಕೊನೆಗೆ ಪ್ರಾಣವನ್ನು ನಾನಾ ಕಾರಣಕ್ಕಾಗಿ ತ್ಯಾಗ ಮಾಡುತ್ತಲೇ ಇದ್ದಾರೆ.

ಅಧಿಕಾರ, ಬಂಡವಾಳ, ಕೈಗಾರಿಕೆ ಹಾಗೂ ಸಂಪತ್ತುಗಳು ಕೇಂದ್ರೀಕರಣ ಆಗಿರುವ ಕಡೆ ಜನವಲಸೆ ಸಹಜ; ನಗರಗಳಿಗೆ ದುಡಿಯ ಹೋದವರು ಹಳ್ಳಿಯಲ್ಲಿ ಸಿಗದ ಬದುಕನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಹೊಸ ಬದುಕಿಗಾಗಿ ಅವರು ತೆರುತ್ತಿರುವ ಬೆಲೆ ಯಾವುದು? ಕೆಲವು ತಿಂಗಳ ಹಿಂದೆ ಇನ್ಫೋಸಿಸ್‌ನ ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿದು ರಾಯಚೂರಿನ ಕಾರ್ಮಿಕರು ಸತ್ತು ಹೋದರು. ಈ ಪ್ರಕರಣವು ಒಂದು ರೂಪಕದಂತಿದೆ. ಯಾರ ಭಾರವನ್ನು ಯಾರು ಹೊರುತ್ತಿದ್ದಾರೆ? ಬಹುಶಃ ಮಾರುಕಟ್ಟೆ ಅರ್ಥಶಾಸ್ತ್ರವು ಈಚೆಗೆ ಹೊಸ ಅರ್ಥಕೋಶವನ್ನೇ ರಚಿಸಿದಂತಿದೆ; ಉದಾ: ಲಾಭದಾಯಕ ಕಂಪನಿ ನಡೆಸುವ ಜಾಣ್ಮೆ=ಪ್ರತಿಭೆ. ಕಂಪನಿಗಳ ಬೆಳವಣಿಗೆ= ನಾಡಿನ ಪ್ರಗತಿ. ಕಂಪನಿಗಳಿಗೆ ಬೇಕಾದ್ದನ್ನು ಒದಗಿಸುವುದು = ದಕ್ಷ ಸರ್ಕಾರದ ಲಕ್ಷಣ. ಕಂಪನಿಗಳಿಗೆ ಬೇಕಾದ ಶಿಕ್ಷಣ ಮತ್ತು ತರಬೇತಿ=ನಿಜವಾದ ವಿದ್ಯೆ. ನೌಕರರ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವವನು= ಆಧ್ಯಾತ್ಮಿಕ ಗುರು-ಇತ್ಯಾದಿ; ಇದಕ್ಕೆ ತಕ್ಕಂತೆ ಯಶಸ್ವೀ ಉದ್ಯಮಿಗಳನ್ನು ಹೊಸ ಯುಗದ ಆದರ್ಶ ವ್ಯಕ್ತಿಗಳು ಎಂದು ಕೆಲ ಮಾಧ್ಯಮಗಳೂ ಬಿಂಬಿಸುತ್ತಿವೆ. ನಾರಾಯಣಮೂರ್ತಿ ಇನ್ಫೋಸಿಸ್‌ನ ಸಿಇಓ ಸ್ಥಾನವನ್ನು ಬಿಟ್ಟುಕೊಟ್ಟ ದಿನ, ಪತ್ರಿಕೆಗಳು ಅವರ ಸಂದರ್ಶನ ಮಾಡಿದವು. ಆಗ ಒಂದು ಪತ್ರಿಕೆ "ನಿಮಗೀಗ ಬಿಡುವು ಸಿಕ್ಕಿದೆ; ರಾಷ್ಟ್ರಪತಿ ಆಗುತ್ತೀರೇನು?" ಎಂದು ಕೇಳಿತು. ಈ ಮನೋಧರ್ಮ ವ್ಯಾಪಕವಾಗಿ ಸಿನಿಮಾಕ್ಕೂ ಹಬ್ಬಿದೆ. ಇದಕ್ಕೆ ಉದಾಹರಣೆ ಮಣಿರತ್ನಂ ತೆಗೆದ ಹಿಂದಿ ಸಿನಿಮಾ 'ಗುರು'; ಶಾಲಾಮಾಸ್ತರನ ಮಗನಾದ ಗುರುಕಾಂತ್ ದೇಸಾಯಿ, ಗುಜರಾತಿನಿಂದ ಬರಿಗೈಯಿಂದ ವಲಸೆ ಬಂದವನು, ತನ್ನ ಚಾಲಾಕಿತನದಿಂದ ದೊಡ್ಡ ಉದ್ಯಮಿಯಾಗಿ ಬೆಳೆಯುತ್ತಾನೆ. ಅವನನ್ನು ಹೊಸಯುಗದ ಮಾದರಿ ಪುರುಷ ಎಂಬಂತೆ ಸಿನಿಮಾ ಬಿಂಬಿಸುತ್ತದೆ; ಗುರು ಎಂಬ ಹೆಸರನ್ನು ಉದ್ದೇಶಪೂರ್ವಕವಾಗಿ ಇಡಲಾಗಿದೆ. ಭಾರತೀಯ ಸಿನಿಮಾ ಸ್ವತಃ ಒಂದು ಉದ್ಯಮವಾಗಿದ್ದರೂ ಅದರೊಳಗಿನ ಕಲೆಗೆ ನಮ್ಮ ಸಮಾಜದ ದಮನಿತರ ನೋವುಗಳನ್ನು ಬಿಂಬಿಸುವ ಗುಣ ಮೊದಲಿಂದಲೂ ಇತ್ತು. ಅದೂ ಈಗ ಕ್ಷೀಣಿಸುತ್ತಿರುವಂತಿದೆ. ನಿರ್ದೇಶಕರು ಸಿನೆಮಾ ಕಥೆಗಾಗಿ ಯಶಸ್ವಿ ಉದ್ಯಮ ಪುರುಷರ ಜೀವನ ಚರಿತ್ರೆಗಳನ್ನು ಅರಸುತ್ತಿದ್ದಾರೆ. ಭಾರತದ ಕೆಲವು ವರ್ಗಗಳು ಜಾಗತೀಕರಣದ ಕುದುರೆ ಸವಾರಿಗೆ ಸಜ್ಜಾಗುತ್ತಿವೆ ಮಾತ್ರವಲ್ಲ ಅದನ್ನು ಏರಿ ದಿಗ್ವಿಜಯವನ್ನೂ ಸಾಧಿಸುತ್ತಿವೆ. 'ಬಲವುಳ್ಳವರು ಬದುಕಬಹುದು; ಏನಾದರೂ ಮಾಡು, ಆದರೆ ಬಲಿಷ್ಠನಾಗು' ಎಂಬುದು ಈಗಿನ ಹೊಸ ವಿಕಾಸವಾದ. ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲಾಗದ ಪ್ರಾಣಿಗಳು ನಾಶವಾಗುವಂತೆ, ಸ್ಪರ್ಧಿಸಲಾಗದ ಜನ ಅಳಿಯುವುದು ಹೊಸ ನೈಸರ್ಗಿಕ ನ್ಯಾಯವಾಗಿದೆ. ಕೆಲವೇ ವರ್ಷಗಳಲ್ಲಿ ದೊಡ್ಡ ಸಿರಿವಂತನಾಗಿ ಬೆಳೆಯುವ 'ಗುರು' ಸಿನಿಮಾದ ನಾಯಕ ತಾನು ಬೆಳೆಯಲು ಹಿಡಿದ ದಾರಿಗಳ ಬಗ್ಗೆ ಒಂದಿಷ್ಟೂ ಪರಿತಾಪ ಪಡುವುದಿಲ್ಲ. ತನ್ನ ಚಾಲಾಕಿತನವನ್ನು ಸಾಹಸವೆಂದು ಸಾರುತ್ತಾನೆ. ಈ ಮನೋಭಾವಕ್ಕೆ ತನ್ನ ತಂತ್ರಜ್ಞಾನ, ಉದ್ಯಮ ಹಾಗೂ ಮಿಲಿಟರಿ ಬಲದಿಂದ ಭೂಗೋಳವನ್ನು ಹಿಡಿತಕ್ಕೆ ತೆಗೆದುಕೊಂಡಿರುವ ಅಮೆರಿಕವು ಒಂದು ಆದರ್ಶ ಆಗುವುದು ಸಹಜ. ಅಮೆರಿಕವು ಇರಾಕನ್ನು ಆಕ್ರಮಿಸಿಕೊಂಡಾಗ, ಭಾರತ ಸರ್ಕಾರವು ಔಪಚಾರಿಕವಾಗಿ ಖಂಡಿಸಲು ಹೊರಟಾಗ, ಕಾರ್ಪೊರೇಟ್ ಜಗತ್ತಿನವರು ಮಾಡಿದ ಮನವಿಯೆಂದರೆ- 'ಈ ತಪ್ಪು ಮಾಡಬೇಡಿ. ಒಂದೊಮ್ಮೆ ಮಾಡಿದರೆ, ನಮ್ಮ ದೇಶದ ಕಂಪನಿಗಳಿಗೆ ಇರಾಕಿನ ಪುನರ್ನಿರ್ಮಾಣದ ಕಾಂಟ್ರಾಕ್ಟು ಸಿಗುವುದಿಲ್ಲ'! ಮಾರುಕಟ್ಟೆ ಅರ್ಥಶಾಸ್ತ್ರದ ನೈತಿಕತೆಯಿದು.


ಹೀಗೆಂದು ನಗರಿಕರಣ, ಕೈಗಾರಿಕೆ, ಆಧುನಿಕತೆಗಳನ್ನು ಕುರುಡಾಗಿ ವಿರೋಧಿಸಬೇಕಾಗಿಲ್ಲ. ಕನ್ನಡ ಚಿಂತನೆಯಲ್ಲಿ ಆಧುನಿಕತೆಯನ್ನು ಮುಗ್ಧವಾಗಿ ವಿರೋಧಿಸುವ ಒಂದು ಧಾರೆಯಿದೆ. ಅದು ಅನುಪಯುಕ್ತ. ಯಾಕೆಂದರೆ ತಂತ್ರಜ್ಞಾನ, ನಗರ, ಕೈಗಾರಿಕೆ ಹಾಗೂ ಆಧುನಿಕತೆಗಳು ಭಾರತದಲ್ಲಿ ಗ್ರಾಮೀಣ ಕೃಷಿಕರ ಪಾಲಿಗೆ ಸಂಗಾತಿಯೂ ಆಗಿವೆ. ಕೆಲವು ದಶಕಗಳ ಹಿಂದೆ ಎಸ್ಸೆಸ್ಸೆಲ್ಸಿ ಮಾಡಿಕೊಂಡ ಹಳ್ಳಿ ಹಾಗೂ ಪಟ್ಟಣಗಳ ಬಡ ಮತ್ತು ಕೆಳಮಧ್ಯಮ ವರ್ಗದ ತರುಣರು ಐಟಿಐ ಮಾಡಿಕೊಂಡು ಕಾರ್ಖಾನೆ ಸೇರುತ್ತಿದ್ದರು. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಸೈರನ್ ಕೂಗಿದಾಗ ಸೈನಿಕರಂತೆ ಸಾವಿರಾರು ಕಾರ್ಮಿಕರು ಹೊರಬರುತ್ತಿದ್ದುದನ್ನು ನಾನು ಕಂಡಿರುವೆ. ಅವರಲ್ಲಿ ಬಹಳ ಜನ ನೀರಾವರಿಯಿಲ್ಲದ ಭಾಗದಿಂದ ಬಂದವರು. ಈಗಲೂ ಭದ್ರಾವತಿಯಲ್ಲಿ ನಾಗಮಂಗಲ ಕಡೆಯ ಜನಸಂಖ್ಯೆ ತಮ್ಮ ಕಡೆಯ ವ್ಯಕ್ತಿಯನ್ನು ಚುನಾವಣೆಯಲ್ಲಿ ಗೆಲ್ಲಿಸುವಷ್ಟು ಹೆಚ್ಚಾಗಿರಲು ಇದೇ ಕಾರಣ. ಡ್ಯಾಂ ಕೆಲಸಕ್ಕೆಂದು ಬಂದ ತಮಿಳರು ಕೂಡ ನಂತರ ಅಲ್ಲಿ ಹೊಲಗದ್ದೆಗಳನ್ನು ಮಾಡಿಕೊಂಡು ನೆಲೆಸಿದರು. ಹತ್ತಿ ಕಬ್ಬು ಬೆಳೆಯುವ ರೈತರು ಜಿನ್ನಿಂಗ್ ಸಕ್ಕರೆ ಕಾರ್ಖಾನೆಗಳ ಜತೆ ಕರುಳಬಳ್ಳಿ ಸಂಬಂಧ ಈಗಲೂ ಇರಿಸಿಕೊಂಡಿವೆ.

ಆದರೆ ಈಗಿನ ಉದ್ಯಮ ಕೇಂದ್ರಿತ ಆರ್ಥಿಕ ನೀತಿಯು ರೈತಾಪಿ ಹಳ್ಳಿಗಳನ್ನು ಅವರ ಪಾಲಿನ ಭೂಮಿ ನೀರುಗಳನ್ನು ಏಕಮುಖಿಯಾಗಿ ಬಳಸಿಕೊಳ್ಳುವಂತಹವು. ಇದಕ್ಕೆ ಸಿಂಗೂರ್ ಘಟನೆ ಒಂದು ಸಾಕ್ಷಿ. ಕರ್ನಾಟಕದ ಐಟಿ-ಬಿಟಿ ಕಂಪನಿಗಳು ಗ್ರಾಮೀಣ ಭಾಗದ ಜನರನ್ನು ಹೇಗೆ ಒಳಗೊಂಡಿವೆ? ಇವು ತಯಾರಿಸುವ ಸಾಫ್ಟ್‌ವೇರುಗಳು ಯಾರ ಅಗತ್ಯವನ್ನು ಪೂರೈಸುತ್ತಿವೆ ಎಂಬ ಪ್ರಶ್ನೆ ಒತ್ತಟ್ಟಿಗಿರಲಿ, ಇವು ಕನ್ನಡಕ್ಕೆ ಈತನಕ ಒಂದು ತಂತ್ರಾಂಶವನ್ನು ಮಾಡಿಕೊಡಲು ಮುಂದಾಗಲಿಲ್ಲ. ಇವುಗಳಲ್ಲಿ ತುಂಬಿಕೊಂಡಿರುವ ನಗರದ ಮಧ್ಯಮವರ್ಗದ, ಉಚ್ಚಜಾತಿಯ ಇಂಜಿನಿಯರುಗಳಿಗೆ ಹೋಲಿಸಿದರೆ, ಗಾರ್ಮೆಂಟಿನ ಫ್ಯಾಕ್ಟರಿಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು ಗುಳೆ ಬಂದವರಿಗೆ ಹೆಚ್ಚು ಕೆಲಸ ಬದುಕು ಕೊಟ್ಟಿವೆ.



ಲಾಭಕೋರ ಕಂಪನಿಗಳ ಬೆಳವಣಿಗೆಯೇ ಅಭಿವೃದ್ಧಿ ಎಂಬ ಈ ಹೊತ್ತಿನ ನಂಬಿಕೆಯ ಪರಿಣಾಮಗಳು ನಮ್ಮ ಸಾಮುದಾಯಿಕ ಬದುಕಿನ ಪಾಲಿಗೆ ಶತ್ರುಗಳಾಗಿವೆ.


ಇದರಿಂದ ನೀರು, ಭೂಮಿ, ಖನಿಜ, ಮಾನವಶ್ರಮ – ಇವು ದೋಚಬಲ್ಲವರ ಪಾಲಾಗುತ್ತಿವೆ. ಪೆಪ್ಸಿ, ಕೋಕಾಕೋಲಾ ಘಟಕಗಳು ನಮಗೆಷ್ಟು ವಿಷ ಕುಡಿಸುತ್ತಿವೆ ಎನ್ನುವುದು ಇರಲಿ, ಅವು ನಮ್ಮ ಅಂತರ್ಜಲದ ಎಷ್ಟು ನೀರನ್ನು ಬಳಸುತ್ತಿವೆ ಎಂದೂ ನಾವು ಕೇಳಿಕೊಂಡಿಲ್ಲ. ಸರಕಾರ ಯಾವ ಪಕ್ಷದ್ದೇ ಬರಲಿ, ಅವು ಈ ಕಂಪನಿಗಳ ಸೇವೆಯನ್ನು ಮಾಡುತ್ತವೆ.



ಇದರಿಂದ ಪ್ರಭುತ್ವಗಳ ಸ್ಥಾನಮಾನದಲ್ಲೂ ಬದಲಾವಣೆಯಾಗಿದೆ. ಹಿಂದೆ ವಿದೇಶದ ಅಧಿಕಾರಸ್ಥರು ಬಂದರೆ, ಮೊದಲು ರಾಷ್ಟ್ರಪತಿ, ಪ್ರಧಾನಮಂತ್ರಿ ಮೊದಲಾದವರನ್ನು ಕಾಣುತ್ತಿದ್ದರು. ಈಗವರು ಕಂಪನಿಗಳ ಕ್ಯಾಂಪಸ್ಸುಗಳಿಗೆ ಮೊದಲು ಭೇಟಿಕೊಡುತ್ತಾರೆ. ನಂತರ ಅಗತ್ಯ ಕಂಡರೆ ಸರ್ಕಾರದ ಮುಖ್ಯಸ್ಥರನ್ನು ಔಪಚಾರಿಕವಾಗಿ ಭೇಟಿ ಮಾಡುತ್ತಾರೆ. ಒಂದರ್ಥದಲ್ಲಿ ಕಂಪನಿಗಳ ಒಡೆಯರು ಈಗ ವಿಶ್ವಮಾನವರು. ಅವರಿಗೆ ಕರ್ನಾಟಕದ ಹಂಗಿಲ್ಲ. ಅವರು 'ನಮಗೆ ಕನ್ನಡಿಗರು ಅನಿವಾರ್ಯವಲ್ಲ' ಎನ್ನುತ್ತಿದ್ದಾರೆ. ಇನ್ಫೋಸಿಸ್‌ನ ಮೈಸೂರು ಕ್ಯಾಂಪಸ್ಸಿನಲ್ಲಿ ನೂರಾರು ವಿದೇಶಿಗರು ತರಬೇತಿ ಪಡೆಯುತ್ತಿದ್ದಾರೆ.

ಸಮಸ್ಯೆಯೆಂದರೆ, ಕಂಪನಿ ಒಡೆಯರು, ನಾಡಿನ ಬೇಕುಬೇಡಗಳನ್ನು ನಿರ್ಧರಿಸುವ ಅಧಿಕಾರ ಪಡೆಯುತ್ತಿರುವುದು. ಈಚೆಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ನಾರಾಯಣಮೂರ್ತಿ ಅವರು ಕಾರ್ಯಕ್ರಮವೊಂದರಲ್ಲಿ ತೋರುಬೆರಳನ್ನು ನಿಮಿರಿಸಿ ಏನೊ ಬುದ್ಧಿ ಹೇಳುತ್ತಿರುವಂತೆ, ಅದನ್ನು ಅವರು ನಮ್ರ ವಿದ್ಯಾರ್ಥಿಯಾಗಿ ಕೇಳುತ್ತಿರುವಂತೆ ಇರುವ ಚಿತ್ರವು ಪ್ರಕಟವಾಗಿತ್ತು-'ಪ್ರಜಾವಾಣಿ'ಯಲ್ಲಿ. ಈ ಚಿತ್ರದಲ್ಲಿ ಇಬ್ಬರ ಬಾಡಿ ಲಾಂಗ್ವೇಜ್ ಸಾಂಕೇತಿಕವಾಗಿತ್ತು. ನಮ್ಮ ಪ್ರಧಾನ ಮಂತ್ರಿಯವರು ಅಮೆರಿಕದ ಅಧ್ಯಕ್ಷರ ಜತೆಯಿದ್ದಾಗಲೂ ಹೀಗೆ ನಸುನಾಚಿದ ದೇಹದಲ್ಲಿ ಗುಡ್‌ಬಾಯ್‌ನಂತೆ ಇರುತ್ತಾರೆ. '[illegible]' ಸಿನಿಮಾದ ನಾಯಕನಂತೆಯೇ ಶಿಕ್ಷಕರ ಮಗನಾದ ಮೂರ್ತಿ, ಯಶಸ್ವೀ ಕಂಪನಿ ಕಟ್ಟಿರುವ ಕಾರಣದಿಂದ, ನಾಡಿನ ಸಮಸ್ತ ವಿಷಯದಲ್ಲಿ ಬುದ್ಧಿವಾದ ಮಾಡುವ [illegible] ಪಡೆದುಕೊಂಡಂತಿದೆ. ಅವರು 'ಮೀಸಲಾತಿ [illegible]ಅಗತ್ಯ' ಎಂದು ಘೋಷಿಸಿದರು; ಮಕ್ಕಳಿಗೆ [illegible] ಹಂತದಿಂದ ಇಂಗ್ಲಿಷ್ ಕಲಿಸಬೇಕು ಎಂಬ ಬಗ್ಗೆ [illegible] ಬಂದಾಗ ಇಂಗ್ಲಿಷನ್ನು [illegible] ಭಾಷೆಯನ್ನಾಗಿ [illegible] ಇಡೀ ಶಿಕ್ಷಣದ [illegible]ವಾಗಿ ಮಾಡಬೇಕು [illegible] ಹೇಳಿಕೆ ನೀಡಿದರು. [illegible] [illegible] [illegible] [illegible] 'ಕನ್ನಡದ್ರೋಹಿ' ಎಂದವರು [illegible] ಕೇಳಿಕೊಂಡಿಲ್ಲ. ಕರ್ನಾಟಕದ [illegible] ಶಿಕ್ಷಣದ ಬೇಕು[illegible]ಗಳನ್ನು ನಿರ್ಧರಿಸುವುದು [illegible] [illegible], [illegible] ಸರ್ಕಾರವಲ್ಲ, [illegible] ಕಂಪನಿಗಳ ಒಡೆಯರು ಎಂಬಂತಾಗಿದೆ.





ಪ್ರಚಲಿತ ಹೊಸ ಅಭಿವೃದ್ಧಿ ಕಲ್ಪನೆಯು ಈ ವೈರುಧ್ಯಗಳನ್ನು ಕರ್ನಾಟಕದ ಬಳ್ಳಾರಿ ಹಾಗೂ ಕರಾವಳಿ ಜಿಲ್ಲೆಗಳು ತಮ್ಮದೇ ಆದ ರೀತಿಯಲ್ಲಿ ಅಭಿನಯಿಸುತ್ತಿವೆ. ಬಳ್ಳಾರಿ ಜಿಲ್ಲೆಯ ಗಣಿಗಳಿಂದ ಪ್ರತಿದಿನ ಕೋಟಿಗಟ್ಟಲೆ ಮೌಲ್ಯದ ಕಬ್ಬಿಣದ ಅದಿರು ರಫ್ತಾಗುತ್ತದೆ. ಸಾವಿರಾರು ಕೋಟಿ ಬಂಡವಾಳ ಹಾಕಿ ಕಬ್ಬಿಣದ ಉದ್ಯಮಗಳು ಹೊಸಪೇಟೆ ಸುತ್ತಮುತ್ತ ಸ್ಥಾಪನೆಯಾಗಿವೆ. ಮನೆಹಿತ್ತಲಲ್ಲಿ ಸೈಕಲ್ಲು ನಿಲ್ಲಿಸುವಂತೆ ಹೆಲಿಕಾಪ್ಟರ್ ನಿಲ್ಲಿಸಿಕೊಳ್ಳುವ ಗಣಿ ಉದ್ಯಮಿಗಳು ಇದ್ದಾರೆ. ಆದರೆ ಆರೋಗ್ಯದ ವಿಷಯದಲ್ಲಿ ಬಳ್ಳಾರಿಗೆ 17ನೇ ಸ್ಥಾನ; ಶೈಕ್ಷಣಿಕವಾಗಿ 15ನೇ ಸ್ಥಾನ. ಕೊಟ್ಟೂರು-ಹರಿಹರ ರೈಲು ಮಾರ್ಗ ಪೂರ್ಣವಾಗಬೇಕು ಎಂಬ ಸಣ್ಣ ಬೇಡಿಕೆ ದಶಕಗಳಿಂದ ಈಡೇರಿಲ್ಲ.

ಇನ್ನು ಅವಿಭಜಿತ ದಕ್ಷಿಣ ಕನ್ನಡ ವ್ಯವಹಾರದ ಶಿಸ್ತು ದಕ್ಷತೆ ದೃಷ್ಟಿಯಿಂದ ಭಾರಿ ಸಾಧನೆ ಮಾಡಿದೆ. ಅದು ಬುದ್ಧಿವಂತರ ಸೀಮೆ ಕೂಡ. ಈಗಲೂ ಎಸ್ಸೆಸ್ಸೆಲ್ಸಿ ಪಿಯುಸಿ ಫಲಿತಾಂಶ ಬಂದಾಗ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿರುತ್ತದೆ. ಆದರೆ ಅಲ್ಲಿನ ಸಮಾಜ ಚರಾಚರವನ್ನೂ ಹಿಂದೂ ಮುಸ್ಲಿಂ ಎಂದು ಒಡೆದು ನೋಡುವಷ್ಟು ಛಿದ್ರವಾಗಿದೆ. ಯಕ್ಷಗಾನದಂತಹ ಕಲೆಯಲ್ಲೂ ತಮಗಾಗದ ಸಮುದಾಯವನ್ನು ಹೀಯಾಳಿಸುವಂತೆ ಸಂಭಾಷಣೆ ಜೋಡಿಸುವಲ್ಲಿ; ಹುಡುಗ ಹುಡುಗಿಯರು ಮಾತಾಡಿದರೆ, ಅವರ ಧರ್ಮ ಪತ್ತೆಮಾಡಿ ಹೊಡೆಯುವುದರಲ್ಲಿ; ದನದ ವ್ಯಾಪಾರ ಮಾಡುವವರನ್ನು ಬೆತ್ತಲೆ ಮಾಡಿ ಹೊಡೆಯುವಲ್ಲಿ ಪರಿಣತಿ ಸಾಧಿಸಿದೆ. ಕಾವೇರಿ ಮತ್ತು ಬೆಳಗಾವಿಯ ವಿಷಯ ಬಂದಾಗ ನಮಗೆ ಸಂಬಂಧವಿಲ್ಲ ಎಂಬ ತಣ್ಣನೆಯ ನಿರ್ಲಿಪ್ತತೆ ಸಾಧಿಸಿದೆ. ಇದಕ್ಕೆ ಹೋಲಿಸಿದರೆ, ಹೈದರಾಬಾದು ಕರ್ನಾಟಕದಲ್ಲಿ ಮತೀಯ ಸಾಮರಸ್ಯವಿದೆ. ಅಲ್ಲಿ ಕೂಡು ಸಂಸ್ಕೃತಿಯ ಅದ್ಭುತ ನಿದರ್ಶನಗಳಿವೆ. ಆದರೆ ಜನ ನೆಮ್ಮದಿಯಿಂದ ಬದುಕುವುದು ಕಷ್ಟವಾಗಿ ಗುಳೇಹೋಗುತ್ತಿದ್ದಾರೆ; ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆಯ ಸರಣಿಗೆ ಈಚೆಗೆ ಸರಡಗಿಯಲ್ಲಿ (ಗುಲಬರ್ಗ) ನಿರುದ್ಯೋಗಿಗಳು ವಿಷಕುಡಿಯಲು ಯತ್ನಿಸಿದ್ದೂ ಸೇರುತ್ತದೆ. ಮಾನವೀಯ ಸೌಹಾರ್ದದ ಜತೆಗೇ ಇರುವ ದಾರಿದ್ರ್ಯ; ಮಾನವ ಸಂಬಂಧಗಳ ಭಗ್ನತೆಯ ಜತೆಗಿರುವ ಆರ್ಥಿಕ ಪ್ರಗತಿ– ಈ ಎರಡರಲ್ಲಿ ಯಾವ ಮಾದರಿ ಆರಿಸಿಕೊಳ್ಳುವುದು?

ಇಂಗ್ಲಿಷ್ ಕಲಿಕೆ, ರೈತರ ಆತ್ಮಹತ್ಯೆ, ಜನರ ಗುಳೆ, ಜಾಗತಿಕರಣ, ಐಟಿಬಿಟಿ, ಬಾಬಾಬುಡನ್‌ಗಿರಿ, ಎಕ್ಸ್‌ಪ್ರೆಸ್ ಕಾರಿಡಾರ್, ವಿರಾಟ್ ಹಿಂದೂ ಸಮಾವೇಶ, ನಕ್ಸಲ್ ಚಳವಳಿ– ಮುಂತಾದ ವಿಷಯಗಳಲ್ಲಿ ಚುನಾವಣಾ ರಾಜಕಾರಣದ ಬಹುತೇಕ ಪಕ್ಷಗಳಲ್ಲಿ ವಿಚಿತ್ರ ಸಹಮತವಿದೆ. ಕಾಂಗ್ರೆಸ್ ಸರ್ಕಾರ ಆರಂಭಿಸಿದ ಜಾಗತಿಕರಣದ ಪ್ರಕ್ರಿಯೆಯನ್ನು ಎನ್‌ಡಿಎ ಸರ್ಕಾರ ಮುಂದುವರೆಸಿತು. ದೊಡ್ಡದೇಶಗಳೆದುರು ಮಣಿಯುವಲ್ಲಿ ದೇಶಭಕ್ತ ಬಿಜೆಪಿಯೂ ಹಿಂದೆ ಬೀಳಲಿಲ್ಲ. ಹಿಂದೂ ಸಮಾವೇಶಗಳ ಬಗ್ಗೆ ರಾಜಕೀಯ ಎದುರಾಳಿಯಾದ ಕಾಂಗ್ರೆಸ್ ಪ್ರತಿರೋಧ ಮಾಡುವುದಿರಲಿ, ಕೆಲವು ಕಡೆ ಕಾಂಗ್ರೆಸ್ ಶಾಸಕರೇ ಈ ಸಮಾವೇಶದ ಸ್ವಾಗತ ಸಮಿತಿಗಳಲ್ಲಿ ದುಡಿದರು; ಸಂಘ ಪರಿವಾರ ತನ್ನ ಫಲಾನುಭವದ ಜಾಗ [illegible]ಕೊಂಡಿರುವ ಬಾಬಾಬುಡನ್‌ಗಿರಿಯ ಹಾಲಿ ಸ್ಥಿತಿಗೆ ಕಾಂಗ್ರೆಸ್ ಸರ್ಕಾರದ ಕಾಣಿಕೆಯಿದೆ. ರೈತರು, ನಿರುದ್ಯೋಗಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ [illegible], ಧರ್ಮದ ಹೆಸರಲ್ಲಿ ಜನರನ್ನು ಒಡೆವ ಹಿಂದೂತ್ವದ ಸಮಾವೇಶಗಳು ಸಣ್ಣ ಊರುಗಳಲ್ಲೂ ನಡೆಯುತ್ತಿವೆ. ಜಾತಿ[illegible] ನೋಡದೆ ಬಡಮಕ್ಕಳಿಗೆ ಅನ್ನಹಾಕಿ ಅಕ್ಷರಕೊಟ್ಟು ಸಾಕಿದ ಬಸವ ಪರಂಪರೆಯ ಸ್ವಾಮಿಗಳೂ ಮುಜುಗರವಿಲ್ಲದೆ ಈ ಸಮಾವೇಶಗಳಲ್ಲಿ ಭಾಗವಹಿಸಿದರು. ಈಚೆಗೆ ಹಗರಿಬೊಮ್ಮನಹಳ್ಳಿಯಲ್ಲಿ ಮುಸ್ಲಿಮರಲ್ಲಿ ಇರುವ ತಬಲೀಕ್ ಹಾಗೂ ಸುನ್ನಿ ಎಂಬ ಎರಡು ಬಣಗಳು ಸಮಾಜದ [illegible]ತರ ಪ್ರವಾದಿಯವರ ಸ್ತುತಿ ಹಾಡಬೇಕೊ ಬೇಡವೊ ಎಂಬ ಬಗ್ಗೆ ಗಲಾಟೆ ಮಾಡಿಕೊಂಡು ಪೊಲೀಸ್ ಠಾಣೆಗೆ ಹೋಗಿದ್ದವು! ಮೀಸಲಾತಿಯನ್ನು ಹಂಚಿ ಉಣ್ಣಬೇಕಾದ ಪರಿಶಿಷ್ಟ ವರ್ಗಗಳು ದಲಿತರ ಮೇಲೆ ಸವರ್ಣೀಯರಿಗಿಂತ ಹೆಚ್ಚಾಗಿ ಹಗೆತನ

ತಾಚಾರದ ದೀಪ

ಹುಟ್ಟುತ್ತಲೇ ತೊಟ್ಟು ಕಳಚಿ, ಹರಿವ ನೀರಿನ
ಮುಳ್ಳುಕಂಟಿಗೆ ಮೈಹರಿದ ಕಾಡಸಂಪಿಗೆಯ ಎಸಳು ನಾ
ಮಗ್ದಲದ ಮರಿಯಾ
ನನ್ನ ಮೈ ಒತ್ತಿದ ಉಸುಕಿನೊತ್ತುಗಳ
ಕಣ್ಣಿಂದ ನೇವರಿಸಿ, ಎತ್ತಿ ಗಿಡದ ನೆತ್ತಿಯಲ್ಲಿಟ್ಟ
ಏಸು ಪ್ರಭುವೇ,
ನನ್ನ ಕಣ್ಣ ಪಣತಿಯ ಬೆಳಕು ನೀನು



ಜಗತ್ತಿಗೆ ಎಷ್ಟೆಲ್ಲ ಪಾಪ ಸೂತಕಗಳ ನವೆ
ಮರಿಯಳ ಯಾತನೆಗಲ್ಲಿ ಜಾಗವಿಲ್ಲ
ಆತ್ಮದ ಪೆಟ್ಟು ಮಾಯದೆ
ಅವಮಾನಗಳು ಬಿರಿವ ಹೊತ್ತಲ್ಲಿ
ಹೇಳು ಪ್ರಭುವೇ,
ನಿನ್ನ ಯಾವ ಚಿಂತನೆಗೆ ನಾ ತಲೆಬಾಗಲಿ
ಯಾವ ಬೋಧನೆಗೆ ಕಿವಿಯಾಗಲಿ?

ನನಗೆ ನಿಂದನೆಯ ರುಚಿ ಗೊತ್ತು
ಮೈಲಿಗೆಯ ಸಂಕಟವೂ
ತಾಚಾರದ ದೀಪದಂತಹ ಎದೆಗೂಡ
ನೀಳ ನೇವರಿಕೆಯಲಿ ತಬ್ಬಿದ ಪ್ರಭುವೇ
ಜೀವಕ್ಕೆ ಸೂತಕವ ಕಳಚುವುದ ಕಲಿಸಿದವ ನೀನು

ನಿನಗೆ ಮುಳ್ಳಿನ ಅಮುಕು, ಮೊಳೆಯ ಬಡಿತ
ಪ್ರತಿ ಬಡಿತಕ್ಕೂ, ಪ್ರತಿ ನವೆತಕ್ಕೂ
ಜೆರೊಸಲೆಮಿನ ಮಣ್ಣ ಗಂಧದಲಿ ನನ್ನ ಕಣ್ಣೀರು
ಬೆರೆತು ಹೋಯಿತು.
ಬಡಿವ ಮೊಳೆಗೆ ನೋವಾದೀತೆಂದು
ಮೊಗ್ಗಾಗಿ ಮಿಡಿದವನೇ
ನೀನಿಲ್ಲದ ನನ್ನ ಉಸಿರು ಬೇತಾಳಗಳ ನೆರಳು

ಪ್ರಭುವೇ,
ನೀನು ಮತ್ತೆ ಹುಟ್ಟಬಂದಿಯಂತೆ, ಬರುವಿಯಂತೆ.
[illegible]ಷಣವಾದ ನನ್ನ ನೆನಪಾಯಿತೇ?
ಮತ್ತೆ ಹುಟ್ಟಲು ನಾನು ನೀನಲ್ಲವಲ್ಲ [illegible]!

–ಡಾ. ವಿನಯಾ, ಧಾರವಾಡ

[illegible]ಸುತ್ತದೆ. ಇಂಗ್ಲಿಷ್ ಬೇಕು ಎಂದು [illegible] [illegible]ಣಮೂರ್ತಿಯವರೂ ಏಕ[illegible] [illegible]ವಂತೆ ಕೇಳಿಸುತ್ತಿದೆ. ತಮ್ಮ ಭೂಮಿಯನ್ನು [illegible] ಕೊತ್ತಕ್ಕೆ ಮಾರಲು ಕೆಲವು ರೈತರೂ [illegible] [illegible]. ಇದೊಂದು ವೈರುಧ್ಯಗಳ [illegible] ಸರಣಿ.

ಈ ವೈರುಧ್ಯಗಳು ಈಗಷ್ಟೆ ಬಂದಿವೆ. ಹಿಂದಿನಿಂದಲೂ [illegible] ಬರುವುದಿಲ್ಲ ಎಂತಲ್ಲ. ಜೀವಂತವಾದ ಎಲ್ಲ ಸಮಾಜದಲ್ಲಿ ಬಿಕ್ಕಟ್ಟುಗಳು ಯಾವಾಗಲೂ ಇರುತ್ತವೆ. ಭಾರತದಂತಹ ಬಹುಭಾಷಿಕ, ಬಹುಧರ್ಮೀಯ ಬಹುಸಂಸ್ಕೃತಿಕ ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಅಸಮಾನತೆಗಳು; ಲಿಂಗಭೇದಗಳೂ ಇರುವ ಸಮಾಜದಲ್ಲಿ ಇವು ಮತ್ತಷ್ಟು ಸಂಕೀರ್ಣ ಆಗಿರುತ್ತವೆ. ತನ್ನ ಬಿಕ್ಕಟ್ಟುಗಳನ್ನು ಒಂದು ಸಮಾಜ ಹೇಗೆ ಗ್ರಹಿಸುತ್ತದೆ ಮತ್ತು ಬಿಡಿಸಿಕೊಳ್ಳುತ್ತದೆ ಎಂಬುದು ಅದರ ಪ್ರಬುದ್ಧತೆಯನ್ನು ಸೂಚಿಸುತ್ತದೆ. ಆದರೆ ಇಂತಹ ಹೊತ್ತಲ್ಲಿ ಕರ್ನಾಟಕದ ಚಿಂತಕರು ಹಾಗೂ ಜನಪರ ಸಂಘಟನೆಗಳಲ್ಲಿ ಮಾತ್ರ ಸಂವಾದದ ಗುಣ ಕಡಿಮೆಯಾಗುತ್ತಿದೆ.

ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ [illegible] ಹಾಗೂ ಕನ್ನಡವು ಶಾಸ್ತ್ರೀಯ ಭಾಷೆಯಾಗುವ [illegible]ಯದಲ್ಲಿ ಕೆಲವು ಲೇಖಕರ ನಡುವೆ ನಡೆದಿದ್ದು [illegible]ದವಲ್ಲ, [illegible]ಜಗಳ. ಕರ್ನಾಟಕದ ಸಾಂಸ್ಕೃತಿಕ ಪರಿಸರದಲ್ಲಿ ದಿಟ್ಟವೂ ಸೂಕ್ಷ್ಮವೂ ಮುಕ್ತವೂ ಆದ [illegible]ದದ ಪರಿಸರ ಕ್ಷೀಣವಾಗುತ್ತಿದೆ. ಆದರೆ [illegible] [illegible] ಸೂತಕದ ಮನೆಯಲ್ಲೇ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಹಾಗೂ ಕನ್ನಡಿಗರ [illegible] [illegible] ಸಮ್ಮೇಳನ ಹಾಗೂ ಉತ್ಸವಗಳು [illegible] [illegible]. ಈ ವೈರುಧ್ಯಗಳ ಮೇಲೆ [illegible] [illegible]ವಾಗಿ ಇವು ನಡೆಯುತ್ತಿರಬಹುದು. ಹೀಗಾಗಿ [illegible] ಇವುಗಳ ಹಿಂದೆ ಲಾಭಕೋರ ಆರ್ಥಿಕ ವ್ಯವಸ್ಥೆ [illegible]. ಇವು ಅದನ್ನು ಪರೋಕ್ಷವಾಗಿ ಬೆಂಬಲಿಸುತ್ತಿರುವ [illegible] [illegible] ವರ್ಗದ ಮೂಕ ಸಮ್ಮತಿಯೂ ಇದೆ. ಈ [illegible] ಪತ್ರಿಕೆಗಳಲ್ಲಿ ರೈತರ ಆತ್ಮಹತ್ಯೆಗಳನ್ನು [illegible] [illegible] ಅವಸ್ಥೆಯನ್ನು ನೋಡುವ [illegible] [illegible] ಹುಟ್ಟಿಸಿರುವುದು

ಹಿಮಾಲಯದಲ್ಲಿರುವ ನನ್ನ ಬೇಸಿಗೆ ಮನೆಯಿಂದ ಹದಿನೆಂಟು ಮೈಲಿಗಳ ದೂರದಲ್ಲಿ ಅಗಾಧವಾದ ಪರ್ವತ ಶ್ರೇಣಿಯೊಂದು ಹಾಸಿದಂತೆ ಮಲಗಿದೆ. ಸುಮಾರು ಒಂಭತ್ತು ಸಾವಿರ ಅಡಿಗಳಷ್ಟು ಎತ್ತರವಿರುವ ಇದರ ತುದಿಯ ಪೂರ್ವ ಇಳಿಜಾರಿನಲ್ಲಿ ಸಮೃದ್ಧವಾಗಿ ಬೆಳೆದು ನಿಂತಿರುವ ಓಟ್ ಹುಲ್ಲಿನ ವಿಸ್ತಾರವಾದ ಬಯಲಿದೆ. ಈ ಬಯಲು ಕೊನೆಗೊಳ್ಳುವಲ್ಲಿ ಆಳವಾದ ಕಣಿವೆಯೊಂದು ಆರಂಭವಾಗುತ್ತದೆ. ಕಣಿವೆಯ ಇಳಿಜಾರಿನುದ್ದಕ್ಕೂ ಬೃಹದಾಕಾರದ ಕೋಡುಗಲ್ಲುಗಳ ಸರಣಿಯೇ ಹಬ್ಬಿದೆ. ಇವೆಲ್ಲದರ ಕೆಳಗಿನ ಆಳದಲ್ಲಿ ಕೋಸಿ ನದಿ ಹರಿಯುತ್ತದೆ.

ಈ ಕಣಿವೆಯ ಉತ್ತರದ ಏಣಿನಲ್ಲಿ ಒಂದು ಹಳ್ಳಿಯಿದೆ. ಒಂದು ದಿನ ಈ ಹಳ್ಳಿಯಿಂದ ಒಂದಷ್ಟು ಮಂದಿ ಹೆಂಗಸರು ಮತ್ತು ಹುಡುಗಿಯರು ಓಟ್ ಹುಲ್ಲನ್ನು ಕೊಯ್ದುತರಲು ಹೋಗಿದ್ದಾರೆ. ಇವರು ಹುಲ್ಲನ್ನು ಕೊಯ್ಯುತ್ತಿದ್ದಾಗ ಹಠಾತ್ತಾಗಿ ಹುಲಿಯೊಂದು ಇವರ ಗುಂಪಿನ ನಡುವೆ ನುಗ್ಗಿ ಬಂದಿದೆ. ಕಣ್ಣಾಬಿಕ್ಕಿಯಾದ ಹೆಂಗಸರು ಸಿಕ್ಕಿದತ್ತ ನುಗ್ಗಿ ಹೇರಿ ಕಿತ್ತಿದ್ದಾರೆ. ಈ ನೂಕು ನುಗ್ಗಾಟದಲ್ಲಿ ಒಬ್ಬ ಮಧ್ಯ ವಯಸ್ಸಿನ ಹೆಂಗಸು ಆಯತಪ್ಪಿ ಬಿದ್ದು ಬಿಟ್ಟಿದ್ದಾಳೆ. ಬಿದ್ದ ರಭಸಕ್ಕೆ ಏಳಲಾಗದೇ ಇಳಿಜಾರಿನಲ್ಲಿ ಉರುಳುತ್ತಾ ತಳದ ಕಮರಿಯೊಂದರಲ್ಲಿ ಕಣ್ಮರೆಯಾಗಿದ್ದಾಳೆ. ಇವರ ಗೌಜು ಗದ್ದಲಕ್ಕೆ ನಿಜಕ್ಕೂ ಗಾಬರಿಗೊಂಡ ಹುಲಿ ಅಲ್ಲಿಂದ ಮಾಯವಾದಂತೆ ಕಣ್ಮರೆಯಾಗಿದೆ. ಹುಲಿ ದೂರವಾದ ಮೇಲೆ ಸ್ವಲ್ಪ ಧೈರ್ಯಗೊಂಡ ಹೆಂಗಸರೆಲ್ಲಾ ಒಟ್ಟಾಗಿ ಕಣ್ಮರೆಯಾದ ಹೆಂಗಸನ್ನು ಹುಡುಕಲು ತಗ್ಗಿನತ್ತ ಇಳಿದು, ಒಂದು ಕಡಿದಾದ ಪ್ರಪಾತದಂಚಿಗೆ ಬಂದು ನಿಂತಿದ್ದಾರೆ. ಅವರಿಂದ ಎಷ್ಟೋ ಕೆಳಗಿರುವ ಇನ್ನೊಂದು ಕಂದರದ ಕಿರಿದಾದ ತಗ್ಗಿನಲ್ಲಿ ಆ ಹೆಂಗಸು ಮಗ್ಗುಲಾಗಿ ಬಿದ್ದಿದ್ದಾಳೆ.

ಕಾಲಿನೊಂದಿಗೆ ಅನೇಕ ಪಕ್ಕೆಲುಬುಗಳನ್ನೂ ಮುರಿದುಕೊಂಡಿದ್ದ ಆ ಹೆಂಗಸು 'ನನ್ನಿಂದ ಏಳಲೂ ಆಗುತ್ತಿಲ್ಲ' ಎಂದು ಕೂಗಿ ಹೇಳಿದ್ದಾಳೆ. ಈಗೇನು ಮಾಡಬಹುದೆಂದು ಈ ಹೆಂಗಸರ ಗುಂಪಿನ ನಡುವೆ ಮಂತ್ರಾಲೋಚನೆ ನಡೆದಿದೆ. ಕೊನೆಗೆ 'ಇದು ಗಂಡಸರ ಕೆಲಸ' ಎಂದು ತೀರ್ಮಾನಿಸಿ ಅಲ್ಲಿಂದ ಹೊರಡಲು ಸಿದ್ಧವಾಗಿದೆ. ಅಲ್ಲಿ ಉಳಿಯಲು ಯಾರೊಬ್ಬರೂ ತಯಾರಿಲ್ಲ, ಹಾಗಾಗಿ 'ನಾವೆಲ್ಲಾ ಹಳ್ಳಿಗೆ ಹಿಂತಿರುಗಿ ನಿನಗೆ ಸಹಾಯ ಮಾಡಲು ಗಂಡಸರನ್ನು ಕಳಿಸುತ್ತೇವೆ' ಎಂದು ತಂಡದವರು ಹೇಳಿದ್ದಾರೆ. ಈ ತೀರ್ಮಾನದಿಂದ ಭೀತಳಾದ ಆ ಹೆಂಗಸು 'ನನ್ನೊಬ್ಬಳನ್ನೇ ಬಿಟ್ಟು ಹೋಗಬೇಡಿ' ಎಂದು ಅಂಗಲಾಚಿ ಬೇಡಿಕೊಂಡಿದ್ದಾಳೆ. ಇದಕ್ಕೆ ಯಾರೂ ಒಪ್ಪಿಲ್ಲ, ಕೊನೆಗೆ ಸುಮಾರು ಹದಿನಾರರ ಪ್ರಾಯದ ಹುಡುಗಿಯೊಬ್ಬಳು 'ನಾನು ಇಲ್ಲೇ ಇರುತ್ತೇನೆ, ನೀವು ಹೋಗಿ ಗಂಡಸರನ್ನು ಕಳಿಸಿ' ಎಂದು ಸ್ವಯಂಸ್ಫೂರ್ತಿಯಿಂದ ಮುಂದೆ ಬಂದಿದ್ದಾಳೆ. ಇದಕ್ಕೆ ಒಪ್ಪಿದ ಉಳಿದವರು ಅವರಿಬ್ಬರನ್ನೂ ಅಲ್ಲೇ ಬಿಟ್ಟು ಹಳ್ಳಿಯತ್ತ ಹೊರಟುಹೋಗಿದ್ದಾರೆ. ಆ ಹುಡುಗಿ ಪೂರ್ತಿ ಹೆಜ್ಜೆಯೂರಲೂ ಅವಕಾಶವಿಲ್ಲದಂಥ ಪ್ರಪಾತದ ಇಕ್ಕಟ್ಟಿನ ಏಣಿನ ಮೇಲೆ ಸಾಗುತ್ತಾ ಹೇಗೋ ದಾರಿ ಮಾಡಿಕೊಂಡು ಆ ಹೆಂಗಸಿನ ಸಮೀಪಗತಳಾಗಿದ್ದಾಳೆ.

ಆದರೆ ಈ ಹುಡುಗಿ ಇಳಿಯುತ್ತಿದ್ದ ಅಂಚು ಹೆಂಗಸು ಬಿದ್ದಿರುವ ಜಾಗಕ್ಕಿಂತ ಎಷ್ಟೋ ಮೊದಲೇ ಕೊನೆಗೊಂಡಿದೆ. ಆದರೂ ಆ ಹುಡುಗಿ ಪ್ರಯಾಸದಿಂದ ಆ ಹೆಂಗಸಿನಿಂದ ಕೆಲವೇ ಗಜಗಳ ದೂರದವರೆಗೂ ಬಂದಿದ್ದಾಳೆ. ಆಕಸ್ಮಿಕ ಕಾಲು ಜಾರಿದರೆ ಮೂಳೆಯ ಪುಡಿಯೂ ಸಿಗದಂತಹ ಆ ಜಾಗದಿಂದ ಹೇಗಾದರೂ ಮಾಡಿ ಸ್ವಲ್ಪ ಕೆಳಕ್ಕೆ ಬಂದು ತಾನು ಬಿದ್ದಿರುವ ತಗ್ಗಿನೊಳಕ್ಕೆ ಇಳಿಯುವಂತೆ ಆ ಹೆಂಗಸು ಸೂಚಿಸಿದ್ದಾಳೆ. ಇದೂ ಪ್ರಾಣಾಂತಿಕವಾಗಿದ್ದರೂ ಸಹ ಆ ಹುಡುಗಿ ಹೇಗೋ ಸರಿದು ಅವಳತ್ತ ಇಳಿದಿದ್ದಾಳೆ. ಆದರೆ ಅಲ್ಲಿರುವ ಗುಂಡಿ ಒಬ್ಬರಿಗೆ ಮಾತ್ರ ಹೇಳಿಮಾಡಿಸಿದಂತಿದ್ದು, ಇವಳು ಗುಂಡಿಯಲ್ಲಿ ಜಾಗ ಪಡೆಯಲು ಸಾಧ್ಯವಾಗಿಲ್ಲ, ಹಾಗಾಗಿ ಸಾವಿನ ಏಣಿನಂತಿದ್ದ ಆ ಗುಂಡಿಯ ದಡದಲ್ಲಿ ಈ ಹುಡುಗಿ ಚಕ್ಕಲಮಕ್ಕಲ ಹಾಕಿ ಕುಳಿತಿದ್ದಾಳೆ. ನಿಜಕ್ಕೂ ಇಂಥಾ ಸ್ಥಿತಿಯಲ್ಲಿ ಹೀಗೆ ಚಕ್ಕಲಮಕ್ಕಲ ಹಾಕಿ ಕೂರುವುದು ಭಾರತೀಯರಿಗೆ ಮಾತ್ರ ಸಾಧ್ಯ ಅನಿಸುತ್ತದೆ.

ಇಲ್ಲಿಂದ ಅವರ ಹಳ್ಳಿ ನಾಲ್ಕು ಮೈಲಿಗಳ ದೂರವಿದೆ. ಈ ಹೆಂಗಸರ ತಂಡ ಇತ್ತಲಿಂದ ನಡೆದುಹೋಗಿ, ಅಲ್ಲಿ ಗಂಡಸರಿಗೆ ಸಮಾಚಾರ ತಿಳಿಸಿ, ಅವರು ಅಲ್ಲಿಂದ ಬರಬೇಕು. ಆದರೆ ಹಗಲು ಹೊತ್ತಾದ್ದರಿಂದ ಎಲ್ಲೆಲ್ಲೋ ಹೋಗಿರುವ ಗಂಡಸರೆಲ್ಲಾ ಒಟ್ಟಾಗಿ ಗೂಡಿ, ಅಲ್ಲಿ-ಇಲ್ಲಿ ಇರುವ ಉಳಿದವರನ್ನೂ ಕೂಡಿಸಿಕೊಂಡು, ಎಂತಹಾದರೂ ಒಂದಷ್ಟು ಹಗ್ಗಗಳನ್ನು ಹೊಂದಿಸಿಕೊಂಡು ಮತ್ತೆ ನಾಲ್ಕು ಮೈಲಿ ನಡೆದು ಬರುವುದು ತುರ್ತಿಗೆ ಆಗುವ ಕೆಲಸವೇನಲ್ಲ, ಅಂತಿಮವಾಗಿ ಅದು ಎಷ್ಟು ಹೊತ್ತು ಹಿಡಿಯುತ್ತದೆ ಎಂದು ಹೇಳಲೂ ಬರುವುದಿಲ್ಲ.


ಇತ್ತ ಈ ಇಬ್ಬರ ನಡುವೆ ಈವರೆಗೂ ಹುಲಿಯಿಂದಾದ ಅವಾಂತರ, ಹುಟ್ಟಿದ ಭೀತಿ, ಈಗಿನ ಆತಂಕಗಳ ಬಗ್ಗೆ ಹಾಗೂ ಇಲ್ಲೇ ಎಲ್ಲೋ ಇವನ್ನೆಲ್ಲಾ ನೋಡುತ್ತಾ ಹುಲಿಯು ಹೊಂಚುಹಾಕಿ ಕುಳಿತಿರುವ ಸಾಧ್ಯತೆಯ ಬಗ್ಗೆ ಭಯದ ಮಾತುಕತೆಗಳು ನಡೆದಿವೆ. ಹೆಂಗಸಿಗೆ ಎದುರಾಗಿ ಕುಳಿತಿದ್ದ ಆ ಹುಡುಗಿ ಭಯವನ್ನು ಮರೆಮಾಚಲೆಂದೋ ಏನೋ ಆ ಹೆಂಗಸಿನ ಮುಖದಲ್ಲೇ ಕಣ್ಣು ನೆಟ್ಟು



ಹಾಗೇ ಮಾತನಾಡುತ್ತಿದ್ದಾಗ ಆ ಹೆಂಗಸು ತಟ್ಟನೆ ಉಸಿರು ಸಿಕ್ಕಿಕೊಂಡವಳಂತೆ ಆ ಹುಡುಗಿಯ ಮೇಲಿಂದ ದೃಷ್ಟಿ ಬದಲಿಸಿ ಅವಳ ಹಿಂಬದಿಗೆ ನೋಡಲು ಆರಂಭಿಸಿದ್ದಾಳೆ. ಆ ಹುಡುಗಿಗೆ ನಿಧಾನವಾಗಿ ಏನೋ ಅನುಮಾನ ಆರಂಭವಾಗಿದೆ. ಕುತೂಹಲಕ್ಕೆ ಅವಳೂ ಕುಂತಲ್ಲೇ ಕಣ್ಣು ಹೊರಳಿಸಿ ನೋಡಿದ್ದಾಳೆ. ಅವಳ ಭುಜ ಮಟ್ಟಕ್ಕೆ ಸರಿಯಾಗಿ ಯಮಗಾತ್ರದ ಹುಲಿ ಸಾವಿನಷ್ಟು ಕಡಿದಾದ ಇಳಿಜಾರನ್ನು ಇಳಿಯುತ್ತಾ ಇವಳತ್ತ ಸಾಗಿಬರುತ್ತಿದೆ...., ಒಂದೊಂದೇ ಹೆಜ್ಜೆ....,.


ಕಾದುಕುಂತವಳ ಕಣ್ಮರೆ!

ಟಿ.ಎಸ್. ವಿವೇಕಾನಂದ



ನೋಡುತ್ತಿದ್ದಾಳೆ. ಹಾಗೇ ಮಾತನಾಡುತ್ತಿದ್ದಾಗ ಆ ಹೆಂಗಸು ತಟ್ಟನೆ ಉಸಿರು ಸಿಕ್ಕಿಕೊಂಡವಳಂತೆ ಆ ಹುಡುಗಿಯ ಮೇಲಿಂದ ದೃಷ್ಟಿ ಬದಲಿಸಿ ಅವಳ ಹಿಂಬದಿಗೆ ನೋಡಲು ಆರಂಭಿಸಿದ್ದಾಳೆ. ಆ ಹುಡುಗಿಗೆ ನಿಧಾನವಾಗಿ ಏನೋ ಅನುಮಾನ ಆರಂಭವಾಗಿದೆ. ಕುತೂಹಲಕ್ಕೆ ಅವಳೂ ಕುಂತಲ್ಲೇ ಕಣ್ಣು ಹೊರಳಿಸಿ ನೋಡಿದ್ದಾಳೆ. ಅವಳ ಭುಜ ಮಟ್ಟಕ್ಕೆ ಸರಿಯಾಗಿ ಯಮಗಾತ್ರದ ಹುಲಿ ಸಾವಿನಷ್ಟು ಕಡಿದಾದ ಇಳಿಜಾರನ್ನು ಇಳಿಯುತ್ತಾ ಇವಳತ್ತ ಸಾಗಿಬರುತ್ತಿದೆ...., ಒಂದೊಂದೇ ಹೆಜ್ಜೆ....

ನಿಮ್ಮಲ್ಲಿ ಕೆಲವರಾದರೂ ಇದನ್ನು ಊಹಿಸಬಲ್ಲಿರಿ. ಸುಮ್ಮನೆ ಊಹಿಸಿಕೊಳ್ಳಿ...., ನಿಮಗೊಂದು ಕನಸು ಬಿದ್ದಿದೆ...., ಯಮಧೂತನಂತೆ ಹುಲಿ ಒಂದೊಂದೇ ಹೆಜ್ಜೆ ನಿಮ್ಮತ್ತ ಸಾಗುತ್ತಿದೆ, ನೀವು ಎತ್ತ ಹೋಗಲೂ ಸಾಧ್ಯವಿಲ್ಲ, ಹೋಗುವುದಿರಲಿ ಅಲ್ಲಿಂದ ಏಳಲಿಕ್ಕೂ ಸಾಧ್ಯವಿಲ್ಲ, ಅದೂ ಹೋಗಲಿ.... ಅಷ್ಟು ಹೊತ್ತಿಗೆ ನಿಮ್ಮ ಮೊಣಕಾಲು; ಗಂಟಲ ನರಗಳೆಲ್ಲಾ ಲಕ್ವ ಹೊಡೆದಂತೆ ಬಿದ್ದೇ ಹೋಗಿರುತ್ತವೆ. ದೇಹದ ರೋಮರಂಧ್ರಗಳಿಂದ ಬೆವರು ಕಿತ್ತು ಹರಿಯುತ್ತಿರುತ್ತದೆ...., ಇದೋ ಇನ್ನೊಂದು ಕ್ಷಣ; ಆ ಸಾವಿನ ಪಿಶಾಚಿ ನಿಮ್ಮಮೇಲೆರಗುತ್ತದೆ..., ಅದೃಷ್ಟಕ್ಕೆ ನೀವು ಕಿರುಚಿಕೊಂಡು ಎಚ್ಚರಾಗುತ್ತೀರಿ. ಕೂದಲೆಳೆಯ ಅಂತರದಲ್ಲಿ ಸಾವಿನಿಂದ ತಪ್ಪಿಸಿಕೊಂಡಿರುತ್ತೀರಿ. ಆದರೆ ಈ ಹುಡುಗಿಗೆ ಆ ಕನಸಿನಿಂದ ಹೊರಬರುವ ಪ್ರಶ್ನೆಯೇ ಇಲ್ಲ, ಆಕೆ ಅಷ್ಟು ಅದೃಷ್ಟವಂತಳಲ್ಲ.



ಶಿಕಾರಿ ಜಿಮ್ ಕಾರ್ಬೆಟ್‌ನ ಕಥನಗಳು

ಮೋಹನದ ನರಭಕ್ಷಕ

ಗುಂಡಿಯ ಒಳಗೆ ಶವಸದೃಶವಾಗಿ ಬಿದ್ದಿರುವ ಒಬ್ಬ ಹೆಂಗಸಿನ ಮುಂದೆ ಕುಳಿತಿರುವ ಈ ಹುಡುಗಿ ದುರಗಟ್ಟಿ ಹೋಗಿದ್ದಾಳೆ. ಹುಲಿ ನಿಧಾನವಾಗಿ ಅವಳನ್ನು ಸಮೀಪಿಸುತ್ತಿದೆ. ಅಲ್ಲಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳಂತೂ ಇಲ್ಲವೇ ಇಲ್ಲ, ಸಹಾಯಕ್ಕೆ ಬರಬಹುದಾದ ಇನ್ನೊಂದು ಜೀವವಿಲ್ಲ.

ಮೋತಿಸಿಂಗ್ ನನ್ನ ಹಳೆಯ ಗೆಳೆಯ. ಕಾಯಿಲೆ ಬಿದ್ದಿದ್ದ ತನ್ನ ಮಗಳನ್ನು ನೋಡಿಕೊಂಡು ಹೋಗಲು ಈ ಹಳ್ಳಿಗೆ ಬಂದಿದ್ದ. ಆದರೆ ಈಗ ಆತನೇ ಅಲ್ಲಿಂದ ಹೊರಟ ಗಂಡಸರ ರಕ್ಷಣಾ ತಂಡದ ನೇತೃತ್ವ ವಹಿಸಬೇಕಾಯಿತು. ರಕ್ಷಣಾದಳ ಅಲ್ಲಿಗೆ ಬಂದಾಗ ಆ ಹೆಂಗಸು ಮೊದಲಿನಂತೆಯೇ ಬಿದ್ದಿದ್ದಳು. ಆ ಗುಂಡಿಯ ದಂಡೆಯುದ್ದಕ್ಕೂ ರಕ್ತದ ಹುಂಡುಗಳು ಎರಚಿದಂತೆ ಚೆಲ್ಲಿದ್ದವು.

ಗಾಯಗೊಂಡ ಹೆಂಗಸನ್ನು ಊರಿಗೆ ಹೊತ್ತು ತರಲಾಯಿತು. ಬಂದ ಕೂಡಲೇ ಸ್ವಲ್ಪ ಚೇತರಿಸಿಕೊಂಡ ಅವಳು ಈವರೆಗಿನ ಕತೆಯನ್ನೆಲ್ಲಾ ಹೇಳಿದಳು. ಕೂಡಲೇ ಮೋತಿಸಿಂಗ್ ಹದಿನೆಂಟು ಮೈಲಿ ನಡೆದು ನನ್ನನ್ನು ಹುಡುಕುತ್ತಾ ಬಂದ. ಅವನು ಅರವತ್ತರ ಆಜೂಬಾಜಿನಲ್ಲಿದ್ದ ಇಳಿವಯಸ್ಕ. ಹಾಗಾಗಿ 'ನೀನು ದಣಿದಿದ್ದೀಯ ಇಲ್ಲೇ ಸ್ವಲ್ಪ ವಿಶ್ರಾಂತಿ ತೆಗೆದುಕೋ, ನಾನು ಅಲ್ಲಿಗೆ ಹೋಗಿಬರುತ್ತೇನೆ' ಎಂದರೂ ಕೇಳದೇ ನನ್ನ ಜೊತೆ ತನಿಖೆಗೆ ಹೊರಟೇಬಿಟ್ಟ. ಆದರೆ ನಾವು ಅಲ್ಲಿಗೆ ಬಂದಾಗ ಮಾಡಲು ಏನೂ ಇರಲಿಲ್ಲ, ಅಲ್ಲಿಗಾಗಲೇ ಇಪ್ಪತ್ತನಾಲ್ಕು ಗಂಟೆಗಳು ಕಳೆದುಹೋಗಿದ್ದವು. ಈ ನಡುವೆ ನಮಗೆ ಬೇಕಾದ ಎಲ್ಲವೂ ಮಾಯವಾಗಿದ್ದವು. ಗಾಯಗೊಂಡು ಬಿದ್ದಿದ್ದ ತನ್ನ ಸಹಪಾಠಿಯ ನೆರವಿಗೆ ಕೆಚ್ಚೆದೆಯಿಂದ ಮುಂದೆ ಬಂದಿದ್ದ ಆ ಸಾಹಸಿ ಹೆಣ್ಣುಮಗಳು ಕೆಲವು ಮೂಳೆ ಚೂರುಗಳು... ಹರಿದು ಚಿಂದಿಯಾದ ರಕ್ತಸಿಕ್ತ ಬಟ್ಟೆಗಳ ರೂಪಕ್ಕಿಳಿದಿದ್ದಳು.

ಇದು ಈ ಹುಲಿಯ ಮೊಟ್ಟಮೊದಲ ನರಬಲಿಯಾಗಿತ್ತು, ಕ್ರಮೇಣ ಇದು ಸರ್ಕಾರಿ ದಾಖಲೆಗಳಲ್ಲಿ 'ಮೋಹನದ ನರಭಕ್ಷಕ'ನಾಗಿ ತನ್ನ ಖಾತೆ ತೆರೆಯಿತು. ಈ ಹತ್ಯೆಯ ನಂತರದ ಚಳಿಗಾಲದಲ್ಲಿ ಹುಲಿ ಕೋಸಿ ನದಿಯ ಕಣಿವೆಯನ್ನಿಳಿದು ಹೊರಟಿತು. ಹೋಗುವ ದಾರಿಯಲ್ಲಿ ಅನೇಕರನ್ನು ತಿಂದು ಮುಗಿಸಿತು. ಇದರಲ್ಲಿ ಇಬ್ಬರು ಲೋಕೋಪಯೋಗಿ ಇಲಾಖೆಯ ನೌಕರರು ಹಾಗೂ ವಿಧಾನ ಪರಿಷತ್ ಸದಸ್ಯರೊಬ್ಬರ ಮಗಳೂ ಸೇರಿದ್ದರು. ಮತ್ತೆ ಬೇಸಿಗೆಯ ಹೊತ್ತಿಗೆ ಇದು ಮೊದಲು ನರಬಲಿ ತೆಗೆದುಕೊಂಡ ಜಾಗಕ್ಕೆ ಹಿಂತಿರುಗಿತು. ಆನಂತರದ ಅನೇಕ ವರ್ಷಗಳು ಕೋಸಿ ನದಿಕಣಿವೆಯ ಉದ್ದಗಲಕ್ಕೂ, ಹಾಗೂ ಕಕ್ರಘಾಟ್‌ನಿಂದ ಗಾರ್ಜಿಯಾಗಳವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿತು. ಇದರ ಒಟ್ಟು ವಿಸ್ತೀರ್ಣ ನಲವತ್ತು ಚದರ ಮೈಲಿಗಳಿಗಿಂತ ಹೆಚ್ಚು, ಆದರೂ ಇದು ಮೋಹನದ ಮೇಲಿದ್ದ ಬೆಟ್ಟಗಳ ನಡುವಿನ ಕಾರ್ತ್‌ಕಾನೌಲಾ ಹಳ್ಳಿಯನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡಿತ್ತು.

ಈ ಹಿಂದೆ ಹೇಳಿದ ಘಟನೆಯ ಹಿನ್ನೆಲೆಯಲ್ಲಿ ಜಿಲ್ಲಾ ಸಮಾವೇಶವನ್ನು ಕರೆಯಲಾಗಿತ್ತು, ಇದೇ ಹೊತ್ತಿನಲ್ಲಿ ಕುಮ್ಮಾನ್ ಪ್ರಾಂತ್ಯದ ಮೂರೂ ಜಿಲ್ಲೆಗಳು ಮೂರು ನರಭಕ್ಷಕಗಳ ಹಾವಳಿಯಿಂದ ತತ್ತರಿಸುತ್ತಿದ್ದವು. ಅವುಗಳ ಹಾವಳಿಯ ಆಧಾರದಲ್ಲಿ ಹೇಳುವುದಾದರೆ ಮೊದಲನೆಯದು; ನೈನಿತಾಲ್ ಜಿಲ್ಲೆಯ ಛಾವ್‌ಘರ್‌ನ ನರಭಕ್ಷಕ, ಎರಡನೆಯದು; ಆಲ್ಮೋರಾ ಜಿಲ್ಲೆಯ ಮೋಹನದ ನರಭಕ್ಷಕ, ಮೂರನೆಯದು; ಘಡವಾಲ್ ಜಿಲ್ಲೆಯ ಕಾಂಡಾ ನರಭಕ್ಷಕ. ('ಛಾವ್‌ಘರ್‌ನ ನರಭಕ್ಷಕ' ಬಗ್ಗೆ ಇದೇ ಅಂಕಣದಲ್ಲಿ ಮುಂದೆ ಓದಲಿದ್ದೀರಿ, ಕಾಂಡಾ ನರಭಕ್ಷಕ ಈಗಾಗಲೇ ಪ್ರಕಟವಾಗಿರುವ 'ಚಂಪಾವತದ ನರಭಕ್ಷಕ ಮತ್ತು ಇತರ ಕತೆಗಳು' ಕೃತಿಯಲ್ಲಿದೆ). ಈ ನಡುವೆಯೇ ನಾನು ಆದ್ಯತೆಯ ಮೇಲೆ ಛಾವ್‌ಘರ್‌ನ ನರಭಕ್ಷಕಗಳನ್ನು ಮುಗಿಸಲು ಹೋಗಿದ್ದೆ. ಹಾಗಾಗಿ ಜಿಲ್ಲಾ ಸಮಾವೇಶದಲ್ಲಿ ನಾನು ನೀಡಿದ್ದ ವಾಗ್ದಾನದಂತೆ ಈಗ ಮೋಹನದ ನರಭಕ್ಷಕನನ್ನು ಮುಗಿಸಲು ಹೋಗಬೇಕಿತ್ತು, ನಾನು ಛಾವ್‌ಘರ್‌ನಿಂದ ಹಿಂತಿರುಗಿದ ಕೂಡಲೇ ಆಲ್ಮೋರಾ ಜಿಲ್ಲೆಯ ಜಿಲ್ಲಾಧಿಕಾರಿ ಬಿಲ್ ಬೈನೇಸ್ ಇದನ್ನು ನನಗೆ ನೆನಪಿಸಿ, ಕೂಡಲೇ ಅದನ್ನು ಮಟ್ಟಹಾಕುವಂತೆ ಒತ್ತಾಯ ಮಾಡಿದರು. ನನ್ನ ಪಟ್ಟಿಯಲ್ಲಿಯೂ ಮುಂದಿನ ಬಲಿ ಈ ನರಭಕ್ಷಕನೇ ಆಗಿತ್ತು, ಅಲ್ಲದೆ ಈ ಸಮಯದಲ್ಲಿ ಅದು ಹೆಚ್ಚು ಕ್ರಿಯಾಶೀಲವಾಗಿತ್ತು, ಇಡೀ ಜಿಲ್ಲೆಯನ್ನು ಶಾಪದಂತೆ ಅಮರಿಕೊಂಡಿತ್ತು. ಪ್ರತಿದಿನ ಒಂದಿಲ್ಲೊಂದು ಹಳ್ಳಿಯಲ್ಲಿ ನರಬೇಟೆಗೆ ಪ್ರಯತ್ನಿಸುತ್ತಿದ್ದುದಲ್ಲದೆ, ಕಾರ್ತ್‌ಕಾನೌಲಾದ ಸುತ್ತಮುತ್ತಲ ಪ್ರದೇಶದಲ್ಲಿ ಒಂದೇ ವಾರದಲ್ಲಿ ಮೂರು ಜನರನ್ನು ಕೊಂದು ತಿಂದು ಮೃತ್ಯುದೇವತೆಯಾಗಿಬಿಟ್ಟಿತ್ತು, ಹಾಗಾಗಿ ಬೈನೇಸ್ ನನಗೆ ಮೊದಲು ಆ ಹಳ್ಳಿಗೇ ಹೋಗುವಂತೆ ಸೂಚಿಸಿದ್ದರು. ನಾನು ಛರ್‌ವಾಲ್ ನರಭಕ್ಷಕದ ಶಿಕಾರಿಯಲ್ಲಿದ್ದ ಹೊತ್ತಿನಲ್ಲಿ ಈ ಮೋಹನದ ನರಭಕ್ಷಕನ ಕಾಟ ತಾಳಿಕೊಳ್ಳಲಾಗದೆ ಬೈನೇಸ್ ಬೇರೆ ಕೆಲವು ಶಿಕಾರಿ ತಂಡಗಳನ್ನು ಅದರ ಬೇಟೆಗಾಗಿ ನಿಯೋಜಿಸಿದ್ದರು. ಅನೇಕ ಬಾರಿ ಅದು ಕೊಂದು ತಿಂದಿದ್ದ ಮನುಷ್ಯ ಕಳೇಬರಗಳ ಬಳಿ ಕಾವಲು ಕುಳಿತಿದ್ದರೂ ಆ ಯಾವ ಶಿಕಾರಿದಾರರೂ ಅದನ್ನು ಕೊಲ್ಲಲು ಸಾಧ್ಯವಾಗಿರಲಿಲ್ಲ, ಕೊಲ್ಲುವುದಿರಲಿ ಅದರ ಸಂಪರ್ಕ ಸಾಧಿಸುವುದೂ ಸಾಧ್ಯವಾಗಿರಲಿಲ್ಲ, ಈ ಸಮಯದಲ್ಲಿ ನರಭಕ್ಷಕ ರಾಣಿಖೇತ್ ಹಳ್ಳಿಯ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರೆಸಿತ್ತು.

ಈ ಶಿಕಾರಿದಾರರೆಲ್ಲಾ ಈಗ ಅದೇ ಪ್ರದೇಶದಲ್ಲಿ ಕಾರ್ಯನಿರತರಾಗಿದ್ದರು. ಬೈನೇಸ್ ನನಗೆ ವಿಶೇಷ ಮುನ್ನೆಚ್ಚರಿಕೆ ನೀಡಲು ಮರೆಯಲಿಲ್ಲ, ಒಂದೇ ಪ್ರಾಣಿಯ ಶಿಕಾರಿಯಲ್ಲಿ ಹಲವು ಜನರು ತೊಡಗಿದ್ದಾಗ ಸಂಭವಿಸಬಹುದಾದ ಆತ್ಮಹತ್ಯಾತ್ಮಕ ಆಕಸ್ಮಿಕಗಳು ಇಷ್ಟೇ ಎಂದು ಹೇಳಲು ಬರುವುದಿಲ್ಲ.

II

ಕರಡಿ ಎಡವಿದ ಖದೀಮ

ಅದೊಂದು ಆಕಾಶಕ್ಕೆ ಬೆಂಕಿಬಿದ್ದಂತೆ ಉರಿಯುತ್ತಿದ್ದ ಮೇ ತಿಂಗಳ ಬೇಸಿಗೆಯ ದಿನ. ನಾನು ನನ್ನ ಇಬ್ಬರು ಸೇವಕರೊಂದಿಗೆ ಆರು ಜನ ಘರ್ವಾಲಿಗಳನ್ನು ಕರೆದುಕೊಂಡು ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ನೈನಿತಾಲನ್ನು ಬಿಟ್ಟು ರಾಮ್‌ನಗರ ತಲುಪಿದೆ. ಅಲ್ಲಿಂದ ಕಾರ್ತ್‌ಕಾನೌಲಾ ತಲುಪಲು ನಾವು ಇಪ್ಪತ್ತನಾಲ್ಕು ಮೈಲಿಗಳನ್ನು ಕಾಲ್ನಡಿಗೆಯಲ್ಲಿ ಸಾಗಬೇಕಿತ್ತು. ನಮ್ಮ ಮೊದಲ ಹಂತದ ನಡಿಗೆ ಕೇವಲ ಏಳು ಮೈಲಿಗಳು. ಇದನ್ನು ಮುಗಿಸಿ ನಾವು ಸಂಜೆಯ ಹೊತ್ತಿಗೆ ಗಾರ್ಜಿಯಾ ತಲುಪಿದೆವು. ನಾನು ಇಲ್ಲಿಯ ಅರಣ್ಯ ಇಲಾಖೆಯ ಪ್ರವಾಸಿ ಬಂಗಲೆಯಲ್ಲಿ ಉಳಿಯಲು ಅಗತ್ಯವಾದ ಅನುಮತಿ ಪತ್ರ ಪಡೆಯಲು ನಿನ್ನೆ ಬೇಗನೆ ಮನೆ ಬಿಟ್ಟಿದ್ದೆ. ಆದರೆ ಕಾರಣಾಂತರಗಳಿಂದ ಅದು ನನ್ನ ಕೈಗೆ ಸಿಕ್ಕಿರಲಿಲ್ಲ, ಹಾಗಾಗಿ ನಾವು ಆ ಪ್ರವಾಸಿ ಬಂಗಲೆಯ ಹೊರಗಿದ್ದ ಬಯಲಿನಲ್ಲಿಯೇ ಉಳಿಯಬೇಕಾಯಿತು.

ಗಾರ್ಜಿಯಾದ ಬಳಿ ಕೋಸಿ ನದಿಯ ದೂರದ ದಂಡೆಯವರೆಗೆ ಕಡಿದಾದ ಕಲ್ಲಿನ ಏಣುಗಳಿಂದ ಕೂಡಿದ ಅಸಂಖ್ಯಾತ ಪ್ರಪಾತಗಳಿವೆ. ನಾನು ಬಯಲಿನಲ್ಲಿ ಹೂಡಿದ್ದ ಕ್ಯಾಂಪಿನಲ್ಲಿ ನಿದ್ದೆಗೆ ಸಿದ್ಧನಾಗುತ್ತಿದ್ದೆ. ಆಗ ನನಗೆ ಗಾಬರಿ ಹುಟ್ಟಿಸುವಂತಹ ವಿಚಿತ್ರವಾದ ಶಬ್ದಗಳು ಕೇಳಲಾರಂಭಿಸಿದವು. ಪ್ರಪಾತದ ನೆತ್ತಿಯಿಂದ ಕೆಳಕ್ಕೆ ಕಲ್ಲುಗಳನ್ನು ಎತ್ತಿ ಎಸೆದಂಥ ಸದ್ದು ಅದು. ಬರೀ ಎತ್ತಿ ಹಾಕಿದ್ದಲ್ಲ, ನಿರ್ದಿಷ್ಟವಾಗಿ ಹೇಳುವುದಾದರೆ ಎರಡು ಕಲ್ಲುಗಳನ್ನು ಪರಸ್ಪರ ರಭಸವಾಗಿ ಘಟ್ಟಿಸಿದಂಥ ಶಬ್ದ ಅದು. ಒಂದು ಕ್ಷಣ ನಾನು ವಿಚಲಿತನಾದೆ. ಇಂಥ ಸದ್ದನ್ನು ನಾನು ಹಿಂದೆಂದೂ ಕೇಳಿರಲಿಲ್ಲ. ನನಗೆ ಆ ಶಬ್ದಮೂಲವನ್ನು ತನಿಖೆ ಮಾಡಬೇಕು ಅನಿಸುತ್ತಿತ್ತು. ಅದೊಂದು ಉರಿ ಸೆಖೆಯ ರಾತ್ರಿ. ಚಂದ್ರ ನೆತ್ತಿಯಮೇಲೆ ಬಂದಿದ್ದ. ಹಾವುಗಳನ್ನು ತುಳಿಯದಂತೆ ನಡೆದು ಹೋಗಲು ನನಗೆ ಅಷ್ಟು ಬೆಳಕು ಸಾಕಾಗಿತ್ತು. ಹಾಸಿಗೆ ಬಿಟ್ಟೆದ್ದು ಹೊರಟೆ. ಸ್ವಲ್ಪ ಸಮಯದ ಹುಡುಕಾಟದ ನಂತರ ನಾನು ಆ ಶಬ್ದಮೂಲವನ್ನು ಪತ್ತೆ ಮಾಡಿದೆ. ರಸ್ತೆಯಿಂದ ಸ್ವಲ್ಪ ದೂರದಲ್ಲಿದ್ದ ಒಂದು ಜವುಗಿನ ಗುಂಡಿಯಿಂದ ಈ ಸದ್ದು ಬರುತಿತ್ತು. ಅಲ್ಲಿಂದ ಅಸಂಖ್ಯ ಕಪ್ಪೆಗಳ ಗುಂಪೊಂದು ಈ ಶಬ್ದ ಹುಟ್ಟಿಸುತ್ತಿತ್ತು. ನಾನು ಜಗತ್ತಿನ ವಿವಿಧ ಭಾಗಗಳಲ್ಲಿ ಚಿತ್ರವಿಚಿತ್ರ ಸದ್ದು ಮಾಡುವ ನೆಲಗಪ್ಪೆ, ಮರಗಪ್ಪೆ, ಜಲಗಪ್ಪೆಗಳು ಮಾಡುವ ಸದ್ದನ್ನು ಕೇಳಿದ್ದೇನೆ. ಆದರೆ ಈ ಥರದಲ್ಲಿ ವಿಚಿತ್ರ ಸದ್ದನ್ನು ನಾನೆಂದೂ ಕೇಳಿರಲಿಲ್ಲ. ಮೇ ತಿಂಗಳ ನಡುರಾತ್ರಿಯಲ್ಲಿ ಗಾರ್ಜಿಯಾದ ಕಪ್ಪೆಗಳು ಮಾಡುತ್ತಿದ್ದ ಆ ಸದ್ದು ನಿಜಕ್ಕೂ ನನಗೆ ಅಪರಿಚಿತವಾದದ್ದು.

ಮರುದಿನ ಮುಂಜಾನೆಯೇ ಎದ್ದು ಬಿಸಿಲೇರುವ ಮೊದಲೇ ನಾವು ಮೋಹಾನ ತಲುಪಿದೆವು. ನಮ್ಮವರು ಊಟತಿಂಡಿ ಸಿದ್ಧಗೊಳಿಸುತ್ತಿದ್ದರು. ನಾನು ಅಲ್ಲಿನ ಪ್ರವಾಸಿ ಬಂಗಲೆಯ ಮೇಟಿ ಹಾಗೂ ಸ್ಥಳೀಯ ಗಾರ್ಡುಗಳೊಂದಿಗೆ ಹರಟೆ ಹೊಡೆಯುತ್ತಾ ಕುಳಿತಿದ್ದೆ. ನಮ್ಮೊಂದಿಗೆ ಮೋಹಾನದ ಬಜಾರಿನಿಂದ ಇನ್ನೊಂದಷ್ಟು ಜನ ಸ್ಥಳೀಯರು ಕೂಡಿಕೊಂಡರು. ವಿಷಯ ನರಭಕ್ಷಕನ ಸಾಹಸಗಳತ್ತ ಹೊರಳಿತು. ಇಲ್ಲಿದ್ದ ಇಬ್ಬರು ಫಾರೆಸ್ಟ್ ಗಾರ್ಡ್‌ಗಳಲ್ಲಿ ಒಬ್ಬ ಇತ್ತೀಚೆಗೆ ತಾನೆ ಅವನು ಮತ್ತು ಒಬ್ಬ ಮೀನುಗಾರ ನರಭಕ್ಷಕನಿಗೆ ಮುಖಾಮುಖಿಯಾದ ಕತೆ ಹೇಳಲು ಆರಂಭಿಸಿದ ನಾನು ಹೇಗೆ ಮನೆಯಿಂದ ಹೊರಟೆ ಆ ಮೀನುಗಾರ ಹೇಗೆ ಸಿಕ್ಕಿದ ನಾನು ಹೇಗೆ ಹುಲಿಯಿಂದ ತಪ್ಪಿಸಿಕೊಂಡೆ ಎಂದು ಸಚಿತ್ರವಾಗಿ ವಿವರಿಸುತ್ತಾ ... ಸಾಹಸಿಯಂತೆ ಬೀಗುತ್ತಿದ್ದ. ಸಂಗತಿ ಏನೆಂದರೆ ಕೋಸಿ ನದಿಯ ತಿರುವಿನಲ್ಲಿ ಇವರಿಬ್ಬರು ಹೋಗುತ್ತಿದ್ದಾಗ ಹಠಾತ್ತಾಗಿ ನರಭಕ್ಷಕ ಇವರಿಬ್ಬರಿಗೆ ಎದುರಾಗಿದೆ. ತಕ್ಷಣ ಮುಂದಿದ್ದ ಮೀನುಗಾರ ತನ್ನ ಹೆಗಲ ಮೇಲಿದ್ದ ಮೀನು ಹಿಡಿಯುವ ರಾಡನ್ನು ಬಿಸಾಕಿ ಇವನ ಹೆಗಲ ಮೇಲಿದ್ದ ಬಂದೂಕವನ್ನು ಕಸಿದುಕೊಂಡಿದ್ದಾನೆ. ಆದರೆ ಬಂದೂಕವನ್ನು ಹುಲಿ ಕಡೆಗೆ ಹಿಡಿದು ಹಾರಿಸದೆ ತಾನೇ ಮುಂದಾಗಿ ಓಡಲು ಆರಂಭಿಸಿದ್ದಾನೆ. ಭೀತನಾದ ಇವನು ತಕ್ಷಣ ಹಿಂತಿರುಗಿ ಅವನ ಹಿಂದೆಯೇ ಓಡಲು ಆರಂಭಿಸಿದ್ದಾನೆ, ಹುಲಿ ಹಿಂದಿನಿಂದ ಬೆನ್ನತ್ತಿ ಬಂದಿದೆ.

ಗಾರ್ಡು ಹೇಳಿದ "ಹುಲಿ ನಮ್ಮ ಹಿಮ್ಮಡಿ ತುಳಿಯುವಂತೆ ಬರುತ್ತಿದ್ದರೂ ನಾವು ತಪ್ಪಿಸಿಕೊಂಡು ಓಡುತ್ತಿದ್ದೆವು" ಎಂದು. ಅದಕ್ಕೆ ನಾನು ಕೇಳಿದೆ "ಹಾಗೆ ಓಡುವಾಗ ಒಮ್ಮೆಯಾದರೂ ಹಿಂತಿರುಗಿ ನೋಡಲಿಲ್ಲವೇ" ಎಂದು. ಅವನು ನನ್ನ ಅಜ್ಞಾನಕ್ಕೆ ಮರುಕಪಡುತ್ತಾ... "ಅಲ್ಲಾ ಸಾಹೇಬ್ರೇ ಆ ಪಿಶಾಚಿಯಿಂದ ಜೀವ ಉಳಿಸಿಕೊಳ್ಳಲು ಓಡುತ್ತಿರುವ ಯಾರಾದರೂ ಹಿಂತಿರುಗಿ ನೋಡುತ್ತಾರಾ?" ಎಂದು ವಿಷಾದದಿಂದ ಕೇಳಿ, ಕತೆಯನ್ನು ಮುಂದುವರಿಸುತ್ತಾ... 'ಅಷ್ಟರಲ್ಲಿ ನನ್ನ ಮುಂದೆ ಓಡುತ್ತಿದ್ದ ಮೀನುಗಾರ ಹುಲ್ಲಿನ ಪೊದೆಯೊಂದಕ್ಕೆ ನುಗ್ಗಿದವನೇ ಮುಗ್ಗರಿಸಿ ಬಿದ್ದುಬಿಟ್ಟ. ಅವನ ಹಿಂದೆಯೇ ಓಡುತ್ತಿದ್ದ ನಾನೂ ಬಿದ್ದುಬಿಟ್ಟೆ. ಅಷ್ಟರಲ್ಲಾಗಲೇ ಕರಡಿಯೊಂದು ಎಗರಿ ಬಿದ್ದು ಕೂಗಾಟ ಆರಂಭಿಸಿತ್ತು, ಅವನು ಓಡುವ ರಭಸದಲ್ಲಿ ಹುಲ್ಲಿನ ಪೊದೆಯೊಳಗೆ ಮಲಗಿದ್ದ ಕರಡಿಯನ್ನು ತುಳಿದುಬಿಟ್ಟಿದ್ದ. ಅತ್ತ ಹುಲಿ ಇತ್ತ ಕರಡಿಗೆ ಹೆದರಿದ ನಾವು, ನಮಗೆ ಹೆದರಿದ್ದ ಕರಡಿ ಎಲ್ಲರೂ ಒಟ್ಟಾಗಿ ಕೂಗಾಟ ಆರಂಭಿಸಿದ್ದೆವು.

ಯಾರಿಗೆ ಏನು ಮಾಡಬೇಕೆಂದು ತೋಚದೆ ಸಿಕ್ಕಿದತ್ತ ಓಡಿಹೋದೆವು. ನೋಡಿ ಆ ಮೀನುಗಾರ ಹೇಗೆ ಮಾಡಿದ? ನನ್ನ ಬಂದೂಕವನ್ನೂ ಕಿತ್ತುಕೊಂಡು ನನ್ನನ್ನೂ ಒಂಟಿಯಾಗಿ ಬಿಟ್ಟು ಅವನೆತ್ತಲೋ ಓಡಿಹೋಗುವುದ? ಬರಿಗೈಲಿದ್ದ ನಾನು ಆ ಪಿಶಾಚಿ ಹಾಗೂ ಕೋಪಗೊಂಡ ಕರಡಿಯೊಂದಿಗೆ ಹೇಗೆ ಹೋರಾಡಲಿ ಹೇಳಿ?" ಎಂದು ಕೇಳಿದ.

ನಾನು "ಆಮೇಲೇನಾಯಿತು" ಎಂದೆ. ■

(ಜಿಮ್ ಕಾರ್ಬೆಟ್‌ನ ಕಥೆಗಳನ್ನು ನಮ್ಮ ಎಂದಿನ ಸಂಚಿಕೆಯಲ್ಲಿ ಮುಂದುವರಿಸುತ್ತೇವೆ)

ದೇವರೆ... ಬಾ ಅರ್ಪಿಸಿಕೊಳ್ಳೋಣ


ದೇವರೇ
ಈ ಲೋಕದ ಎಲ್ಲ ಹಸಿದವರಿಗೆ
ನೀನೊಂದು ಕಾಳಿನತೆನೆಯಾಗುವುದಾದರೆ
ನನ್ನ ಪಾಲಿನ ನಿನ್ನನ್ನು
ರೊಟ್ಟಿ ಮಾಡಿಕೊಂಡು ತಿಂದು
ನಿನ್ನ ಜನ್ಮಕ್ಕೆ ಸಾರ್ಥಕತೆ ನೀಡುತ್ತೇನೆ

ದೇವರೇ
ಎಲ್ಲ ಬಂಧಿತರ ಕೋಳ ಕತ್ತರಿಸಲು
ನೀನೊಂದು ಖಡ್ಗವಾಗುವುದಾದರೆ
ಅದರಿಂದ ಮೊದಲು ನನ್ನ ಸೆರಮನೆಯ
ಮುಚ್ಚಿದ ಗವಾಕ್ಷಿ ತೆರೆದು
ಕಾಣಿಸಿದ ಬೆಳಕಿನಲ್ಲಿ
ನಿನ್ನನ್ನು ಕಂಡುಕೊಳ್ಳುತ್ತೇನೆ

ದೇವರೇ
ಈ ಲೋಕದ ಚೆಲುವಿಗೆ ಬಿದ್ದ
ಧೂಳು ಜಾಡಿಸಲು
ನೀನೊಂದು ಕಸಬರಿಗೆಯಾಗುವುದಾದರೆ
ಜಾಡಿಸಿ, ಆ ಆನಂದದಲ್ಲಿ
ನನ್ನಾತ್ಮದ ಜಾಗದಲ್ಲಿ, ನೀನೆಂಬ
'ಅದನ್ನು' ಪ್ರತಿಷ್ಠಾಪಿಸುತ್ತೇನೆ

ದೇವರೇ
ನೀನು ತೆನೆಯಾಗಿ, ಖಡ್ಗವಾಗಿ
ಕಸಬರಿಗೆಯಾಗಿ
ಅನ್ನ, ಸ್ವಾತಂತ್ರ್ಯ, ಸೌಂದರ್ಯ
ನೀಡುವಿಯಾದರೆ
ನಾವಿಬ್ಬರೂ ನಮ್ಮ ಬದುಕುಗಳನ್ನು
ಪರಸ್ಪರ ಅರ್ಪಿಸಿಕೊಳ್ಳೋಣ
ಸಾವನ್ನು.... ಕೂಡ.

■ ಬಿ. ಪೀರ್‌ಭಾಷ



ಮಹಾತ್ಮಾಗಾಂಧಿ ರಸ್ತೆ ಮತ್ತು ಸೈಕಲ್ ಸವಾರ

ಇದೇನು ಐರಾವತವೋ
ತಾವೇನು ಮೈಸೂರು ಮಹಾರಾಜರೋ?
ಅಲ್ಲಯ್ಯ ಪುಟಗೋಸಿ
ಮುರುಕು ಚರಕಾದಂಥ ಸೈಕಲ್ಲು ಹತ್ತಿ
ಮಹಾತ್ಮಾಗಾಂಧಿ ರಸ್ತೆಗೆ ಬಂದುಬಿಡುವುದೇ?
ಇದು ಅಮರಾವತಿಯ ರಾಜಬೀದಿ ಕಣೋ
ಕೋಲನೂರುತ್ತ ಗಾಂಧಿಯೇ ಬಂದರೂ
ಈಗ ಒಳಗೆ ಬಿಡುವುದಿಲ್ಲ.

ಕನ್ನಡಿಯಂಥ ಈ ರಸ್ತೆಯಲ್ಲಿ
ನಿನ್ನ ಪ್ರತಿಫಲವನ್ನೊಮ್ಮೆ ನೋಡಿಕೋ,
ಮಾಸಿಹೋದ ಭಾರತದ ನಕಾಶೆಯಂಥ ಅರಿವೆ
ಬರಬಿದ್ದ ಬಯಲು ಸೀಮೆಯ ಎರೆಮಣ್ಣ ಬಣ್ಣ
ಬತ್ತಿಹೋದ ಬಾವಿಯಂಥ ಕಣ್ಣು
ಮುಖ, ಒಣಗಿದ ಹುಲ್ಲುಗಾವಲು
ಅರೆಬಕ್ಕ ತಲೆ ಎಂದೋ ನಕ್ಕ ತುಟಿ
ನಾಯಿ ಬಡಿವ ಕೋಲಂಥ ಮೈ
ಆಹಾ! ಭಾರತಾಂಬೆಯ ಖಾಸಾಪುತ್ರ!
ನರಕ ಲೋಕದ ದೊರೆಯೇ
ಈ ಸ್ವರ್ಗದ ಕಡೆಗೇಕೆ ಬಂದೆ?

ನಿನ್ನ ಚೈತನ್ಯರಥವೋ;
ಇತಿಹಾಸದ ಚಕ್ರದಂತೆ ಟೆಟಾದ ಗಾಲಿ
ಜಂಗು ತಿಂದ ಹ್ಯಾಂಡಲ್ಲು ಮುರಿದ ಪೆಡಲ್ಲು
ಹಸಿದ ನಾಯಿಮರಿಯಂತೆ ಕಿರುಚುವ ಚೈನು
ಲಡ್ಡಾದ ಸೀಟು ಬಲ್ಲು ಹೋದ ಡೈನಮೋ
ಮೋಡಕಾ ಬಜಾರಿಗೆ ಹೋಗಬೇಕಾದವ
ಈ ಮಾಯಾಬಜಾರಿಗೇಕೆ ಬಂದೆ?

ನಿನ್ನಂಥ ತಿರುಬೋಕಿಯ ಹೆಜ್ಜೆ ಮೂಡಿದರೆ
ಹೆದ್ದಾರಿಗಳಿಗೆ ಎಂಥ ಅವಮಾನ!
ಬುಷ್‌ನ ಶಿಷ್ಯರ ಕಣ್ಣಿಗೆ ಬಿದ್ದರೆ?
ಒಂದಿಷ್ಟು ದೇಶಪ್ರೇಮವನ್ನು ರೂಢಿಸಿಕೊಳ್ಳೋ ಮಳ್ಳಾ
ರಸ್ತೆ ನಿಯಮಗಳನ್ನು ಪಾಲಿಸು
ನಿನಗಾಗಿಯೇ ಇರುವ ಕಲ್ಲುದಾರಿ ಮುಳ್ಳುದಾರಿ
ಮಣ್ಣುದಾರಿ ಕಾಲುದಾರಿಗಳ ಹಿಡಿದು ಹೋಗು.

ಮಾರುವ ಕೊಳ್ಳುವ ಮಾರಿಕೊಳ್ಳುವ
ಸಿಲಿಕಾನ್ ಮಾರುಕಟ್ಟೆಯ ಪಾರದರ್ಶಕ ತಾಣವಿದು!
ವಿಹಾರ ಧಾಮ! ಅಭಿವೃದ್ಧಿ ಪಥ!
ಇಲ್ಲಿ ಕಾರುಗಳಿಗೆ ಮಾತ್ರ ಪ್ರವೇಶ
ಮನುಷ್ಯರಿಗಲ್ಲ.


ಇದಕ್ಕೂ ನಿನಗೂ ಏನು ಸಂಬಂಧವಯ್ಯ
ಅದರಿಂದ ನಿನಗೆ ನಿನ್ನಿಂದ ಅದಕ್ಕೆ ಲಾಭವೇನಿದೆ ಹೇಳು?
ಲಾಭವಿಲ್ಲದ ಮೇಲೆ ಈ ಹಾದಿಯ ಮೇಲೆ
ಒಂದು ಇರುವೆಯೂ ಹರಿಯುವಂತಿಲ್ಲ
ಲಾಭವೊಂದೇ ಈಗಿನ ದೊಡ್ಡ ಸಂಬಂಧ.

ಹೋಗಯ್ಯ ಹೋಗು,
ಬಾಂಬೆ ಬಜಾರ್ ಹಾಂಗ್‌ಕಾಂಗ್ ಬಜಾರ್ ಬರ್ಮಾ ಬಜಾರ್
ಚಿಕ್ಕಪೇಟೆ ಬಳೆಪೇಟೆಗಳು ದಾರಿ ಕಾಯುತ್ತಿವೆ.

■ ಎಂ.ಡಿ. ಒಕ್ಕುಂದ



ಗೃಹಿಣಿ



ಮಿರ್ಜಾನಿಗೆ ಹೊಸತಾದ ಸಮಸ್ಯೆಯೊಂದು ಎದುರಾಗಿತ್ತು. ಲಜ್ಜೆಯ ಅಮಲೇರಿಸುವ ಸೌಂದರ್ಯ ಈಗ ತನ್ನ ಹೆಂಡತಿಯಲ್ಲಿ ನೆಲೆಯಾಗಿದೆಯಂತೆ ಕಂಡಿತು. ಆಕೆಯ ಬೆಲೆಕಟ್ಟಲಾಗದ ಪ್ರಣಯಲೀಲೆ ತನ್ನ ಹೆಂಡತಿಯಲ್ಲಿ ಅನನ್ಯತೆಯಂತೆ ಭಾಸವಾಯಿತು. ಆತನ ನಾಟು ಕುಚೋದ್ಯಗಳನ್ನು ಕಂಡು ನಾಚದ, ಆತನ ಚಿತ್ತಾರಗಳನ್ನು ನೋಡಿ ಮುನಿಸಿಕೊಳ್ಳದ, ಆತನ ಬೇಡಿಕೆಗಳನ್ನು ನಿರಾಕರಿಸದ ಲಜ್ಜೆ ಅವನ ಕಣ್ಣಲ್ಲಿ ಸೋತಿದ್ದಳು.

ಅನುವಾದ:
ಗೌರಿ ಲಂಕೇಶ್

ಲಜ್ಜೊ ಮನೆ ಕೆಲಸಗಾರ್ತಿ ಮಿರ್ಜಾನ ಮನೆ ಪ್ರವೇಶಿಸಿದ ದಿನವೇ ಅಕ್ಕಪಕ್ಕದವರಲ್ಲಿ ಹೊಸ ಸಂವೇದನೆ ಉಂಟಾಯಿತು. ಸಾಮಾನ್ಯವಾಗಿ ಮೈಗಳ್ಳರಾಗಿದ್ದ ಹುಡುಗರು ನಾತ ಅವಳನ್ನು ನೋಡುವ ಹುರುಪಿನಿಂದ ಸಾರಿಸುವುದಕ್ಕೆ ಹೆಚ್ಚು ಸಮಯ ತೆಗೆದುಕೊಂಡ. ಹಾಲಿಗೆ ನೀರು ಬೆರೆಸುವುದಕ್ಕೆ ಖ್ಯಾತಿ ಪಡೆದಿದ್ದ ಹಾಲಿನವನೂ ಅವತ್ತು ಕೆನೆ ಕಟ್ಟಿದ್ದ ಹಾಲನ್ನೇ ನೀಡಿದ.

ಆಕೆ ಸಂಕೋಚವಿಲ್ಲದವಳೆಂದು ಯಾರು ಅವಳಿಗೆ ಲಜ್ಜೆ ಎಂದು ಹೆಸರಿಟ್ಟಿದ್ದರೋ? ಏಕೆಂದರೆ ಲಜ್ಜೆಗೆ ಸಂಕೋಚ ಎಂಬುದೇ ಗೊತ್ತಿರಲಿಲ್ಲ. ಅವಳನ್ನು ಹೆತ್ತವರ್ಯಾರು, ಬೀದಿಯಲ್ಲಿ ಬಿಸಾಡಿದವರ್ಯಾರು, ಏಕಾಂಗಿಯಾಗಿ ಕಣ್ಣೀರಿನ ಬಾಲ್ಯಕ್ಕೆ ಅವಳನ್ನು ದೂಡಿದವರ್ಯಾರು ಎಂಬುದು ಯಾರಿಗೂ ಗೊತ್ತಿರಲಿಲ್ಲ. ಭಿಕ್ಷೆ ಬೇಡುತ್ತಾ ಹಸಿವನ್ನುಂಡು ತನ್ನ ಬಾಲ್ಯವನ್ನು ಕಳೆದ ಆಕೆ ಹೇಗೋ ಸ್ವಾವಲಂಬಿಯಾಗಿ ತನ್ನ ಜೀವನವನ್ನು ಸಾಗಿಸುವ ವಯಸ್ಸಿಗೆ ಬೆಳೆದಳು. ಯುವತಿಯಾದ ಆಕೆಯ ದೇಹ ಸುಂದರವಾದ ಉಬ್ಬು ತಗ್ಗುಗಳಿಂದ ಕೂಡಿದ್ದು ಅದೇ ಅವಳ ಏಕೈಕ ಸಂಪತ್ತಾಯಿತು. ಬದುಕಿನ ನಿಗೂಢತೆಗಳ ಬಗ್ಗೆ ರಸ್ತೆಗಳೇ ಆಕೆಗೆ ದೀಕ್ಷೆ ನೀಡಿದವು.

ಅವಳೆಂದೂ ಚೌಕಾಸಿ ಮಾಡಿದವಳಲ್ಲ, ವ್ಯವಹಾರ ಕುದುರಿಸಲು ಅವನ ಬಳಿ ಹಣವಿಲ್ಲದಿದ್ದರೆ ಉದ್ರಿ ಆಧಾರದ ಮೇಲೂ ತನ್ನನ್ನು ಒಡ್ಡಿಕೊಳ್ಳುತ್ತಿದ್ದಳಾಕೆ. ಅಕಸ್ಮಾತ್ ಆತನಲ್ಲಿ ಹಣವೇ ಇರಲಿಲ್ಲ ಎಂದಾದಲ್ಲಿ ಪುಕ್ಕಟೆಯಾಗೂ ತನ್ನ ದೇಹವನ್ನು ಲಜ್ಜೆ ನೀಡುತ್ತಿದ್ದಳು.

"ನಿನಗೆ ನಾಚಿಕೆ ಅನ್ನೋದಿಲ್ವ?" ಎಂದು ಜನ ಕೇಳುತ್ತಿದ್ದರು.

"ಇದೆ!" ಎಂದು ಆಕೆ ಭಂಡತನದಿಂದ ಉತ್ತರಿಸುತ್ತಿದ್ದಳು.

"ಮುಂದೊಂದು ದಿನ ನೀನು ಪಶ್ಚಾತ್ತಾಪಪಡುತ್ತಿ" ಎಂದಾಗ,

"ಅದರ ಚಿಂತೆ ನನಗಿಲ್ಲ" ಎಂದೇ ಉತ್ತರಿಸುತ್ತಿದ್ದಳು.

ಅವಳಿಗ್ಯಾಕೆ ಇರಬೇಕಿತ್ತು ಚಿಂತೆ? ಮುಗ್ಧತೆ ತುಂಬಿಕೊಂಡಿದ್ದ ಮುಖ, ಕಪ್ಪು ಕಣ್ಣು, ಅಚ್ಚುಕಟ್ಟಾಗಿ ಜೋಡಿಸಿದಂತಿದ್ದ ಹಲ್ಲು, ಸ್ವಚ್ಛ ಮೈಬಣ್ಣ ಮತ್ತು ಉದ್ರೇಕಗೊಳಿಸುವ ವೈಯಾರದ ನಡಿಗೆ ಆಕೆಯದ್ದಾಗಿದ್ದಾಗ?

ಮಿರ್ಜಾ ಬ್ರಹ್ಮಚಾರಿಯಾಗಿದ್ದ. ನಿತ್ಯದ ಊಟಕ್ಕೆ ಅವನು ತಟ್ಟುತ್ತಿದ್ದ ರೊಟ್ಟಿಯೇ ಅವನ ಜೀವನವನ್ನು ಚಪ್ಪಟೆ ಮಾಡಿತ್ತು. ಅವನ ಮಾಲೀಕತ್ವದ ಪುಟ್ಟ ಕಿರಾಣಿ ಅಂಗಡಿಗೆ ಆಡಂಬರದ 'ಜನರಲ್ ಸ್ಟೋರ್ಸ್' ಎಂಬ ಹೆಸರಿಟ್ಟಿದ್ದ. ಅಂಗಡಿಯಲ್ಲೇ ಆತನಿಗೆ ಎಷ್ಟು ಕೆಲಸವಿತ್ತೆಂದರೆ ರಜೆ ಮೇಲೆ ಊರಿಗೆ ಹೋಗಿ ಮದುವೆ ಆಗುವಷ್ಟು ಪುರಸೊತ್ತೂ ಅವನಿಗಿರಲಿಲ್ಲ.

ಮಿರ್ಜಾನ ಗೆಳೆಯ ಭಕ್ಷಿಗೆ ಬಸ್‌ಸ್ಟಾಂಡಿನಲ್ಲಿ ಲಜ್ಜೆ ಸಿಕ್ಕಿದ್ದಳು. ಭಕ್ಷಿಯ ಹೆಂಡತಿ ಒಂಬತ್ತು ತಿಂಗಳ ಗರ್ಭಿಣಿ ಆಗಿದ್ದರಿಂದ ಮನೆ ಕೆಲಸಕ್ಕೆ ಅವಳನ್ನು ಕರೆದುಕೊಂಡು ಹೋಗಿದ್ದ. ಅವಳ ಅಗತ್ಯ ಮುಗಿದಾಗ ಅವಳನ್ನು ಮಿರ್ಜಾ ಮನೆಗೆ ಕರೆತಂದು ಬಿಟ್ಟಿದ್ದ. ಸೂಳೆಮನೆಗಳಿಗೆ ಹೋಗಿ ಹಣ ವೆಚ್ಚ ಮಾಡುವ ಬದಲಾಗಿ ಅದನ್ನು ಬಿಟ್ಟಿಯಾಗಿ ಮನೆಯಲ್ಲೇ ಮಿರ್ಜಾ ಪಡೆಯಬಹುದೆಂಬುದು ಭಕ್ಷಿಯ ಲೆಕ್ಕಾಚಾರವಾಗಿತ್ತು.

"ಅಯ್ಯೋ ದೇವರೆ, ನನ್ನ ಮನೆಯಲ್ಲಿ ಸೂಳೆಯನ್ನು ಇಟ್ಟುಕೊಳ್ಳುವುದಾ?" ಎಂದು ರೇಗಿದ ಮಿರ್ಜಾ "ಅವಳನ್ನು ವಾಪಸ್ಸು ಕರೆದುಕೊಂಡು ಹೋಗು" ಅಂದ.

ಆದರೆ ಲಜ್ಜೆ ಆಗಲೇ ಮನೆಯನ್ನು ಆಕ್ರಮಿಸಿದ್ದಳು. ಲಂಗವನ್ನು ಮೇಲಕ್ಕೆತ್ತಿ ಕಚ್ಚೆ ತರಹ ಸಿಕ್ಕಿಸಿಕೊಂಡು, ಪೊರಕೆಯನ್ನು ಹಿಡಿದು ಮಿರ್ಜಾನ ಮನೆಯನ್ನು ಗುಡಿಸುವುದರಲ್ಲಿ ಮಗ್ನಳಾಗಿದ್ದಳು. ಅವಳು ಅಲ್ಲಿರುವುದು ಬೇಡ ಎಂದು ಮಿರ್ಜಾ ಹೇಳುತ್ತಿದ್ದಾನೆ ಎಂಬ ಭಕ್ಷಿಯ ಮಾತುಗಳು ಅವಳ ಕಿವಿಗೆ ಬೀಳಲೇ ಇಲ್ಲ. ಬದಲಾಗಿ ಅಡುಗೆಮನೆಯಲ್ಲಿದ್ದ ಪಾತ್ರೆ ಪಗಡೆಗಳನ್ನು ಕಪಾಟಿನಲ್ಲಿ ಜೋಡಿಸಲು ಹೇಳಿ, ನೀರು ತರುವುದಕ್ಕೆ ಹೊರಟಳು. "ನಿನ್ನನ್ನು ಬೇಕಿದ್ದರೆ ನನ್ನ ಮನೆಗೆ ವಾಪಸ್ಸು ಕರೆದುಕೊಂಡು ಹೋಗುತ್ತೇನೆ" ಎಂದ ಭಕ್ಷಿ.

"ಹೋಗ್ಹೋಗು, ನೀನೇನು ನನ್ನನ್ನ ಕಟ್ಟಿಕೊಂಡವನಾ ನನ್ನ ತವರುಮನೆಗೆ ಕರೆದುಕೊಂಡು ಹೋಗುವುದಕ್ಕೆ" ಎಂದು ಲಜ್ಜೆ ರೇಗಿದಳು.

ಭಕ್ಷಿಯ ನಿರ್ಗಮನ ಮಿರ್ಜಾನನ್ನು ಅಸಹಾಯಕನನ್ನಾಗಿಸಿತು. ಆತ ಓಡಿ ಹೋಗಿ ಮಸೀದಿಯಲ್ಲಿ ಆಶ್ರಯ ಪಡೆದ. ಅವಳಿಂದಾಗುವ ಹೆಚ್ಚು ವೆಚ್ಚವನ್ನು ಹೊರುವ ಸ್ಥಿತಿಯಲ್ಲಿ ಆತನಿರಲಿಲ್ಲ. ಅಷ್ಟೇ ಅಲ್ಲದೆ, ಆಕೆ ಖಂಡಿತವಾಗಿಯೂ ಹಣ ಕದಿಯುತ್ತಾಳೆ, ಸುಳ್ಳು ಹೇಳುತ್ತಾಳೆ ಎಂದು ಯೋಚಿಸಿದ ಮಿರ್ಜಾ, ತನ್ನನ್ನು ಈ ಪರಿಸ್ಥಿತಿಗೆ ದೂಡಿದ ಭಕ್ಷಿಯನ್ನು ಶಪಿಸಿದ!

ಆದರೆ ಆತ ಮನೆಗೆ ಹಿಂದಿರುಗಿದಾಗ ಅಚ್ಚರಿಗೊಂಡ. ಅವನ ದಿವಂಗತ ಅಮ್ಮ ವಾಪಸ್ಸು ಬಂದಿರುವಂತೆ ಅವನಿಗೆ ಭಾಸವಾಯಿತು! ಮನೆ ಅಷ್ಟು ಚಂದಾಗಿ ಹೊಳೆಯುತ್ತಿತ್ತು!

"ಊಟ ಬಡಿಸಲಾ?" ಎಂದು ಕೇಳಿದ ಲಜ್ಜೆ ಅಡುಗೆಮನೆಯೊಳಗೆ ಮಾಯವಾದಳು.

ಆಲೂಗಡ್ಡೆ ಮತ್ತು ಸೊಪ್ಪಿನ ಪಲ್ಯ, ಈರುಳ್ಳಿ ಮತ್ತು ಬೆಳ್ಳುಳ್ಳಿ ಹಾಕಿದ್ದ ಬೇಳೆಸಾರು–ಅಮ್ಮ ಮಾಡುತ್ತಿದ್ದಂತೆಯೇ ಇತ್ತು!

"ಇದನ್ನೆಲ್ಲ ಹೆಂಗೇ ಮಾಡ್ದೆ?" ಎಂದು ಕೇಳಿದ ಮಿರ್ಜಾ ತಬ್ಬಿಬ್ಬಾಗಿ,

"ಪಕ್ಕದ ಅಂಗಡಿಯಲ್ಲಿ ಸಾಲ ಮಾಡ್ದೆ."

"ನೋಡು, ನಿನಗೆ ಬಸ್‌ಚಾರ್ಜ್ ಕೊಡ್ತಿನಿ. ಕೆಲಸದವಳನ್ನು ಇಟ್ಟುಕೊಳ್ಳುವಷ್ಟು ದುಡ್ಡು ನನ್ನಲ್ಲಿಲ್ಲ."

"ನಿನ್ನಾರು ದುಡ್ಡು ಕೇಳಿದ್ರು?"

ಕತೆ

"ಆದರೆ...."

"ಊಟ ಬಿಸಿಯಾಗಿದೆಯಾ?" ಎಂದು ಕೇಳುತ್ತಾ ಲಜ್ಜೆ ಬಿಸಿ ಬಿಸಿಯಾದ ಮತ್ತೊಂದು ರೊಟ್ಟಿಯನ್ನು ಅವನ ತಟ್ಟೆಗೆ ಹಾಕಿದಳು.

"ಊಟ ಅಲ್ಲ, ನಾನೇ ಅಡಿಯಿಂದ ಮುಡಿವರೆಗೆ ಕುದಿಯುತ್ತಿದ್ದೇನೆ" ಎಂದು ಅರಚಬೇಕೆನ್ನಿಸಿತು ಮಿರ್ಜಾನಿಗೆ ತನ್ನ ಕೊಠಡಿಯಲ್ಲಿ ಮಲಗುವುದಕ್ಕೆ ಹೋದಾಗ.

ಮಾರನೆ ಬೆಳಗ್ಗೆ ಅವಳು ಹೊರಡುವ ವಿಷಯವನ್ನು ಮಿರ್ಜಾ ಮತ್ತೆ ಪ್ರಸ್ತಾಪಿಸಿದಾಗ "ನಾನು ಇಲ್ಲಿಂದ ಎಲ್ಲೂ ಹೋಗಲ್ಲ" ಎಂದು ಅವಳು ಬೆದರಿಸಿದಳು.

"ಆದರೆ..."

"ಬಿಸಿ ಊಟ ನಿಂಗೆ ಇಷ್ಟಾ ಇಲ್ವೇನು?"

"ಆದ್ರೆ...."

"ನಾನು ಮನೇನ ಚೆನ್ನಾಗಿಟ್ಟಿಲ್ವೇನು?"

"ಅದಲ್ಲ...."

"ಮತ್ತಿನ್ನೇನು?" ಎಂದು ಲಜ್ಜೆ ರೇಗಿದಳು.

ಅವಳು ಆಗಲೇ ಪ್ರೀತಿಸಲಾರಂಭಿಸಿದ್ದಳು. ಮಿರ್ಜಾನನ್ನ, ಆತನ ಮನೆಯನ್ನು, ಆ ಬೋಳಿಮಗ ಭಕ್ಷಿ ಅವಳಿಗೆಂದು ಒಂದು ಸಣ್ಣ ಕೊಠಡಿಯನ್ನು ಬಾಡಿಗೆ ಮೇಲೆ ಪಡೆದಿದ್ದ. ಅವಳಿಗಿಂತ ಮುನ್ನ ಅಲ್ಲೊಂದು ಎಮ್ಮೆ ವಾಸಿಸುತ್ತಿತ್ತು. ಎಮ್ಮೆ ಸತ್ತು ಸ್ವರ್ಗಕ್ಕೆ ಹೋಗಿದ್ದರೂ ಅದರ ವಾಸನೆ ಇನ್ನೂ ಕೊಠಡಿಗೆ ಅಂಟಿಕೊಂಡಿತ್ತು. ಭಕ್ಷಿ ಅವಳನ್ನು ಚೆನ್ನಾಗೇನೂ ನೋಡಿಕೊಂಡಿರಲಿಲ್ಲ. ಈಗ ಆಕೆ ಮಿರ್ಜಾನ ಮನೆಯಲ್ಲಿದ್ದಳು, ಅದರ ಪ್ರಶ್ನಾತೀತ ಒಡತಿಯಾಗಿ. ಮಿರ್ಜಾ ಕೂಡ ಯಾವ ತೊಂದರೆಯನ್ನು ಕೊಡುತ್ತಿರಲಿಲ್ಲ. ಸದ್ದಿಲ್ಲದೆ ಬಂದು, ಅವಳು ಬೇಯಿಸಿದ್ದನ್ನು ಮರುಮಾತಿಲ್ಲದೆ ತಿನ್ನುತ್ತಿದ್ದ.

ಮಿರ್ಜಾ ಕೂಡ, ಹಲವು ಬಾರಿ ತನ್ನ ಹಣವನ್ನು ಲೆಕ್ಕ ಹಾಕಿ ಲಜ್ಜೆ ತನ್ನಿಂದ ಕದಿಯುತ್ತಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ನೆಮ್ಮದಿಯಿಂದಿದ್ದ.

ಹಲವೊಮ್ಮೆ ರಾಮನ ಅಜ್ಜಿಯೊಂದಿಗೆ ಹರಟೆ ಹೊಡೆಯಲು ಲಜ್ಜೆ ಹೋಗುತ್ತಿದ್ದಳು. ಮಿರ್ಜಾನ ಅಂಗಡಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಪೋಲಿ ಯುವಕ ರಾಮ, ಲಜ್ಜೆಯನ್ನು ನೋಡುತ್ತಿದ್ದಂತೆ ಮಾರು ಹೋದ. ಮಿರ್ಜಾ ಆಗೀಗ ಸೂಳೆಗಳ ಮನೆಗೆ ಹೋಗುತ್ತಾನೆಂದು ಲಜ್ಜೆಗೆ ಹೇಳಿದವನೇ ರಾಮ.

ಇದನ್ನು ಕೇಳಿ ಲಜ್ಜೆಗೆ ತುಂಬಾ ನೋವಾಯಿತು. ಆರೆ, ನಾನಿರೋದ್ಯಾಕೆ ಅನ್ನಿಸಿತು ಆಕೆಗೆ. ಏಕೆಂದರೆ ಆಕೆ ಕೆಲಸ ಮಾಡಿದ್ದ ಕಡೆಯಲ್ಲೆಲ್ಲ ಅವಳ ಕೈಯಿಂದ ಸಾಧ್ಯವಾದ ಎಲ್ಲ ರೀತಿಯ ಸೇವೆಗಳನ್ನು ಮಾಡಿದ್ದಳು. ಆದರೆ ಇಲ್ಲಿ ಒಂದಿಡೀ ವಾರ ಉರುಳಿದ್ದರೂ ಏನೂ ನಡೆದಿರಲಿಲ್ಲ. ಇಷ್ಟು ನಿರ್ಲಕ್ಷ್ಯಕ್ಕೆ ಅವಳೆಂದೂ ಒಳಗಾಗಿರಲಿಲ್ಲ. ಈ ಒಂದು ವಾರದಲ್ಲಿ ಅವಳನ್ನು ಹಲವಾರು ಜನ ಕರೆದಿದ್ದರೂ ಮಿರ್ಜಾನ ಕೆಲಸದವಳಾಗಿ ಅವರನ್ನೆಲ್ಲ ತಿರಸ್ಕರಿಸಿದ್ದಳು; ಅಕಸ್ಮಾತ್ ಅವರೆಲ್ಲ ಮಿರ್ಜಾನ ಬಗ್ಗೆ ಹಗುರವಾಗಿ ಮಾತನಾಡಬಹುದೆಂಬ ಕಾರಣದಿಂದ. ಆದರೆ ಈ ಮಿರ್ಜಾ, ಒಂದು ನೀರ್ಗಲ್ಲಿನ ಬಂಡೆಯಂತಿದ್ದ. ಆತನಲ್ಲಿ ಸ್ಫೋಟಗೊಳ್ಳಲು ಸಿದ್ಧವಾಗಿದ್ದ ಜ್ವಾಲಾಮುಖಿಗಳು ಲಜ್ಜೆಗೆ ಕಾಣಿಸಲಿಲ್ಲ. ಆತ ಸ್ಫೋಟಗೊಳ್ಳಬಾರದೆಂದೇ ಬೇಕಂತಲೇ ಸಾಧ್ಯವಾದಷ್ಟು ಮನೆಯಿಂದ ಹೊರಗಿರುತ್ತಿದ್ದ.

ಕ್ರಮೇಣ ಎಲ್ಲರ ಬಾಯಲ್ಲೂ ಲಜ್ಜೆಯ ಹೆಸರು ಆಡಲಾರಂಭಿಸಿತು. ಇವತ್ತು ಹಾಲಿನವನ ಕಪಾಳಕ್ಕೆ ಹೊಡೆದಳಂತೆ, ನಿನ್ನೆ ಕಿರಾಣಿ ಅಂಗಡಿಯ ಬನಿಯಾನ ಮುಖಕ್ಕೆ ಸಗಣಿ ಎಸೆದಳಂತೆ. ಇದನ್ನು ಕೇಳಿ ಶಾಲಾ ಮಾಸ್ತರು ಅವಳಿಗೆ ಶಿಕ್ಷಣ ನೀಡಲು ಮುಂದಾದರೆ, ಮಸೀದಿಯ ಮುಲ್ಲಾ ಬರುವ ಗಂಡಾಂತರದಿಂದ ಪಾರಾಗಲು ಜೋರಾಗಿ ಪ್ರಾರ್ಥಿಸಲಾರಂಭಿಸಿದ!

ಇದನ್ನೆಲ್ಲ ಕೇಳಿ ರೇಗಿದ ಮಿರ್ಜಾ ಇದ್ದಕ್ಕಿದ್ದಂತೆ ಮನೆಗೆ ಹಿಂದಿರುಗಿದ. ಆಗ ತಾನೇ ಸ್ನಾನ ಮುಗಿಸಿದ್ದ ಲಜ್ಜೆಯ ಕೂದಲು ಅವಳ ಹೆಗಲ ಸುತ್ತ ಒದ್ದೆಯಾಗಿ ಹರಡಿತ್ತು. ನೀರು ಕಾಯಿಸಿಕೊಳ್ಳಲು ಅವಳು ಕೊಳವೆಯಲ್ಲಿ ಊದಿದ್ದಕ್ಕೆ ಮುಖ ಕೆಂಪೇರಿತ್ತು. ಕಣ್ಣುಗಳಲ್ಲಿ ನೀರಾಡುತ್ತಿತ್ತು. ಅನಿರೀಕ್ಷಿತ ಹೊತ್ತಿನಲ್ಲಿ ಆತ ಮನೆಗೆ ಹಿಂದಿರುಗಿದ್ದನ್ನು ಕಂಡು ಆಕೆ ಹಲ್ಲು ಮಸೆದಳು.

ಅವಳನ್ನು ಆ ಭಂಗಿಯಲ್ಲಿ ನೋಡಿ ಮಿರ್ಜಾ ಮೂರ್ಛೆ ಹೋಗುವುದೊಂದು ಬಾಕಿ! ಒಂದು ಅಕ್ಷರವೂ ಮಾತನಾಡದೆ ಕಳವಳದಿಂದ ಆತ ಊಟ ಮುಗಿಸಿ ಮಸೀದಿಯತ್ತ ಕಾಲು ಹಾಕಿದ. ಆದರೆ ಅಲ್ಲೂ ಅವನಿಗೆ ನೆಮ್ಮದಿ ಸಿಗಲಿಲ್ಲ. ಮನೆಯಲ್ಲಿ ಕಂಡಿದ್ದ ದೃಶ್ಯ ಅವನನ್ನು ನಿರಂತರವಾಗಿ ಕಾಡಿತು. ದುಗುಡದಿಂದಲೇ ಆತ ಮನೆಗೆ ಹಿಂದಿರುಗಿದಾಗ ಹೊಸ್ತಿಲಲ್ಲಿ ನಿಂತಿದ್ದ ಲಜ್ಜೆ ಯಾವನೋ ಪುರುಷನೊಂದಿಗೆ ಜಗಳವಾಡುತ್ತಿದ್ದಳು. ಮಿರ್ಜಾ ಪ್ರತ್ಯಕ್ಷವಾಗುತ್ತಿದ್ದಂತೆ ಆ ಮನುಷ್ಯ ನಾಪತ್ತೆಯಾದ.

"ಯಾರವನು?" ಎಂದು ಸಂಶಯಪಡುವ ಗಂಡನ ರೀತಿಯಲ್ಲಿ ಮಿರ್ಜಾ ಕೇಳಿದ.

"ರಾಘವ್!"

"ರಾಘವ್?" ಎಂದ ಮಿರ್ಜಾ. ಹಲವಾರು ವರ್ಷಗಳಿಂದ ರಾಘವನಿಂದ ಹಾಲು ಪಡೆಯುತ್ತಿದ್ದರೂ ಅವನ ಹೆಸರು ಮಿರ್ಜಾನಿಗೆ ಗೊತ್ತಿರಲಿಲ್ಲ.

"ನಿನ್ನ ಹುಕ್ಕಾವನ್ನು ತರಲೆ" ಎಂದಳು ಲಜ್ಜೆ ವಿಷಯವನ್ನು ಬದಲಾಯಿಸುತ್ತಾ.

"ಬೇಡ. ಅವನಿಗೇನು ಬೇಕಿತ್ತಂತೆ?"

"ನಾಳೆಯಿಂದ ಎಷ್ಟು ಹಾಲು ತರಬೇಕು ಅಂತ ಕೇಳುತ್ತಿದ್ದ."

"ನೀನೇನಂದೆ?"

"ನಿನ್ನ ಮನೆ ಹಾಳಾಗ, ದಿನಾ ಎಷ್ಟು ತರುತ್ತೀಯೋ ಅಷ್ಟೇ ತಾ ಅಂದೆ."

"ಆಮೇಲೆ?"

"ಆಮೇಲೆ, ಹೋಗೋ ಬೋಳಿಮಗನೆ, ಮಿಕ್ಕಿದ್ದನ್ನ ನಿಮ್ಮ ಅಮ್ಮನಿಗೆ, ಅಕ್ಕನಿಗೆ ಕುಡಿಸು ಅಂದೆ."

"ಸೂಳೆ ಮಗ! ನಾಳೆಯಿಂದ ಅವನು ಇಲ್ಲಿ ಕಾಲಿಡಬಾರದು. ನಾನೇ ಬೆಳಗ್ಗೆ ಅಂಗಡಿಯಿಂದ ಹಾಲು ತರುತ್ತೇನೆ."

ಅವತ್ತು ರಾತ್ರಿ ಊಟವಾದ ಮೇಲೆ, ಮಿರ್ಜಾ ...ದು, ಇಸ್ತ್ರಿ ಮಾಡಿದ್ದ ಕುರ್ತಾ ತೊಟ್ಟು, ಸುಗಂಧ ...ಸಿದ್ದ ಹತ್ತಿಯನ್ನು ಕಿವಿಯ ತೊರಳಲ್ಲಿ ಇಟ್ಟುಕೊಂಡು, ...ಯಿಂದ ಹೊರಟ.

...ಲಜ್ಜೆಯ ಹೃದಯ ಅಸೂಯೆಯಿಂದ ಉರಿಯಿತು. ...ಭೇಟಿ ನೀಡಲಿದ್ದ ಸೂಳೆಯನ್ನು ಮನಃಪೂರ್ವಕ ...ಸಿದಳು. ನಿಜವಾಗಲೂ ಮಿರ್ಜಾನಿಗೆ ತಾನು ...ರಲಿಲ್ಲವೆ? ಅದು ಹೇಗೆ ಸಾಧ್ಯ ಎಂದು ಆಕೆ ...ಸಿದಳು.

ಆ ಸೂಳೆ ಮತ್ತೋರ್ವ ಗ್ರಾಹಕನೊಂದಿಗೆ ಚೌಕಾಸಿ ...ಮತ್ತಿದ್ದಳು. ಅದನ್ನು ಕಂಡು ಮುಖ ತಿರುಗಿಸಿದ ...ರ್ಜಾ ಹತ್ತಿರದಲ್ಲೇ ಇದ್ದ ಲಾಲಾನ ಅಂಗಡಿ ಹೊಕ್ಕ. ...ಕೂತು ಹಣದುಬ್ಬರ, ಬೆಲೆ ಏರಿಕೆ, ರಾಜಕೀಯ ...ದಿಗಳನ್ನು ಶಪಿಸಿದ ನಂತರ ಸಂಪೂರ್ಣವಾಗಿ ...ರಿಗೊಂಡು ಮಧ್ಯರಾತ್ರಿ ಮನೆಗೆ ಹಿಂದಿರುಗಿದ. ಆತ ...ಳಷ್ಟು ತಣ್ಣೀರು ಕುಡಿದರೂ ಅವನಲ್ಲಿ ಬೆಂಕಿ ಇನ್ನೂ ...ಯುತ್ತಿತ್ತು.

ಅವನ ಕೋಣೆಯ ತೆರೆದಿದ್ದ ಬಾಗಿಲಿನಿಂದ ಅಡುಗೆ ...ಯಲ್ಲಿ ಮಲಗಿದ್ದ ಲಜ್ಜೆಯ ಹೊನ್ನಿನಂತೆ ಹೊಳೆಯುತ್ತಿದ್ದ ...ದುವಾದ ಕಾಲೊಂದು ಕಾಣಿಸುತ್ತಿತ್ತು. ಆಕೆ ಹೊರಳಾಡಿ ...ಗಲೆಲ್ಲ ಅವಳ ಕಾಲುಗೆಜ್ಜೆ ಟಿಂಕಣಿಸುತ್ತಿದ್ದವು. ಮತ್ತೊಂದು ...ಟ ತಣ್ಣೀರನ್ನು ಕುಡಿದು ಮಂಚದ ಮೇಲೆ ಮೈಚೆಲ್ಲಿದ ...ರ್ಜಾ ಇಡೀ ಜಗತ್ತನ್ನೇ ಶಪಿಸಲಾರಂಭಿಸಿದ.

ನಿದ್ದೆ ಬಾರದೇ ನಿರಂತರವಾಗಿ ಹೊರಳಾಡಿದ್ದರಿಂದ ...ರ್ಜಾನ ಮೈಯೆಲ್ಲಾ ಉರಿಯಲಾರಂಭಿಸಿತು. ಕುಡಿದಿದ್ದ ...ಟರುಗಟ್ಟಲೆ ನೀರೆಲ್ಲ ಹೊಟ್ಟೆಯನ್ನು ಉಬ್ಬರಿಸಿತ್ತು. ...ಗಿಲಿನಿಂದ ಕಾಣುತ್ತಿದ್ದ ಆಕರ್ಷಕ ಕಾಲು ಅವನನ್ನು ...ಯುತ್ತಿತ್ತು. ಅಪರಿಚಿತ ಭಯಗಳು ಅವನನ್ನು ಮುತ್ತಿದವು. ...ರೆ ಸೈತಾನ ಅವನನ್ನು ಪ್ರಚೋ...ತ್ತಿದ್ದ. ಈ ಹಿಂದೆ ತನ್ನ ಮಂಚ...ದ ಅಡುಗೆ ಮನೆಗೆ ಸಾಕಷ್ಟು ...ಲಿಗಳನ್ನು ಸವೆಸಿದ್ದರೂ ಈಗ ...ದು ಹೆಜ್ಜೆಯನ್ನೂ ಮುಂದಿಡ...ರನಾದ.

ಆಗ ಒಂದು ಅಮಾಯಕ ...ೀಚನೆ ಅವನಿಗೆ ಹೊಳೆಯಿತು. ...ಯ ಕಾಲು ಹೀಗೆ ಆಕರ್ಷಿಸು...ವುದರಿಂದಲ್ಲವೇ ತನಗೆ ...ಜುಗರವಾಗುತ್ತಿರುವುದು... ...ನವಾಗಿ ಈ ಯೋಚನೆ ...ನಲ್ಲಿ ಬೇರೂರಿತು. ಅಕಸ್ಮಾತ್ ...ಎಚ್ಚರಗೊಂಡರೆ? ಆದರೆ ತನ್ನ ...ಕ್ಷಣೆಗಾಗಿ ಆತ ಅದನ್ನು ...ಡಲೇಬೇಕಿತ್ತು.

ಮಂಚದ ಅಡಿ ತನ್ನ ಚಪ್ಪಲಿಗಳನ್ನು ಬಿಟ್ಟು ಎದ್ದ ...ತ ಮಿರ್ಜಾ, ತನ್ನ ಉಸಿರನ್ನು ಬಿಗಿ ಹಿಡಿದು ಆಕೆ ...ಲ್ಲಿಗೆ ಕಾಲ್ಬೆರಳುಗಳ ಮೇಲೆ ನಡೆದ. ಆಕೆಯ ಹತ್ತಿರ ...ದು ಅವಳ ಲಂಗದ ತುದಿಯನ್ನು ಹಿಡಿದು ಆಕೆಯ ...ನ್ನು ಮುಚ್ಚುವಂತೆ ಹರಡಿದ. ಒಂದು ಕ್ಷಣ ...ಶ್ಚಿತತೆಯಿಂದ ಅವಳತ್ತ ನೋಡಿ ತನ್ನ ಕೋಣೆಯತ್ತ ...ಗಿದ.

ಕ್ಷಿಪ್ರವಾಗಿ ಚಲಿಸಿದ ಲಜ್ಜೆ ಒಂದು ಕ್ಷಣದಲ್ಲಿ ಅವನನ್ನು ...ದಿದ್ದಳು. ಮಾತು ಹೊರಡಿಸಲಾಗದೆ ಮಿರ್ಜಾ ...ಸಾಡಿದ, ಬೇಡಿದ.... ಆದರೆ ಲಜ್ಜೆ ಅವನನ್ನು ...ಲೊಲ್ಲಳು!

ಮಾರನೆ ದಿನ ಅವನನ್ನು ನೋಡಿ ಹೊಸ ವಧುವಿನಂತೆ ...ನಾಚಿದಳು! ತಾನು ಗೆದ್ದಂತೆ ಹಾಡೊಂದನ್ನು ...ಗುನುಗುತ್ತಾ ತನ್ನ ಕೆಲಸಗಳಲ್ಲಿ ಮಗ್ನಳಾದಳು. ಹಿಂದಿನ ...ಪಡೆದದ್ದರ ಯಾವುದೇ ಸೂಚನೆಯೂ ಅವಳ ...ಖದ ಮೇಲೆ ಸುಳಿದಾಡಲಿಲ್ಲ. ಎಂದಿನಂತೆ ಆತ ...ತಿನ್ನುತ್ತಿದ್ದಾಗ ಆಕೆ ಹೊಸ್ತಿಲ ಬಳಿ ಕೂತು ...ಬೀಸಣಿಗೆಯಿಂದ ನೊಣಗಳನ್ನು ಓಡಿಸುತ್ತಿದ್ದಳು.

ಅವತ್ತು ಮಧ್ಯಾಹ್ನ ಅವನ ಅಂಗಡಿಗೆ ಆಕೆ ಊಟ ...ಗ ಅವಳ ನಡಿಗೆಯಲ್ಲಿ ಹೊಸ ಹುಮ್ಮಸ್ಸಿರುವುದನ್ನು ...ಗಮನಿಸಿದ. ಆಕೆ ಅಂಗಡಿಗೆ ಬಂದಾಗಲೆಲ್ಲ ಜನರು ...ದಿನಸಿಗಳ ಬೆಲೆ ಬಗ್ಗೆ ಕೇಳುತ್ತಾ ನಿಲ್ಲುತ್ತಿದ್ದರು. ಇಡೀ ...ಮಿರ್ಜಾ ಮಾರಲಾಗದಷ್ಟನ್ನು ಆಕೆ ಸ್ವಲ್ಪ ಸಮಯದಲ್ಲೇ ...ಮಾಟ ಮಾಡುತ್ತಿದ್ದಳು.

ಮಿರ್ಜಾ ಕೂಡ ತನ್ನ ಉಡುಗೆ-ತೊಡುಗೆಯಲ್ಲಿ ...ಬದಲಾವಣೆಗಳನ್ನು ತಂದ. ಇದಕ್ಕೆ ಕಾರಣ ಗೊತ್ತಿದ್ದವರು ...ಹೊಟ್ಟೆಕಿಚ್ಚಿನಿಂದ ಉರಿದರು. ಇದನ್ನ ಕಂಡು ಮಿರ್ಜಾ ...ಬೀಗಿದ. ಲಜ್ಜೆ ಅವನಿಗೆ ಉಪಚಾರ ಮಾಡಿದಷ್ಟೂ ... ಒಡೆದ ಅವಳನ್ನು ... [illegible] ...ಸಿಟ್ಟು ಸಂಕೋಚವೂ ಇಲ್ಲದ ಆಕೆ ... ಊಟ ತಂದಾಗಲೆಲ್ಲ ಅವನಿಂದಾಗಿ

ಇಡೀ ಬಜಾರ್ ದವಗು ಟ್ಟುವುದನ್ನು ಕಂಡು ಕಂಗಾಲಾದ.

"ಇನ್ನು ಮುಂದೆ ನೀನು ನನಗೆ ಊಟ ತರಬೇಡ" ಎಂದು ಒಂದು ದಿನ ತಾಕೀತು ಮಾಡಿದ.

"ಯಾಕೆ?" ಎಂದ ಲಜ್ಜೆಯ ಮುಖ ಬಾಡಿತು. ದಿನಪೂರ್ತಿ ಮನೆಯಲ್ಲಿದ್ದು ಬೇಸರಗೊಳ್ಳುತ್ತಿದ್ದ ಆಕೆಗೆ ಬಜಾರಿಗೆ ಭೇಟಿ ನೀಡುವುದು ಉತ್ಸಾಹಕರವಾಗಿರುತ್ತಿತ್ತು. ಆಕೆ ಬಜಾರಿಗೆ ಬರುವುದನ್ನು ನಿಲ್ಲಿಸಿದ ಮಿರ್ಜಾನ ತಲೆಯನ್ನು ಹಲವಾರು ಅನುಮಾನದ ಹುಳುಗಳು ತಿನ್ನಲಾರಂಭಿಸಿದವು. ಅದಕ್ಕೆಂದೇ ಅನಿರೀಕ್ಷಿತ ಸಮಯಗಳಲ್ಲಿ ಮನೆಗೆ ಭೇಟಿ ನೀಡಿ ಅವಳ ಮೇಲೆ ನಿಗಾ ಇಡಲು ಪ್ರಾರಂಭಿಸಿದ. ಆದರೆ ಆತ ಹೀಗೆ ಅನಿರೀಕ್ಷಿತವಾಗಿ ಬಂದಾಗಲೆಲ್ಲ ಸಂತೋಷಗೊಂಡ ಲಜ್ಜೆ ಅವನಿಗೆ ತಾನು ಸೂಕ್ತವಾದ ಪ್ರತಿಫಲ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದಳು!



ಆದರೆ ಒಂದು ದಿನ ಬೀದಿಯ ಹುಡುಗರೊಂದಿಗೆ ಆಕೆ ಕಬಡ್ಡಿ ಆಡುತ್ತಿದ್ದಾಗ ಬಂದ ಮಿರ್ಜಾನಿಗೆ ತನ್ನ ಕೋಪವನ್ನು ತಡೆಯಲಾಗಲಿಲ್ಲ. ಅವಳ ಲಂಗ ಗಾಳಿಯಲ್ಲಿ ಹಾರಾಡುತ್ತಿತ್ತಲ್ಲದೆ, ಹುಡುಗರೆಲ್ಲಾ ಹಾರಾಡುತ್ತಿದ್ದ ಆ ಲಂಗವನ್ನೇ ನೋಡುತ್ತಿದ್ದರು. ಆ ದೃಶ್ಯವನ್ನು ನೋಡಿ ತನಗೇನೂ ಅನ್ನಿಸಿಲ್ಲ ಎಂಬಂತೆ ಮಿರ್ಜಾ ತಲೆ ಎತ್ತಿ ಮನೆಯತ್ತ ನಡೆದರೂ, ಅವನಿಗಾದ ಮುಜುಗರವನ್ನು ಕಂಡು ಜನ ಮುಸಿಮುಸಿ ನಕ್ಕರು. ಲಜ್ಜೆಯ ಬಗ್ಗೆ ಮಿರ್ಜಾನಲ್ಲಿ ಪ್ರೇಮಾಂಕುರವಾಗಿತ್ತು. ಅವಳಿಂದ ಬೇರ್ಪಡುವ ಚಿಂತೆಯೇ ಅವನನ್ನು ಕಂಗಾಲಾಗಿಸುತ್ತಿತ್ತು. ಅವಳು ತನ್ನನ್ನು ಬಿಟ್ಟು ಹೋಗ ಬಹುದೆಂಬ ಗುಮಾನಿ ಅವನನ್ನು ಕಾಡಿತು. ತನ್ನ ಅಂಗಡಿ ಯನ್ನೂ ಅವನಿಂದ ಸರಿಯಾಗಿ . ನಿರ್ವಹಿಸಲಾಗುತ್ತಿರಲಿಲ್ಲ.

"ಅವಳನ್ನು ನೀನ್ಯಾಕೆ ಮದುವೆ ಆಗಬಾರದು?" ಎಂದು ಮಿತ್ರ ಮಿರನ್ ಕೇಳಿದ.

"ಅಯ್ಯೋ ದೇವರೆ!" ಎಂದ ಮಿರ್ಜಾ. ಮದುವೆ ಎಂಬ ಪವಿತ್ರ ಸಂಬಂಧವನ್ನು ಸೂಳೆಯೊಬ್ಬಳೊಂದಿಗೆ ಹೇಗೆ ಸ್ಥಾಪಿಸಲು ಸಾಧ್ಯ ಎಂಬುದು ಅವನ ಚಿಂತೆಯಾಗಿತ್ತು.

ಆದರೆ ಅಂದು ಸಂಜೆ ಆತ ಮನೆಗೆ ಹಿಂದಿರುಗಿದಾಗ ಲಜ್ಜೆ ಮನೆಯಲ್ಲಿಲ್ಲದಿರುವುದನ್ನು ಕಂಡು ಕಂಗಾಲಾದ. ಅವಳಿಗಾಗಿ ಬಹಳ ದಿನದಿಂದ ಕಾದಿದ್ದ ಆ ದರಿದ್ರ ಲಾಲಾ ಅವಳಿಗೆ ಬಂಗಲೆಯನ್ನೇ ನೀಡುತ್ತೇನೆಂದು ಹೇಳಿದ್ದ. ಅಷ್ಟೇ ಯಾಕೆ, ಸ್ವಂತ ಗೆಳೆಯ ಮಿರನ್‌ನೇ ಮಿರ್ಜಾನಿಗೆ ಗೊತ್ತಿಲ್ಲದಂತೆ ಲಜ್ಜೆಗೆ ಆಮಿಷವೊಡ್ಡಿದ್ದ.

ಆಕೆ ಹಿಂದಿರುಗಲಾರಳು ಎಂದು ಮಿರ್ಜಾ ಯೋಚಿಸುತ್ತಿರುವಾಗಲೇ ಲಜ್ಜೆ ಬಂದಳು. ರಾಮನ ಅಜ್ಜಿಯೊಂದಿಗೆ ಹರಟಲು ಆಕೆ ಹೋಗಿದ್ದಳಷ್ಟೇ!

ಅವತ್ತು ತನ್ನ ವಂಶದ ಸ್ಥಾನಮಾನಗಳನ್ನು ಲೆಕ್ಕಿಸದೆ ಲಜ್ಜೆಯನ್ನು ಮದುವೆಯಾಗುವುದಾಗಿ ಮಿರ್ಜಾ ನಿರ್ಧರಿಸಿದ.

"ಆದರೆ ಯಾಕೆ?" ಎಂದಳು ಲಜ್ಜೆ ಮದುವೆಯ ಬಗ್ಗೆ ಮಿರ್ಜಾ ಪ್ರಸ್ತಾಪಿಸಿದಾಗ ಅಚ್ಚರಿಗೊಂಡು.

"ಯಾಕೆ ಬೇಡ? ಬೇರೆ ಕಡೆ ಸಂಬಂಧ ಬೇಕೇನು ನಿನಗೆ?" ಎಂದು ರೇಗಿದ.

"ಬೇರೆ ಸಂಬಂಧ ನನಗ್ಯಾಕೆ ಬೇಕು?"

"ಆ ಲಾಲಾ ನಿನಗೆ ಬಂಗಲೆ ಕೊಡಿಸುತ್ತೇನೆ ಅಂದಿದ್ದಾನಂತೆ."

"ಅವನ ಬಂಗಲೇನ ಬಡಿಯಾ."

ಆದರೆ ಮದುವೆಯ ಅವಶ್ಯಕತೆ ಅವಳಿಗೆ ಅರ್ಥವಾಗಲೇ ಇಲ್ಲ. ತನ್ನನ್ನು ಆತನಿಗೆ ಅರ್ಪಿಸಿಕೊಂಡಿದ್ದಲ್ಲದೆ, ತನ್ನ ಜೀವನ ಪರ್ಯಂತ ಆತನೊಂದಿಗೆ ಇರುವುದೆಂದು ನಿರ್ಧರಿಸಿದ್ದಳು. ಅವಳ ಪ್ರಕಾರ ಅವನಂತಹ ಮಾಲೀಕ ಸಿಗುವುದು ಅಪರೂಪ ಮಾತ್ರವಲ್ಲ ಆತ ಒಂದು ರತ್ನ ಇದ್ದಂತೆ. ಆಕೆ ಕಂಡಿದ್ದ ಇತರೆ ಮಾಲೀಕರು ಅವಳಿಂದ ಬೇಕಾದ್ದನ್ನು ಹೀರಿ ಕೊನೆಗೆ ಅವಳನ್ನು ಹೊಡೆದು, ಬಡಿದು ಒದ್ದೋಡಿಸುತ್ತಿದ್ದರು. ಆದರೆ ಮಿರ್ಜಾ ಹಾಗಿರಲಿಲ್ಲ. ಮೃದು ಸ್ವಭಾವದ ಆತ ಆಕೆಗೆ ಪ್ರೀತಿಯಿಂದ ಹಲವಾರು ಹೊಸ ಬಟ್ಟೆಗಳನ್ನು ಖರೀದಿಸಿದ್ದ; ಒಂದು ಜೊತೆ ಚಿನ್ನದ ಬಳೆಗಳನ್ನೂ ಕೊಟ್ಟಿದ್ದ. ಲಜ್ಜೆಯ ವಂಶದ ಏಳು ತಲೆಮಾರುಗಳಲ್ಲಿ ಆಕೆಯ ಹೊರತಾಗಿ ಬೇರೆ ಯಾರೂ ಚಿನ್ನ ತೊಟ್ಟಿದ್ದೇ ಇಲ್ಲ!

ತನ್ನ ಯೋಚನೆ ಬಗ್ಗೆ ರಾಮನ ಅಜ್ಜಿಯ ಮುಂದೆ ಮಿರ್ಜಾ ಪ್ರಸ್ತಾಪಿಸಿದಾಗ ಆಕೆಗೂ ಅಚ್ಚರಿಯಾಯಿತು.

"ಅಲ್ಲ, ಬೇಕಂತಲೇ ನಿನ್ನ ಕೊರಳಿಗೆ ಯಾಕೆ ಗಂಟೆಯನ್ನು ಕಟ್ಟಿಕೊಳ್ಳುತ್ತೀ? ಆ ಸೂಳೆ ಗಲಾಟೆ ಮಾಡುತ್ತಿದ್ದಾಳೇನು? ಅವಳಿಗೆ ನಾಲ್ಕು ಬಾರಿಸಿದರೆ ಬುದ್ಧಿ ಬರುತ್ತೆ. ಹೊಡೆಯುವುದರ ಮೂಲಕ ನಿವಾರಿಸಿಕೊಳ್ಳುವ ಸಮಸ್ಯೆಗೆ ಯಾಕೆ ಮದುವೆ ಎಂಬ ಪರಿಹಾರ?" ಎಂದು ಕೇಳಿದಳು ಅಜ್ಜಿ.

ಆದರೆ ಮಿರ್ಜಾನಿಗೆ ಮದುವೆಯ ಯೋಚನೆಯನ್ನು ತನ್ನ ತಲೆಯಿಂದ ತೊಡೆದು ಹಾಕಲಾಗಲಿಲ್ಲ.

"ಅಲ್ಲಾ, ನೀವಿಬ್ಬರೂ ಬೇರೆ ಬೇರೆ ಧರ್ಮದವರು ಎಂಬ ಕಾರಣಕ್ಕೆ ನೀನು ಹಿಂದೇಟು ಹಾಕುತ್ತಿದ್ದೀಯಾ?" ಎಂದು ರಾಮನ ಅಜ್ಜಿ ಲಜ್ಜೆಯನ್ನು ಪ್ರಶ್ನಿಸಿದಳು.

"ಇಲ್ಲ, ಅವನು ನನ್ನ ಗಂಡ ಅಂತಾನೇ ನಾನು ಅಂದುಕೊಂಡಿದ್ದೀನಿ" ಎಂದು ಲಜ್ಜೆ ಉತ್ತರಿಸಿದಳು.

ಆದರೆ ಲಜ್ಜೆ ತನ್ನ ತಾತ್ಕಾಲಿಕ ಪ್ರೇಮಿಗಳನ್ನೂ ಗಂಡ ಎಂದೇ ಭಾವಿಸಿ ಅವರನ್ನು ಚೆನ್ನಾಗೇ ನೋಡಿಕೊಂಡಿದ್ದವಳು. ಅವರ್‍ಯಾರೂ ಆಕೆಯನ್ನು ಚೆನ್ನಾಗಿ ನೋಡಿಕೊಂಡಿರದಿದ್ದರೂ ತನ್ನ ಮನಸ್ಸು ಅವರಿಗೆ ಒಪ್ಪಿಸಿಕೊಂಡಿದ್ದವಳು. ಆದರೆ ಮಿರ್ಜಾ ಇತರರಂತಿರಲಿಲ್ಲ. ಅವನೊಂದಿಗಿನ ಕೊಡು-ತಗೊ ಆಟದ ಮಜಾವನ್ನು ಆಕೆ ಬಲ್ಲವಳಾಗಿದ್ದಳು. ಅವನಿಗೆ ಹೋಲಿಸಿದರೆ ಇತರರೆಲ್ಲರೂ ಹಂದಿಗಳಿಗೆ ಸಮಾನ ಎಂಬುದು ಆಕೆಗೆ ಗೊತ್ತಿತ್ತು.

ಆದರೆ ಮದುವೆ ಎಂಬುದು ಕನ್ಯೆಗಳಿಗೆ ಮಾತ್ರ. ಕನ್ಯೆ ಅಲ್ಲದಿರುವ ತಾನು ಹೇಗೆ ವಧು ಆಗಲು ಸಾಧ್ಯ ಎಂದು ಚಿಂತಿಸಿದ ಲಜ್ಜೆ ಮಿರ್ಜಾ ಮುಂದೆ ಬೇಡಿದಳು, ಕಣ್ಣೀರಿಟ್ಟಳು. ಆದರೆ ಮಿರ್ಜಾ ತಾನು ಅವಳನ್ನು ಅಧಿಕೃತವಾಗಿ ಮದುವೆ ಆಗಬೇಕೆಂದು ಪಟ್ಟುಹಿಡಿದ.

ಅವತ್ತು ಸಂಜೆ ಪ್ರಾರ್ಥನೆಗಳು ಮುಗಿದ ನಂತರ ಅವರಿಬ್ಬರ ನಿಖಾವನ್ನು ವಿಧ್ಯುಕ್ತವಾಗಿ ಆಚರಿಸಲಾಯಿತು. ಅಕ್ಕಪಕ್ಕದ ಮನೆಗಳ ಯುವತಿಯರು ಮದುವೆಯ ಹಾಡುಗಳನ್ನು ಹಾಡಿದರು. ಮಿರ್ಜಾ ತನ್ನ ಗೆಳೆಯರನ್ನು ಸತ್ಕರಿಸಿದ. ಕನೀಜ್ ಫಾತೀಮಾ ಎಂದು ಹೊಸದಾಗಿ ನಾಮಕರಣಗೊಂಡ ಲಜ್ಜೆ ಅಧಿಕೃತವಾಗಿ ಮಿರ್ಜಾ ಇರ್ಫಾನ್ ಅಲಿ ಬೇಗ್‌ನ ಮಡದಿಯಾದಳು.


ಆಕೆ ಲಂಗ ತೊಡುವುದನ್ನು ನಿಷೇಧಿಸಿದ ಮಿರ್ಜಾ ಇನ್ನು ಮುಂದೆ ಆಕೆ ಚೂಡಿದಾರ್ ಪೈಜಾಮಗಳನ್ನೇ ಧರಿಸಬೇಕೆಂದು ಕಟ್ಟಳೆ ಮಾಡಿದ. ಆದರೆ ತನ್ನ ತೊಡೆಗಳ ನಡುವೆ ಗಾಳಿ ಆಡುವುದಕ್ಕೆ ರೂಢಿಯಾಗಿದ್ದ ಲಜ್ಜೆಗೆ ಇದು ಕಿರಿಕಿರಿ ಉಂಟು ಮಾಡಿತು. ಚೂಡಿದಾರ್ ಮತ್ತು ಪೈಜಾಮಾ ತೊಡುವುದು ಆಕೆಗೆ ರೂಢಿಯಾಗಲೇ ಇಲ್ಲ. ಒಂದು ದಿನ ಅವಕಾಶ ಸಿಕ್ಕಾಗ ಆಕೆ ಪೈಜಾಮ ಕಳಚಿ ಲಂಗ ತೊಡುತ್ತಿದ್ದಾಗ ಇದ್ದಕ್ಕಿದ್ದಂತೆ ಮಿರ್ಜಾ ಆಗಮಿಸಿದ. ಗೊಂದಲಗೊಂಡ ಆಕೆ ಲಂಗವನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳುವುದನ್ನು ಮರೆತಳು. ಆಗ ಲಂಗ ನೆಲಕ್ಕೆ ಬಿದ್ದಿತು.

"ಹಾಳಾಗು ಪಿಶಾಚಿ" ಎಂದು ಶಪಿಸಿದ ಮಿರ್ಜಾ ಕೂಡಲೇ ಅವಳ ಮೇಲೊಂದು ಬೆಡ್‌ಶೀಟನ್ನು ಹೊದಿಸಿದ.

ಅವನ ಕೋಪವಾಗಲಿ, ಆನಂತರ ಆತ ಹರಿದು ಬಿಟ್ಟ ವಾಕ್ಲಹರಿಯಾಗಲಿ ಲಜ್ಜೆಗೆ ಅರ್ಥವಾಗಲಿಲ್ಲ. ಆಕೆ ತಪ್ಪು ಮಾಡಿದ್ದೆಲ್ಲಿ? ಹಿಂದೆಲ್ಲಾ ಆಕೆ ಹೀಗೆ ತನ್ನ ಲಂಗವನ್ನು ಉದುರಿಸಿದಾಗ ಮಿರ್ಜಾ ಅದನ್ನು ಕಂಡು ಕಾಮೋದ್ರಿಕ್ತನಾಗುತ್ತಿದ್ದ. ಆದರೆ ಈಗ ಅದೇ ಕ್ರಿಯೆ ಅವನಲ್ಲಿ ಕೋಪವನ್ನು ಮೂಡಿಸಿತ್ತು. ಎಷ್ಟು ಕೋಪ ಮೂಡಿಸಿತ್ತೆಂದರೆ ಆತ ಅವಳ ಲಂಗವನ್ನು ಬೆಂಕಿಗೆ ಹಾಕಿ ಸುಟ್ಟು ಹಾಕಿದ.

ಮಿರ್ಜಾ ಹೊರಟಾಗ ತನಗೆ ತಿಳಿಯದ್ದೇನೋ ನಡೆದಿದೆ ಎಂದು ಲಜ್ಜೆ ಆಘಾತಗೊಂಡಳು. ಆತ ಹೊದಿಸಿದ್ದ ಬೆಡ್‌ಶೀಟನ್ನು ... ... ಸುತ್ತಿಕೊಂಡಳು ...

(ಮುಂದಿನ ಸಂಚಿಕೆಗೆ)




ಮೊಗೆದಷ್ಟು ತೀರದ ಸಿಹಿನೀರ ಬುಗ್ಗೆಯೊಂದಿದೆ
ಶಿವಮೊಗ್ಗೆಯಲಿ: ಬೊಗಸೆ ಬೊಗಸೆಯ ತುಂಬ
ಕುಡಿದು ತಣಿದವರ ಸಂಖ್ಯೆ ಅಪಾರ. ಈ ಸಡುವೆ
ಸಾಕಷ್ಟು ಹರಿದುಹೋಗಿದೆ ನೀರು ತುಂಗೆಯಲಿ,
ಬಂಡೆಬಂಡೆಗೆ ಬಡಿದು ಬದುಕಿನೆರಡೂ ದಂಡೆ
ಏರುಪೇರು. ಆದರೂ ಎಂದಿನೊಲು ತುಂಬುಮೊಗ-
ದಲಿ ನಂಬುಗೆಯ ನಿಶ್ಚಿಂತ ಕಳೆ, ಅಂತಃಕರಣ-
ದಾಲಿಂಗನ. ಹಿರೇಹಾಳಿನ ಬೇರು ನೀರುಂಡ
ಕಲಾರಾಧನೆಯ ಮಾಧುರ್ಯ. ಸಕಲ ಧರ್ಮದ
ತೀರ್ಥಯಾತ್ರೆಯಲಿ ಹೃದಯ ತುಂಬಿದ ಪಾತ್ರೆ.
ಪ್ರಸಾದದ ರಸಾಯನಕೆ ಸಾಮರಸ್ಯವೆ ಧಾತು.
ನಯವಿನಯ ಜೀವಾತು, ಶ್ರಮಸಂಸ್ಕೃತಿ ಸಮಂತು.
ರಾಜಕೀಯದ ಧೂಳು ಸೋಂಕದ ಬಿಳಿಯ ಬಟ್ಟೆ-
ಮಾನವತೆ ರಾರಾಜಿಸಲು ಬೇರೆ ನೆಲೆಯುಂಟೆ?

ಚೆನ್ನವೀರ ಕಣವಿ



ರಾತ್ರೋರಾತ್ರಿ [illegible] ಹೇಸಿಗೆ ಹುಟ್ಟಿಸುವ ಕಾಯಿಲೆ ತನಗೆ ಅಂಟಬಹುದೇ ಎಂಬ ಅನುಮಾನದಿಂದ.

ಪಿತ್ತಳಿನಲ್ಲಿದ್ದ ನಳ್ಳಿಯು ಅದಿ ಅವತ್ತು ಸ್ನಾನ ಮಾಡುವಾಗ ಆಕೆ ಕಣ್ಣೀರಿಡುತ್ತಿದ್ದಳು. ಪಕ್ಕದ ಮನೆಯ ಮೇಸ್ತ್ರಿಯ ಮಗ ಮಿತ್ಸಾ ವಿನೂತ್ನವಂತೆ ಗಾಳಿಪಟ ಹಾರಿಸುವ ನೆಪದಲ್ಲಿ ಮನೆಯ ತಾರಸಿಗೆ ಬಂದು ಸ್ನಾನ ಮಾಡುತ್ತಿದ್ದ ಅವಳತ್ತ ನೋಡಿದಾಗ ಎಂದಿನಂತೆ ಆಕೆ ತನ್ನ ಚಪ್ಪಲಿಯನ್ನು ಅವನತ್ತ ತೋರಲಿಲ್ಲ, ಅವತ್ತು ಅವಳಿಗೆ ಎಷ್ಟು ದುಃಖವಾಗಿತ್ತೆಂದರೆ ಆಕೆ ತನ್ನ ದೇಹದ ಸುತ್ತ ಒಂದು ಬಟ್ಟೆಯನ್ನು ಸುತ್ತಿಕೊಂಡು ಮನೆಯೊಳಗೆ ನಡೆದಳು.



ಭಾರವಾದ ಹೃದಯದಿಂದ ಅವಳು ತನ್ನ ಕಾಲುಗಳನ್ನು ಪಿಶಾಚಿಯ ಕರುಳಿನಷ್ಟೇ ಉದ್ದವಾಗಿದ್ದ ಪೈಜಾಮದೊಳಗೆ ತೂರಿಸಿದಳು. ಆದರೆ ಅದರ ಲಾಡಿ ನಡುಪಟ್ಟಿಯಲ್ಲಿ ನಾಪತ್ತೆಯಾದಾಗ ಲಜ್ಜೊ ಸಹಾಯಕ್ಕಾಗಿ ಕೂಗಿದಳು. ಪಕ್ಕದ ಮನೆಯ ಹುಡುಗಿ ಜುಲ್ಲು ಬಂದು ನಾಪತ್ತೆಯಾಗಿದ್ದ ಲಾಡಿಯನ್ನು ಹುಡುಕಿ ಸಹಾಯ ಮಾಡಿದಳು. "ಬಂದೂಕಿನ ಕವಚದಂತಿರುವ ಈ ವಸ್ತ್ರವನ್ನು ಅದ್ಯಾವ ವಿಕೃತ ಮನಸ್ಸು ಮಹಿಳೆಯರಿಗೆ ರೂಪಿಸಿತು" ಎಂದು ಚಿಂತಿಸಿದಳು.

ಆನಂತರ, ಮಿರ್ಜಾ ಮನೆಗೆ ಹಿಂದಿರುಗಿದಾಗ ಆ ಲಾಡಿ ಮತ್ತೆ ತಪ್ಪಿಸಿಕೊಳ್ಳಲಾರಂಭಿಸಿತು. ಅದನ್ನು ತಡೆಹಿಡಿಯಲು ಲಜ್ಜೊಯ ಬೆರಳುಗಳು ತಡಕಾಡಿದವು. ಆತಂಕ ತುಂಬಿದ್ದ ಅವಳ ಮುಖವನ್ನು ನೋಡಿ ಮಿರ್ಜಾನಿಗೆ ರೋಮಾಂಚನವಾಯಿತು. ಅವರಿಬ್ಬರೂ ಜಂಟಿಯಾಗಿ ಕಾರ್ಯಾಚರಣೆ ನಡೆಸಿದ ನಂತರ ಆ ಲಾಡಿ ಮತ್ತೆ ಪತ್ತೆಯಾಯಿತು.

ಆದರೆ ಮಿರ್ಜಾನಿಗೆ ತೊಡಕಿನ ಸಮಸ್ಯೆಯೊಂದು ಎದುರಾಗಿತ್ತು. ಲಜ್ಜೊಯ ಅಮಲೇರಿಸುವ ವಯ್ಯಾರ ಈಗ ತನ್ನ ಹೆಂಡತಿಯಲ್ಲಿ ನಿರ್ಲಜ್ಜತನದಂತೆ ಕಂಡಿತು. ಆಕೆಯ ಚೆಲ್ಲುಚೆಲ್ಲಾದ ಪ್ರಣಯಚೇಷ್ಟೆ ತನ್ನ ಹೆಂಡತಿಯಲ್ಲಿ ಅಸಭ್ಯತೆಯಂತೆ ಭಾಸವಾಯಿತು. ಆತನ ಕಾಮ ಕುಚೋದ್ಯಗಳನ್ನು ಕಂಡು ನಾಚದ, ಆತನ ಒತ್ತಾಯಗಳನ್ನು ನೋಡಿ ಮುನಿಸಿಕೊಳ್ಳದ, ಆತನ ಬೇಡಿಕೆಗಳನ್ನು ನಿರಾಕರಿಸದ ಲಜ್ಜೊ ಅವನ ಕಣ್ಣಲ್ಲಿ ಸೋತಿದ್ದಳು. ಆತನ ಕನಸಿನ ಸೂಕ್ತ ಮಡದಿಯಾಗಿರಲಿಲ್ಲ ಲಜ್ಜೊ. ಈಗ ರಸ್ತೆ ಬದಿಯ ಹಾಸುಗಲ್ಲಿನಂತೆ ಲಜ್ಜೊ ಆತನಿಗೆ ಕಂಡಳು.

ಅವಳ ಪ್ರತಿಹೆಜ್ಜೆಯನ್ನು ನಿಯಂತ್ರಿಸಲು ಪ್ರಯತ್ನಿಸಿದ ಮಿರ್ಜಾ ಅವಳಲ್ಲಿನ ಅತಿರೇಕಗಳನ್ನು ಮತ್ತು ಒರಟುತನಗಳನ್ನು ಹತ್ತಿಕ್ಕಲು ನೋಡಿದ. ಅದರೊಂದಿಗೆ ಈಗ ಆತನಿಗೆ ಪ್ರತಿ ಸಂಜೆ ಬೇಗ ಮನೆಗೆ ಹಿಂದಿರುಗುವ ಆಸೆಯೇ ಹೊರಟುಹೋಗಿತ್ತು. ಅದಕ್ಕೆ 'ಹೆಂಡತಿಯ ಗಂಡ' ಎಂದು ಕರೆಸಿಕೊಳ್ಳಬಾರದೆಂಬ ಎಲ್ಲ ಗಂಡಂದಿರಂತೆ ಆತ ಕೂಡ ಹೆಚ್ಚು ಸಮಯವನ್ನು ತನ್ನ ಗೆಳೆಯರೊಂದಿಗೆ ಕಳೆಯಲಾರಂಭಿಸಿದ.

ತನ್ನ ಗೈರುಹಾಜರಿಯನ್ನು ಸರಿದೂಗಿಸಲು ಕೆಲಸದಾಕೆಯನ್ನು ನೇಮಿಸುವೆ ಎಂದು ಮಿರ್ಜಾ ಹೇಳಿದಾಗ ಲಜ್ಜೊ ಕೋಪಗೊಂಡಳು. ಆತ ಮತ್ತೆ ವೇಶ್ಯೆಯರ ಮನೆಗಳಿಗೆ ಭೇಟಿ ನೀಡಲಾರಂಭಿಸಿದ್ದು ಲಜ್ಜೊಗೆ ಗೊತ್ತಿತ್ತು. ಅವನಂತೆ ಅಕ್ಕಪಕ್ಕದ ಗಂಡಂದಿರೂ ವೇಶ್ಯೆಯರ ಮನೆಗಳಿಗೆ ಹೋಗುತ್ತಾರೆಂಬುದೂ ಅವಳಿಗೆ ಗೊತ್ತಿತ್ತು. ಆದರೆ ತನ್ನ ಮನೆಯಲ್ಲೇ ಇನ್ನೊಬ್ಬಳು ಹೆಂಗಸು ಇರುವ ಯೋಚನೆಯನ್ನು ಅವಳಿಂದ ಸಹಿಸಲಾಗಲಿಲ್ಲ. ಯಾವಳಾದರೂ ತನ್ನ ಅಡುಗೆಮನೆಗೆ ಕಾಲಿಟ್ಟು ಹೊಳೆಯುತ್ತಿದ್ದ ಪಾತ್ರೆಗಳನ್ನು ಮುಟ್ಟಿದ್ದರೆ ಲಜ್ಜೊ ಅವಳನ್ನು ಚಿಂದಿ, ಚಿಂದಿ ಮಾಡಿಬಿಡುತ್ತಿದ್ದಳು. ಆಕೆ ತನ್ನ ಗಂಡನನ್ನು ಇನ್ನೋರ್ವ ಸ್ತ್ರೀಯೊಂದಿಗೆ ಹಂಚಿಕೊಳ್ಳಲು ತಯಾರಿದ್ದಳು. ಅವಳು ಮನೆಯನ್ನು ಬೇರೆಯವಳೊಂದಿಗೆ ಹಂಚಿಕೊಳ್ಳಲು ಸುತಾರಾಂ ತಯಾರಿರಲಿಲ್ಲ.

ತನ್ನ ಮನೆಯಲ್ಲಿ ಲಜ್ಜೊಯನ್ನು ಪ್ರತಿಷ್ಠಾಪಿಸಿದ ನಂತರ ಮಿರ್ಜಾನಿಗೆ ಅವಳ ಬಗ್ಗೆ ಮರೆತೇಹೋಯಿತು. ವಾರಗಟ್ಟಲೆ ಆಕೆಯೊಂದಿಗೆ 'ಹೌದು', 'ಇಲ್ಲ,' ಎಂಬಂತಹ ಏಕ ಉಚ್ಚಾರದ ಪದಗಳೊಂದಿಗೆ ಮಾತನಾಡುತ್ತಿದ್ದ. ಆಕೆಯನ್ನು ಅವನು ಇಟ್ಟುಕೊಂಡಿದ್ದಾಗ ಎಲ್ಲಾ ಪುರುಷರ ಕಣ್ಣು ಅವಳ ಮೇಲಿರುತ್ತಿತ್ತು, ಆದರೆ ಈಗ ಅವಳನ್ನು ಆತ ಕಟ್ಟಿಕೊಂಡಿದ್ದರಿಂದ ಆಕೆ ಅವರಿಗೆಲ್ಲ "ತಾಯಿ, ಅಕ್ಕ, ಮಗಳು" ಆಗಿದ್ದಳು. ಅವರ್‍ಯಾರೂ–ಮಿತ್ಸಾನ ಹೊರತಾಗಿ ಅಪ್ಪಿತಪ್ಪಿಯೂ ಅವರ ಬಾಗಿಲಿಗೆ ನೇತುಹಾಕಿದ್ದ ಗೋಣಿ ತೊಟ್ಟಿನ ಪರದೆಯತ್ತ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಆದರೆ ಮಿತ್ಸಾ ಮಾತ್ರ ಈಗಲೂ ತಾರಸಿಯ ಮೇಲಿಂದ ಗಾಳಿಪಟಗಳನ್ನು ಹಾರಿಸುತ್ತಿದ್ದ–ಆದರೆ ಮಿರ್ಜಾ ಮನೆಯಲ್ಲಿ ಇಲ್ಲದಿದ್ದಾಗ ಮತ್ತು ಲಜ್ಜೊ ಸ್ನಾನ ಮಾಡುತ್ತಿದ್ದಾಗ ಮಾತ್ರ.

ದಸರಾ ಹಬ್ಬವನ್ನು ತನ್ನ ಗೆಳೆಯರೊಂದಿಗೆ ಕಳೆದ ಮಿರ್ಜಾ ಇಡೀ ರಾತ್ರಿ ಮನೆಗೆ ಹಿಂದಿರುಗಲೇ ಇಲ್ಲ, ಮಾರನೇ ದಿನ ಬೆಳಗ್ಗೆ ಮನೆಗೆ ಬಂದ ಆತ ಅವಸರದಲ್ಲಿ ಸ್ನಾನ ಮಾಡಿ ತನ್ನ ಅಂಗಡಿಗೆ ಹೊರಟುಹೋದ. ಲಜ್ಜೊಗೆ ರೇಗಿ ಹೋಯಿತು. ಅವತ್ತು ಆಕೆ ಸ್ನಾನ ಮಾಡುತ್ತಿದ್ದಾಗ ತಾರಸಿಯತ್ತ ನೋಡಿದಳು. ಆಕೆ ಹಾಗೆ ನೋಡಿದ್ದಕ್ಕೆ ಕಾರಣ ಅವಳ ನಗ್ನ ದೇಹವನ್ನು ಮಿತ್ಸಾನ ಬಿರುಗಣ್ಣು ಭರ್ಜಿಯಂತೆ ಇರಿದಿದ್ದೂ ಇರಬಹುದು.

ಆಕೆ ಮಿತ್ಸಾನತ್ತ ನೋಡಿದ ಕ್ಷಣ ಅವನ ಕೈಯಲ್ಲಿದ್ದ ಗಾಳಿಪಟ್ಟದ ದಾರ ಕತ್ತರಿಸಿಹೋಯಿತು. ಆ ದಾರ ಅವಳ ದೇಹವನ್ನು ತೀಕ್ಷ್ಣವಾಗಿ ಸ್ಪರ್ಶಿಸುತ್ತಾ ಹೋಯಿತು. ಲಜ್ಜೊ ಬೆಚ್ಚಿ ಬಿದ್ದಳು. ತಕ್ಷಣವೇ ಎದ್ದು ಮನೆಯೊಳಗೆ ಓಡಿದ ಆಕೆ ಬೇಕಂತಲೋ ಅಥವಾ ಮರೆವಿನಿಂದಲೋ ತನ್ನ ನಗ್ನ ದೇಹದ ಸುತ್ತ ಬಟ್ಟೆ ಸುತ್ತಿಕೊಳ್ಳುವುದನ್ನೂ ಮರೆತಳು.

ಕತೆ

ಅಂದಿನಿಂದ ಮಿತ್ಸಾ ಅವಳ ಮನೆಯ ಹತ್ತಿರವೇ ಗಿರಕಿ ಹೊಡೆಯಲಾರಂಭಿಸಿದ. ಲಜ್ಜೊಗೆ ಬಜಾರಿನಿಂದ ಏನಾದರೂ ಬೇಕಾದಾಗ, ಮನೆಯ ಬಾಗಿಲಿನ ಗೋಣಿ ತೊಟ್ಟಿನ ಪರದೆಯನ್ನು ಸರಿಸಿ "ಎ ಮಿತ್ಸಾ, ತಿಪ್ಪೆಗುಡ್ಡೆ ತರಹ ಅಲ್ಲೇ ನಿಂತಿರಬೇಡ. ಹೋಗಿ ಕಚೋರಿಗಳನ್ನು ತೆಗೆದುಕೊಂಡು ಬಾ" ಎಂದು ಕೂಗುತ್ತಿದ್ದಳು.

ಆಕೆ ಸ್ನಾನ ಮಾಡುತ್ತಿದ್ದಾಗ ಮಿತ್ಸಾ ತಾರಸಿಯ ಮೇಲೆ ಪ್ರತ್ಯಕ್ಷನಾಗದಿದ್ದರೆ ಸಮಾಧಿಯಲ್ಲಿನ ಹೆಣಗಳೂ ಎಚ್ಚೆತ್ತುಕೊಳ್ಳುವಷ್ಟು ಜೋರಾಗಿ ಬಕೆಟ್ಟಿನ ಸದ್ದು ಮಾಡುತ್ತಿದ್ದಳು. ಆಕೆ ತನ್ನ ಜೀವನವಿಡೀ ಇತರರಿಗೆ ಧಾರೆಯೆರೆದಿದ್ದ ಪ್ರೀತಿ ಈಗ ಮಿತ್ಸಾನಿಗೆ ಪುಕ್ಕಟೆಯಾಗಿ ಸಿಗುತ್ತಿತ್ತು. ಆಕಸ್ಮಾತ್ ಮಿರ್ಜಾ ಮಧ್ಯಾಹ್ನದ ಊಟಕ್ಕೆ ಬಾರದಿದ್ದರೆ ಉಳಿದಿದ್ದ ಊಟವನ್ನು ಆಕೆ ಎಸೆಯುತ್ತಿರಲಿಲ್ಲ. ಬದಲಾಗಿ ಅದನ್ನು ಯಾವುದೋ ಹಸಿದ ಬಡವನಿಗೆ ನೀಡುತ್ತಿದ್ದಳು. ಮಿತ್ಸಾನಿಗಿಂತ ಹಸಿದ ಬಡವ ಇನ್ಯಾರಿದ್ದರು?

ಮದುವೆ ಎಂಬ ಸಂಕೋಲೆಯಲ್ಲಿ ಸಿಲುಕಿಕೊಂಡಿದ್ದ ಲಜ್ಜೊ ಅಪ್ಪಟ ಗೃಹಿಣಿಯಾಗಿ ಪರಿವರ್ತನೆಗೊಂಡಿದ್ದಳು ಎಂದೇ ಮಿರ್ಜಾ ನಂಬಿದ್ದ. ಆದರೆ ಅದು ನಿಜವಲ್ಲ ಎಂಬುದನ್ನು ಆತ ಕಣ್ಣಾರೆ ಕಂಡಿರದಿದ್ದರೆ ಆತ ಹಾಗೆಯೇ ನಂಬಿಕೊಂಡಿರುತ್ತಿದ್ದ. ಒಂದು ದಿನ ಅನಿರೀಕ್ಷಿತವಾಗಿ ಮನೆಯ ಹೊಸ್ತಿಲಲ್ಲಿ ಪ್ರತ್ಯಕ್ಷನಾದ ಮಿರ್ಜಾನನ್ನು ಕಂಡು ಲಜ್ಜೊ ಜೋರಾಗಿ ನಗಲಾರಂಭಿಸಿದಳು. ಕನಸು ಮನಸ್ಸಿನಲ್ಲೂ ಮಿರ್ಜಾ ಆಘಾತಗೊಳ್ಳುತ್ತಾನೆ ಎಂದು ಆಕೆ ಊಹಿಸಿರಲಿಲ್ಲ!

ಆದರೆ ಮಿತ್ಸಾನಿಗೆ ಗೊತ್ತಿತ್ತು, ತನ್ನ ಪಂಚೆಯನ್ನು ಬಿಗಿಯಾಗಿ ಹಿಡಿದು ಓಡಲಾರಂಭಿಸಿದ ಆತ ಕೊನೆಗೂ ಉಸಿರುಗಟ್ಟಿ ನಿಂತದ್ದು ಮೂರು ಹಳ್ಳಿಗಳನ್ನು ದಾಟಿದ ಮೇಲೆ. ಅವತ್ತು ಮಿರ್ಜಾ ಲಜ್ಜೊಯನ್ನು ಹೇಗೆ ಬಾರಿಸಿದನೆಂದರೆ ಆಕೆ ಸೂಕ್ಷ್ಮ ದೇಹದವಳಾಗಿದ್ದರೆ ಅಂದೇ ಕೊನೆಯುಸಿರೆಳೆಯುತ್ತಿದ್ದಳು.

ಮಿತ್ಸಾನೊಂದಿಗೆ ಲಜ್ಜೊ ಇದ್ದಾಗ ಅವರಿಬ್ಬರೂ ಮಿರ್ಜಾನಿಗೆ ಸಿಕ್ಕಿಹಾಕಿಕೊಂಡರು ಎಂಬ ಸುದ್ದಿ ಊರಿನೆಲ್ಲೆಡೆ ಹಬ್ಬಿತು. ಈ ತಮಾಷೆಯನ್ನು ಕಣ್ಣಾರೆ ನೋಡಲು ಬಂದ ಸಹಸ್ರಾರು ಜನರಿಗೆ, ಈ ಪ್ರಸಂಗದ ಹೀರೋ ಮಿತ್ಸಾ ಪರಾರಿಯಾಗಿದ್ದೂ, ಅದರ ಹೀರೋಯಿನ್ ಮುರಿದ ಗೊಂಬೆಯಂತೆ ಬಿದ್ದಿದ್ದೂ ನಿರಾಶೆ ಮೂಡಿಸಿತು. ರಾಮನ ಅಜ್ಜಿ ಬಂದು ಲಜ್ಜೊಯನ್ನು ತನ್ನ ಮನೆಗೆ ಕರೆದುಕೊಂಡು ಹೋದಳು.

ಇನ್ನಿಲ್ಲದಂತೆ ಹೊಡೆತ ತಿಂದಿದ್ದ ಲಜ್ಜೊಯಲ್ಲಿ ಮಿರ್ಜಾ ಬಗ್ಗೆ ದ್ವೇಷ ಹುಟ್ಟುತ್ತದೆ ಎಂದು ನೀವು ಭಾವಿಸಬಹುದು. ಆದರೆ ಹಾಗಾಗಲೇ ಇಲ್ಲ! ಮದುವೆಯಿಂದ ಸಾಧ್ಯವಾಗದಿದ್ದದ್ದು ಆ ಹೊಡೆತದಿಂದ ಸಾಧ್ಯವಾಗಿತ್ತು. ಅವರ ನಂಟು ಇನ್ನೂ ಗಟ್ಟಿಗೊಂಡಿತ್ತು. ಪ್ರಜ್ಞೆ ಪಡೆದ ಮರುಕ್ಷಣ ಲಜ್ಜೊ ವಿಚಾರಿಸಿದ್ದು ಮಿರ್ಜಾನ ಬಗ್ಗೆ. ಏಕೆಂದರೆ ಅವಳ ಎಲ್ಲಾ ಮಾಲೀಕರು ಅನಿವಾರ್ಯವಾಗಿ ಅವಳ ಪ್ರೇಮಿಗಳೂ ಆಗಿರುತ್ತಿದ್ದರು, ಮತ್ತು ಅವಳನ್ನು ಎದ್ವಾತದ್ವಾ ಬಾರಿಸುತ್ತಿದ್ದರು. ಹಾಗೆ ಹೊಡೆದ ನಂತರ ಅವರು ಕೊಡಬೇಕಿದ್ದ ಹಣದ ವಿಷಯ ಮೂಲೆಗುಂಪಾಗುತ್ತಿತ್ತು, ಅವರಿಗೆ ಬಟ್ಟೆ ಚಾಕರಿ ಮಾಡುತ್ತಿದ್ದ ಆಕೆ ಆಗಾಗ್ಗೆ ಅವರಿಂದ ಹೊಡೆಸಿಕೊಳ್ಳುವುದೂ ಮಾಮೂಲಿ ಆಗಿತ್ತು, ಆದರೆ ಮಿರ್ಜಾ ಅವಳನ್ನು ಚೆನ್ನಾಗಿ ನೋಡಿಕೊಂಡಿದ್ದ, ಇತರೆ ಮಾಲೀಕರು ಅವಳನ್ನು ತಮ್ಮ ಸ್ನೇಹಿತರಿಗೆ 'ಸಾಲ'ವಾಗಿ ನೀಡಿದ್ದರೆ, ಮಿರ್ಜಾ ಆಕೆ ತನ್ನವಳು ಮಾತ್ರ ಎಂಬಂತೆ ನಡೆದುಕೊಂಡಿದ್ದ. ಎಲ್ಲರೂ "ನೀನು ಜೀವಂತವಾಗಿರಬೇಕೆಂದರೆ ಇಲ್ಲಿಂದ ಓಡಿಹೋಗು" ಎಂದು ಸಲಹೆ ನೀಡಿದರೂ ಆಕೆ ಅಲ್ಲಿಂದ ಮಿಸುಗಾಡಲಿಲ್ಲ.

ಆದರೆ ಮಿರ್ಜಾ ಜಗತ್ತನ್ನು ಎದುರಿಸುವುದು ಹೇಗೆ? ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆಂದರೆ ಆತನಿಗೆ ಉಳಿದಿದ್ದ ಮಾರ್ಗ ಅವಳನ್ನು ಕೊಲ್ಲುವುದು. ಆದರೆ ಅದರ ಬಗ್ಗೆ ಅವನ ಸ್ನೇಹಿತ ಮಿರನ್ ಎಚ್ಚರಿಸಿದ. "ಓರ್ವ ಸೂಳೆಗಾಗಿ ನೀನ್ಯಾಕೆ ನಿನ್ನ ತಲೆಯನ್ನು ಉರುಳಿಗೆ ಒಡ್ಡಬೇಕು? ಆ ಸೂಳೆಗೆ ವಿಚ್ಛೇದನ ನೀಡಿ ಅವಳನ್ನು ಮರೆತುಬಿಡು" ಎಂದ ಮಿರನ್.

ತಕ್ಷಣವೇ ಲಜ್ಜೊಗೆ ವಿಚ್ಛೇದನ ನೀಡಿದ ಮಿರ್ಜಾ 32 ರೂಪಾಯಿಗಳ ಸ್ತ್ರೀ ಧನವನ್ನು, ವಧುದಕ್ಷಿಣೆಯನ್ನು, ಅವಳ ಬಟ್ಟೆ ಮತ್ತು ಇತ್ಯಾದಿ ವಸ್ತುಗಳನ್ನು ರಾಮನ ಅಜ್ಜಿಯ ಮನೆಗೆ ಕಳುಹಿಸಿದ.


ತನಗೆ ಮಿರ್ಜಾ ವಿಚ್ಛೇದನ ನೀಡಿದ್ದರ ಬಗ್ಗೆ ಕೇಳಿದಾಗ ಲಜ್ಜೊ ನಿಟ್ಟುಸಿರಿಟ್ಟಳು. ಏಕೆಂದರೆ ಎಲ್ಲ ದುರಂತಗಳು ಸಂಭವಿಸುವುದು ಮದುವೆಯೆಂಬ ದುರಾದೃಷ್ಟದಿಂದ ಎಂದೇ ಆಕೆ ನಂಬಿದ್ದಳು.

"ಆತನಿಗಿನ್ನೂ ಕೋಪವಿದೆಯಾ?" ಎಂದು ಲಜ್ಜೊ ಕೇಳಿದಾಗ, "ನಿನ್ನ ಮೇಲೆ ಎಂದೂ ಆತನ ಕಣ್ಣು ಬೀಳಬಾರದಂತೆ. ನೀನು ತೊಲಗಿದರೆ ಸಾಕು, ಸತ್ತರೆ ವಾಸಿ ಎನ್ನುತ್ತಿದ್ದಾನಂತೆ" ಎಂದು ರಾಮನ ಅಜ್ಜಿ ಉತ್ತರಿಸಿದಳು.

ಮಿರ್ಜಾ ವಿಚ್ಛೇದನೆ ಪಡೆದ ಸುದ್ದಿ ಊರಿನಲ್ಲಿ ಮಿಂಚಿನಂತೆ ಹರಡಿತು. ಅದನ್ನು ಕೇಳಿ "ಬಂಗಲೆ ತಯಾರಿದೆ" ಎಂದು ಲಾಲಾ ಲಜ್ಜೊಗೆ ಹೇಳಿ ಕಳುಹಿಸಿದ. "ನಿನ್ನ ಅಮ್ಮನನ್ನು ಅದರಲ್ಲಿ ಬಿಸಾಡು" ಎಂದು ಲಜ್ಜೊ ಉತ್ತರಿಸಿದಳು.

ಎರಡು ವಾರಗಳ ಕಾಲ ಹಾಸಿಗೆಯಲ್ಲೇ ಇದ್ದ ಲಜ್ಜೊ ಬೇಗನೆ ಚೇತರಿಸಿಕೊಂಡಳು. ಅವಳ ಮೇಲೆ ಬಿದ್ದಿದ್ದ ಹೊಡೆತಗಳು ಅವಳನ್ನು ಸ್ವಚ್ಛಗೊಳಿಸಿ ಆಕೆ ಮತ್ತಷ್ಟು ಹೊಳೆಯುವಂತೆ ಮಾಡಿದ್ದವು. ಕಚೋರಿ ಅಥವಾ ಬೀಡಾ ಕೊಳ್ಳಲು ಆಕೆ ಬಜಾರಿಗೆ ಹೋದಾಗ ಆಕೆ ಇಡೀ ಬಜಾರಿನ ಕೇಂದ್ರಬಿಂದುವಾಗುತ್ತಿದ್ದಳು.

ಇದನ್ನು ಕಂಡು ಮಿರ್ಜಾನಿಗೆ ಸಾವಿರಾರು ಬಾರಿ ಸತ್ತಂತಾಯಿತು. ಒಮ್ಮೆ ಆಕೆ ಲಾಲಾನೊಂದಿಗೆ ಚೌಕಾಸಿ ಮಾಡುತ್ತಿದ್ದಾಗ ಆ ಬನಿಯಾ ಜೊಲ್ಲಿಡುತ್ತಿರುವುದನ್ನು ಮಿರ್ಜಾ ಕಂಡ. ಆದರೆ ಅದನ್ನು ತಾನು ನೋಡಲಿಲ್ಲ ಎಂಬಂತೆ ಮುಂದೆ ಸಾಗಿದ.



"ನಿನಗೆ ಹುಚ್ಚು ಅವಳೇನು ಮಾಡಿದರೆ ನಿನಗ್ಯಾಕೆ ಚಿಂತೆ? ನೀನಾಗಲೇ ಅವಳಿಗೆ ವಿಚ್ಛೇದನೆ ನೀಡಿದ್ದಲ್ಲಾ" ಎಂದು ಮಿತ್ರ ಮಿರನ್ ಕೇಳಿದ.

"ಅವಳು ನನ್ನ ಹೆಂಡತಿ ಆಗಿದ್ದವಳು."

"ನಿಜ ಹೇಳಬೇಕೆಂದರೆ ಅವಳೆಂದೂ ನಿನ್ನ ಹೆಂಡತಿ ಆಗಿರಲಿಲ್ಲ!"

"ಆದರೆ ನಮ್ಮ ಮದುವೆ?"

"ಸಂಪೂರ್ಣವಾಗಿ ಅನಧಿಕೃತ!"

"ಹೇಗೆ?"

"ಅದೆಂದೂ ಅಧಿಕೃತವಾಗಿರಲಿಲ್ಲ, ಏಕೆಂದರೆ ಹುಟ್ಟಿದ್ದು ಯಾರಿಗೆ ಎಂದು ಯಾರಿಗೂ ಗೊತ್ತಿಲ್ಲ, ಪ್ರಕಾರ ಇಂತಹ ಹಡಬೆಗಳನ್ನು ಮದುವೆ ಆಗುವ... ಅಧಿಕೃತವಲ್ಲ" ಎಂದು ಮಿರನ್ ತನ್ನ ತೀರ್ಪನ್ನು ನೀ...

"ಅಂದ್ರೆ, ನಾವಿಬ್ಬರೂ ಎಂದೂ ಅಧಿಕೃತವಾಗಿ ಮದು... ಆಗಿರಲಿಲ್ವೆ?" ಎಂದು ಮಿರ್ಜಾ ಪ್ರಶ್ನಿಸಿದ.

"ಆಗಿರಲಿಲ್ಲ."

"ಅಂದ್ರೆ, ನನಗೆ ಮುಖಭಂಗವಾಗಲಿಲ್ಲ? ನನ್ನ ... ಮರ್ಯಾದೆ ಹಾಳಾಗಲಿಲ್ಲ?" ಎಂದ ಮಿರ್ಜಾ... ಇನ್ನೊಂದು ಪ್ರಶ್ನೆ ಉದ್ಭವಿಸಿತು: "ಆದರೆ ನಮ್ಮ ವಿಚ್ಛೇದನ..."

"ಮಿಯಾ, ಮದುವೇನೇ ಆಗಿಲ್ಲ ಅಂದಮೇಲೆ ... ವಿಚ್ಛೇದನ ಎಲ್ಲಿ?"

"ಮೂವತ್ತೆರಡು ರೂಪಾಯಿಗಳನ್ನು ಅನವಶ್ಯಕ... ನೀಡಿದೆನಲ್ಲಾ" ಎಂದು ಮಿರ್ಜಾ ಜಿಗುಪ್ಸೆ ಪಟ್ಟ.

ಕೆಲವೇ ಸಮಯದಲ್ಲಿ ಮಿರ್ಜಾ ತನ್ನ ಹೆಂಡತಿಯ... ಅಧಿಕೃತವಾಗಿ ಮದುವೆಯೇ ಆಗಿರಲಿಲ್ಲವೆಂದೂ, ಆದ್ದರಿಂದ ಅವರಿಬ್ಬರ ನಡುವಿನ ವಿಚ್ಛೇದನ ಕೂಡ ಅಕ್ರಮವೆಂ... ಇಡೀ ಕೇರಿಯಲ್ಲಿ ಸುದ್ದಿ ಹಬ್ಬಿತು.

ಇದು ಲಜ್ಜೊಯ ಕಿವಿ ತಲುಪಿದಾಗ ... ಸಂತೋಷದಿಂದ ಕುಣಿದಾಡಿದಳು. ಅವಳ ಸಂತೋಷ... ಕಾರಣ ಮಿರ್ಜಾನಿಗೆ ಯಾವುದೇ ರೀತಿಯ... ಮುಖಭಂಗವಾಗಿರಲಿಲ್ಲ ಎಂಬುದಾಗಿತ್ತು. ತನ್ನಿಂದ... ಅವನಿಗೆ ಅವಮಾನವಾಗಿತ್ತೆಂದು ಆಕೆ ನಿಜ... ಸಂಕಟಪಟ್ಟಿದ್ದಳು. "ಹಡಬೆಗಾಗಿ ಹುಟ್ಟಿದ್ದು ಎಂ... ಪುಣ್ಯ" ಎಂದು ಆಕೆ ಯೋಚಿಸಿದಳು. ಆಕಸ್ಮಾತ್ ತಾ... ಹಾಗೆ ನಿರ್ಗತಿಕಳಾಗಿ ಹುಟ್ಟಿರದಿದ್ದರೆ ಎಂತಹ ಗಂಡಾಂ... ಕಾದಿತ್ತು ಎಂದೂ ಚಿಂತಿಸಿದಳು.

ರಾಮನ ಅಜ್ಜಿಯ ಮನೆಯಲ್ಲಿ ಲಜ್ಜೊಗೆ ಉಸಿರುಗಟ್ಟಿ...ವಂತಾಗಿತ್ತು. ಮನೆಯ ಬಗ್ಗೆ ಆಕೆ ಚಿಂತಿಸುತ್ತಿದ್ದ... ಕೆಲಸದವರು ಕದಿಯುತ್ತಾರೆಂಬ ಭಯದಿಂದ ತನ್ನ ಮಿರ್ಜಾ... ಮನೆಯನ್ನು ಗುಡಿಸಿಯೂ ಇರುವುದಿಲ್ಲ ಎಂದು ಆ... ಗೊತ್ತಿದ್ದರಿಂದ ಮನೆ ಗಲೀಜಾಗಿರುತ್ತೆ ಎಂದು ಊಹಿ...ದಳು.

ಒಂದು ದಿನ ಮಿರ್ಜಾ ತನ್ನ ಅಂಗಡಿಗೆ ಹೋ...ತ್ತಿದ್ದಾಗ ಲಜ್ಜೊ ಅವನನ್ನು ದಾರಿಯಲ್ಲಿ ತಡೆದಳು.

"ಮಿಯಾ, ನಾಳೆಯಿಂದ ನಾನು ಕೆಲಸಕ್ಕೆ ... ರಾಗಲೇ?"

"ದರಿದ್ರ" ಎಂದು ಶಪಿಸುತ್ತಾ ಮುಂದೆ ಸಾ... ಮಿರ್ಜಾ "ಇವತ್ತಲ್ಲಾ ನಾಳೆ ಕೆಲಸದವಳು ಬೇಕಾಗು... ಈ ಮುಂಡೆ ಬೇರೆಯವರಿಗಿಂತ ವಾಸಿ" ಎಂ... ಯೋಚಿಸಿದ.

ಮಿರ್ಜಾ ಒಂದು ನಿರ್ಧಾರಕ್ಕೆ ಬರುವ ತನಕ ... ಕಾಯಲಿಲ್ಲ, ಛಾವಣಿಯಿಂದ ಮನೆಯೊಳಕ್ಕೆ ಹಾರಿದ ... ತನ್ನ ಲಂಗವನ್ನು ಎತ್ತಿ ಕಚ್ಚೆಯಂತೆ ಕಟ್ಟಿಕೊಂ... ಕಾರ್ಯೋನ್ಮುಖಳಾದಳು. ಅವತ್ತು ಸಂಜೆ ಮಿರ್ಜಾ ಮ... ಹಿಂದಿರುಗಿದಾಗ ಅಚ್ಚರಿಗೊಂಡ. ತನ್ನ ದಿವಂಗತ ಅ... ಹಿಂದಿರುಗಿದ್ದಂತೆ ಆತನಿಗೆ ಭಾಸವಾಯಿತು. ಮನೆ ಚಕ... ಅಂತ ಹೊಳೆಯುತ್ತಿತ್ತು, ಗಂಧದ ಕಡ್ಡಿಯ ಸುಗಂ... ಇಡೀ ಮನೆಯನ್ನು ಆವರಿಸಿತ್ತು, ಹೂಜಿ ಕೂಡ ನೀರಿನಿ... ತುಂಬಿದ್ದು ಅದರ ಮೇಲೊಂದು ಲೋಟವಿತ್ತು.

ವಿಷಣ್ಣ ನೆನಪುಗಳು ಮಿರ್ಜಾನನ್ನು ಆವರಿಸಿದ... ಚಪಾತಿ ಮತ್ತು ಮಾಂಸದ... ಪಲ್ಯವನ್ನು ಆತ ಮೌನವಾ... ತಿನ್ನುತ್ತಿದ್ದಾಗ ಎಂದಿನಂತೆ ಲ... ಹೊಸ್ತಿಲಲ್ಲಿ ಕೂತು ತನ್ನ ಬೀಸಣಿಗೆಯಿಂದ ನೊಣಗಳ... ಓಡಿಸುತ್ತಿದ್ದಳು.

ಅವತ್ತಿನ ರಾತ್ರಿ ಆಕೆ ಅಡುಗೆಮನೆಯಲ್ಲಿ ಚಾಪೆ ಹಾ... ನಿದ್ರೆಗೆ ಜಾರಿದಳು. ಆದರೆ ಮಿರ್ಜಾನಿಗೆ ಮತ್ತೆ ಬಾಯಾರಿ... ಕಾಡಲಾರಂಭಿಸಿತು. ಅವಳ ಗೆಜ್ಜೆಯ ನಾದವನ್ನು ಕೇಳಿಸಿಕೊಳ್ಳುತ್ತಾ ಹಾಸಿಗೆಯಲ್ಲಿ ಹೊರಳಾಡಿದ. ತಪ್ಪಿತಸ್ಥನ ಪ್ರಜ್ಞೆ ಅವ... ಹೃದಯವನ್ನು ಆವರಿಸಿತು. ತಾನು ಈ ಬ... ಹುಡುಗಿಗೆ ಅನ್ಯಾಯ ಮಾಡಿದೆ ಎಂಬ ಚಿಂತೆಯೂ ಅವನನ್ನು ಕಾಡಿತು. ವಿಷಾದದಿಂದ ಆ... ತನ್ನನ್ನು ಶಪಿಸುತ್ತಾ ನಿದ್ರಿಸಲು ಪ್ರಯತ್ನಿಸಿದ.

ಇದ್ದಕ್ಕಿದ್ದಂತೆ "ಎಲ್ಲರೂ ಹಾಳಾಗಲಿ" ಎಂ... ಉದ್ಗರಿಸುತ್ತಾ ಆತ ಓಡಿಹೋಗಿ ತನ್ನ ಗೃಹಿಣಿಯ... ಆಕೆ ಮಲಗಿದ್ದ ಚಾಪೆಯ ಮೇಲಿಂದ ಬಾಚಿಕೊಂಡ

"ಇವ ನಮ್ಮವ ಇವ ನಮ್ಮವ: ಸಮುದಾಯ ರೂಪಕಗಳು"

ಅಂಬೇಡ್ಕರ್ ಮತ್ತು ಬಸವಣ್ಣ

ಡಾ. ಎಂ.ಎಸ್. ಆಶಾದೇವಿ



ಇತಿಹಾಸಕಾರರು ಐತಿಹಾಸಿಕ ಸನ್ನಿವೇಶಗಳ …ವಲ್ಲಿ ಮಹತ್ವದ ವ್ಯಕ್ತಿತ್ವಗಳು ನಿರ್ಮಾಣವಾಗುತ್ತವೆ …ದು ಹೇಳುತ್ತಾರೆ. ಸಮಾಜ ವಿಜ್ಞಾನಿಗಳು ಇದನ್ನು …ನೊಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. ಸಮು…ಯ ತನ್ನ ಅಗತ್ಯ ಮತ್ತು …ಕ್ಷೆಗಳಿಗೆ …ನುಗುಣವಾದ …ಯಕರನ್ನು …ತಿನಿಧಿಕವಾಗಿ ವ್ಯಕ್ತಿಯಲ್ಲಿ …ಗಳಲ್ಲಿ ಕಟ್ಟುವುದಕ್ಕೆ …ಯತ್ನಿಸುತ್ತದೆ ಎಂದು …ಳುತ್ತಾರೆ. ಸಾಹಿತ್ಯದ …ದ್ಯಾರ್ಥಿಯಾದ ನನಗೆ ಈ …ಡೂ ಮಾದರಿಗಳ …ಶೀಲನೆಯಲ್ಲಿ …ಕ್ತಿಯಿದೆ. ಯಾಕೆಂದರೆ … ಎರಡೂ ಮಾದರಿಗಳು …ಗ ಪ್ರವರ್ತಕ …ತ್ವಗಳ ನಿರ್ಮಾಣಗಳಲ್ಲಿ …ಗತವಾದ …ಹತ್ವಾಕಾಂಕ್ಷೆಯ, …ಸುಗಾರಿಕೆಯ ಪಾತ್ರವನ್ನು …ಣವಾಗಿಸಿ ಸಮಷ್ಟಿಯ …ೋತ್ತರಗಳಿಗೇ ಹೆಚ್ಚಿನ …ನ್ನು ನೀಡುತ್ತವೆ. ವೈಯಕ್ತಿಕ ಎಂದು ಕರೆಯಬಹು…ದ ವಿಚಾರಗಳೋ, ಕನಸುಗಳೋ ಸಮುದಾಯ…ಂದಿಗೆ ತಳುಕು ಹಾಕಿಕೊಳ್ಳದಿದ್ದರೆ ಅಸಾಧಾರಣ …ತ್ವವೊಂದು ರೂಪುಗೊಳ್ಳುವುದು ಸಾಧ್ಯವಿಲ್ಲ ಎನ್ನುವ …ಮ ಸತ್ಯವನ್ನೇ ಈ ಎರಡೂ ಮಾದರಿಗಳು …ತಿಮವಾಗಿ ಹೇಳಲು ಪ್ರಯತ್ನಿಸುತ್ತಿರುವುದು.

ಈ ಅಂಶವನ್ನೇ 'ಸಮುದಾಯದ ರೂಪಕ'ಗಳು …ನ್ನುವ ಪರಿಕಲ್ಪನೆಯಡಿಯಲ್ಲಿ ಚರ್ಚಿಸಬಹುದು. …ವಣ್ಣನ ವಚನವೊಂದನ್ನು ಇಲ್ಲಿ ಬಳಸಬಹುದು. …ವು ಸಮುದಾಯ ರೂಪಕಗಳು ನಮ್ಮಲ್ಲಿ ಕೊನೆಯಿ…ದ ಬೆರಗನ್ನು, ಅನಂತ ಗೌರವವನ್ನು ಹುಟ್ಟಿಸುತ್ತವೆ. …ವನಾರವ ಇವನಾರವ' ಎಂದು ಆ ಗೌರಿಶಂಕರ …ತ್ವಗಳನ್ನು ಮುಟ್ಟಲಾರದ ಅಸಹಾಯಕತೆಯಲ್ಲಿ, …ಪಲಾಗದ ಕುಬ್ಜತೆಯ ಅರಿವಿನಲ್ಲಿ ಆರಾಧಿಸಲು …ಯತ್ನಿಸುತ್ತಿರುತ್ತೇವೆ. ಇನ್ನು ಕೆಲವು ರೂಪಕಗಳು …ಮ್ಮನ್ನು ನಮ್ಮ ನಿದ್ದೆ ಎಚ್ಚರಗಳಲ್ಲಿ ಕಾಡುತ್ತಾ, ಬದುಕನ್ನು …ತ ನಮ್ಮ ಶ್ರದ್ಧೆಯನ್ನೂ, ಪ್ರೀತಿಯನ್ನೂ ಹೆಚ್ಚಿಸುತ್ತಾ …ಮ್ಮಲ್ಲೇ ನಮಗೆ ನಂಬಿಕೆಯನ್ನು ಹೆಚ್ಚಿಸುತ್ತಾ 'ಇವ …ಮ್ಮವ ಇವ ನಮ್ಮವ' ಎನಿಸುತ್ತಿರು…. ಈ ಬಗೆಯ ಸಮುದಾಯ …ಪಕಗಳ ಜೊತೆಯಲ್ಲಿ ನಮಗೆ …ಳ, ಸ್ನೇಹ, ಪ್ರೀತಿ ಒಟ್ಟಂದದಲ್ಲಿ …ದು ಅಪ್ಪಟ ಮನುಷ್ಯ ಸಂಬಂಧ …ಧ್ಯವಾಗುತ್ತದೆ.

ಅಂಬೇಡ್ಕರ್ ಮತ್ತು ಬಸವಣ್ಣ …ಬ್ಬರೂ ಎರಡನೆಯ ಮಾದರಿಯ …ಮುದಾಯ ರೂಪಕಗಳು. ಆದ್ದ…ದಲೇ ಈ ಎರಡೂ ವ್ಯಕ್ತಿತ್ವಗಳನ್ನು …ತಂತೆ ದಿನನಿತ್ಯ ಎಂಬಂತೆ, …ೂಲಭೂತ ಅಗತ್ಯಗಳಲ್ಲೊಂದು …ಬಂತೆ ನಿರಂತರವಾಗಿ ಚರ್ಚಿಸು…ೇ ಬಂದಿದ್ದೇವೆ. ಇವರಿಬ್ಬರನ್ನು …ತಂತೆ ಜಡತೌಲನಿಕ ಅಧ್ಯಯನ …ಗಲಿ, ಶೈಕ್ಷಣಿಕ ಸಮೀಕ್ಷೆಯಾಗಲಿ …ಷ್ಟು ಉಪಯುಕ್ತವಲ್ಲ. ಇವರಿಬ್ಬರ …ುವೆ ಸಾಧ್ಯವಾಗಬಹುದಾದ …ವಾದದ ಎಳೆಗಳನ್ನು ಗುರುತಿಸು…ದು ನಮ್ಮ ಇಂದಿನ ಪ್ರಶ್ನೆಗಳನ್ನು …ರಿಸಿಕೊಳ್ಳುವ, ಬಿಡಿಸಿಕೊಳ್ಳುವ ದೃಷ್ಟಿಯಿಂದ ಬಹು…ಪಯುಕ್ತ.



ಇವರನ್ನು ಕುರಿತ ಚರ್ಚೆಯ ಮೂಲಬಿಂದುವೆಂದರೆ …ಷ್ಟೆಯ ಬಗೆಗಿನ ತಮ್ಮ ಪ್ರಶ್ನೆಗಳನ್ನು ಇವರು ಕಾಲದ …ಗಳಾಗಿ ವಿಸ್ತರಿಸಿದರು ಮತ್ತು ಈ ತಮ್ಮ ಕಾಲದ …ಗಳನ್ನು ಅವರು ಬದುಕಿನುದ್ದಕ್ಕೂ, ಜೀವನ್ಮರಣದ …ಶ್ನೆಯಲ್ಲಿ ಮುಖಾಮುಖಿಯಾದರು ಎನ್ನುವುದು. …ಮ್ಮ ಕಾಲದ ಪ್ರಶ್ನೆಗಳು ಮತ್ತು ತುರ್ತುಗಳಿಗೆ ಅವರು …ಗಿಸಿದ ವಿಸ್ತಾರ ಮತ್ತು ಅವುಗಳನ್ನು ಎದುರಿಸಿದ …ಶ್ನೆಯೇ ಸಹಜವಾಗಿ ಅವುಗಳನ್ನು ನೈತಿಕ ಪ್ರಶ್ನೆಗಳ…ಸಿದವು.

ನಿರಂತರ ಹೋರಾಟದ ಇವರ ಬದುಕಿನ ಮೊದಲ …ಂದೆಂದರೆ, 'ದತ್ತ ಚಹರೆ'ಗಳ ನಿರಾಕರಣೆ. ಈ …ಸ್ಥಾಪಿತ ಚಹರೆಗಳ ಬದಲಿಗೆ ಹೊಸ ಚಹರೆಗಳನ್ನು …ದನ್ನು ಕಟ್ಟಿಕೊಳ್ಳಲು ಅಸಾಧಾರಣವೆಂದೇ ತೋರುವ ಪ್ರಯತ್ನಗಳನ್ನು ಇವರು ನಡೆಸಿದರು.


ಒಂದು ಪ್ರಮೇಯದ ಮೂಲಕ ಇವರಿಬ್ಬರನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ಬಸವಣ್ಣ ಧಾರ್ಮಿಕ ಸಂರಚನೆಯಿಂದ ಸಾಮಾಜಿಕ ಸಂರಚನೆಯ ಕಡೆಗೆ ಚಲಿಸಿದರೆ, ಅಂಬೇಡ್ಕರ್ ಸಾಮಾಜಿಕ ಸಂರಚನೆಯಿಂದ ಧಾರ್ಮಿಕ ಸಂರಚನೆಯ ಕಡೆಗೆ ಚಲಿಸಿದರು. ಮೇಲ್ನೋಟಕ್ಕೆ ಇದು ಸರಳವಾಗಿ ಕಂಡರೂ ಒಂದು ಸಂರಚನೆಯಿಂದ ಇನ್ನೊಂದು ಸಂರಚನೆಯ ಕಡೆಗೆ ಇತರರು ನಡೆಸಿದ ಪ್ರಯಾಣ ಬಹಳ ಕುತೂಹಲಕಾರಿಯಾದುದು. ಯಾಕೆಂದರೆ ಈ ಚಲನೆಯಲ್ಲಿ ಅವರು ಕಂಡುಕೊಂಡ ಸತ್ಯಗಳು, ಎದುರಿಸಿದ ಘರ್ಷಣೆಗಳು, ತಲುಪುವ ತೀರ್ಮಾನಗಳು ಒಂದು ಘಟ್ಟದಲ್ಲಿ ಇವರಿಬ್ಬರನ್ನೂ ಸಮಾನ ಕೇಂದ್ರ ಬಿಂದುವಿನಲ್ಲಿ ನಿಲ್ಲಿಸುತ್ತವೆ. ಅಂತಿಮವಾಗಿ ಈ ಎರಡೂ ಸಂರಚನೆಗಳನ್ನು ಬೆಸೆದು ಅವರು ರೂಪಿಸಲು ಪ್ರಯತ್ನಿಸಿದ ಹೊಸ ಸಮಾಜೋ-ಧಾರ್ಮಿಕ ಸಂರಚನೆಯ ಸ್ವರೂಪಗಳನ್ನು ಅದರ ಬಹುಮುಖಿ ಆಯಾಮಗಳಲ್ಲಿ ಮತ್ತು ಸಾಧ್ಯತೆಗಳಲ್ಲಿ ನಾವಿನ್ನೂ ಚರ್ಚಿಸಬೇಕಾಗಿದೆ.

> ಬಸವಣ್ಣ ಧಾರ್ಮಿಕ ಸಂರಚನೆಯಿಂದ ಸಾಮಾಜಿಕ ಸಂರಚನೆಯ ಕಡೆಗೆ ಚಲಿಸಿದರೆ, ಅಂಬೇಡ್ಕರ್ ಸಾಮಾಜಿಕ ಸಂರಚನೆಯಿಂದ ಧಾರ್ಮಿಕ ಸಂರಚನೆಯ ಕಡೆಗೆ ಚಲಿಸಿದರು. ಮೇಲ್ನೋಟಕ್ಕೆ ಇದು ಸರಳವಾಗಿ ಕಂಡರೂ ಒಂದು ಸಂರಚನೆಯಿಂದ ಇನ್ನೊಂದು ಸಂರಚನೆಯ ಕಡೆಗೆ ಇತರರು ನಡೆಸಿದ ಪ್ರಯಾಣ ಬಹಳ ಕುತೂಹಲಕಾರಿಯಾದುದು. ಯಾಕೆಂದರೆ ಈ ಚಲನೆಯಲ್ಲಿ ಅವರು ಕಂಡುಕೊಂಡ ಸತ್ಯಗಳು, ಎದುರಿಸಿದ ಘರ್ಷಣೆಗಳು, ತಲುಪುವ ತೀರ್ಮಾನಗಳು ಒಂದು ಘಟ್ಟದಲ್ಲಿ ಇವರಿಬ್ಬರನ್ನೂ ಸಮಾನ ಕೇಂದ್ರ ಬಿಂದುವಿನಲ್ಲಿ ನಿಲ್ಲಿಸುತ್ತವೆ.

ಹೊಲೆಯ ಮತ್ತು ದೇವಾಲಯ ಭಾರತೀಯ ಸಾಮಾಜಿಕ ಸಂರಚನೆಯ ಎರಡು ನಿರ್ಣಾಯಕ ಕೇಂದ್ರಗಳು. ಈ ಎರಡನ್ನೂ ಕುರಿತಂತೆ ಬಸವಣ್ಣ ಮತ್ತು ಅಂಬೇಡ್ಕರ್ ವ್ಯಾಖ್ಯಾನಿಸಿಕೊಳ್ಳುವ ಕ್ರಮದಲ್ಲಿಯೇ ನಮಗೆ ಇವರ ದೃಷ್ಟಿಕೋನಗಳ, ಆರಿಸಿಕೊಂಡ ದಾರಿಯ ವಿನ್ಯಾಸವೊಂದು ಕಾಣಸಿಗುತ್ತದೆ.

ಶ್ರೇಣೀಕರಣವನ್ನು ಅನುಸರಿಸುವವರು ಹೊಲೆಯರು ಎನ್ನುವ ಮಾತಿನಷ್ಟೇ ಗಟ್ಟಿಯಾಗಿ ಬಸವಣ್ಣ ಅದಕ್ಕೊಂದು ಶಾಶ್ವತ ಎನ್ನಬಹುದಾದ, ಅಲೌಕಿಕವೆಂದೂ ತೋರುವ ನೈತಿಕ-ಧಾರ್ಮಿಕ ಉತ್ತರವನ್ನು ಕಂಡುಕೊಳ್ಳುವುದರಲ್ಲಿ ಆಸಕ್ತ. ಭಕ್ತರಾಗುವುದು ಒಂದು ನೆಲೆಯಲ್ಲಿ ಇದಕ್ಕೆ ಖಚಿತ ಪರಿಹಾರ ಎನ್ನುವ ದೃಷ್ಟಿಕೋನವೂ ಬಸವಣ್ಣನಲ್ಲಿದೆ. ಆದರೆ ಅಂಬೇಡ್ಕರ್ ಇದನ್ನು ಸಮಾಜೋ-ರಾಜಕೀಯ ಪ್ರಶ್ನೆಯಾಗಿ ವ್ಯಾಖ್ಯಾನಿಸಿಕೊಂಡು ಅದಕ್ಕೆ ಸಮಾಜೋ-ರಾಜಕೀಯ ಉತ್ತರವನ್ನೇ ಹುಡುಕಲು ಯತ್ನಿಸುತ್ತಾರೆ. ಶೂದ್ರರ 'ಮೂಲ'ವನ್ನು ಹುಡುಕಲು ಹೊರಡುವ ಅಂಬೇಡ್ಕರ್‌ಗೆ ಶೂದ್ರರ ಇತಿಹಾಸ ಒಂದು ಭೂತವಾಗಿ, ಪರಿಹರಿಸಿಕೊಳ್ಳಬೇಕಾದ, ಉತ್ತರ ಕಂಡುಕೊಳ್ಳಬೇಕಾದ ಪ್ರಶ್ನೆಯಾಗಿ ಕಾಣಿಸುತ್ತದೆ. 1947ರಲ್ಲಿ ಬರೆದ 'ಶೂದ್ರರು ಯಾರು?', 1948ರಲ್ಲಿ ಬರೆದ 'ಅಸ್ಪೃಶ್ಯರು ಯಾರು?' ಅವರು ಯಾಕೆ ಅಸ್ಪೃಶ್ಯರಾದರು? ಎನ್ನುವ ಲೇಖನಗಳನ್ನು ನಾವು ಗಮನಿಸಬೇಕು. ಒಂದರಲ್ಲಿ ಶೂದ್ರರ ಮೂಲವನ್ನು ಕ್ಷತ್ರಿಯರಲ್ಲಿ, ಇನ್ನೊಂದರಲ್ಲಿ ಅವರ ಮೂಲವನ್ನು ಆರ್ಯ ಪೂರ್ವ ಭಾರತದ ಮೂಲನಿವಾಸಿಗಳಲ್ಲಿ ಕಂಡುಕೊಳ್ಳಲು ಅಂಬೇಡ್ಕರ್ ಪ್ರಯತ್ನಪಡುತ್ತಾರೆ. ಶೂದ್ರರ 'ಆತ್ಮ ಗೌರವದ ಚಹರೆ'ಯ ಹುಡುಕಾಟದ ಮೂಲಕ ಅಂಬೇಡ್ಕರ್ 'ಆತ್ಮಹೀನ' ಎಂದೇ ಶೂದ್ರರಿಗೆ ದತ್ತವಾದ ಚಹರೆಯನ್ನು ನಿರಾಕರಿಸಿದರು. ಈ ಹಂತದಲ್ಲಿ ಅಂಬೇಡ್ಕರ್‌ರ ನಂಬಿಕೆ ಒಂದು ಖಚಿತವಾದ 'ರಾಜಕೀಯ ಚಹರೆ' ಅಸ್ಪೃಶ್ಯರ ಶಾಪವಿಮೋಚನೆಗೆ ತುಂಬ ಅಗತ್ಯ ಎನ್ನುವುದು. ಮೇಲೆ ಉದಾಹರಿಸಿದ ಎರಡೂ ಬಹಳ ಮಹತ್ವದ ಅಧ್ಯಯನಗಳು, ಶಾಸ್ತ್ರೀಯ ದೃಷ್ಟಿಯಿಂದಲೂ ಪ್ರಾಮಾಣಿಕವಾದ ಅಧ್ಯಯನಗಳೂ ಹೌದು.

ಇದನ್ನೇ ಬಸವಣ್ಣ ಸಾಧಿಸಿದ ಕ್ರಮ ಹೇಗೆ?



ಅಪ್ಪನು ನಮ್ಮ ಮಾದಾರ ಚನ್ನಯ್ಯ, ಅಪ್ಪನು ಡೋಹರ ಕಕ್ಕಯ್ಯ ಎನ್ನುವ ಪ್ರಯತ್ನವಾಗಲಿ, ಶರಣರ ಮನೆಯ ದಾಸ-ದಾಸಿಯರ ಹಾದರಕ್ಕೆ ತಾನು ಹುಟ್ಟಿದವನು ಎಂದು ಘೋಷಿಸಿಕೊಳ್ಳುವುದಾಗಲಿ ಬಸವಣ್ಣ ತನ್ನ ದತ್ತ ಚಹರೆಯನ್ನು ಕಳೆದುಕೊಳ್ಳಲು ನಡೆಸುವ ಅತ್ಯಂತಿಕ ಪ್ರಯತ್ನಗಳೇ ಆಗಿವೆ. ಬಸವಣ್ಣನ ಈ ಪ್ರಯತ್ನಗಳ ಪ್ರಾಮಾಣಿಕತೆಯು ಅವನ ವಚನಗಳಲ್ಲಿ ಸಂದೇಹಾತೀತ ಎನ್ನುವ ತೀವ್ರತೆಯಲ್ಲಿ ದಾಖಲಾಗಿದೆ. ಅಭೂತಪೂರ್ವ ಎಂದು ಕರೆಯಬಹುದಾದ ಈ ಪ್ರಯತ್ನವಾದರೂ ಅಂತಿಮವಾಗಿ ದಲಿತರಲ್ಲಿ ಆತ್ಮವಿಶ್ವಾಸವನ್ನ ಕಟ್ಟಿಕೊಡುವುದೇ ಆಗಿತ್ತು. ಅಂಬೇಡ್ಕರ್ ದಟ್ಟ ಅವಮಾನಗಳ ನಡುವೆಯೇ ಬೆಳೆದವರು, ಬಸವಣ್ಣ ಅವಮಾನದ ಅನುಭವಗಳಿಗೆ ತನ್ನನ್ನು ಒಂದು ಅಗ್ನಿದಿವ್ಯಕ್ಕೆ ಒಡ್ಡಿಕೊಳ್ಳುವ ಹಾಗೆ ಒಡ್ಡಿಕೊಳ್ಳುತ್ತಾನೆ. ಅವಮಾನದಿಂದ ಆತ್ಮವಿಶ್ವಾಸದ ಕಡೆಗೆ ಚಲಿಸಲು ಅಂಬೇಡ್ಕರ್ ಹಂಬಲಿಸಿದರೆ, ಆತ್ಮವಿಶ್ವಾಸದಿಂದ ಅವಮಾನದ ಕಡೆಗೆ ಚಲಿಸುವುದರ ಮೂಲಕವೇ ತನ್ನ ಕಾಲದ ಪ್ರಶ್ನೆಯನ್ನು ತಾಗುವ, ಬಿಡಿಸಿಕೊಳ್ಳುವ, ಆ ಮೂಲಕವೇ ಅದಕ್ಕೊಂದು ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಬಸವಣ್ಣನಿದ್ದಾನೆ.

'ದೇವಾಲಯ' ನನಗೆ ತುಂಬ ಸ್ವಾರಸ್ಯಕರವಾಗಿ, ಮುಖ್ಯವಾಗಿ ಕಾಣಿಸುವ ಇನ್ನೊಂದು ಪ್ರತಿಮೆ. ದೇವಾಲಯ ಪರಿಕಲ್ಪನೆಯನ್ನು ಬಸವಣ್ಣ 'ದೇಹ ದೇವಾಲಯ'ದ ಪ್ರತಿಮೆಯಾಗಿ ಪರಿವರ್ತಿಸಲು ಪ್ರಯತ್ನಿಸಿದರೆ ಅಂಬೇಡ್ಕರ್‌ರ ಕ್ರಿಯಾಶೀಲ, ಬದ್ಧ ಹೋರಾಟದ ಬದುಕಿನ ಒಂದು ಮುಖ್ಯ ಘಟ್ಟದವರೆಗೂ ಅಂಬೇಡ್ಕರ್‌ಗೆ 'ದೇವಾಲಯ ಪ್ರವೇಶ' ಬಹುಮುಖ್ಯವಾದ 'ಸಾಂಕೇತಿಕ ಪಲ್ಲಟ ಸೂಚಿ'ಯಾಗಿಯೇ ಕಂಡಿತ್ತು. ಇಷ್ಟ ದೈವದ ಪರಿಕಲ್ಪನೆಯ ಮೂಲಕ, ದೇಹ ದೇವಾಲಯದ ಕಾಯಕ ಸಂಸ್ಕೃತಿಯ ಮೂಲಕ ಬಸವಣ್ಣ ಅನೇಕ ಸಮಸ್ಯೆಗಳಿಗೆ ನೇರವಾಗಿ ಮುಖಾಮುಖಿಯಾದ. ಶೋಷಣೆಯ, ಮೌಢ್ಯದ, ಪಟ್ಟಭದ್ರತೆಯ, ನಿರಂಕುಶಾಧಿಕಾರದ, ಶ್ರೇಣೀಕರಣದ, ಅಮಾನವೀಯತೆಯ ಸಮಸ್ಯೆಗಳಿಗೆ ದೇವಾಲಯ - ವಿಗ್ರಹ ಪೂಜೆಯ ನಿರಾಕರಣೆಯೇ ಅಂತಿಮ ಪರಿಹಾರವೆಂದು ಸಕಾರಣವಾಗಿಯೇ ಖಚಿತವಾಗಿತ್ತು.

ಅಂಬೇಡ್ಕರ್‌ರಿಗೆ ದೇವಾಲಯ ಪ್ರವೇಶವು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಘಟಿಸಬೇಕಾಗಿರುವ ಮೂಲಭೂತ ಪಲ್ಲಟಗಳಿಗೆ ಮೊದಲ ಹೆಜ್ಜೆ ಎನ್ನಿಸಿತ್ತು. ಸಮಾನತೆಯನ್ನು ಕುರಿತ ಹೋರಾಟದಲ್ಲಿ ಇದು ನಿರ್ಣಾಯಕ ಪಾತ್ರ ವಹಿಸಬಹುದು ಎನ್ನುವ ನಂಬಿಕೆ ಅಂಬೇಡ್ಕರ್ ಅವರಿಗೆ ಬಹುದಿನಗಳ ತನಕವೂ ಇತ್ತು. ಸವರ್ಣೀಯರು ಮತ್ತು ಅಸ್ಪೃಶ್ಯರು ಇಬ್ಬರಲ್ಲೂ ಅಗತ್ಯವಿರುವ ಮನಃಸ್ಥಿತಿಯ ವಿನ್ಯಾಸದ ಬದಲಾವಣೆಗೆ ಇದು ಸಹಕಾರಿಯಾಗಬಲ್ಲದು ಎನ್ನುವುದನ್ನು ಅವರ ಮೊದಲ ಘಟ್ಟದ ಮಾತು-ಬರವಣಿಗೆಯಲ್ಲಿ ಪುನರುಚ್ಚರಿಸುವುದನ್ನು ನಾವು ಗಮನಿಸಬಹುದು.

ಈ ಬಗೆಯ ಪ್ರಯತ್ನದ ಬಗೆಗೆ ಅವರು ಭ್ರಮನಿರಸನರಾದರು ಎನ್ನುವುದು ನಿಜ. ಆದರೆ ನನಗಿಲ್ಲಿ ಮುಖ್ಯವಾಗಿ ಕಾಣುತ್ತಿರುವುದು ಕಾಲದ ಅಂತರದಲ್ಲಿ ನಮ್ಮ 'Icon'ಗಳ-ದೇವಾಲಯವೂ ಸೇರಿದಂತೆ ಕಾರ್ಯವಿಧಾನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇವು ಬಹುಮುಖ್ಯವಾದ ಆಕರಗಳಾಗಿವೆ ಎನ್ನುವ ಕಾರಣಕ್ಕೆ.

ವ್ಯವಸ್ಥೆಯ ಸ್ಥಾಪಿತ 'ಸ್ಮೃತಿ ವಿನ್ಯಾಸ'ವನ್ನು ಒಡೆಯುವುದರಲ್ಲಿ ಅಂಬೇಡ್ಕರ್ ಮತ್ತು ಬಸವಣ್ಣ ಇಬ್ಬರಿಗೂ ನಂಬಿಕೆಯಿತ್ತು. ಸ್ಮೃತಿ ವಿನ್ಯಾಸದ ಬದಲಾವಣೆಯೇ ಅಥವಾ ಅದರ ಮರುರಚನೆಯೇ ಹೊಸ ವ್ಯವಸ್ಥೆಯ ಅಡಿಪಾಯ ಎನ್ನುವುದರಲ್ಲಿ ಇವರಿಬ್ಬರಿಗೂ ಬಹುಶಃ ಸಂದೇಹವಿರಲಿಲ್ಲ.

ಅಂಬೇಡ್ಕರ್ ಬಗೆಗೆ ಚರ್ಚೆ ಮಾಡುವಾಗಲೆಲ್ಲ ಸಂಸ್ಕೃತಾನುಕರಣದ ನೆಲೆಯ ಚರ್ಚೆಯೂ ಅನಿವಾರ್ಯವಾಗಿ ಬರುತ್ತದೆ. ಸಂಸ್ಕೃತಾನುಕರಣವೇ ಭಾರತೀಯ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಎನ್ನುವ ನಿಲುವನ್ನು ಒಂದು ಘಟ್ಟದವರೆಗೂ ಅಂಬೇಡ್ಕರ್ ಬಲವಾಗಿ ನಂಬಿದ್ದರು. ಸಂಸ್ಕೃತಾನುಕರಣವನ್ನು ಆಧುನೀಕರಣ ಪರಿಕಲ್ಪನೆಯಡಿಯಲ್ಲಿ ಚರ್ಚಿಸುವುದರಿಂದ ಸಂದರ್ಭವನ್ನು ನಾವು ಸರಳೀಕರಿಸಿದಂತಾಗುತ್ತದೆ. (ಈ ವಿಷಯವನ್ನು ಗಾಂಧಿ- ಅಂಬೇಡ್ಕರ್‌ರ ನಡುವೆ ಬಹಳ ದೀರ್ಘವಾಗಿ ಬೆಳೆಸಲಾಗಿದೆ. ಭಿನ್ನಧ್ರುವಗಳೆಂಬಂತೆ ಅವರನ್ನು ಗುರುತಿಸಿ ಅವರು ಸಮಾನಾಂತರ ರೇಖೆಗಳೆಂಬಂತೆಯೇ ನೋಡಲಾಗಿದೆ. ಆದರೆ ಅವರಿಬ್ಬರ ನಡುವಿನ ಸಂವಾದವನ್ನು ಇನ್ನೂ ಗಂಭೀರವಾಗಿ ಚರ್ಚಿಸಬೇಕಾದ ಅಗತ್ಯವಿದೆ.) ಅಂಬೇಡ್ಕರ್ ನಿಜವಾದ ಅರ್ಥದಲ್ಲಿ ಭಾರತದ ಮೊದಲ ಪ್ರಮುಖ ಸಮಾಜ ವಿಜ್ಞಾನಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಸಂಸ್ಕೃತಾನುಕರಣ ಪ್ರಕ್ರಿಯೆಯಲ್ಲಿ ಅಂಬೇಡ್ಕರ್ ಉದ್ದಕ್ಕೂ ನಡೆಸಿದ ಪ್ರಯೋಗಗಳು ಆಧುನಿಕ ಭಾರತೀಯ ಸಮಾಜದ ಹೆಜ್ಜೆ ಗುರುತುಗಳ ದಾಖಲೆಗಳೇ ಆಗಿವೆ.

ಬಸವಣ್ಣನ ಮಟ್ಟಿಗೆ ಸಂಸ್ಕೃತಾನುಕರಣದ ಪ್ರಕ್ರಿಯೆಯನ್ನು ಅನೇಕ ಸಂದರ್ಭಗಳಲ್ಲಿ ನೇತ್ಯಾತ್ಮಕ ಎನ್ನುವ ಹಾಗೆಯೇ ನೋಡಲಾಗಿದೆ. ಮಾರಿ ದೈವ-ಮಸಣಿ ದೈವ ಮುಂತಾದ ವಚನಗಳ ಆಧಾರದ ಮೇಲೆ ಆತ ಸಂಸ್ಕೃತಾನುಕರಣವನ್ನೇ ಪ್ರತಿಪಾದಿಸುತ್ತಾನೆ ಎಂದು ಹೇಳಲಾಗುತ್ತದೆ. ಆದರೆ ಇದರಲ್ಲಿ ಅನೇಕ ಸಮಸ್ಯೆಗಳಿವೆ. ಈ ವಚನಗಳಲ್ಲಿ ಆತ ಮೌಢ್ಯದ ಮನಸ್ಥಿತಿಯನ್ನು ನಿರಾಕರಿಸುತ್ತಿದ್ದಾನೆಯೇ ಹೊರತು ಶ್ರೀಮಂತವಾದ ಜಾನಪದ ಪರಂಪರೆಯನ್ನಲ್ಲವೇನೋ ●

ಮ್ಯಾಕ್ಸಿಂ ಗಾರ್ಕಿಯವರ 'ತಾಯಿ' ಜಗತ್ತಿನ ಕೆಲವೇ ಶತಮಾನದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು. ಎಡಪಂಥೀಯ ಚಳವಳಿಗೆ ಕಾಲಿಡುತ್ತಿದ್ದಂತೆ ಎಲ್ಲರಿಗೂ ದೊರಕುವ 'ತಾಯಿ' ನನಗೂ ಸಿಕ್ಕಿದ್ದು ನನ್ನ ಅರಿವಿನ ಕಣ್ಣು ತೆರೆಯುತ್ತಿದ್ದ 85-86ರಲ್ಲಿ. ಆದರೆ ಅದರಲ್ಲಿನ ತಾಯಿ ನನಗೆ ನಿಜಕ್ಕೂ ಕಂಡಿದ್ದು ನಾನು ಅದನ್ನು ಮತ್ತೆ ಇತ್ತೀಚೆಗೆ ಓದಿದಾಗಲೇ! 1985ರಲ್ಲಿ ಚಳವಳಿಯ ಹುರುಪಿನಲ್ಲಿ 'ತಾಯಿ' ಓದಿದಾಗ ಅದರಲ್ಲಿ ತಾಯಿಗಿಂತ ಅವಳ ಮಗ ಪಾವೆಲ್‌ನೇ ನನಗೆ ಹೆಚ್ಚು ಇಷ್ಟವಾಗಿದ್ದ; ತಾಯಿಯ ಹೃದಯ ಪರಿವರ್ತನೆಗಿಂತ ಫ್ಯಾಕ್ಟರಿಯಲ್ಲಿ ಪಾವೆಲ್ ಮಾಲೀಕರೊಡನೆ ಮಾಡಿದ ಹೋರಾಟವೇ ನಮ್ಮ ತಲೆಯಲ್ಲಿ ಉಳಿದದ್ದು. ಆಗ 'ತಾಯಿ' ನಮ್ಮ ಪಾಲಿಗೆ ನಾವು ಮಾಡುತ್ತಿದ್ದ ಹಲವು ಹೋರಾಟಗಳ ಮೆರವಣಿಗೆಯ ಕಥಾರೂಪಕದಂತೆ ಉಳಿದುಕೊಂಡಿತ್ತು.

'ತಾಯಿ'ಯಲ್ಲಿ ಇವೆಲ್ಲವೂ ಇದೆ. ಆದರೆ ಅದರಲ್ಲಿ ಪ್ರಧಾನವಾಗಿರುವುದು ಹೊಸ ಮನುಷ್ಯನ ಮತ್ತು ಹೊಸ ಸಮಾಜದ ಜೀವನಮೌಲ್ಯಗಳ ಹುಟ್ಟಿನ ಕಥನ. ಹೊಸ ಸಮಾಜದ ಅಂತರಂಗದ ಜೈವಿಕ ಸೌಂದರ್ಯದ ಅನಾವರಣ. ಹಾಗೆ ನೋಡಿದರೆ ಈ ತಾಯಿಯನ್ನು ಕಾಣಲು ನಾನು ಮಾಡಬೇಕಾದ ಪ್ರಯಾಣ ಪ್ರಾಯಶಃ ಎಲ್ಲರೂ ಕ್ರಮಿಸಲೇ ಬೇಕಿರುವ ಅನಿವಾರ್ಯ ನಡಿಗೆಯೂ ಇರಬಹುದು ಎಂದೂ ಅನಿಸುತ್ತದೆ.

'ತಾಯಿ' ಕಾದಂಬರಿಯು ರಷ್ಯಾದಲ್ಲಿ 1905ರಲ್ಲಿ ಆಗಿನ್ನೂ ಚಿಗುರೊಡೆಯುತ್ತಿದ್ದ ಕ್ರಾಂತಿಯ ಹಿನ್ನೆಲೆಯನ್ನು ಹೊಂದಿದ್ದು, ಆಗ ಕೈಗಾರಿಕಾ ಕಾರ್ಮಿಕರು ಅಲ್ಲಿನ ಬಂಡವಾಳಶಾಹಿಗಳ ವಿರುದ್ಧ ಹೋರಾಟದ ಪತಾಕೆಯನ್ನು ಎತ್ತುತ್ತಿದ್ದ ಮತ್ತು ರಷ್ಯಾದ ಪ್ರಭುತ್ವ ಅದನ್ನು ಕ್ರೂರವಾಗಿ ಹೊಸಕಿ ಹಾಕುತ್ತಿದ್ದ ಕಥೆಯನ್ನು ಹೊಂದಿದೆ.

ಸಮಾಜವಾದವೆಂಬುದಾಗಲೀ, ಕಾರ್ಮಿಕ ಸಂಘಟನೆಯೆಂಬುದಾಗಲೀ, ಸಾಮೂಹಿಕ ಬದುಕೆಂಬುದಾಗಲೀ ಅಪರಿಚಿತವಾಗಿದ್ದ ಒಂದು ಸಮಾಜದಲ್ಲಿ ಈ ಹೊಸ ಸಮಾಜದ ಕಲ್ಪನೆ ಹೇಗೆ ವ್ಯಕ್ತಿತ್ವಗಳಲ್ಲಿ ರೂಪಾಂತರ [illegible] ಎಂಬುದೇ ಈ ಕಾದಂಬರಿಯ ಅನ್ವೇಷಣೆ. [illegible] ಈ ಕಾದಂಬರಿಯ ಮೊದಲ [illegible] 'ಕಾಮ್ರೇಡ್ಸ್' ಅರ್ಥಾತ್ ಸಂಗಾತಿಗಳು [illegible] ಇಡಲಾಗಿತ್ತಂತೆ!

ಈ ರೂಪಾಂತರದಲ್ಲಿ ಹಳೆ ಸಮಾಜದ [illegible] ಕೊಳಕುತನಕ್ಕೆ ಮತ್ತು ಹೊಸ ಸಮಾಜದ [illegible] ವಿಶ್ವಪ್ರೇಮಕ್ಕೆ ಒಂದು ರೂಪಕವಾಗಿ [illegible] ಕಾದಂಬರಿಯುದ್ದಕ್ಕೂ, ಹರಿಯುತ್ತಾಳೆ.... ಬೆಳೆಯುತ್ತಾಳೆ... ತನ್ನ ಜೊತೆ ನಮ್ಮನ್ನೂ ಬೆಳೆಸುತ್ತಾಳೆ. ತಾಯಿ — ನೀಲೋವ್ನ ಆಕೆಯ ಹೆಸರೆಂಬುದು [illegible] — ಒಬ್ಬ ಒರಟ ಕಾರ್ಮಿಕನ [illegible] ಉದ್ದಕ್ಕೂ, ಹೊಡೆತ, ಬಡಿತಗಳನ್ನೇ ತಿನ್ನುತ್ತಾ [illegible] ಕಳೆದು ಕೊಂಡಿರುತ್ತಾಳೆ...ನಮ್ಮ ಸಮಾಜದ [illegible] ತಾಯಂದಿರ ತರ. ಅದು ತನ್ನ [illegible] ಸಾಧಿಸುತ್ತ ಮುಖ ಮಾಡಿ ದಿನದೂಡುತ್ತಿದ್ದ [illegible] ಬದುಕಿನಲ್ಲಿ ಅವಳ ಮಗ ಪಾವೆಲ್ ವಿಶ್ವ [illegible]. ಕುಡುಕ ಗಂಡ ಕುಡಿತದ ಕಾರಣದಿಂದಾಗಿಯೇ ಸಾಯುತ್ತಾನೆ. ಅಪ್ಪನ ತರಹವೇ ಅಮ್ಮನ ಮೇಲೆ ಜೋರು [illegible] ಮನೆಯೊಡೆಯನ ಬದುಕನ್ನು ಪ್ರಾರಂಭಿಸುವ ಮಗ ಕ್ರಮೇಣ ವಿಚಿತ್ರವಾಗಿ ವರ್ತಿಸಲಾರಂಭಿಸುತ್ತಾನೆ.

ಅವನು ತನ್ನನ್ನು ಪ್ರೀತಿ, ವಿಶ್ವಾಸದಿಂದ ಮಾತಾಡಿಸಲು ಪ್ರಾರಂಭಿಸುವುದು ತಾಯಿಗೆ ವಿಚಿತ್ರವಾಗಿ ಕಾಣಿಸುತ್ತದೆ. ಅಷ್ಟೇ ಅಲ್ಲ, ತನಗಿಂತ ಹೆಚ್ಚಾಗಿ ತನ್ನಂತೆ ಇರುವ ಇತರರ ಬಗ್ಗೆಯೂ ಆತ ತನ್ನ ಬದುಕನ್ನು ಅಪಾಯಕ್ಕೊಡ್ಡಿ ಯೋಚಿಸತೊಡಗುವುದೂ ವಿಚಿತ್ರವೆನಿಸುತ್ತದೆ.

ಪ್ರಾರಂಭದಲ್ಲಿ ತಾಯಿ ಮನಸ್ಸು ಇದನ್ನು ಒಂದು ದೊಡ್ಡ ಕೇಡೆಂದೇ ವಿರೋಧಿಸುತ್ತದೆ. ಅದರ ಆಳದಲ್ಲಿ ಮಾತೃ ಪ್ರೇಮದ ಜೊತೆಜೊತೆಗೆ ತನ್ನ ಬದುಕಿನ ಸ್ವಾರ್ಥವೂ ಇರುತ್ತದೆ.. ಅದನ್ನೇ ತಾಯಿ ಹೀಗೆ ಸ್ವವಿಮರ್ಶೆ ಮಾಡಿಕೊಳ್ಳುತ್ತಾಳೆ: "ನನ್ನ ಗಂಡ ತೀರ್ಕೊಂಡು ನಾನು ನನ್ನ ಮಗನ ಕಡೆ ತಿರುಗಿದೆ.. ಅವನಿಗೇನಾದರೂ ಆದರೆ ನಾನು ಬದುಕೋದು ಹೇಗೆ ಅನ್ಕೊಂಡೆ.. ಹೆಂಗಸರಾದ ನಮ್ಮ ಪ್ರೇಮ ಶುದ್ಧ ಪ್ರೇಮವಲ್ಲ, ನಮಗೇನು ಬೇಕೋ ಅದನ್ನು ನಾವು ಪ್ರೀತಿಸ್ತೇವೆ. ಆದರೆ ನೀವು.. ಇಡೀ ಜನತೆಗಾಗಿ ಎಷ್ಟೊಂದು ಕಷ್ಟ ಸಹಿಸ್ತಾರೆ.. ಜೈಲ್ಗೆ ಹೋಗ್ತಾರೆ.. ಸೈಬೀರಿಯಾಕ್ಕೂ ಹೋಗ್ತಾರೆ.. ಅವರನ್ನು ಪ್ರೇರೇಪಿಸೋದು ಯಾರು? ಶುದ್ಧವಾದ ಮಹಾಪ್ರೇಮ ಅದರಲ್ಲಿ ಇರೋದರಿಂದಲೇ ಹಾಗೆ ಮಾಡ್ತಾರೆ.. ಆದರೆ ನನ್ನಿಂದ ಅಂಥ ಪ್ರೇಮ ಸಾಧ್ಯವಿಲ್ಲ.ನಾನು ನನ್ನದನ್ನೇ ಪ್ರೀತಿಸೋದು! ನನಗೆ ಸಮೀಪವಾದದ್ದನ್ನೇ!"

ತಾಯಿಯ ಈ ಸ್ವಗತ ಆತ್ಮವಿಮರ್ಶೆಗೆ ಹೋಹೋಲ್ ಎಂಬ ಆಕೆಯ ಮಗನ ಸ್ನೇಹಿತ ಹೀಗೆ ಉತ್ತರ ಕೊಡುತ್ತಾನೆ: "..ತನಗೆ ಸಮೀಪವಾಗಿರೋದನ್ನು ಪ್ರತಿಯೊಬ್ಬರೂ ಪ್ರೀತಿಸ್ತಾರೆ. ಆದರೆ ವಿಶಾಲ ಹೃದಯ ದೂರವಿದ್ದುದನ್ನು ಹತ್ತಿರವಾಗಿ ಮಾಡಿಕೊಳ್ಳುತ್ತೆ. ನಿಮ್ಮಲ್ಲಿ ಮಹಾ ಮಾತೃಪ್ರೇಮವಿದೆಯಮ್ಮ. ಆದ್ದರಿಂದ ನೀವು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬಲ್ಲಿರಿ" ಎನ್ನುತ್ತಾನೆ. ಇದು 'ತಾಯಿ' ಕಾದಂಬರಿಯ ಮೂಲ ಧಾತು. ಅನಕ್ಷರಸ್ಥ ಸ್ವಕೇಂದ್ರಿತ, ಅಂಜುಬುರುಕ ಮತ್ತು ಜಗತ್ತಿನ ಇನ್ಯಾರ ಬಗ್ಗೆಯೂ ವಿಶ್ವಾಸವಿಲ್ಲದ ತಾಯಿ ಒಬ್ಬಳು ತನ್ನ ತಾಯಿ ಮಮತೆಯನ್ನು ಹಿಗ್ಗಿಸುತ್ತಾ, ಹಿಗ್ಗಿಸುತ್ತಾ ಇಡೀ ಜಗತ್ತಿನಲ್ಲಿ ಎಲ್ಲರೂ ಸಮಾನವಾಗಿ ಬಾಳಬೇಕೆಂಬ [illegible]ದಲ್ಲಿ ಪಾಲ್ಗೊಳ್ಳುತ್ತಾಳೆ. ಆ ಪ್ರಕ್ರಿಯೆಯಲ್ಲಿ ಇಡೀ ವಿಶ್ವದ ಹಿತವನ್ನು ಕೋರುವ ಮಮತಾಮಯಿಯಾಗುತ್ತಾಳೆ!

ಹಾಗೆ ನೋಡಿದಲ್ಲಿ ರೋಮ್ಯಾಂಟಿಕ್ [illegible]ದೇ ಮಾತಾಡಿದರೂ ಯಾವುದೇ ತಾಯಿಯ [illegible]ಜಿಕ ಪಾತ್ರದಲ್ಲೇ 'ನಾನು' ಎಂಬ ಸೆಲ್ಫ್‌ನಲ್ಲಿ [illegible]ಲ್ಲದೆ ತನ್ನ ಕುಟುಂಬ, ಆತ್ಮೀಯರನ್ನು [illegible]ತ್ತದೆ ಎಂಬುದು ನಿಜ. ಒಂದು ಲಾಭಕೋರ [illegible]ದ ಮೌಲ್ಯಗಳು ಅದರಲ್ಲಿನ ಕುಟುಂಬಮುಖಿ [illegible]ವನ್ನು ಪೋಷಿಸುತ್ತದೆ. ಆದರೆ ಒಂದು [illegible] ಆದರ್ಶಗಳ ಬದುಕು ತಾಯಿಯಲ್ಲಿರುವ [illegible]ನದ ವಿಶಾಲತೆಯನ್ನು ವಿಶ್ವ ಮಟ್ಟಕ್ಕೆ ಏರಿಸುತ್ತದೆ. ಈ [illegible]ವನ್ನು ಹಿಗ್ಗಿಸಿಕೊಳ್ಳುವ ಪ್ರಕ್ರಿಯೆ ತಾಯಿಯಲ್ಲಿ ಮೊದಲು ಪ್ರಾರಂಭವಾಗುವುದು ತನ್ನ ಮಗನ ಹೋರಾಟಗಳ ನ್ಯಾಯಾನ್ಯಾಯಗಳನ್ನು ಬೈಬಲ್ಲಿನಿಂದ ಪಡೆದ ತನ್ನ ಪುಟ್ಟ ಸತ್ಯ-ನ್ಯಾಯಗಳ ಪ್ರಪಂಚದಲ್ಲಿ ಒರೆಗಲ್ಲಿಗಿಟ್ಟು ನೋಡುವುದರ ಮೂಲಕ.

ಇಲ್ಲಿ ಆಕೆಯ ಪ್ರೀತಿ ಮೊದಮೊದಲು ಬೋಳೆ ಪ್ರೀತಿಯಂತೆ ಭಾಸವಾಗುತ್ತದಾದರೂ ಅದು ಕ್ರಮೇಣ ಭೋಳೆತನವನ್ನು ನೀಗಿಕೊಳ್ಳುತ್ತದೆ. ಸಾಮಾನ್ಯವಾಗಿ ತಾಯಿ ಪ್ರೀತಿಯ ಬಗ್ಗೆ ಮಾತಾಡುವಾಗ ಅಥವಾ ವಿಶ್ವಪ್ರೇಮದ ಬಗ್ಗೆ ಮಾತಾಡುವಾಗ ಜಗತ್ತಿನ ಜನರೆಲ್ಲಾ ಒಂದೇ ಎನ್ನಲಾಗುತ್ತದೆ ಅಥವಾ ದುಡಿಯುವವ ಅಥವಾ ದುಡಿಸಿಕೊಳ್ಳುವವ ಎಂಬ ವ್ಯತ್ಯಾಸವೇ ಇಲ್ಲದಂತೆ ಜಗತ್ತಿನ ಜನರೆಲ್ಲಾ ಒಂದೇ ಎಂಬ ಬೋಳೆ ಪ್ರೀತಿಯ ಬಗ್ಗೆ ಮಾತಾಡಲಾಗುತ್ತದೆ. ಆದರೆ ತಾಯಿ ನೀಲೋವ್ನ ತನ್ನ ಮಗನಂತೆ ಇರುವ ಎಲ್ಲರ ಬಗ್ಗೆ ಸಮಾನ ಅಂತಃಕರಣವನ್ನು ಇಟ್ಟುಕೊಂಡು ಇಂಥ ಒಳ್ಳೆ ಮಕ್ಕಳ ಬದುಕನ್ನು ಸಂಕಷ್ಟಕ್ಕೆ ಈಡು ಮಾಡಿರುವ ವ್ಯವಸ್ಥೆಯ ಬಗ್ಗೆಯೂ ಅಷ್ಟೇ ಸಿಟ್ಟನ್ನು ಇಟ್ಟುಕೊಂಡಿರುತ್ತಾಳೆ. ಆಕೆಯ ಸಿಟ್ಟಿಗೆ ತಳಹದಿ ಆಕೆ ತನ್ನ ಮಕ್ಕಳಂಥವರ ಮೇಲೆ ಬೆಳೆಸಿಕೊಂಡ ನಿರ್ವ್ಯಾಜ ಅಂತಃಕರಣವೇ ಆಗಿರುತ್ತದೆ. ಅವರ ಮೇಲೆ ಆಕೆಯ ಪ್ರೀತಿ ಹೆಚ್ಚಿದಷ್ಟೂ ವ್ಯವಸ್ಥೆಯ ಮೇಲೆ ಆಕೆಯ ಸಿಟ್ಟು ಹೆಚ್ಚುತ್ತದೆ. ಆ ಪ್ರೀತಿಯ ಆಧಾರದ ಮೇಲೆ ಆಕೆ ಶೋಷಕ ವ್ಯವಸ್ಥೆಯ ಧ್ವಂಸಕ್ಕೆ ಸಿದ್ಧಳಾಗುತ್ತಾಳೆ. ಆದ್ದರಿಂದಲೇ ಗಾರ್ಕಿ ಮತ್ತೊಂದು ಕಡೆ ಹೀಗೆ ಹೇಳುತ್ತಾರೆ:

ದ್ವೇಷಿಸಬೇಕಾದವರನ್ನು ದ್ವೇಷಿಸಬೇಕಾದಷ್ಟು ದ್ವೇಷಿಸದಿದ್ದರೆ

ಪ್ರೀತಿಸಬೇಕಾದವರನ್ನು ಪ್ರೀತಿಸಬೇಕಾದಷ್ಟು ಪ್ರೀತಿಸಲಾಗುವುದಿಲ್ಲ!!

ತನ್ನ ಮಗ ಹಾಗೂ ಆತನ ಸ್ನೇಹಿತರು ಮಾಡುತ್ತಿರುವುದು ನ್ಯಾಯ ಹಾಗೂ ಸತ್ಯ ಎಂದು ಅರಿವಾದ ನಂತರ ಆಕೆಯಲ್ಲಿ ಮೂಡುವ ನಿರಾಳ ಆಕೆಯ ಧಾರ್ಮಿಕ ಪ್ರಜ್ಞೆಯನ್ನು ಸ್ಥಾವರವಾದ ಧಾರ್ಮಿಕ ರಿವಾಜುಗಳಿಂದ ಮೇಲೆತ್ತಿ ಅವನ್ನು ವಿಮರ್ಶಿಸುವ ಮಟ್ಟಕ್ಕೆ ಏರಿಸುತ್ತದೆ. ಎಲ್ಲ ದುಡಿಯುವ ಜನರ ಸಮಾನ ಬವಣೆಯ ಬದುಕು ಎಲ್ಲರಲ್ಲೂ ತನ್ನ ಮಗನನ್ನು ಕಾಣುವಂತೆ ಮಾಡುತ್ತದೆ ಹಾಗೂ ತಾನು ಇದರ ವಿರುದ್ಧ ಎಲ್ಲೇ ಕೆಲಸ ಮಾಡಿದರೂ ಅದು ತನ್ನ ಮಗನನ್ನೂ ಒಳಗೊಂಡಂತೆ ಎಲ್ಲರೂ ಸುಖಿಯಾಗಿ ಬದುಕುವ ಸಮಾಜದ ಕಡೆಗೆ ಮುನ್ನಡೆಸುತ್ತದೆ ಎಂಬ ಮಹತ್ತರ ರಾಜಕೀಯ ಅರಿವಾಗಿ ಪರಿಣಮಿಸುತ್ತದೆ. ಅದೇ ಮುಂದೆ ಮನೆಯನ್ನೇ ಬಿಟ್ಟು ಹೊರಬರದ, ಪೊಲೀಸರನ್ನು ಕಂಡರೆ ಹೆದರಿದ ಹರಣಿಯಾಗುತ್ತಿದ್ದ, ಕಾನೂನು ಭಂಗಮಾಡುವುದೆಂದರೆ ಧಾರ್ಮಿಕ ರೀತಿ ರಿವಾಜುಗಳನ್ನೇ ಮುರಿದಂತಹ ಪಾಪ ಎಂಬ ತಿಳಿವಳಿಕೆ ಹೊಂದಿದ್ದ ತಾಯಿಯನ್ನು ಹಾಡುಹಗಲಲ್ಲೇ ಪ್ರಭುತ್ವ ವಿರೋಧೀ ಕರಪತ್ರವನ್ನು ಗುಪ್ತವಾಗಿ ಕಾರ್ಮಿಕರಿಗೆ ಹಂಚುವ ರಾಜದ್ರೋಹ ಕೆಲಸ ಮಾಡುವ ಮತ್ತು ಆ ಪ್ರಕ್ರಿಯೆಯಲ್ಲಿ ತಾನೂ ಬಂಧನಕ್ಕೊಳಗಾಗುವ ಮಟ್ಟಿಗೆ ಸಿದ್ಧವಾಗಿಸುತ್ತದೆ.

ಕಾದಂಬರಿ ಅಂಥ ಒಂದು ಪರಿಸ್ಥಿತಿಯಲ್ಲಿ ತಾಯಿ ಬಂಧನಕ್ಕೊಳಗಾಗುವುದನ್ನು ಚಿತ್ರಿಸುವ ಮೂಲಕ ಕೊನೆಗೊಳ್ಳುತ್ತದೆ. ಆದರೆ ಕಾದಂಬರಿಯ ಪ್ರಾರಂಭದಲ್ಲಿ ಕಾಣುವ ಹಳೆಯ ಸಮಾಜದ ತಾಯಿ ಕಾದಂಬರಿಯ ಕೊನೆಯಲ್ಲಿ ಹೊಸ ಸಮಾಜದ ತಾಯಿಯಾಗಿ [illegible]ಗೊಂಡಿರುತ್ತಾಳೆ. ಈ ಪರಿವರ್ತನೆ — ಅಂದರೆ ಹೊಸ ತಾಯಿಯ ಹುಟ್ಟು — ಹೊಸ ಸಮಾಜದ ಹುಟ್ಟಿಗೆ ಪೀಠಿಕೆ ಎಂಬ ಸೂಚನೆಯನ್ನು ಗಾರ್ಕಿ ನೀಡುತ್ತಾರೆ.

ಗಾರ್ಕಿ ಈ ಕಾದಂಬರಿ ಬರೆಯುವ ವೇಳೆಗೆ ವಿಶ್ವದಲ್ಲೆಲ್ಲೂ ಸಮಾಜವಾದಿ ಕ್ರಾಂತಿಗಳು ಆಗಿರಲಿಲ್ಲ, ಹೊಸ ಸಮಾಜ ಸೃಷ್ಟಿಯೂ ಆಗಿರಲಿಲ್ಲ. ಈಗ ಗಾರ್ಕಿ 'ತಾಯಿ' ಕಾದಂಬರಿ ಬರೆದು ನೂರು ವರ್ಷಗಳಾಗಿವೆ. ಈ ನೂರು ವರ್ಷಗಳಲ್ಲಿ ರಷ್ಯಾ ಮತ್ತು ಚೀನಾದಂತಹ ಬೃಹತ್ ರಾಷ್ಟ್ರಗಳನ್ನೂ ಒಳಗೊಂಡಂತೆ ಪ್ರಪಂಚದ ನೂರನೇ ಒಂದು ಭಾಗದ ರಾಷ್ಟ್ರಗಳಲ್ಲಿ ಹೊಸ ಸಮಾಜದ ಕನಸನ್ನು ಹೊತ್ತ ಕ್ರಾಂತಿಗಳು ಸಂಭವಿಸಿವೆ. ಆ ಕ್ರಾಂತಿಗಳಲ್ಲಿ ಹಲವು ದಶಕಗಳ ಕಾಲ ನಡೆದು ಅಂಥ ಸಮಾಜವೊಂದರ ಸಾಕಾರಕ್ಕೆ ಪ್ರಯತ್ನಿಸಿದವು. ಹೊಸ ಹೊಸ ಪ್ರಯೋಗಗಳೂ ನಡೆದವು. ಆದರೆ ಕಳೆದ ಶತಮಾನ ಪೂರೈಸುವ ಬಹು ಮುನ್ನವೇ ಪ್ರಪಂಚದಲ್ಲೆಲ್ಲೂ ಅಂಥ ಪ್ರಯೋಗವೇ ಇಲ್ಲದಂತಾಯಿತು.

ಈಗ, ಹೊಸ ಸಮಾಜದ ಬಸಿರು ಹೊತ್ತ ಗಾರ್ಕಿಯ ಈ 'ತಾಯಿ' ಕಾದಂಬರಿಗೆ ನೂರು ತುಂಬುವ ವೇಳೆಗೆ, ಹೊಸ ಸಮಾಜದ ದಿಶೆಯ ಪ್ರಯತ್ನಗಳನ್ನು ಬೆನ್ನಿಗಿಟ್ಟು[illegible] ಕೊಂಡಿದ್ದೇವೆ. ಅಂಥ ಪ್ರಯತ್ನದಲ್ಲಿ ತೊಡಗಿರುವವರೆಲ್ಲರೂ ಒಂದು [illegible] ಸ್ವವಿಮರ್ಶೆಯನ್ನು ಕೈಗೆತ್ತಿ[illegible] ಕೊಳ್ಳಲೇಬೇಕಾದ ಅನಿವಾರ್ಯ[illegible] ಸಂದರ್ಭದಲ್ಲಿ ನಾವಿದ್ದೇವೆ.

ಗಾರ್ಕಿಯ 'ತಾಯಿ' [illegible] ನಿಟ್ಟಿನಲ್ಲಿ ಹಲವು ಸರಳ ಸಂದೇಶ[illegible]ಗಳನ್ನು ನೀಡುತ್ತಾಳೆ. ಹೊಸ ಮನುಷ್ಯ ಹುಟ್ಟದೆ ಹೊಸ ಸಮಾಜ ಹುಟ್ಟದು. ಹೊಸ ಮನುಷ್ಯ ಎಂದರೆ ಹೊಸ ಮೌಲ್ಯಗಳು. ಹೊಸ ಅಂದರೆ ಬರ್ಬರತೆಯಿಂದ ನಾಗರಿಕತೆಯೆಡೆಗೆ ಮಾನವಕುಲ[illegible] ನಡೆಸಿರುವ ಚಾರಿತ್ರಿಕ ಪಯಣದಲ್ಲಿ ಪ್ರತಿ ನಿರ್ಣಯಾತ್ಮಕ [illegible] ನೆಗೆತಗಳು ಮಾನವಕುಲವನ್ನು ಇನ್ನಷ್ಟು ಮಾನವೀಯ[illegible]ಗೊಳಿಸಿದೆ. ಆದರೆ ಪ್ರತಿ ಕಾಲಘಟ್ಟದಲ್ಲೂ ಹೊಸ ಶೋಷಿತ[illegible] ವರ್ಗ ಹುಟ್ಟಿಕೊಳ್ಳುತ್ತಾ ಮನುಷ್ಯ ಮನುಷ್ಯನನ್ನು ಸುಲಿಯುವ ಅನಾಗರಿಕತೆ ಇನ್ನೂ ಮರೆಯಾಗಿಲ್ಲ. ಈ[illegible] ಕಾಲದಲ್ಲೂ ಎಷ್ಟೇ ಆಧುನಿಕ ಮುಖವಾಡವನ್ನು ತೊಟ್ಟುಕೊಂಡರೂ ಜತೆಗಿರುವ ಮನುಷ್ಯನನ್ನು ಸುಲಿದು ತಿನ್ನುವ ಅನಾಗರಿಕ ಪಾಶವೀ ಸಂಸ್ಕೃತಿಯೇ ಮುಂದುವರೆದಿದೆ.

ಊಳಿಗಮಾನ್ಯ ಸಮಾಜ ಬಂದು ಮನುಷ್ಯನನ್ನು ಗುಲಾಮನನ್ನಾಗಿ ನಡೆಸಿಕೊಂಡ ವ್ಯವಸ್ಥೆ ನಾಶವಾಯಿತು. ಆ ನಂತರ ಎಲ್ಲರಿಗೂ ವ್ಯಕ್ತಿ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಬಂಡವಾಳಶಾಹಿ ವ್ಯವಸ್ಥೆ ಬಂದು ಊಳಿಗಮಾನ್ಯ ರಾಜರಿಕೆಯನ್ನು ನಾಶಮಾಡಿದರೂ ಅದೂ ಸಹ ಹಲವರನ್ನು ಸುಲಿದು ಕೆಲವರು ಶ್ರೀಮಂತರಾಗುವ ಸ್ವಾರ್ಥಪೂರಿತ ವ್ಯವಸ್ಥೆಯನ್ನೇ ಹುಟ್ಟುಹಾಕಿತು. ಈ ಸ್ವಾರ್ಥದ ಉತ್ತುಂಗವನ್ನೇ ನಾವು ಇಂದು ಯುದ್ಧ, ಹಸಿವಿನಿಂದ ಸಾವು ಮತ್ತು ಆತ್ಮಹತ್ಯೆಗಳಲ್ಲಿ ಕಾಣುತ್ತಿದ್ದೇವೆ. ಆದ್ದರಿಂದಲೇ ನ್ಯಾಯಾಲಯದಲ್ಲಿ ಪಾವೆಲ್ ಮಾಡುವ ಭಾಷಣದಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಮಾನವಕುಲವನ್ನು ಆಧ್ಯಾತ್ಮಿಕವಾಗಿ ಇನ್ನೊಂದು ಹೆಜ್ಜೆಯನ್ನು ಮುನ್ನಡೆಸುವ ಸಾಮರ್ಥ್ಯವಿಲ್ಲವೆಂದು ಘೋಷಿಸುತ್ತಾನೆ.

ಇತಿಹಾಸದ ಈ ಗತಿತರ್ಕವನ್ನು ಕ್ರೋಢೀಕರಿಸುತ್ತಾ ಮಾರ್ಕ್ಸ್ ಹೇಳುವಂತೆ ಮಾನವಕುಲವಿನ್ನೂ ಇತಿಹಾಸ ಪೂರ್ವ ಕಾಲಘಟ್ಟದಲ್ಲೇ ಬದುಕುತ್ತಿದೆ. ಮನುಷ್ಯ ಮನುಷ್ಯನನ್ನು ತಿನ್ನುವ ಸ್ವಾರ್ಥವೂ ಇಲ್ಲವಾಗಿ ಸಕಲ ಜೀವಾತ್ಮಗಳೂ ಒಂದೇ ಎಂಬ ತತ್ವ ಜೀವನ ಮೌಲ್ಯವಾಗುವ ವ್ಯವಸ್ಥೆ ಬಂದ ನಂತರವೇ ಮಾನವಕುಲದ ನಿಜವಾದ ಇತಿಹಾಸ ಪ್ರಾರಂಭವಾಗುತ್ತದೆ. ಒಂದರ್ಥದಲ್ಲಿ ಈ ನಾನು-ನಾವು ಆಗುವ ಪ್ರಕ್ರಿಯೆಯೇ ಮಾರ್ಕ್ಸ್‌ವಾದದ ಆಧ್ಯಾತ್ಮಿಕ ಪ್ರಸ್ಥಾನವೂ ಆಗಿದೆ.

ಇತ್ತೀಚೆಗೆ ಮತ್ತೊಂದು ಪುಸ್ತಕದಲ್ಲಿ ಓದಿದ ಮಾತು: "ನನಗೆ ಹಸಿವಾಗುತ್ತದೆ ಎಂಬುದು ಭೌತಿಕ ಜ್ಞಾನ; ಇತರರಿಗೂ ಹಸಿವಾಗುತ್ತದೆ ಎಂಬುದು ಬೌದ್ಧಿಕ ಜ್ಞಾನ; ಇತರರ ಹಸಿವೇ ತನ್ನ ಹಸಿವೆಂದು ಭಾವಿಸುವುದು ಆಧ್ಯಾತ್ಮಿಕ ಜ್ಞಾನ". ಅಂದರೆ ಎಲ್ಲರಲ್ಲೂ ತನ್ನನ್ನು ಕಾಣುವ, ತನ್ನಂತೆ ಎಲ್ಲರೂ ಎಂದು ಭಾವಿಸುವ ಸರಳ ಆಧ್ಯಾತ್ಮವೇ ಸ್ಥಾವರವಾಗದ ಎಲ್ಲಾ ಜಂಗಮ ಧರ್ಮಗಳ ತಾತ್ವಿಕ ಸಾರವೂ ಆಗಿದೆ.

ಮಗನನ್ನು ಮಾತ್ರ ಪ್ರೀತಿಸುವ ತಾಯಿಯ ಆಧ್ಯಾತ್ಮಿಕ ಲೋಕ ತನ್ನೊಳಗಿನ ತಾಯಿತನವನ್ನು ವಿಸ್ತರಿಸಿಕೊಂಡು ಜಗದಗಲ ಬೆಳೆದು ಹೊಸ ಸಮಾಜದ ತಾಯಿಯಾದಂತೆ ಹೊಸ ಮನುಷ್ಯ ಹುಟ್ಟದೆ ಹೊಸ ಸಮಾಜ ಹುಟ್ಟದು. ಸಮಾಜವಾದಿ ಚಳವಳಿಗಳು ಹೊಸ ನಾಗರಿಕತೆಯನ್ನು, ಹೊಸ ಜೀವನ ಮೌಲ್ಯಗಳನ್ನು ಒಂದು ಸಂಸ್ಕೃತಿಯಾಗಿ, ಒಂದು ನಿತ್ಯ ಜೀವನ ಮೌಲ್ಯವಾಗಿ ಹುಟ್ಟುಹಾಕದಿದ್ದರೆ ಅದು ಹೊಸ ಸಮಾಜವನ್ನು ಸೃಷ್ಟಿಸಲು ಸಾಧ್ಯವೇ ಇಲ್ಲ.

ಬಹಿರಂಗದ ಚಳವಳಿ ಅಂತರಂಗದ ಶುದ್ಧಿಯನ್ನು ಸಾಧಿಸದಿದ್ದರೆ ಅದು ನಾಳಿನ ಸಮಾಧಿಗೆ ಇಂದೇ ಅಸ್ತಿಭಾರವನ್ನು ಹಾಕಿದಂತಾಗುತ್ತದೆ. ಹೊಸ ಮೌಲ್ಯ ಕ್ರಾಂತಿಯ ನಂತರದ ಕಾರ್ಯಕ್ರಮವಲ್ಲ. ಅಧಿಕಾರ, ಆಸ್ತಿ, ಪ್ರತಿಷ್ಠೆಗಳ ನಿರಾಕರಣ ಚಳವಳಿಯ ಜೊತೆಜೊತೆಗೆ ಬೆಳೆಯಬೇಕಿರುವ ಮೌಲ್ಯ. ಅಂತರಂಗದಲ್ಲಿ ಸ್ವವಿಮರ್ಶೆಯ ಯುದ್ಧ ಮಾಡದ ಕ್ರಾಂತಿ ಜಯಿಸುವ ಬಹಿರಂಗ ಯುದ್ಧಗಳ ವಿಜಯ ತಾತ್ಕಾಲಿಕ.

'ತಾಯಿ' ಕಾದಂಬರಿ ಆ ರೀತಿ ಸ್ವಾರ್ಥದ ವಿರುದ್ಧ ನಿಸ್ವಾರ್ಥ ನಡೆಸುವ ಯುದ್ಧದ ವಿಜಯದ ಕಥನ ಎಂದು ಈ ಕ್ಷಣಕ್ಕೆ ಅನಿಸುತ್ತಿದೆ.


ತಾಯಿ ನೀಲೋವ್ನ ತನ್ನ ಮಗನಂತೆ ಇರುವ ಎಲ್ಲರ ಬಗ್ಗೆ ಸಮಾನ ಅಂತಃಕರಣವನ್ನು ಇಟ್ಟುಕೊಂಡು ಇಂಥ ಒಳ್ಳೆ ಮಕ್ಕಳ ಬದುಕನ್ನು ಸಂಕಷ್ಟಕ್ಕೆ ಈಡು ಮಾಡಿರುವ ವ್ಯವಸ್ಥೆಯ ಬಗ್ಗೆಯೂ ಅಷ್ಟೇ ಸಿಟ್ಟನ್ನು ಇಟ್ಟುಕೊಂಡಿರುತ್ತಾಳೆ. ಆಕೆಯ ಸಿಟ್ಟಿಗೆ ತಳಹದಿ ಆಕೆ ತನ್ನ ಮಕ್ಕಳಂಥವರ ಮೇಲೆ ಬೆಳೆಸಿಕೊಂಡ ನಿರ್ವ್ಯಾಜ ಅಂತಃಕರಣವೇ ಆಗಿರುತ್ತದೆ. ಅವರ ಮೇಲೆ ಆಕೆಯ ಪ್ರೀತಿ ಹೆಚ್ಚಿದಷ್ಟೂ ವ್ಯವಸ್ಥೆಯ ಮೇಲೆ ಆಕೆಯ ಸಿಟ್ಟು ಹೆಚ್ಚುತ್ತದೆ. ಆ ಪ್ರೀತಿಯ ಆಧಾರದ ಮೇಲೆ ಆಕೆ ಶೋಷಕ ವ್ಯವಸ್ಥೆಯ ಧ್ವಂಸಕ್ಕೆ ಸಿದ್ಧಳಾಗುತ್ತಾಳೆ.

ಮರು ಓದಿನಲ್ಲಿ ಕಂಡ 'ತಾಯಿ'


ಶಿವಸುಂದರ್







ಉಳ್ಳವರ ಕ್ರಿಕೆಟ್ ಬಡವರ ಫುಟ್‌ಬಾಲ್





"ಇತರೆ ಆಟಗಳಂತೆಯೇ ಕ್ರಿಕೆಟ್ ಕೂಡ ಒಂದು ...ಟವೆಂದು ನಾನಂದುಕೊಂಡಿದಿದ್ದರೆ ನಾನೊಬ್ಬ ...ಕೆಟಿಗನಾಗಿರುತ್ತಿದ್ದೆ.

ನಾನಿದನ್ನು ತಮಾಷೆಗೆ ಹೇಳುತ್ತಿಲ್ಲ, ಕಾಲೇಜು ...ಟ್ಟದಲ್ಲಿ ನಾನು ನಿಜಕ್ಕೂ ಒಳ್ಳೆಯ ಕ್ರಿಕೆಟ್ ಆಟಗಾರ ...ಗಿದ್ದೆ. ನಾನು ಸಂಪೂರ್ಣ ಗಮನವನ್ನು ಇದಕ್ಕೆ ...ರಿಸಿದ್ದೇ ಆಗಿದ್ದಲ್ಲಿ ಇಷ್ಟು ಹೊತ್ತಿಗೆ ಯಾವುದೋ ...್ಯಾಂಕಿನ ಬ್ರಾಂಚ್ ಮ್ಯಾನೇಜರ್ ಆಗಿರುತ್ತಿದ್ದೆ. (ಆಗ ...ಕೆಟಿಗರಿಗೆ ದೊರಕುತ್ತಿದ್ದ ಅತ್ಯುತ್ತಮ ಆಫರ್ ಅದು).

ನಾನು ಏನೋ ತಪ್ಪು ಮಾಡುತ್ತಿದ್ದೀನೇನೋ ...ಂಬಂತೆ ಅರೆಮನಸ್ಸಿನಿಂದಲೇ ಕ್ರಿಕೆಟ್ ಆಡುತ್ತಿದ್ದೆ. ಕ್ರಿಕೆಟ್ ...ಡುತ್ತಿದ್ದೀನಲ್ಲ ಎಂದು ...ನ್ನನಾಗುತ್ತಿದ್ದೆ. ನಿಜ ...ೇಳಬೇಕೆಂದರೆ ನಾನು ...ಕೆಟನ್ನು ತುಂಬ ...ಷ್ಟಪಡುತ್ತಿದ್ದೆ. ...ಷ್ಟೊಂದು ...ಕರ್ಷಿತನಾಗಿದ್ದೆ ...ಂದರೆ ಮಾರನೆಯ ...ನ ಮ್ಯಾಚ್ ಇದ್ದಾಗ ...ತ್ರಿ ಮಲಗುವುದಕ್ಕೆ ...ುಂಚೆಯೇ ನಾಳೆ ...ೇಗೆ ಬ್ಯಾಟ್ ...ಾಡುವುದೆಂದು ...ನಸ್ಸಿನಲ್ಲಿಯೇ ...ಾಲೀಮು ನಡೆಸುತ್ತಿದ್ದೆ. ...ಗಷ್ಟೇ ಟ.ವಿ ...ಂದಿತ್ತು; 1982 ರ ...ಾರತ-ಇಂಗ್ಲೆಂಡ್ ...ರಣಿಯಿಂದ ಹಿಡಿದು ...ಂತರದ ಯಾವ ...್ಯಾಚ್‌ನ್ನೂ ನಾನು ...ಸ್ ...ಾಡಿಕೊಳ್ಳುತ್ತಿರಲಿಲ್ಲ.

1983 ರಲ್ಲಿ ಭಾರತ, ಇಂಗ್ಲೆಂಡ್‌ನಲ್ಲಿ ವಿಶ್ವ ...ಪ್ ಗೆಲ್ಲದೇ ಹೋಗಿದ್ದಿದ್ದರೆ ಕ್ರಿಕೆಟ್‌ಗೆ ಆಡಿಕ್ಟ್ ಆದ ...ಕೆಟ್ ಪ್ರಿಯರ ಸಂಖ್ಯೆ ಇಷ್ಟಿರುತ್ತಿರಲಿಲ್ಲ. ಇದಕ್ಕೆ ಕೆಲವು ...ಂಗಳ ಮುಂಚೆಯೇ ನಾನು ಕ್ರಿಕೆಟ್ ವ್ಯಸನಿಯಾಗಿಬಿಟ್ಟಿದ್ದೆ. ... ದಿನಗಳಲ್ಲಿ ಯಾವ ಅಪ್ಪ- ಅಮ್ಮಂದಿರೂ ತಮ್ಮ ...ಕ್ಕಳನ್ನು ಕ್ರಿಕೆಟ್ ಆಟಗಾರರನ್ನಾಗಿ ಮಾಡಬೇಕು ಎಂದು ...ಣಿಸುತ್ತಿರಲಿಲ್ಲ. ತಾಯಿಯ ಗರ್ಭದಲ್ಲಿದ್ದಾಗಲೇ ...ೆಡಿಕಲ್ ಬೇಕೋ ಅಥವಾ ಇಂಜಿನಿಯರಿಂಗ್ ಬೇಕೋ ...ಂದು ಆಯ್ಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಕ್ರಿಕೆಟ್ ...ಥವಾ ಬೇರಿನ್ನಾವುದೇ ಆಟವನ್ನಾದರೂ ಕೇವಲ ...ಟವನ್ನಾಗಿ ಆಯ್ಕೆ ಮಾಡಿಕೊಳ್ಳಬಹುದಿತ್ತೇ ವಿನಃ ...ದನ್ನೊಂದು ವೃತ್ತಿಯಾಗಿ ಅಲ್ಲ. ಸಂಜೆ ಓದಿ ...ೊಳ್ಳೋದಕ್ಕೆ ಸರಿಯಾದ ಸಮಯಕ್ಕೆ ಮನೆಗೆ ನಾನು ...ರಲಿಲ್ಲ ಅಂತ ನನ್ನಮ್ಮ ಸರಿಯಾಗಿ ಬಾರಿಸಿದ್ದು ನನಗಿನ್ನೂ ...ನಪಿದೆ: ಬೆನ್ನಿಗೆ ಬಾರಿಸುತ್ತಲೇ "ಕ್ರಿಕೆಟ್ ಆಡಿದರೆ ...ಾವನು ನಿಂಗೆ ಸಂಬಳ ಕೊಡ್ತಾನೋ?" ಅಂತ ...ರುಚಿಕೊಂಡದ್ದು.

ನಾನು ಕ್ರಿಕೆಟ್ ಆಡೋದನ್ನ ತಪ್ಪಿಸಲಿಕ್ಕೆ ಹೊಡೆತ ...ಳಿಂದ ಸಾಧ್ಯವಾಗಲೇ ಇಲ್ಲ; ಅಡ್ಡಿಯಾಗಲೂ ಇಲ್ಲ. ...ೆಲಿವಿಷನ್ ಆಗತಾನೆ ಬೆಂಗಳೂರಿಗೆ ಬಂದಿತ್ತು; ...ೊಟ್ಟಮೊದಲಬಾರಿಗೆ ನಾನು ಪ್ರೊಫೆಷನಲ್ ಕ್ರಿಕೆಟ್ ...ಟವನ್ನು ನೋಡುತ್ತಿದ್ದೆ. ಕೀತ್ ಫ್ಲೆಚರ್ ಇಂಗ್ಲಿಷ್ ...ಂಡದ ನಾಯಕನಾಗಿ ಮತ್ತು ಅವನೊಂದಿಗೆ ಇದ್ದ ...ಫ್ ಬಾಯ್ಕಾಟ್, ಡೆರಿಕ್ ರಂಡಾಲ್, ಗ್ರಹಾಂ ಡಿಲ್ಲೀ, ...ಾಬ್ ವಿಲ್ಲೀಸ್, ಡೆರಿಕ್ ಅಂಡರ್‌ವುಡ್, ಕ್ರಿಸ್ ...ವೇರ್, ಡೇವಿಡ್ ಗೋವರ್, ಇಯಾನ್ ಬಾಥಂ ...ುಂತಾದವರು ಭಾರತಕ್ಕೆ ಬಂದುದು ನನಗೆ ಸ್ಫುಟವಾಗಿ ...ನಪಿದೆ: ಈಗ ಕಾಮೆಂಟರಿ ಬಾಕ್ಸ್‌ನಲ್ಲಿ ಕೂತು ತನ್ನ ...ಶಿಷ್ಟ ಯಾರ್ಕ್‌ಶೈರ್ ಶೈಲಿಯಲ್ಲಿ ಬೇಜವಾಬ್ದಾರಿಯಾಗಿ ...ಕೆಟ್ ಆಡೋದನ್ನ ಉಗ್ರವಾಗಿ ಖಂಡಿಸುವ ಸರ್ ...ಾಯ್ಕಾಟ್ 82ರಲ್ಲಿ ಒಂದು ಇನ್ನಿಂಗ್ಸ್‌ನಲ್ಲಿ ಔಟ್ ...ದ ನಂತರ ಸೀದಾ ಗಾಲ್ಫ್ ಆಡುವುದಕ್ಕೆ ಹೊರ ...ೋಗಿದ್ದು ಇನ್ನೂ ನೆನಪಿದೆ. ಹಾಗೆಯೇ ನಮ್ಮ ಗುಂಡಪ್ಪ ...ಶ್ವನಾಥ್ ಮದ್ರಾಸ್ ಟೆಸ್ಟ್‌ನಲ್ಲಿ 222 ರನ್ನು ಹೊಡೆದದ್ದು ...ೂಡ ನಿನ್ನೆ-ಮೊನ್ನೆ ನೋಡಿದಂತಿದೆ.

ನಾನು ಫುಟ್‌ಬಾಲ್‌ಅನ್ನು ಕಡಿಮೆ ಇಷ್ಟಪಡುತ್ತಿದ್ದೆ ...ಂದಲ್ಲ, ಆದರೆ ಕ್ರಿಕೆಟ್ ನನಗೆ ಹೆಚ್ಚು ಪ್ರಿಯವಾಗಿತ್ತು.

ಅಲ್ಲದೆ, ಫುಟ್‌ಬಾಲ್ ಆಡೋದನ್ನ ಮುಂದುವರೆ...ಿ ಇದ್ದದ್ದಕ್ಕೆ ಕಾರಣ ಅದಕ್ಕೆ ದೈಹಿಕವಾಗಿ ಬಲಶಾಲಿ...ಾಗಿರಬೇಕಾಗಿರುವುದು. ಹೆಚ್ಚಿನ ಶ್ರಮವನ್ನು ಬೇಡು...ುವದ್ದು, ಸಸ್ಸಂಥವರಿಗೆ ಕ್ರಿಕೆಟ್ ಹೇಳಿ ಮಾಡಿಸಿದಂಥ ಆಟವಾಗಿತ್ತು, ಕ್ರಿಕೆಟ್‌ಗೆ ಅಂಥಾ ಫಿಟ್‌ನೆಸ್ ಸ್ಟ್ಯಾಂಡರ್ಡ್ಸ್ ಏನೂ ಬೇಕಾಗಿರಲಿಲ್ಲ, ಅಂಥ ಪರಿಯ ಸಹನಶಕ್ತಿಯೂ ಬೇಕಿರಲಿಲ್ಲ, ಒಂದಷ್ಟು ಹೊತ್ತು ರಭಸವಾಗಿ ಓಡಿ; ನಡುನಡುವೆ ವಿರಮಿಸುವುದಕ್ಕೆ ಸಾಧ್ಯವಿರುವಂಥ ಆಟ ನನ್ನಂಥ ಸೋಮಾರಿಗೆ ಹೇಳಿ ಮಾಡಿಸಿದಂತಿತ್ತು.

ಫುಟ್‌ಬಾಲ್ ಎಷ್ಟು ಒಳ್ಳೆಯ ಆಟ ಅಂತ ತಿಳಿದಿದ್ದರೂ ಕ್ರಿಕೆಟ್‌ನ ವ್ಯಾಮೋಹ, ಸೆಳೆತ ತೀರದ್ದಾಗಿತ್ತು. ನಾನು ಫುಟ್‌ಬಾಲ್ ಆಡುತ್ತಿರುವಾಗಲೂ ಪಕ್ಕದಲ್ಲೇ ಹುಡುಗರು ಆಡುತ್ತಿದ್ದ ಕ್ರಿಕೆಟ್‌ನೆಡೆಗೆ ನನ್ನ ಗಮನ ಹರಿಯುತ್ತಿತ್ತು. ಶ್ರಮಿಕ ವರ್ಗದಿಂದ ಬಂದ ನನಗೆ ಫುಟ್‌ಬಾಲ್ ಆಟವೇ ತಕ್ಕುದೆಂದು ನನಗೆ ಅರಿವಿದ್ದರೂ ಕ್ರಿಕೆಟ್‌ನ ಸೆಳೆತದಿಂದ ದೂರವಿರಲು ಸಾಧ್ಯವಾಗಲಿಲ್ಲ.

ನಮ್ಮ ಟೀಮಿನಲ್ಲಿ ಫುಟ್‌ಬಾಲ್‌ನಿಂದ ಕ್ರಿಕೆಟ್‌ಗೆ ಉನ್ನತಿ ಪಡೆಯಬೇಕೆಂದು ಪರಿತಪಿಸುತ್ತಿದ್ದವರಲ್ಲಿ ನಾನೊಬ್ಬನೇ ಅಲ್ಲ. ನಿಧಾನವಾಗಿಯಾದರೂ ಇದನ್ನು ಈಡೇರಿಸಿಕೊಳ್ಳಬೇಕೆಂಬ ದೃಷ್ಟಿಕೋನವನ್ನು ಎಲ್ಲರೂ ಇರಿಸಿಕೊಂಡಿದ್ದೆವು. ಕ್ರಿಕೆಟ್ ಈಗ ಇಡೀ ಗುಂಪಿನ ಆಟವಾಯಿತು. ಬ್ಯಾಟು-ಬಾಲಿಗೆ ಎಲ್ಲರೂ ವಶವಾದ್ದರಿಂದ ಎರಡು ತಂಡಗಳಾಗಿ ಫುಟ್‌ಬಾಲ್ ಆಡಲು ಹುಡುಗರೇ ಇರುತ್ತಿರಲಿಲ್ಲ. ಶುರುವಿನಲ್ಲಿ ನಮ್ಮಲ್ಲಿ ಸ್ಟಂಪ್ಸ್‌ಗಳಿರಲಿಲ್ಲವಾದರೂ ಇದ್ದಿಲಿನಿಂದ ಗೋಡೆಯ ಮೇಲೆ ಗೀರಿದ ಮೂರು ಲೈನುಗಳೇ ಸಾಕಾಗಿದ್ದವು. ಗಾಳಿಯಿಲ್ಲದ ಫುಟ್‌ಬಾಲ್ ಮೂಲೆಗೆ ಬಿತ್ತು. ನಾವು ನಮ್ಮ ಗುರಿ ತಲುಪಿದ್ದೆವು.

ಖಾಲಿಯಿದ್ದ ಸೈಟೊಂದರಲ್ಲಿ ಕ್ರಿಕೆಟ್ ತಾಲೀಮು ನಡೆಸುತ್ತಿದ್ದ ನಮ್ಮ ಓಣಿಯ ಟೀಮು ತುಂಬ ತುಳುಕುವಂತಾಗಲು ಹೆಚ್ಚುದಿನ ಹಿಡಿಯಲಿಲ್ಲ, ಪ್ರತಿ ಭಾನುವಾರ ಗ್ರೌಂಡ್‌ನ್ನು ಸ್ವಚ್ಛಗೊಳಿಸಿ, ಪಿಚ್‌ಗೆ ನೀರು ಸಿಂಪಡಿಸಿ, ಸ್ಟಂಪ್ಸ್‌ಗಳನ್ನು (ಎಲ್ಲರೂ ಕಾಸು ಕೂಡಿಸಿ ಕೊಂಡುಕೊಂಡ ಒಂದು ಸೆಟ್ಟು) ನೆಡುತ್ತಿದ್ದೆವು. ನಾವು ಆಟ ಆಡುತ್ತಿದ್ದುದು ಟೆನ್ನಿಸ್ ಬಾಲ್‌ನಲ್ಲಾದರೂ ನಮ್ಮ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ, ಜನರು ಬಂದು ನಿಂತು ನೋಡಲಾರಂಭಿಸಿದರು. ನೆರೆಹೊರೆಯವರು ತಮ್ಮ ಕಾಂಪೌಂಡು ಗೋಡೆಗಳ ಮೇಲೆ ಕುಳಿತು ನಮ್ಮನ್ನು ಪ್ರೋತ್ಸಾಹಿಸಲಾರಂಭಿಸಿದರು. ಬೇರೆ ಏರಿಯಾಗಳಿಂದ ಬಂದ ಟೀಮುಗಳೊಂದಿಗೆ ನಾವು ಮ್ಯಾಚ್ ಆಡಲಾರಂಭಿಸಿದೆವು. ಪೆನ್ಸಿಲ್‌ಗಳನ್ನು ಬಾಜಿ ಕಟ್ಟಿ ಕ್ರಿಕೆಟ್ ಆಡುವುದು ಜನಪ್ರಿಯವಾಯಿತು.

ಆ ಬಡಾವಣೆಯನ್ನು ಬಿಟ್ಟು ನಾನು ಹೈಸ್ಕೂಲ್, ಕಾಲೇಜು ಸೇರುವ ಹೊತ್ತಿಗೆ ಕ್ರಿಕೆಟ್ಟು ಇನ್ನೂ ವೈಶಿಷ್ಟ್ಯಪೂರ್ಣವಾಯಿತು. ನಗರದ ಸ್ಕೂಲೊಂದನ್ನು ಸೇರಿ ಒಂಭತ್ತನೆ ಕ್ಲಾಸಿನಲ್ಲಿರುವಾಗ ಮೊಟ್ಟಮೊದಲಬಾರಿಗೆ ಪ್ಯಾಡುಗಳು, ಗ್ಲವ್ಸ್‌ಗಳು ಮತ್ತು ಅಬ್ಡೋಮನ್ ಗಾರ್ಡ್ಸ್‌ಗಳನ್ನು ಹಾಕಿಕೊಂಡಿದ್ದೆ. ಭಾನುವಾರಗಳಂದು ಟೆನ್ನಿಸ್ ಬಾಲ್‌ನಲ್ಲಿ ಕ್ರಿಕೆಟ್ ಆಡುವುದೂ, ಉಳಿದ ದಿನಗಳಂದು ಲೆದರ್‌ಬಾಲ್‌ನಲ್ಲಿ ಕ್ರಿಕೆಟ್ ಆಡುವುದು ಮಾಮೂಲಾಯಿತು. ಆದರೆ ನಮ್ಮ ಓಣಿಯ ಹುಡುಗರೊಂದಿಗೆ ಕ್ರಿಕೆಟ್ ಆಡುವ ದಿನಗಳು ಕಮ್ಮಿಯಾಗುತ್ತಾ ಬಂದವು.

ನಾನು ಬಹುದೂರ ಸಾಗಿ ಬಂದಿದ್ದೆ; ಫುಟ್‌ಬಾಲ್ ಆಟದಿಂದ ಟೆನ್ನಿಸ್ ಬಾಲ್ ಕ್ರಿಕೆಟ್ಟಿಗೆ ಮತ್ತು ಅಲ್ಲಿಂದ ಲೆದರ್‌ಬಾಲ್ ಕ್ರಿಕೆಟ್‌ನವರೆಗೆ. ಒಂದೊಂದು ಹಂತವನ್ನು ತಲುಪಿ ನಾನು ಮುಂದೆ ಹೋದಂತೆಲ್ಲ ನನ್ನ ಓಣಿಯ ಸ್ನೇಹಿತರೊಂದಿಗಿನ ಸಂಬಂಧದ ತಂತುಗಳನ್ನು ಕಡಿದುಕೊಳ್ಳುತ್ತಾ ಹೋದೆ. ಕಾನ್ವೆಂಟಿನ ಹುಡುಗನಾಗಿ ಫುಟ್‌ಬಾಲ್‌ನಿಂದ ದೂರ ಸರಿಯುತ್ತಾ ಹೋದೆ.

ತ್ರಿಶಂಕು

ಅದೃಷ್ಟವೋ ದುರಾದೃಷ್ಟವೋ ನಮ್ಮ ಬಡಾವಣೆಯ ಬಹಳಷ್ಟು ಸ್ನೇಹಿತರು ಕಾಲೇಜಿನ ಮೆಟ್ಟಿಲು ಹತ್ತಲಾಗಲಿಲ್ಲ. ಯಾವುದಾದರೂ ಕೆಲಸವನ್ನು ಹಿಡಿದು ಅವರ ಬಡ ಕುಟುಂಬಗಳಿಗಾಗಿ ಅವರು ದುಡಿಯಬೇಕಾಗಿತ್ತು. ಆದರೆ ನಾನು ಟೈ ಕಟ್ಟಿಕೊಂಡು ಶಾಲೆಗೆ ಹೋಗುತ್ತಿದ್ದೆ, ನನಗೆ ಇಂಗ್ಲಿಷ್ ಗೊತ್ತಿತ್ತೆಂಬ ಏಕೈಕ ಕಾರಣಕ್ಕಾಗಿ ಅವರೆಲ್ಲ ಸ್ನೇಹಿತರಾಗಿದ್ದರೂ ನಾನು ಅವರಿಂದ ದೂರವಾಗಿದ್ದೆ.

ಕಾಲೇಜಿನಲ್ಲಿ ಕ್ರಿಕೆಟ್ ಇನ್ನೂ ವೈಶಿಷ್ಟ್ಯಪೂರ್ಣವಾಗಿದ್ದಿತು. ಕ್ರಿಕೆಟ್ ಆಡುತ್ತಿದ್ದ ಹುಡುಗರು ಬೇರಾವುದೋ ಲೋಕದಿಂದ ಬಂದವರಂತೆ ಕಾಣುತ್ತಿದ್ದರು. ಪ್ರತಿಯೊಬ್ಬರಲ್ಲೂ ಒಂದು ಪ್ರತ್ಯೇಕ ಕ್ರಿಕೆಟ್ ಸೆಟ್ ಇರುತ್ತಿತ್ತು. ಅವರೆಲ್ಲ ಗ್ರೇ ನಿಕಲ್ಸ್ ಬ್ಯಾಟುಗಳು ಮುಂತಾದವುಗಳು ಪರದೇಶಗಳಿಂದ ಆಮದು ಮಾಡಿಕೊಂಡಿದ್ದರು. ಕ್ರಿಕೆಟ್ ತಾಲೀಮು ಮುಗಿದ ನಂತರ ತಿನ್ನುವುದಕ್ಕೆಂದು ಅವರು ತಿನಿಸುಗಳನ್ನು ತಪ್ಪದೆ ತರುತ್ತಿದ್ದರು. ನಮ್ಮ ಕೇರಿಯಲ್ಲಿ ಬಾಲ್ಯದುದ್ದಕ್ಕೂ ನಾನು ವಿಶೇಷ ಸವಲತ್ತುಗಳನ್ನು ಪಡೆದವನೆಂದೇ ಬೀಗುತ್ತಿದ್ದೆ; ಆದರೆ ಇಲ್ಲಿ, ಕಾಲೇಜಿನಲ್ಲಿ, ನನ್ನ ಸ್ಥಾನ ಯಾವುದೆಂದು ತಿಳಿಯಿತು. ಅಧಿಕಾರಿಗಳು, ರಾಜಕಾರಣಿಗಳು, ಕಲಾಕಾರರು ಮತ್ತು ರಾಯಭಾರಿಗಳಾಗಿದ್ದವರ ಮಕ್ಕಳುಗಳ ನಡುವೆ ಇಂಗ್ಲಿಷ್‌ನ ಕೆಲವು ಸಾಲುಗಳು ಗೊತ್ತಿದ್ದು, ಇಂಗ್ಲಿಷ್ ಆಟವೊಂದನ್ನು ಆಡುತ್ತಿದ್ದ ಶ್ರಮಿಕವರ್ಗದಿಂದ ಬಂದ ಒಬ್ಬ ಬಿಕನಾಸಿ ಹುಡುಗನಾಗಿದ್ದೆನೆ ಹೊರತು ಹೆಚ್ಚೇನಾಗಿರಲಿಲ್ಲ.

ಕಾಲೇಜಿನಲ್ಲಿ ಕ್ರಿಕೆಟ್ ಆಟವನ್ನು ಆಡದಿದ್ದವರೊಂದಿಗೇ ನಾನು ಬೆರೆತು ಹೆಚ್ಚು ನೆಮ್ಮದಿಯಾಗಿರುತ್ತಿದ್ದೆ. ನನ್ನ ವಯಸ್ಸಿನ ಹಲವರಂತೆಯೇ ಜೇಬಿನಲ್ಲಿ ಕಾಸಿಲ್ಲದಿದ್ದರೂ ಕನ್ನಡ, ತಮಿಳು, ತೆಲುಗುಗಳಲ್ಲಿ ಮಾತನಾಡಿಕೊಂಡು ಜೋಕುಗಳನ್ನು ಹೇಳಿಕೊಂಡು ಕಿಸಿಕಿಸಿ ನಗುತ್ತಿದ್ದೆವು. ಕ್ರಿಕೆಟ್ ಆಟವನ್ನು ಗೇಲಿ ಮಾಡುತ್ತಿದ್ದೆವು ಕೂಡ.

ಕ್ರಿಕೆಟ್‌ನ ಪ್ರಾಕ್ಟೀಸ್ ಸೆಷನ್ಸ್‌ಗಳನ್ನು ತಪ್ಪಿಸಿಕೊಳ್ಳಲು ಕಾರಣಗಳನ್ನು ಹುಡುಕುವುದಕ್ಕೆ ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ, ಪ್ರತಿದಿನದ ನೆಟ್ ಪ್ರಾಕ್ಟೀಸ್ ಹಿಂಸೆಯೆನಿಸುತ್ತಿತ್ತು, ಸಿರಿವಂತರ ಮಕ್ಕಳು ಕೋಚ್‌ಗಳಿಗೆ ತುಂಬಾ ಆಪ್ತರಾಗಿದ್ದರು. ಕೆಲವು ಮಾಜಿ ಕ್ರಿಕೆಟಿಗರು ಕೂಡ ನಾವು ಆಡುವುದನ್ನು ನೋಡಲು ಬರುತ್ತಿದ್ದರು. ಯಾರೊಬ್ಬರೂ ನನ್ನನ್ನ ಕರೆದು ಮಾತನಾಡಿಸುತ್ತಿರಲಿಲ್ಲ, ಆದರೆ ನನಗಿಂತ ಕೆಟ್ಟದಾಗಿ ಕ್ರಿಕೆಟ್ ಆಡುತ್ತಿದ್ದ (ಪ್ರಭಾವಶಾಲಿ ಅಪ್ಪಂದಿರ ಮಕ್ಕಳು) ಹುಡುಗರು ಪೆವಿಲಿಯನ್‌ನಲ್ಲಿ ಕೋಚ್‌ಗಳು ಮತ್ತು ಮಾಜಿ ಕ್ರಿಕೆಟಿಗರೊಂದಿಗೆ ಕುಳಿತು ಹರಟೆ ಕೊಚ್ಚುತ್ತಿದ್ದರು.

ಕ್ರಿಕೆಟ್ ಯಾಕೆ ಪ್ರತಿಭಾಪೂರ್ಣ ಮತ್ತು ಸಮಾನ ಅವಕಾಶಗಳಿರುವ ಆಟವಾಗಿಲ್ಲವೆಂದು ನನಗೆ ಅರ್ಥವಾಯಿತು. ಒಂದು ಟೀಮಿನಲ್ಲಿ ಅತ್ಯುತ್ತಮ ಬೌಲರ್ ಇದ್ದಾಗ್ಯೂ ಅವನಿಗೆ ಬೌಲ್ ಮಾಡಲು ಅವಕಾಶವನ್ನೇ ನೀಡದಿದ್ದರೆ ಉಪಯೋಗವೇನು? ನೀವೊಬ್ಬ ಒಳ್ಳೆಯ ಬ್ಯಾಟ್ಸ್‌ಮನ್ ಆಗಿದ್ದರೂ ಬ್ಯಾಟಿಂಗ್ ಆರ್ಡರ್‌ನಲ್ಲಿ ನೀವು ಮೊದಲಿಗರಾಗಿ ಕಳಿಸಲ್ಪಡದಿದ್ದರೆ ನೀವು ನಿಮ್ಮ ಕೌಶಲ್ಯಗಳನ್ನು ತೋರಲಾರಿರಿ. ಇದೇ ಕಾರಣಗಳಿಗಾಗಿ ಫುಟ್‌ಬಾಲ್ ನಿಜಕ್ಕೂ ಡೆಮಾಕ್ರಾಟಿಕ್ ಆದ ಆಟ. ಓಪನ್ ಫೀಲ್ಡ್‌ನಲ್ಲಿ ಎಲ್ಲರಂತೆಯೇ ನೀವೂ ಬಾಲ್‌ನ್ನು ಆಡುವ ಅವಕಾಶವಿರುತ್ತದೆ. ಅಲ್ಲಿ ಆಟಗಾರನ ಸಾಮರ್ಥ್ಯಕ್ಕೆ ಮಾತ್ರ ಅವಕಾಶವಿರುತ್ತದೆಯೇ ಹೊರತು ಬೇರೆ ಕಾರಣಗಳಿಗಲ್ಲ.

ಮನೆಯಲ್ಲಿ ನನ್ನ ಅಪ್ಪ ಪ್ರಜಾಪ್ರಭುತ್ವ, ಪಕ್ಷಪಾತ, ಸಾಮ್ರಾಜ್ಯಶಾಹಿ, ವಸಾಹತುಶಾಹಿ ಮುಂತಾದ ರಾಜಕೀಯ ವಿಚಾರ ಕಲ್ಪನೆಗಳನ್ನು ನಮ್ಮ ತಲೆಯೊಳಗೆ ತುರುಕುತ್ತಿದ್ದರಾದಾಗ್ಯೂ ಪಕ್ಷಪಾತದ ಪೂರ್ಣ ಅರ್ಥವನ್ನು ನಾನು ತಿಳಿದುಕೊಂಡಿದ್ದು ಇದೇ ಮೊದಲು.

ನನ್ನ ಅಪ್ಪ ಮತ್ತು ಅವರ ಸ್ನೇಹಿತರಿಗೆ ಕ್ರಿಕೆಟ್ ಎಂದಿಗೂ ಇಷ್ಟವಾಗುತ್ತಿರಲಿಲ್ಲ. ನಾನದರ ಸೊಲ್ಲೆತ್ತಿದಾಗೆಲ್ಲ "ಅದೊಂದು ದರಿದ್ರದ ಇಂಗ್ಲಿಷ್‌ರ ಆಟ ಕಣಯ್ಯ" ಎಂದು ತಳ್ಳಿ ಹಾಕಿಬಿಡುತ್ತಿದ್ದರು. ಅವರು ಹೇಳುತ್ತಿರುವುದು ಸರಿ ಎಂದು ನನಗೆ ಅನ್ನಿಸಿದಾಗ್ಯೂ ಕ್ರಿಕೆಟ್ ಬಗೆಗಿನ ನನ್ನ ವ್ಯಾಮೋಹ ಉಳಿದೆಲ್ಲವನ್ನೂ ವಿಫಲಗೊಳಿಸುತ್ತಿತ್ತು. ಆದರೆ ಈಗ, ಪ್ರತಿಯೊಂದು ಪ್ರಾಕ್ಟೀಸ್ ಸೆಷನ್‌ನಲ್ಲೂ ಅದನ್ನ ಆಡುವ ಮೇಲುವರ್ಗದ ಜನರ ಕುರಿತಾಗಿ ಹೆಚ್ಚುಹೆಚ್ಚು ಜ್ಞಾನೋದಯವಾಗಲಾರಂಭಿಸಿತ್ತು.

ಕ್ರಿಕೆಟ್ ಆಟವನ್ನು ವರ್ಣಿಸಲು ನಾನು "ಕಲೋನಿಯಲ್" ಎಂಬ ಬೈಗುಳ ಪದವನ್ನು ಕಂಡುಕೊಂಡಿದ್ದೆ. ಇದಕ್ಕಿಂತ ಮಿಗಿಲಾಗಿ ಇದರಿಂದ ತಪ್ಪಿಸಿಕೊಳ್ಳಲು ನಾನು ಒಂದು ಸಬೂಬು ಹುಡುಕಿಕೊಂಡಿದ್ದೆ.

ಆಗ ನಾನು ಫುಟ್‌ಬಾಲ್‌ಗೆ ಮರಳಿದೆ; ಆದರೆ ಫುಟ್‌ಬಾಲ್ ನನ್ನಿಂದ ಬಹುದೂರ ಸರಿದಿತ್ತು. ಆಟ ಹೆಚ್ಚು ವೈಜ್ಞಾನಿಕವಾಗಿತ್ತು; ಶೀಘ್ರತೆಯನ್ನು ಪಡೆದುಕೊಂಡಿತ್ತು. ನನ್ನ ಶ್ರಮಿಕವರ್ಗದ ಸ್ನೇಹಿತರು ತಮ್ಮ ಅಪಕ್ವ ಕೌಶಲ್ಯಗಳು ಮತ್ತು [illegible]ರಿಸಲಾಗದ ದೈಹಿಕ ಸಾಮರ್ಥ್ಯಗಳೊಂದಿಗೆ ನನಗಿಂತ ಎಷ್ಟೋ ಪಾಲು ಉತ್ತಮರಾಗಿದ್ದರು. ನಾನು ಫುಟ್‌ಬಾಲ್ ಆಡಲು ಪ್ರಯತ್ನಿಸಿದಾಗ, ನಮ್ಮ ಸಿನಿಮಾಗಳಲ್ಲಿ ಮೈಕೈ ತುಂಬಿಕೊಂಡು ಥಳಥಳ ಹೊಳೆಯುವ ಹೀರೋಯಿನ್ ಒಂದು ಡಜನ್ ಕಪ್ಪನೆಯ ಸಣಕಲಾದ ಎಕ್ಸ್‌ಟ್ರಾಗಳ ನಡುವೆ ಕಾಣಿಸಿಕೊಳ್ಳುವ ದೃಶ್ಯದಂತಿರುತ್ತಿತ್ತು.


ನಾನು ಎಲ್ಲೂ ಸಲ್ಲದವನಂತಾಗಿದ್ದೆ. ನಾನು ಬಿಟ್ಟು ಬಂದಿದ್ದ ಕೇರಿಯ ಹುಡುಗರ ಲೋಕಕ್ಕೂ ಸೇರಿದವನಾಗಿರಲಿಲ್ಲ; ಕಾನ್ವೆಂಟಿನಲ್ಲಿ ನಾನು ಹಂಬಲಿಸಿದ ಲೋಕಕ್ಕೂ ಸೇರಿದವನಾಗಿರಲಿಲ್ಲ. ಆದರೆ ಈಗಲೂ ಕ್ರಿಕೆಟ್ ಆಟವಾಡುತ್ತಿರುವ ಯುವಕರ ಗುಂಪನ್ನು ಕಂಡಾಗಲೆಲ್ಲ ಬಾಲ್ ತೆಗೆದುಕೊಂಡು ಕೆಲವು ಓವರ್ [illegible] ಬೌಲ್ ಮಾಡಬೇಕೆನಿಸುತ್ತ[illegible] ಗೊತ್ತಿ[illegible] ∎

ಬಿ. ಸರೋಜಾದೇವಿಯ ಅಜ್ಞಾತ ಪ್ರೇಮಿ

ನಾಗಮಂಗಲದಲ್ಲಿ ಸರೋಜಾದೇವಿಗೊಬ್ಬ ಅಮರಪ್ರೇಮಿ ಹುಟ್ಟಿಕೊಂಡು ಥೇಟ್ ದೇವದಾಸನಂತೆಯೇ ಬದುಕುತ್ತಿದ್ದ. ನಾಗಮಂಗಲದ ನರಸಿಂಹಸ್ವಾಮಿ ದೇವಸ್ಥಾನದೆದುರು ಇರುವ ಪ್ರೈಮರಿ ಶಾಲೆಯ ಮಾಸ್ತರಾಗಿದ್ದ ಬಿ.ಎಚ್. ಹನುಮಂತಶೆಟ್ಟಿ ಆ ಕಾಲದ ಸರೋಜಾದೇವಿ ಫೋಟೋ, ಪೋಸ್ಟರ್ ಎಲ್ಲವನ್ನು ಸಂಗ್ರಹಿಸಿಕೊಂಡು "ಮುಂದಿನ ಬೇಸಿಗೆ ರಜಕ್ಕೆ ಗ್ಯಾರಂಟಿ ನಮ್ಮಿಬ್ಬರಿಗೂ ಮದುವೆ" ಎಂಬಂತೆ ತಿರುಗುತ್ತಿದ್ದ. ತಿರುಗಿ ತಿರುಗಿ ಅಜ್ಞಾತಪ್ರೇಮಿಯಾಗಿಯೇ ಹೊರಟುಹೋದ.....

ಬಿ. ಚಂದ್ರೇಗೌಡ





ನನಗೆ ಕಿವಿ ಕೇಳಿಸಲು ಶುರುವಾದಾಗ ನಮ್ಮೂರಿನ ಜನರು 'ಅಮರಶಿಲ್ಪಿ ಜಕಣಾಚಾರಿ' ಹಾಡುಗಳನ್ನು ಎಲ್ಲೆಂದರಲ್ಲಿ ಹೇಳುತ್ತಿದ್ದರು. ನನಗೆ ಕಿವಿ ಕೇಳಿಸಲು ಶುರುವಾದಾಗ ಅಂದರೆ ನನ್ನ ಕಿವಿಗೆ ಏನೂ ಆಗಿರಲಿಲ್ಲ. ಅವು ಸಹಜವಾಗಿಯೇ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದವು. ನದಿಯ ಸುಸ್ವರ ನಾದಗಳು, ಹಕ್ಕಿಪಕ್ಷಿಯ ಗಾನ ನಮ್ಮ ಕಿವಿ ಮೇಲೆ ಬಿದ್ದು ಅವು ನಮ್ಮನ್ನು ಆವರಿಸುತ್ತಿವೆ ಎಂದಾದರೆ ಕಿವಿ ಸರಿಯಾಗಿ ಕೇಳಿಸುತ್ತಿವೆ ಎಂದು ಅರ್ಥ. ಹಲವಾರು ವರ್ಷಗಳ ಕಾಲ ನಾವೊಂದು ದಾರಿಯಲ್ಲೇ ತಿರುಗಾಡಿದ್ದರೂ ಆ ದಾರಿ ಬದಿಯಲ್ಲಿನ ಅಂಗರು ಗಿಡ, ಕಾರೆಮುಳ್ಳೆ, ರೋಜಾಲು ಗಿಡ, ಅದರ ಮೇಲೆ ಕುಳಿತು ಹಾಡುವ ಬೇಲಿ ಹಕ್ಕಿ, ಇವು ಯಾವನ್ನೂ ನಾವು ನೋಡಿಲ್ಲ ಎಂದಾದರೆ ನಮಗೆ ಕಣ್ಣಿದ್ದು ಏನು ಪ್ರಯೋಜನ? ಇಂಥದನ್ನು ನೀವು ಪತ್ತೆ ಹಚ್ಚಬೇಕಾದರೆ ಪ್ರಶ್ನಿಸಿದರಾಯ್ತು. ಆ ಗಿಡ ಅಲ್ಲಿದೆಯಾ? ಈ ಮಳೆ ಇಲ್ಲಿದೆಯಾ? ಎಂದು ಕೇಳಿದಾಗ ಗೊತ್ತಾಗುತ್ತೆ ನಮ್ಮ ನಡುವಿನ ಹಲವರಿಗೆ ಕಣ್ಣು ಕಿವಿ ಇದ್ದೂ ಕೂಡ ಅವು ಸಮರ್ಪಕವಾಗಿ ತಮ್ಮ ಕೆಲಸ ನಿರ್ವಹಿಸುತ್ತಿಲ್ಲ ಎಂದು.

ಆ ಲೆಕ್ಕದಲ್ಲಿ ನಾನು ಬಾಲ್ಯದಲ್ಲೇ ಒಂದು ಅಪೂರ್ವ ಹಾಡನ್ನು ಹೊಲದ ಅವರೆ ಸಾಲಿನಲ್ಲಿ ಕುಳಿತಿದ್ದಾಗ ಕೇಳಿಸಿಕೊಂಡೆ. ನಮ್ಮೂರಿಗೆ ಐದಾರು ಮೈಲಿ ದೂರವಿದ್ದ ಗೌಡರಳ್ಳಿ ಅಯ್ಯನ ಗುಡಿಗೆ ಹೋಗಿ ಪೂಜೆ ಮಾಡಿ ಬರುತ್ತಿದ್ದ ಗಂಟೆ ಚಿಕ್ಕಣ್ಣ ಇದ್ದಕ್ಕಿದ್ದಂತೆಯೇ "ನಿಲ್ಲು ನೀ ನಿಲ್ಲು ನೀ ನೀಲವೇಣಿ, ಕಂಗಳಿನ ಕಾಂತಿಯಲಿ ಹೊಂಗನಸ ಕಾಣ್ವ ರಾಣೀ" ಎಂದು ತನ್ನ ಮಧುರ ದನಿಯಲ್ಲಿ ಹಾಡುತ್ತ ಬರುವುದನ್ನು ಕೇಳಿ ಗರಬಡಿದು ನಿಂತುಬಿಟ್ಟೆ. ನಾವಾಗಲೇ ವನ್ನಿ ತುಂಬ ಅವರೆಕಾಯಿ ಕುಯ್ದಾಗಿತ್ತು, ಆದ್ದರಿಂದ ಚಿಕ್ಕಣ್ಣನ ದನಿಗೆ ವಶೀಕರಣಗೊಂಡವನಂತೆ ಆತ ಹೋದಲ್ಲೇ ಮುಂದುವರಿದೆ. ಇನ್ನೂ ಕುಯ್ದಿಲ್ಲದ ಹೊಲ ನನ್ನುದ್ದವೇ ಬೆಳೆದಿತ್ತು.

ಕನ್ನೆಸ್ಸ ತಾಂಬ್ರದ ದಿಂದಿಗೆಯಿಂದ ತಾಳವನ್ನ ಹಾಕುತ್ತ ಹೋಗುತ್ತಿದ್ದ ಚಿಕ್ಕಣ್ಣ ತನ್ನಲ್ಲಿರುವ ಅಪೂರ್ವ ಹಾಡಿನ ಕ್ಯಾಸೆಟ್ಟನ್ನು ಪುನಃ ಪುನಃ ರಿವೈಂಡ್ ಮಾಡುತ್ತ ಹೋಗುತ್ತಿರೋದ ನನಗೂ ಹಾಡಿನ ಸಾಲು ಬಂದೇಬಿಟ್ಟವು. [illegible] ಬಳಿಯ ತಾ ಬಾಗಲಿ ಬಳುಕಲಿ [illegible] ಗಿಡದಲಿ ಪ್ರಣಯವಾದ ತುಂಬಲಿ: ಕದಗನ್ನನ ಕುದಿ [illegible] ಆ ಆ ಆ" ಎಂದವನು ಆ ಇಳಿಹೊತ್ತಿನ ಸೂರ್ಯನ ಕಡೆಗೆ ನಿಜಕ್ಕೂ ವೈಯಾರದಿಂದ ನೋಡಿದ. ತಾರುಣ್ಯ ಉಕ್ಕುತ್ತಿದ್ದ ಆ ತರುಣನ ಮುಖಕ್ಕೆ ಬಿದ್ದ ಇಳಿಹೊತ್ತಿನ ಬಿಸಿಲಿನಿಂದ ಅಮರಶಿಲ್ಪಿ ಜಕ್ಕಣ್ಣನಂತೆಯೇ ಕಂಡ. ಊರು ಸಮೀಪವಾದಂತೆ ಚಿಕ್ಕಣ್ಣನ ದನಿ ತನ್ನ ವಾಲ್ಯೂಂ ಕಡಿಮೆ ಮಾಡಿಕೊಂಡು "ಸುಂದರಿಯೇ, ಸುಂದರಿಯೆ, ಚಂದಿರನು ನಿನ್ನಂದವ ನೋಡುತ ಮರೆಯಾದನು ಮೋಡದಲಿ, ಮರೆಸಿ ಮುಖವ ನಾಚುತ ಮರಿಕೋಗಿಲೆ ನೀನು ನಿನ್ನಗಾನ ಕೇಳುತ, ಆ ಕೋಗಿಲೆ ಮುಖಾಯಿತು ನಾಚ ಮೌನ ತಾಳುತ ಬಾರೆನೀ, ಕಾಮಿನಿ ನನ್ನ ಮೋಹಿನಿ" ಎನ್ನುತ್ತಲೇ ಬೇಲಿ ಸಾಲನ್ನು ಮುಗಿಸಿ ಊರು ಪ್ರವೇಶಿಸಿದ. ಅಷ್ಟರಲ್ಲಿ ನನಗೂ ಆ ಹಾಡು ಬಾಯಿಪಾಠವಾಗಿತ್ತು.

ಪ್ರತಿ ಸೋಮವಾರ ದೇವರ ಪೂಜೆಗೆಂದು ಹೋಗುತ್ತಿದ್ದ ಚಿಕ್ಕಣ್ಣ ಇನ್ನು ರೋಮಾಂಚಕಾರಿ ಹಾಡನ್ನು ಹೇಳುತ್ತ ಬರುತ್ತಿದ್ದ. "ಏನೋ ಎಂತೋ ಜುಮ್ಮೆಂದಿತು ತನುವು, ಬೆಚ್ಚತೂ ಮನವು, ಏನೋ ಕಾಣೆನು ಎಂದೂ ಅರಿಯೆನು ಇಂಥ ಸವಿನೋವಾ ಸುಖವಾಂತ ಅನುಭಾವ" ಎಂದು ಘಂಟಸಾಲನ ದನಿಯನ್ನೇ ಅನುಕರಿಸುತ್ತ ಹಾಡುವ ಅವನ ತನ್ಮಯತೆಯಲ್ಲಿ ಅವನ ಪ್ರೇಯಸಿ ಕೇಳಿಕೊಳ್ಳುವಳೆಂಬ ಇಂಗಿತವಿತ್ತೆಂದು ಆನಂತರ ತಿಳಿಯಿತು.


ಜಕ್ಕಣ್ಣನ ಭಾಗಕ್ಕೆ ಹೇಗೆ ಮಂಜರಿಯೋ ಹಾಗೆ ಈ ಚಿಕ್ಕಣ್ಣನ ಭಾಗಕ್ಕೆ ಜಯಮ್ಮ ಇದ್ದಳು. ಆದರೆ ಅವಳಿಗೆ ಈ ಅಪೂರ್ವ ಪ್ರಣಯಗೀತೆಗಳು ಚೇಷ್ಟೆಯಂತೆ ಕಾಣುತ್ತಿದ್ದವೇ ಹೊರತು ಆ ಹಾಡು ಮತ್ತು ಹಾಡುವವನಿಗೆ ಮನಸೋಲಬೇಕೆಂಬ ಭಾವನೆ ಆ ಕೋಣನ ತಲೆಗೆ ಹೊಳೆದಂತಿರಲಿಲ್ಲ. ಅಂತೂ, ಚಿಕ್ಕಣ್ಣ ತನ್ನ ಧ್ವನಿ ಮಾಧುರ್ಯದಿಂದ ನಮ್ಮ ಗಮನ ಸೆಳೆದಿದ್ದ. ಅವನಾಡುವ ಅಪೂರ್ವ ಪ್ರಣಯಗೀತೆಗಳು 'ಅಮರಶಿಲ್ಪಿ ಜಕಣಾಚಾರಿಯ' ಚಿತ್ರದ ಹಾಡುಗಳೆಂದು ನಂತರ ನನಗೆ ಗೊತ್ತಾಯಿತು.

ನಾಗರಿಕ ಜಗತ್ತಿನಿಂದ ದೂರವಿದ್ದ ನಮ್ಮೂರಿನಲ್ಲಿ ಸಿನಿಮಾ ಕೂಡ ಸ್ವರ್ಗದ ಕನಸಿನಂತಾಗಿತ್ತು. ಆ ಲೋಕವನ್ನು ಕುರಿತು ನಮ್ಮ ಹೋಟೆಲಿಗೆ ಬರುವ ಜನ ಮಾತನಾಡುತ್ತಿದ್ದರು. ನನ್ನ ಕಟ್ಟೆಪುರಾಣ ಕಾಲಂನ ಹೋಟೆಲು ಪ್ರಾರಂಭವಾಗಿದ್ದು 1962 ನೇ ಇಸವಿಯಲ್ಲಿ. ಅಲ್ಲಿಗೆ ಬರುವ ಜನ ಅಂದಿನ ವಿದ್ಯಮಾನಗಳನ್ನು ಅಳೆದು ಸುರಿದು ಎದ್ದು ಹೋಗುತ್ತಿದ್ದರು. ಚಿಕ್ಕಹುಡುಗನಾದ ನಾನು ಅಂದು ಕೇಳಿಸಿಕೊಂಡ ಮಾತುಗಳನ್ನು ದಾಖಲಿಸುವುದಾದರೆ: ಅಮರಶಿಲ್ಪಿ ಜಕಣಾಚಾರಿ ಸಿನಿಮಾದಲ್ಲಿ ನಟಿಸಿರುವವಳು ಬಿ. ಸರೋಜಾದೇವಿ ಎಂಬ ನಟಿ; ನಮ್ಮ ಮಂಡ್ಯ ಜಿಲ್ಲೆಯವಳೇ ಆದ ಆಕೆ ಅಪೂರ್ವ ಸುಂದರಿ; ನಮ್ಮೂರಿಗೆ ಕೂಗಳತೆಯಲ್ಲಿರುವ ಬಂಡಿಗನವಿಲೆಯವರಾದ ಬಿ.ಎಸ್. ರಂಗಾ ಆ ಸಿನಿಮಾ ತೆಗೆದಿದ್ದಾರಂತೆ; ಸರೋಜಾದೇವಿಯ ರೂಪ, ನಟನೆಯನ್ನು ನೋಡಿ ಮೆಚ್ಚಿಕೊಳ್ಳದವರೇ ಇಲ್ಲ; ನಮ್ಮ ಮದ್ದೂರಿನ ಮಲ್ಲಯ್ಯನ ಹುಡುಗ ಕೃಷ್ಣ ಬಹಳವಾಗಿ ಮೆಚ್ಚಿಕೊಂಡಿರುವುದರಿಂದ ಅಂತಹ ಸುಂದರನಿಗೆ ಜೋಡಿಯಾಗತಕ್ಕವಳೆಂದರೆ ಸುರಸುಂದರಿಯಾದ ಬಿ. ಸರೋಜಾದೇವಿಯೇ ಹೊರತು ಇನ್ನಾರು ಈ ಭೂಮಂಡಲದಲ್ಲಿಲ್ಲ.

ಅವರ ಲೆಕ್ಕದಲ್ಲಿ ಆಗ ಇಡೀ ಮಂಡ್ಯ ಜಿಲ್ಲೆಯಲ್ಲಿ ಕೃಷ್ಣನಿಗಾಗಿ ಹೆಣ್ಣೇ ಇರಲಿಲ್ಲ. ಎಲ್ಲಾ ಹುಡುಗಿಯರು ಅಂಗದಲ್ಲೇ ಗೊಣ್ಣೆ ವರೆಸುತ್ತ, ತಲೆಗೆ ಹೇನತ್ತಿಸಿಕೊಂಡು, ರವಿಕೆ ನೆನೆಯುವಂತೆ ಕೈಯಗ್ಗೆ ಮೆತ್ತುಕೊಂಡು, ಚೆಂಡೂ ಮುದಿದು ರೊಟ್ಟಿ ಕದಿಯುತ್ತ ನಿಂತಿದ್ದವಂತೆ. ಈ ಸುರಸುಂದರಿ ಸರೋಜಾದೇವಿ ಮಾತ್ರ ಕೃಷ್ಣನಿಗೆ ಲಾಯಕ್ಕಾದ ಹೆಣ್ಣೆಂದು ತಾವೇ ಈಗ ಮಾತು ಮುಗಿಸಿಕೊಂಡು ಬರಲು ಹೊರಟವರಂತೆ ಮಾತನಾಡುತ್ತಿದ್ದರು.

ಇವರ ಬಾಯಿಗೆ ಸುಮಾರು ದಿನ ಕವಳದಂತೆ ಸಿಕ್ಕಿದ್ದ ಆ ಮದುವೆ ಸುದ್ದಿ ಸುಳ್ಳಾಯ್ತು, ಕೃಷ್ಣ ಇನ್ನು ಹೆಚ್ಚು ಓದಬೇಕೆಂದು ಸರೋಜಾದೇವಿಯಿಂದ ಹಣ ಪಡೆದು ಅಮೆರಿಕಕ್ಕೆ ಹೋದವನು, ಮನಸ್ಸು ಬದಲಿಸಿದನಂತೆ ಎಂಬ ವಾರ್ತೆ ಇವರಿಗೆ ಯಾರು ತಿಳಿಸಿದರೋ ಏನೋ, ಕೃಷ್ಣನ ನಂಬಿಕೆ ದ್ರೋಹವನ್ನ ಚರ್ಚಿಸುತ್ತಾ ಮಲ್ಲಯ್ಯನನ್ನು ಮನಸೋ ಇಚ್ಛೆ ಬೈದರು. ಈ ಮದುವೆ ಮುರಿದು ಬಿದ್ದ ಕಾರಣಕ್ಕೆ ಮುನಿಸಿಕೊಂಡಂತಾದ ಸರೋಜಾದೇವಿ ಕಾವೇರಿ ನದಿಯಂತೆ ತಮಿಳುನಾಡಿಗೆ ಹರಿದುಹೋದಳಂತೆ.

ಸರೋಜಾದೇವಿಯ ಪ್ರತಿಭೆ ಮತ್ತು ರೂಪವನ್ನು ನೋಡಿದ ತಮಿಳರು, ಅವಳನ್ನು ಕರ್ನಾಟಕದ ಕಡೆ ಬಿಡಲೇಯಿಲ್ಲ, ಎಂ.ಜಿ.ಆರ್, ಜೆಮಿನಿ ಮತ್ತು ಶಿವಾಜಿಯೊಂದಿಗಿನ ಆಕೆಯ ಚಿತ್ರಗಳು ಮೇಲಿಂದ ಮೇಲೆ ಬರತೊಡಗಿದವು. ತೆಲುಗಿನಲ್ಲೂ ಕೂಡ ಯಥೇಚ್ಛ ಅವಕಾಶ ದೊರೆತವು. ಅಷ್ಟರಲ್ಲಾಗಲೇ ಪದ್ಮಶ್ರೀ ಪಡೆದಿದ್ದ ಸರೋಜಾದೇವಿಗೆ ಕನ್ನಡದಲ್ಲಿ ಸರಿಗಟ್ಟುವ ನಟ ಡಾ. ರಾಜ್ ಮಾತ್ರ ಎಂಬ ಮನೋಭಾವ ಚಿತ್ರ ನಿರ್ಮಾಪಕರಿಗಿದ್ದರಿಂದ ಅಣ್ಣನವರೊಂದಿಗೆ ಕೇವಲ ಬೆರಳೆಣಿಕೆಯಷ್ಟು ಚಿತ್ರದಲ್ಲಿ ಮಾತ್ರ ಅವಕಾಶ ಸಿಕ್ಕಿತು.



ಆದರಲ್ಲೂ ಅಣ್ಣನವರನ್ನ ಮೀರಿಸಿ ಬುದ್ಧಿವಂತೆಯಾಗಿ, ಸಾಹಸಿಯಾಗಿ ಮತ್ತು ಮಹೋನ್ನತ ಪಾತ್ರವಾಗಿ ಮೂಡಿಬರುವ ಚಿತ್ರಗಳು ಮಾತ್ರ ಸರೋಜಾದೇವಿಗೆ ದಕ್ಕಿವೆ. 'ಮಲ್ಲಮ್ಮನ ಪವಾಡ'ದಲ್ಲಿ ಮುಗ್ಧನನ್ನು ತಿದ್ದಿ ತೀಡಿ ಮಹಾ ವ್ಯಕ್ತಿಯಾಗಿ ನಿರೂಪಿಸುವ ಪಾತ್ರ; 'ಕಿತ್ತೂರು ಚೆನ್ನಮ್ಮ'ದಲ್ಲಿ ಅರಸನ ನಿಧನಾನಂತರ ಸಾಮ್ರಾಜ್ಯದ ಹೊಣೆ ಹೊರುವ ಪಾತ್ರ; 'ಬಬ್ರುವಾಹನ'ದಲ್ಲಿ ಹೆಂಡತಿ ಮತ್ತು ತಾಯಿ; 'ಭಾಗ್ಯವಂತರು' ಚಿತ್ರದಲ್ಲಿ ಶಿಸ್ತಿನ, ಸ್ವಾಭಿಮಾನದ ಮತ್ತು ಹಠಮಾರಿ ಗಂಡನೊಡನೆ ಮಕ್ಕಳನ್ನು ಸಂಭಾಳಿಸುತ್ತ ಸಾಯುವ ಪಾತ್ರ... ಹೀಗೆ ಕನ್ನಡಿಗರು ಸರೋಜಾದೇವಿಯನ್ನು ಅಣ್ಣನಷ್ಟೇ ಉನ್ನತ ಸ್ಥಾನದಲ್ಲಿ ಗೌರವಿಸಿರುವುದು ಗೊತ್ತಾಗುತ್ತದೆ.

ಆದರೆ ನಿಜಕ್ಕೂ ಸರೋಜಾದೇವಿಯ ತಾರುಣ್ಯದ ಸೌಂದರ್ಯ ಸವಿದವರು ತಮಿಳರು. ಆಕೆಯ ಸೌಂದರ್ಯಕ್ಕೆ ಒಪ್ಪುವಂತಹ ವೇಷಗಳನ್ನೆಲ್ಲಾ ತೊಡಿಸಿ, ಪ್ರಣಯಗೀತೆಗಳನ್ನು ಸೃಷ್ಟಿಸಿ ಎಂ.ಜಿ.ಆರ್., ಶಿವಾಜಿ, ಜೆಮಿನಿ ಜೊತೆ ಕುಣಿಸಿ ಹೀರಿ ಬಿಸಾಡಿದರು. ಆದ್ದರಿಂದ ನಮಗೆ ಸಿಕ್ಕಿದ್ದು ಮಧ್ಯವಯಸ್ಸಿನ ನಟಿ. ಆದರೂ ಕನ್ನಡಿಗರಿಗೆ ಸರೋಜಾದೇವಿ ಸೌಂದರ್ಯ ನೋಡಲು ಸಿಕ್ಕಿದ್ದ ಚಿತ್ರವೆಂದರೆ 'ಅಮರಶಿಲ್ಪಿ ಜಕಣಾಚಾರಿ' ಮಾತ್ರ. ಆ ಚಿತ್ರದ ಆಕೆಯ ಫೋಟೋ ಮತ್ತು ಕ್ಯಾಲೆಂಡರ್‌ಗಳು ಸಲೂನ್‌ಗಳಲ್ಲಿ ಬಹಳ ವರ್ಷ ನೇತಾಡುತ್ತಿದ್ದವು. ಕೆಲವು ತಮಿಳು ಕ್ಷೌರಿಕರು ಕಟ್ಟು ಹಾಕಿಸಿ ಇಟ್ಟುಕೊಂಡಿದ್ದರು. ಅಂದಿನ ಸರೋಜಾದೇವಿ ನೋಡುತ್ತಿದ್ದರೆ, ಇಂದಿನ ಐಶ್ವರ್ಯ ರೈ ಮಂಕಾಗಿ ಕಾಣುತ್ತಾಳೆ.

ಆಗ ನಮ್ಮ ಪ್ರಾಂತ್ಯದಲ್ಲಿ ಸರೋಜಾದೇವಿಗೊಬ್ಬ ಅಮರಪ್ರೇಮಿ ಹುಟ್ಟಿಕೊಂಡು ಥೇಟ್ ದೇವದಾಸನಂತೆಯೇ ಬದುಕುತ್ತಿದ್ದ. ನಾಗಮಂಗಲದ ನರಸಿಂಹಸ್ವಾಮಿ ದೇವಸ್ಥಾನದೆದುರು ಇರುವ ಪ್ರೈಮರಿ ಶಾಲೆಯ ಮಾಸ್ತರಾಗಿದ್ದ ಬಿ.ಎಚ್. ಹನುಮಂತಶೆಟ್ಟಿ ಆ ಕಾಲದ ಸರೋಜಾದೇವಿ ಫೋಟೋ, ಪೋಸ್ಟರ್ ಎಲ್ಲವನ್ನು ಸಂಗ್ರಹಿಸಿಕೊಂಡು "ಮುಂದಿನ ಬೇಸಿಗೆ ರಜಕ್ಕೆ ಗ್ಯಾರಂಟಿ ನಮ್ಮಿಬ್ಬರಿಗೂ ಮದುವೆ" ಎಂಬಂತೆ ತಿರುಗುತ್ತಿದ್ದ.

ಆಗ ಎಸ್.ಎಂ. ಕೃಷ್ಣ ಸರೋಜಾದೇವಿಯನ್ನು ಮದುವೆಯಾಗುತ್ತಾನೆ ಎಂಬ ರೂಮರ್‌ಗೆ ಕೆರಳಿದ್ದ ಹನುಮಂತು "ಅದ್ಯಂಗೆ ಸಾಧ್ಯ! ಇಲ್ಲಿ ನಾನಿಲ್ಲವೆ?" ಎಂದು ಗಂಭೀರವಾಗಿಯೇ ಮರುಪ್ರಶ್ನೆ ಹಾಕಿದ್ದ. ಜನ ಗೇಲಿ ಮಾಡಿಕೊಂಡು ನಗುತ್ತಿದ್ದರು. ಒಂದು ವೇಳೆ ಎಸ್ಸೆಂ ಕೃಷ್ಣರೊಂದಿಗೆ ಸರೋಜಾದೇವಿ ಮದುವೆ ನಿಜವೇ ಆದರೆ, ಹೆಣ್ಣಿನ ಕಡೆಯವರಿಗೆ ಈ ಎಸ್ಸೆಂ ಕೃಷ್ಣ ಕುಡುಕ, ಜೂಜುಕೋರ, ಲಫಂಗ, ಜಾಸ್ತಿ ಮಾತನಾಡದ ಮಂಕ ಎಂದು ಜರಿದು ಪತ್ರ ಬರೆದು ಮದುವೆ ನಿಲ್ಲಿಸಿಬಿಡುವ ಹಂತಕ್ಕೂ ಹನುಮಂತು ತಯಾರಾಗಿದ್ದರು. ಆದರೆ ಮದುವೆ ನಡೆಯಲಿಲ್ಲ, ಸರೋಜಾದೇವಿ ಮದ್ರಾಸಿನಲ್ಲಿ ಬಿಜಿಯಾದರು.

ಮದುವೆಯಾಗದ ನಟಿಯನ್ನು ಪ್ರೀತಿಸಲು ಎಲ್ಲರಿಗೂ ಹಕ್ಕಿರುವಂತೆ ಹನುಮಂತನ ಪ್ರೀತಿ ನಿರಾತಂಕವಾಗಿ ಹರಿಯತೊಡಗಿತು. ಎಷ್ಟೆಂದರೆ ಸರೋಜಾದೇವಿ ಚಿತ್ರ ಬಿಡುಗಡೆಯಾದರೆ ಅದರ ಫೋಟೋ ಸಂಗ್ರಹಿಸುವುದು, ಆಕೆ ಎಂಜಿಆರ್, ಎನ್‌ಟಿಆರ್, ಶಿವಾಜಿ ಜೊತೆಗಿದ್ದರೆ ನಿರ್ದಾಕ್ಷಿಣ್ಯವಾಗಿ ಅವರ ತಲೆ ತೆಗೆದು ತನ್ನ ಶಿರಚ್ಛೇದನದ ಫೋಟೋ ಅಲ್ಲಿಗಂಟಿಸಿಕೊಂಡು ಆರಾಧಿಸುವುದು, ಒಂದಲ್ಲಾ ಒಂದು ದಿನ ನಮ್ಮಿಬ್ಬರ ಮದುವೆ ನಡೆದೇ ನಡೆಯುತ್ತದೆಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುವುದು.... ಇಂತಹ ಕನಸಿನ ಆಗಸದಲ್ಲಿ ವಿಹರಿಸುತ್ತಿದ್ದ ಹನುಮಂತು ಕೆಳಗಿಳಿಯಲೇ ಇಲ್ಲ.

ಆತ ಶಾಲಾ ಮಾಸ್ತರನಾದ್ದರಿಂದ ಪಾಠ ಪ್ರವಚನಗಳಲ್ಲಿ ಹೆಣ್ಣಿನ ಪ್ರಸ್ತಾಪ ಬಂತೆಂದರೆ ಕೂಡಲೇ ಸರೋಜಾದೇವಿ ನೆನಪಿಗೆ ಬಂದುಬಿಡುತ್ತಿದ್ದರು. "ಆಹಾ ನಿಜವಾಗಲೂ ಹೆಣ್ಣು ಅಂದ್ರೆ ಹಾಗಿರಬೇಕು. ಆಕೆಯ ಧೈರ್ಯ, ಸಾಹಸ, ಪ್ರಣಯ" ಎಂದು ಬಿ. ಸರೋಜಾದೇವಿ ಮತ್ತು ಕಿತ್ತೂರು ಚೆನ್ನಮ್ಮನನ್ನು ಮಿಶ್ರ ಮಾಡಿ ಹೇಳುತ್ತಿದ್ದರು. ಆದರೂ ಈ ಪ್ರಮಾದವನ್ನು ಮುಂದುವರಿಸಿ "ಆಕೆ ನಿಜಕ್ಕೂ ಕಿತ್ತೂರು ಚೆನ್ನಮ್ಮಾಜಿ, ತಾನು ಮಲ್ಲಸರ್ಜನ" ಎಂದು ಹೇಳುತ್ತಿರಲಿಲ್ಲ.

ಮಕ್ಕಳಿಗೆ ಹಾಡು ಹೇಳಲು ಒತ್ತಾಯಿಸಿ, ಅವರೇನಾದರೂ ಸರೋಜಾದೇವಿ ನಟಿಸಿದ ಸಿನಿಮಾ ಹಾಡು ಹೇಳಿದರೆ ಮುಗಿದೇಹೋಯ್ತು. ಆ ಮಕ್ಕಳಿಗೆ ದುಡ್ಡು, ಪುಸ್ತಕ, ಎಕ್ಸೈಜ್, ಎಲ್ಲವನ್ನು ಕೊಡಿಸಿ ಇನ್ನೂ ಚೆನ್ನಾಗಿ ಹೇಳಲು ಪ್ರೋತ್ಸಾಹಿಸುತ್ತಿದ್ದರು. ಇದನ್ನು ಮನಗಂಡ ಮಕ್ಕಳು "ಚೆಲುವಾಂತ ಚೆನ್ನಿಗನೆ ನಲಿದಾಡು ಬಾ" ಎಂದು ಹೇಳಿದರೆ ಆಗ ನಿಜಕ್ಕೂ ಹನುಮಂತನ ಮುಖ ಶ್ರೀರಾಮನ ಮುಖದಂತಾಗುತ್ತಿತ್ತು.

"ತನುಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು ಮನಕರಗದವರಲ್ಲಿ ಗಂಧಾಕ್ಷವನೊಲ್ಲೆಯ್ಯಾ ನೀನು" ಎಂಬ ಹಾಡಿನಲ್ಲಂತೂ, ಹನುಮಂತು ರಾಜಕುಮಾರ್ ತರ ನಕ್ಕು ಮಲ್ಲಸರ್ಜನನಂತಾಗುತ್ತಿದ್ದರು. ಹನುಮಂತುವಿಗೆ ಹೀಗೆ ಸರೋಜಾದೇವಿ ಹುಚ್ಚು ಹಿಡಿದಿರುವುದು ಇನ್ನಿತರ ಮೇಷ್ಟ್ರಗಳಾದ ಶೇಷಾದ್ರಿ, ವರದಯ್ಯ, ರಾಹುಲಸ್ವಾಮಿ ಮತ್ತು ಕೆಂಪೇಗೌಡ ಎಂಬುವರಿಗೆ ಗೊತ್ತಾಗಿ ಒಂದಿಷ್ಟು ಆಟ ಆಡಿಸಲು ತಯಾರಾದರು.

ಮಂಡ್ಯಕ್ಕೋ, ಬೆಂಗಳೂರಿಗೋ ಹೋಗಿ ಬಂದವರಂತೆ ಮಾತನಾಡುತ್ತ "ನೋಡೊ ಹನುಮಂತ, ಸಿನಿಮಾ ಶೂಟಿಂಗ್ ನೋಡಕ್ಕೋಗಿದ್ವಿ. ಅಲ್ಲಿ ಸರೋಜಾದೇವಿ ಸಿಕ್ಕಿದ್ರು. ನಿನ್ನ ವಿಷಯ ಹೇಳಿದ್ವೊ, ನಿನ್ನನ್ನ ಕೇಳಿದ್ರು ಕಣಯ್ಯ" ಎಂದು ಯಾಮಾರಿಸಿ ಬಿಡುತ್ತಿದ್ದರು. ಅವರ ಆ ದಿನದ ಊಟ, ತಿಂಡಿ, ಸಿಗರೇಟ್ ಖರ್ಚನ್ನೆಲ್ಲಾ ನೋಡಿಕೊಂಡ ಹನುಮಂತ ಪದೇಪದೇ ಅವರು ಸರೋಜಾದೇವಿಯನ್ನು ಭೇಟಿಯಾದ ವಿಷಯವನ್ನೇ ಕೇಳುತ್ತಿದ್ದರು.

...ನೆ ಋಟಿ ಹಿಡಿದವರಂತೂ ತಿನ್ನುವಂತಾದರೆ ಸಾಕು. ...ಮಂತು ಸಂಧಿಸಿ, ಸರೋಜಾದೇವಿಯ ಶೂಟಿಂಗ್ ...ದಿ ಬಂದ್ರೋ ಎಂದು ಹೇಳಿ ಆತನನ್ನು ಸುಲಿದು ...ಂಡತಗಿದರು. ಹನುಮಂತು ಎಂತಹ ಗಾಢ ಪ್ರೇಮಿ ...ನೆ. ಸಹೋದ್ಯೋಗಿಗಳ ಇಂತಹ ಮಾತಿನ ಬಗ್ಗೆ ...ಊ ಸಂಶಯಗೊಳ್ಳಲಿಲ್ಲ.

...ದ್ದರಿಂದ ಸಹೋದ್ಯೋಗಿಗಳು ಮತ್ತೂ ಮುಂದು ...ರು ಸರೋಜಾದೇವಿಯಂತೆಯೇ ಪತ್ರ ಬರೆದು, ...ಯ ಕೇಳತೊಡಗಿದರು. ಅಂದರೆ "ಹನುಮಂತು ...ಿ. ನಿಮ್ಮಂಥವರ ಪ್ರೀತಿ ಅಭಿಮಾನವೇ ನಮಗೆ ...ಕ್ಷೆ. ನೀವು ನನ್ನ ಬಗ್ಗೆ ಇಟ್ಟ ಪ್ರೀತಿಗೆ ಧನ್ಯವಾದಗಳು. ...ಬೆಂಗಳೂರಿಗೆ ಬರಲಾಗುತ್ತಿಲ್ಲ. ನನ್ನ ಪರಿಚಿತರೊಬ್ಬರು ...ದರೆಯಲ್ಲಿದ್ದಾರೆ. ಅವರಿಗೊಂದಿಷ್ಟು ಸಹಾಯ ಮಾಡಿ" ...ಿ ಪತ್ರ ಬರೆದು ಮೆಜೆಸ್ಟಿಕ್‌ನ ಯಾವುದೋ ಅಂಗಡಿ ...ನಾ ಹೋಟೆಲ್ ಅಡ್ರೆಸ್ ಕೊಡುವುದು, ಹನುಮಂತು ...ಮಿಯಾರ್ಡರ್ ಮಾಡುವುದು, ಬೆಂಗಳೂರಲ್ಲಿ ಓದುತ್ತಿರುವ ...ವುದೋ ಬಡ ಹುಡುಗರಿಗೆ ಸರೋಜಾದೇವಿ ಹೆಸರಲ್ಲಿ ...ದ ಹಣ ಸಂದಾಯವಾಗುವುದು.... ಇದೆಲ್ಲ ...ಸುತೊಡಗಿತು. ಆದರೆ ಹಣ ದುರುಪಯೋಗ ...ುತ್ತಿರಲಿಲ್ಲ. ಏಕೆಂದರೆ ಅದು ಗಾಢಪ್ರೇಮಿಯ ...ರಿನ ಹಣ ಎಂಬುದು ಪತ್ರ ಬರೆದವರಿಗೂ ...ತ್ತಿರುತ್ತಿತ್ತು.

...ಹನುಮಂತು ಸಾಕ್ಷಾತ್ ಹನುಮಂತನೇ. ಏಕೆಂದರೆ ...ಗೆ ಹಿಂದೆಮುಂದೆ ಯಾರೂ ಇರಲಿಲ್ಲ. ಹನುಮಂತ ...ಮನನ್ನು ಎದೆಯಲ್ಲಿಟ್ಟುಕೊಂಡು ಧೈರ್ಯದಿಂದ ...ದಂತೆ, ಈ ಹನುಮ ದೇವಿಯನ್ನು ತನ್ನೆದೆಯಲ್ಲಿ ...ಸ್ಥಾಪಿಸಿಕೊಂಡು ಮದುವೆ, ಮುಂಜಿ, ಯಾವುದಕ್ಕೂ ...ಕೆಡಿಸಿಕೊಳ್ಳದೆ ಆರಾಮವಾಗಿದ್ದರು. ಇತರ ಸ್ಕೂಲ್ ...ಕರ್ ಗೇಲಿ ಮಾಡಿದರೂ ಕೂಡ ಅದನ್ನು ...ೀರವಾಗಿಯೇ ತೆಗೆದುಕೊಂಡು ತಮ್ಮ ಕೆಲಸ ...ಮುಂದುವರಿಸುವವರಾಗಿದ್ದರು.

ದಕ್ಷಿಣ ಭಾರತದ ಮಹಾನ್ ಕಲಾವಿದೆಯೊಬ್ಬಳನ್ನು ...ಡಿಯುವ ಕನಸಿನಿಂದ ಕಾಲ ಹಾಕುತ್ತಿದ್ದ ...ಮಂತುವಿಗೆ, ತಾನೂ ಕೂಡ ಅದಕ್ಕೆ ತಕ್ಕಂತಹ ...ಂತಿರಬೇಕು ಎಂಬುದು ಯಾವಾಗ ಮನಸ್ಸಿನಲ್ಲಿ ...ಡಿತೋ ಏನೋ. ಈ ಜಗತ್ತಿನ ಮಹಾನ್ ಕಲಾವಿದ ... ಚಾಪ್ಲಿನ್ ಡ್ರೆಸ್‌ನಿಂದ ಕಂಗೊಳಿಸತೊಡಗಿದರು. ...ೇ ವ್ಯತ್ಯಾಸವೆಂದರೆ ಚಾಪ್ಲಿನ್ ಕೈಲಿ ಕೋಲಿದ್ದರೆ, ...ಮಂತು ಕೈಲಿ ಛತ್ರಿ ಇತ್ತು. ಈ ಬದಲಾವಣೆಯನ್ನು ...ತಿಸಿದ ಸಹೋದ್ಯೋಗಿಗಳು ಗಹಗಹಿಸಿ ನಕ್ಕರು. ...ಮಂತು ಅವರನ್ನು ಕ್ಷಮಿಸಿದರು. ಏಕೆಂದರೆ ದೇವಿಯ ...ಧನೆಯ ಅಮಲಿನಲ್ಲಿದ್ದ ಹನುಮಂತು ತನ್ನ ಸುತ್ತಲ ... ಜಗತ್ತನ್ನು ಕ್ಷಮಿಸುವವರಾಗಿದ್ದರು.

...ಜೀವನಕ್ಕೇನೂ ತೊಂದರೆಯಿರಲಿಲ್ಲ. ಪ್ರತಿ ತಿಂಗಳು ...ಳ ಬರುತ್ತಿತ್ತು. ಒಂಟಿ ಸಂಸಾರ ಹೇಗೋ ನಡೆಯುತ್ತಿತ್ತು. ...ಸುತ್ತಲವರೂ ಕಿತ್ತು ತಿನ್ನುತ್ತಿದ್ದರು. ಆದರೂ ಒಮ್ಮೆ ... ಸರೋಜಾದೇವಿಯನ್ನು ಹೋಗಿ ಭೇಟಿ ಮಾಡಿ ...ಾನಾಡಿಸಬೇಕು ಅನ್ನಿಸಲಿಲ್ಲ ಅವರಿಗೆ. ಬಹುಶಃ ಆ ...ವನ್ನು ಮೀರಿದ್ದರೋ ಏನೋ. ಅಥವಾ ತನ್ನ ಪ್ರೇಮ ...ಾಜ್ಯದ ಪ್ರೇಯಸಿಯನ್ನು ಭೇಟಿ ಮಾಡಿ ತನ್ನ ಕನಸನ್ನು ...ಷ್ಟ ಮಾಡಿಕೊಳ್ಳಲು ತಯಾರಿರಲಿಲ್ಲವೋ ಅಥವಾ ...ದ ಮದ್ರಾಸ್‌ಗೆ ಹೋಗುವುದು ಸಾಮಾನ್ಯವೇ ... ಭಾವಿಸಿದರೋ ಏನೋ. ಈ ಕಾರಣಕ್ಕೆ ಸುಳ್ಳು ...ವ ಜನರನ್ನೇ ನಂಬಿ ಕಾಲ ಹಾಕಿದರು.

...ಾಲ ಸರಿಯಿತು. ಈ ನಮ್ಮ ನಾಗಮಂಗಲದ ... ಮಾಸ್ತರು ಹನುಮಂತುನನ್ನು ಪ್ರೀತಿಸದಿದ್ದರೂ ...ನಿಯರ್ ಹರ್ಷ ಸರೋಜಾದೇವಿಯ ಕೈ ಹಿಡಿದರು. ...ಮಂತು ಭಗ್ನಪ್ರೇಮಿಯಾದರು. ಜಗತ್ತು ನಮ್ಮ ...ಮುಖವನ್ನಷ್ಟೇ ನೋಡುತ್ತದೆ, ಅಳುಮುಖ ಯಾರಿಗೂ ...ಗುವುದಿಲ್ಲ. ಹನುಮಂತು ಕೂಡ ತನ್ನ ಭಗ್ನಪ್ರೇಮವನ್ನು ...ರಲ್ಲೂ ಹೇಳಿಕೊಂಡವರಲ್ಲ. ಆದರೂ ಸದಾ ಅವರ ...ನುಸನ್ನ ಮುಖ ನೋಡಿದ ಸಹೋದ್ಯೋಗಿಗಳು ...ಹನುಮಂತ, ಆ ರಾಮಾಯಣದ ಹನುಮಂತನಂಗೇ ...ಕೊಂಡಳ್ಳೊ, ಆ ಎಸ್ಸೆಂ ಕೃಷ್ಣ ನೋಡು, ಯಾವುದೋ ...ನಾಡ ಹುಡುಗಿ ಮದಿವಾಗಿ ಎಷ್ಟು ಆರಾಮಾಗ್ಯವುನೆ. ... ಆಗೋ ಆತ್ಗೆ" ಎಂದು ಆಡಿಕೊಂಡರು. ...ಮಂತು ವಿಷಾದವಾಗಿ ನಕ್ಕು ಸುಮ್ಮನಾಗುತ್ತಿದ್ದ. ...ಯು ನಂತರ ಬಹಳ ದಿನ ಇರಲಾರದ ಹನುಮಂತು ...ಪ್ರೇಮಿಯಾಗಿಯೇ ಹೊರಟುಹೋದರು.

...ಷ್ಟು ಪಡುವಿಸ ಈ ದೇವದಾಸನ ಪವಿತ್ರ ಪ್ರೇಮ ... ಸಹೋದ್ಯೋಗಿಗಳಿಗಲ್ಲದೆ ಉಳಿದವರಿಗೆ ...ಲಿಲ್ಲ. ಸರೋಜಾದೇವಿಯವರಿಗಂತೂ ತಿಳಿಯಲೇ ... ತಿಳಿದಿದ್ದರೆ ದೊಡ್ಡದಾಗಿ ನಕ್ಕು ಸುಮ್ಮನಾಗು ...ರೇನೋ!

ಟಿವಿ ರೋಗ ನಿವಾರಣೆಗೆ ಕೆಲವು ಸೂತ್ರಗಳು



ಎಚ್.ಎಲ್. ಕೇಶವಮೂರ್ತಿ



ಬಹುಪಾಲು ಜನರಿಗೆ ಟಿವಿ ರೋಗ ಬಡಿದಿದೆ. ಜೀವಿತ ಅವಧಿಯಲ್ಲಿ ಒಮ್ಮೆಯಾದರೂ ಟಿವಿಯಲ್ಲಿ ಕಾಣಿಸಿಕೊಂಡರೆ ತಮ್ಮ ಜೀವನ ಸಾರ್ಥಕ ಎಂಬ ಭಾವನೆ ಇದೆ. ಅದರಲ್ಲಿ ಕಾಣಿಸಿಕೊಳ್ಳಲು ಹಪ ಹಪಿಸುತ್ತಾರೆ. ಎಲ್ಲ ರೀತಿಯ ಮಂಗಾಟಗಳಿಗೂ ಕೆಲವರು ಸಿದ್ಧರಿರುತ್ತಾರೆ. ಆದರೆ ಸಮಸ್ಯೆ ಏನು ಅಂದರೆ ಅವರು ಪ್ರತಿಷ್ಠಿತರಲ್ಲ! ಸಮಾಜದಲ್ಲಿ ಗಣ್ಯರು ಎಂದು ಮಾಧ್ಯಮದವರು ಭಾವಿಸಿರುವ ವ್ಯಕ್ತಿಗಳ, ಅವರ ಮನೆಯವರ ಕಷ್ಟ ಸುಖ, ನೋವು ನಲಿವು ಎಲ್ಲವೂ ಸುದ್ದಿ ಆಗುತ್ತವೆ. ಕ್ರಿಕೆಟ್ ಆಟಗಾರರು ತಮ್ಮ ಹೆಂಡಂದಿರನ್ನು ವಿದೇಶಕ್ಕೆ ಕರೆದುಕೊಂಡು ಹೋಗಲು ಬಿಸಿಸಿಐ ಅನುಮತಿ ನಿರಾಕರಿಸಿದ್ದು, ವಿದೇಶದಲ್ಲಿ ಹಣ ಮಾಡಲು ಹೋಗಿ ಅವಮಾನಕ್ಕೆ ಈಡಾದ ಮಾಡೆಲ್, ಸಿನಿಮಾ ನಾಯಕಿ ಯಾ ನಾಯಕ ಯಾರನ್ನೋ ಮದುವೆ ಆಗುವುದು ಇಂತಹವುಗಳೆಲ್ಲ ರೋಚಕ ಘಟನೆಗಳಾಗಿ ಮಾಧ್ಯಮದವರಿಗೆ ತೋರುತ್ತವೆ. ಇಂತಹವುಗಳನ್ನೇ ಮೆಲುಕು ಹಾಕುವ ಪ್ರಜಾಕೋಟಿಯೂ ಇರುತ್ತದೆ. ಇವು ಯಾವೂ ಸುದ್ದಿಯಾಗುವ ಯೋಗ್ಯತೆಯನ್ನು ಪಡೆದಿಲ್ಲ ಎಂದು ಅನ್ನಿಸಬಹುದು. ಆದರೆ ಇವು ಪ್ರತಿಷ್ಠರಿಗೆ ಸಂಬಂಧಿಸಿದವು. ಆದುದರಿಂದ ಅವು ಪರಿಣಾಮಕಾರಿ ಸುದ್ದಿ ಆಗುತ್ತವೆ. ಸಾಮಾನ್ಯ ಜನರ ಜೀವನದಲ್ಲಿ ಅಚ್ಚರಿ ಮೂಡಿಸುವ ಘಟನೆಗಳು ಸಂಭವಿಸಿರುತ್ತವೆ. ಆದರೆ ಅವು ಸುದ್ದಿ ಆಗುವುದೇ ಇಲ್ಲ! ಯಾಕೆಂದರೆ ಅವರು ಪ್ರತಿಷ್ಠಿತರಲ್ಲ! ಹೀಗೆ ಸುದ್ದಿ ಮಾಡಲಾಗದವರು ಟಿವಿಯಲ್ಲಿ ಕಾಣಿಸಿಕೊಳ್ಳುವುದು ಹೇಗೆ ಎಂಬುದನ್ನು ಕುರಿತು ಕೆಲವು ಸುಲಭೋಪಾಯಗಳನ್ನು ಇಲ್ಲಿ ತಿಳಿಸಲಾಗಿದೆ.

ಪ್ರತಿನಿತ್ಯ ನೂರೆಂಟು ಪತ್ರಿಕಾಗೋಷ್ಠಿಗಳು ನಡೆಯುತ್ತಿರುತ್ತವೆ. ಅಂತಹ ಗೋಷ್ಠಿಗಳಿಗೆ ನೀವು ಹಾಜರಾಗಿ. ಮೊದಲ ಸಾಲಿನ ಕುರ್ಚಿಗಳಲ್ಲಿ ನಿಮಗೆ ಸ್ಥಳ ದೊರೆಯುವುದಿಲ್ಲ ಎಂಬುದು ಖಚಿತ. ಆದುದರಿಂದ ಯಾವ ಪತ್ರಕರ್ತ ಪ್ರಭಾವಶಾಲಿ ಎಂಬುದನ್ನು ಗೊತ್ತು ಮಾಡಿರಿ. ಅವರು ಪ್ರಶ್ನೆ ಕೇಳುವುದು, ಗೋಷ್ಠಿ ಕರೆದಿರುವವರು ಉತ್ತರ ನೀಡುವುದು ಇದ್ದೇ ಇರುತ್ತೆ, ನೀವು ಹಿಂದಿನ ಸಾಲಿನಲ್ಲಿ ಅಂತಹವರ ಹಿಂದೆ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳುವವರಂತೆ ಕೈ ಎತ್ತಿ. ನಿಮಗೆ ಪ್ರಶ್ನೆ ಕೇಳಲು ಅವಕಾಶ ದೊರೆಯುವುದಿಲ್ಲ. ಅದು ನಿಮ್ಮ ಉದ್ದೇಶವೂ ಅಲ್ಲ. ಆದರೆ ಟಿವಿಯಲ್ಲಿ ಪ್ರಶ್ನೆಗಳು ಉತ್ತರಗಳು ಬರುತ್ತವೆಯಾದರೂ ಎದ್ದು ಕಾಣುವುದು ನೀವೇ!

ಸಭೆ ಸಮಾರಂಭಗಳಲ್ಲಿ ಬೇರೊಂದು ರೀತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗಬಹುದು. ಪ್ರತಿಷ್ಠಿತರೆಲ್ಲರೂ ವೇದಿಕೆಯ ಮೇಲೇ ಇರುವುದರಿಂದ ಸಭಿಕರ ಕಡೆಗೆ ಟಿವಿ ಕ್ಯಾಮರಾ ತಿರುಗುವುದು ಅಪರೂಪ. ಸಭಿಕರ ನಡುವೆ ಇದ್ದು ಅಪ್ರಬುದ್ಧ ಪ್ರಶ್ನೆ ಕೇಳಿಯೋ, ವಿಷಕುಡಿದಂತೆ ಮಾಡಿ ನಾಟಕವಾಡಿಯೋ ಮಾಧ್ಯಮದವರ ಗಮನ ಸೆಳೆಯಬಹುದು. ಸಭ್ಯ ನಡವಳಿಕೆಗಳಿಗಿಂತ ಇಂತಹ ವರ್ತನೆಗಳೇ ಅವರಿಗೆ ರೋಚಕವಾಗಿರುತ್ತವೆ ಎಂಬುದೂ ಸತ್ಯವೆ. ಇಂತಹ ಘಟನೆಗಳನ್ನು ಪದೇಪದೇ ಚಿಕ್ಕಪರದೆಯ ಮೇಲೆ ತೋರಿಸಲಾಗುತ್ತದೆ ಎನ್ನುವುದೂ ನಿಜವೆ. ಆದರೆ ಇಂತಹ ಘಟನೆಗಳ ಪರಿಣಾಮವಾಗಿ ನೀವು ಪೊಲೀಸಿನವರ ಅತಿಥಿ ಆಗಬೇಕಾಗಿ ಬರಬಹುದು! ಆದುದರಿಂದ ಬಹಳ ಜಾಗರೂಕತೆಯಿಂದ ಇದನ್ನು ನಿರ್ವಹಿಸಬೇಕಾಗುತ್ತದೆ. ಇದು ಸರಳ ಉಪಾಯ ಆದರೂ ಅಪಾಯದ ಹಿನ್ನೆಲೆ ಇರುವುದರಿಂದ ಮತ್ತೊಂದು ಮಾರ್ಗವನ್ನು ಸೂಚಿಸಲಾಗುತ್ತದೆ. ಹೇಗಾದರೂ ಮಾಡಿ ಪ್ರತಿಷ್ಠಿತರಿಗೆ ಸಹಾಯ ಒದಗಿಸುವವರಂತೆ ವೇದಿಕೆಯ ಮೇಲೆ ಹೋಗಿ ಅತಿಥಿ ಅಭ್ಯಾಗತರ ಹಿಂದೆ ಬಾಡಿಗಾರ್ಡ್ ತರಹ ನಿಲ್ಲಿರಿ. ಗಣ್ಯ ಅತಿಥಿಗಳನ್ನು ಕ್ಯಾಮೆರಾಗಳಲ್ಲಿ ಸೆರೆಹಿಡಿಯುವಾಗ ನಿಮ್ಮನ್ನು ಬಿಡಲು ಸಾಧ್ಯವೇ ಇಲ್ಲ!

ಕೆಲವೊಮ್ಮೆ ಗಣ್ಯ ಅತಿಥಿಗಳಿಗೆ ಕುರ್ಚಿ ಹಾಕಲು ವೇದಿಕೆಯಲ್ಲಿನ ಸ್ಥಳದ ಅಭಾವದಿಂದಾಗಿಯೋ ಅಥವಾ ವೇದಿಕೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಾಗಿರುವುದರಿಂದಲೋ ಪ್ರತಿಷ್ಠಿತರೆನಿಸಿಕೊಂಡವರು ಸಭಾಂಗಣದಲ್ಲಿಯೇ ಉಳಿಯಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಟಿವಿ ಕ್ಯಾಮೆರಾಗಳು ಸಾಂಸ್ಕೃತಿಕ ಕಾರ್ಯಕ್ರಮಗಳತ್ತಲೇ ಮುಖ ಮಾಡುವುದು ನ್ಯಾಯಯುತವೇ ಆದರೂ ಟಿವಿ ಚಾನೆಲ್‌ನ ಮುಖ್ಯಸ್ಥರು ಸಮಾರಂಭಕ್ಕೆ ಆಗಮಿಸಿದ್ದರೆ ಅವರತ್ತ ಪದೇಪದೇ ಕ್ಯಾಮೆರಾ ತಿರುಗಿಸುವುದು ಕ್ಯಾಮೆರಾಮ್ಯಾನ್‌ನ ಭವಿಷ್ಯದ ದೃಷ್ಟಿಯಿಂದ ಅನಿವಾರ್ಯವೇ ಆಗುತ್ತದೆ. ಆಗ ಅಂತಹವರ ಅಕ್ಕಪಕ್ಕ ಹಿಂದೆಮುಂದೆ ಸುಳಿಯುತ್ತಿದ್ದರೆ ಟಿವಿಯಲ್ಲಿ ನೀವು ಗೋಚರಿಸುವುದು ಖಂಡಿತ!

ಟಿವಿಯಲ್ಲಿ ಮುಖ ತೋರಿಸಬೇಕು ಎಂದು ಜಪ ಮಾಡುವವರ ಅದೃಷ್ಟವೋ ಎಂಬಂತೆ ಹಲವಾರು ಅಂತರರಾಷ್ಟ್ರೀಯ ದಿನಗಳು ಚಾಲ್ತಿಯಲ್ಲಿವೆ. ರಾಷ್ಟ್ರ, ರಾಜ್ಯಮಟ್ಟದ ನಾಯಕರ ಹುಟ್ಟಿದ ದಿನಗಳಿಗೂ ಬರಗಾಲವಿಲ್ಲ. ಇಲ್ಲದಿದ್ದರೆ ಯಾವುದೋ ಮಠಾಧೀಶರ, ಅದೂ ಆಗದಿದ್ದರೆ ನಿಮ್ಮದೇ ಜನ್ಮದಿವಸ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಿ. ಇಂತಹ ದಿವಸ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿ. ಅವತ್ತು ಟಿವಿಯಲ್ಲಿ ಬರುತ್ತೀರಿ. ಆ ದಿನ ಬಂದಿತು. ನೀವು ಹಮ್ಮಿಕೊಂಡಿರುವ ಕಾರ್ಯಕ್ರಮ ಆಗಲೇ ಸುದ್ದಿ ಆಗಿರುತ್ತೆ, ನೀವು ಹಾಕಿಕೊಂಡಿರುವ ಕಾರ್ಯಕ್ರಮ ಏನು ಅಂದರೆ... ಇದರ ಅಂಗವಾಗಿ ಈ ದಿನ ಆಸ್ಪತ್ರೆಯ ರೋಗಿಗಳಿಗೆ ಹಣ್ಣನ್ನು ಹಂಚುವುದು! ಹಣ್ಣನ್ನು ಹಂಚುತ್ತೀರಿ. ಅದು ಟಿವಿಯಲ್ಲಿ ನೀವು ಹಣ್ಣು ನೀಡುತ್ತಿರುವುದು-ರೋಗಿ ಸ್ವೀಕರಿಸುತ್ತಿರುವುದು ಎಲ್ಲ ಚಿತ್ರ ಸಮೇತ ವರದಿಯಾಗುತ್ತದೆ! ನೂರೋ ಇನ್ನೂರೋ ಖರ್ಚು ಮಾಡಿದರೆ ಟಿವಿಯಲ್ಲಿ ಮಿಂಚಬಹುದು! ಅಲ್ಲಿಗೆ ನಿಮ್ಮ, ರೋಗಿಯ ಸಂಬಂಧ ಮುಗಿಯಿತು. ನೀವು ಹಣ್ಣು ಹಂಚುತ್ತಿರುವುದು ಟಿವಿಯಲ್ಲಿ ಬರಬೇಕು ಎಂಬುದು ನಿಮ್ಮ ಉದ್ದೇಶವೇ ಹೊರತು ರೋಗಿಯ ಕಾಳಜಿ ಅಲ್ಲ. ಅದರ ಉಸಾಬರಿ ಬೇಕಿಲ್ಲ!

ಆಗೊಮ್ಮೆ ಈಗೊಮ್ಮೆ ಇಡೀ ರಾಜ್ಯವನ್ನೇ ಅಲುಗಾಡಿಸುವಂತಹ ಸಮಸ್ಯೆಗಳ ಸದುಪಯೋಗ ಪಡಿಸಿಕೊಳ್ಳಿ. ಚಳವಳಿಯ ಮುಂಚೂಣಿಯಲ್ಲಿರಿ. ಮಾಮೂಲಿನಂತೆ ಚಳವಳಿ ಮಾಡಿದರೆ ದಿನಾ ಸಾಯೋರಿಗೆ ಅಳೋರು ಯಾರು ಅಂತ ಯಾರೂ ಕಿಲುಬು ಕಾಸಿನ ಕಿಮ್ಮತ್ತು ನೀಡುವುದಿಲ್ಲ. ನಿಮ್ಮ ಚಳವಳಿ ವಿಶಿಷ್ಟವಾಗಿರಬೇಕು. ನಮ್ಮ ಹಿರಿಯ ಚಳವಳಿ ನಾಯಕರು ಈಗಾಗಲೇ ಇದಕ್ಕೆ ಮಾರ್ಗದರ್ಶನ ನೀಡಿದ್ದಾರೆ.

ಕತ್ತೆ ನಾಯಿ ಎಮ್ಮೆಗಳನ್ನು ಬಳಸಿಕೊಂಡು ಅವಕ್ಕೆ ನಿಮ್ಮ ಸದ್ಯದ ವೈರಿಗಳ ಹೆಸರನ್ನು ಆರೋಪಿಸಬಹುದು. ಪ್ರಾಣಿಗಳಿಗೆ ನೀಡುವ ಹಿಂಸೆ ಇದು ಎಂದು ಕೆಲವರು ಆಕ್ಷೇಪಿಸಬಹುದು. ಇಂತಹ ಕ್ರಿಯೆಗಳಿಂದ ಮಾತ್ರ ಟಿವಿಯವರ ಗಮನ ಸೆಳೆಯಬಹುದು ಎಂಬುದನ್ನು ನೆನಪಿಡಿ. ಆ ಆಕ್ಷೇಪಗಳನ್ನು ಬದಿಗೊತ್ತಿ ಜಾಗಟೆ ಬಾರಿಸುವುದರಿಂದಲೂ ಎಲ್ಲರ ಗಮನ ಸೆಳೆಯಬಹುದು. ಚಳವಳಿ ಅತ್ಯಂತ ಪರಿಣಾಮಕಾರಿಯಾಗಿ ಎಲ್ಲರ ಗಮನವನ್ನೂ ಸೆಳೆಯಬೇಕಾದರೆ ರಸ್ತೆ ರೈಲು ತಡೆ ಮಾಡಿ. ರಸ್ತೆ ತಡೆ ಸರ್ವೇ ಸಾಮಾನ್ಯ ಆಗಿರುವುದರಿಂದ ಅಷ್ಟು ಪ್ರಯೋಜನಕಾರಿ ಅಲ್ಲ ಅನ್ನಿಸಿದರೆ ರಸ್ತೆಯಲ್ಲಿಯೇ ಅಡುಗೆ ಮಾಡಿ. ಊಟ ಮಾಡಿ. ಮಾಂಸದ ಅಡುಗೆಯಾದರೆ ಅದರ ವಾಸನೆ ಹರಡುವ ಮುಂಚೆಯೇ ಟಿವಿಯಲ್ಲಿ ಸುದ್ದಿ ಬಿತ್ತರಿಸುತ್ತಿರುತ್ತದೆ! ಹೀಗೆ ಮಾಡಿದ ಅಡುಗೆಯನ್ನು ರಸ್ತೆಯಲ್ಲಿ ಅನಿವಾರ್ಯವಾಗಿ ನಿಲ್ಲಬೇಕಾಗಿ ಬಂದ ವಾಹನಗಳ ಪ್ರಯಾಣಿಕರಿಗೆ ನೀಡಿ. ನಿಮ್ಮ ಹೃದಯವಂತಿಕೆ ಎಲ್ಲರ ಗಮನ ಸೆಳೆಯುತ್ತದೆ-ಟಿವಿಯವರನ್ನು ಸೇರಿಸಿ! ಹೀಗೆ ರಸ್ತೆಯಲ್ಲಿ ಅಡುಗೆ ಮಾಡುವುದರಿಂದ ಸ್ವಾಭಕ್ಕೆ ರಸ್ತೆ ಹಾಳಾಗಬಹುದು. ಅದು ನಿಮ್ಮ ಚಿಂತೆ ಆಗಬಾರದು. ಟಿವಿಯಲ್ಲಿ ಪ್ರಸಾರ ಆಗಬೇಕು ಅನ್ನುವ ಧ್ಯೇಯ ಅಷ್ಟೇ ನಿಮ್ಮದಾಗಿರಬೇಕು!

ವಿರೋಧಿಗಳು ಅನ್ನಿಸಿದವರನ್ನು ಚಟ್ಟಕ್ಕೇರಿಸಿ, ಸುಡುವುದರ ಮೂಲಕ ಶವಸಂಸ್ಕಾರ ಮಾಡಿ. ನಂತರ ಅಪರಕರ್ಮಗಳನ್ನು ಮಾಡಿದರೆ ಎಂತಹ ಅದ್ಭುತ! ಟಿವಿಯಲ್ಲಿ ಬರುವುದು ಖಂಡಿತ! ಸಾವಿನ ಸಂದರ್ಭಗಳಲ್ಲಿ ಕೇಶಮುಂಡನ ಮಾಡಿಸಿಕೊಳ್ಳಬೇಕಾದುದು ಮೃತರ ಮಕ್ಕಳು ಎಂದು ಯಾರಾದರೂ ಹೇಳಿದರೆ ಇಂತಹ ಧರ್ಮಸೂಕ್ಷ್ಮಗಳಿಗೆಲ್ಲ ಗಮನ ನೀಡಿದರೆ ಮಾಧ್ಯಮದವರ ಗಮನ ಸೆಳೆಯಲು ಅಸಾಧ್ಯ ಎಂಬುದು ನೆನಪಿರಲಿ. ಇನ್ನೊಂದು ಪರಿಣಾಮಕಾರಿಯಾದ ಕ್ರಿಯೆ ಎಂದರೆ ನಿಂತ ರೈಲು ತಡೆ! ಹಳಿಯ ಮೇಲೆ ಓಡುತ್ತಿರುವ ರೈಲನ್ನು ತಡೆಯಲು ಪ್ರಯತ್ನಿಸೀರಿ, ಜೋಕೆ! ರೈಲು ನಿಂತಾಗ ಅದರ ಎಂಜಿನ್ ಮೇಲೆ ಹತ್ತಿ ನಿಲ್ಲಿ ಘೋಷಣೆ ಕೂಗಿ. ಟಿವಿಯಲ್ಲಿ ಕಾಣಿಸಿಕೊಳ್ಳಿರಿ!

ಸಮಸ್ಯೆಯ ಪರಿಹಾರದಲ್ಲಿ ಟಿವಿಯವರ ಗಮನ ಸೆಳೆಯಲು ದೈವ ಕೈಂಕರ್ಯ ಉತ್ತಮ ಸಾಧನ. ದೇವಸ್ಥಾನಗಳಲ್ಲಿ ಹೋಮ ಹವನ ನಡೆಸಿ. ಇದಕ್ಕೆ ಟಿವಿಯವರು ಪ್ರತಿಕ್ರಿಯಿಸುವುದಿಲ್ಲ ಎಂಬ ಅನುಮಾನ ಬಂದರೆ ಹೀಗೆ ಮಾಡಬಹುದು.... ಸಮಸ್ಯೆ ನೀರಿನ ವಿವಾದದ್ದಾದರೆ ಪವಿತ್ರ ಜಲವನ್ನು ಕೊಡಗಳಲ್ಲಿ ಹೊತ್ತು ದೂರದಲ್ಲಿರುವ ದೇವರುಗಳಿಗೆ ಜಲಾಭಿಷೇಕ ಮಾಡಬಹುದು. ಇದು ಟಿವಿಯವರ ಗಮನ ಸೆಳೆಯುವುದರ ಬಗ್ಗೆ ಸಂಶಯಬೇಡ. ಇದರಿಂದ ಸಮಸ್ಯೆ ಬಗೆಹರಿಯುತ್ತಾ ಎಂಬುದರ ಬಗ್ಗೆಯಾಗಲೀ, ಜಲಸಮಸ್ಯೆ ಆದರೆ ಜಲಾಭಿಷೇಕ ಮಾಡ್ತೀರಿ, ನೆಲವಿವಾದ ಬಂದರೆ ಮಣ್ಣಿನ ಅಭಿಷೇಕ ಮಾಡ್ತೀರ ಎಂಬ ಕುಹಕಿಗಳ ಮಾತಿಗಾಗಲೀ, ಬೆಲೆ ನೀಡಬೇಕಿಲ್ಲ. ಮಾಧ್ಯಮದವರಿಗೆ ಇದು ಆಕರ್ಷಣೀಯವಾಗಿ ಕಾಣುತ್ತೆ ಮಾತ್ರ ಅಲ್ಲ, ಆಸ್ತಿಕ ಮನಸ್ಸುಗಳಿಗೂ ಮುದ ನೀಡುವ ಕ್ರಿಯೆ ಇದು ಎಂಬುದು ಮುಖ್ಯ.

ಅಪಾಯಕಾರಿಯಾದರೂ ಖಚಿತವಾಗಿ ದೇಶದ ಮೂಲೆಮೂಲೆಗಳನ್ನು ಟಿವಿ ಮುಖಾಂತರ ತಲುಪುವ ಮಾರ್ಗ ಒಂದು ಇದೆ: ಈ ರಾಜ್ಯದ ಪುಣ್ಯ ವಿಶೇಷ ಇರಬೇಕು. ಭೂಮಾಫಿಯಾಗಳಿಗೆ ಸ್ವರ್ಗ ಸಮಾನ ಆಗಿದೆ. ರಿಯಲ್ ಎಸ್ಟೇಟ್ ಏಜೆಂಟ್ ಎಂಬ ಗೌರವ ಸೂಚಕ ಪದ ಇವರಿಗಿದೆ. ಕೊಲೆ, ಸುಲಿಗೆ ಇವರ ನಿತ್ಯಕರ್ಮ. ಯಾವನೋ ಸಮಾಜದಲ್ಲಿ ಗಣ್ಯ ಎನ್ನಿಸಿಕೊಂಡವನು ಇದರಲ್ಲಿ ಬಲಿಯಾಗ್ತಾನೆ. ಆಗ ಅವನ ಕೊಲೆಗೆ ನಾನೇ ಕಾರಣ ಎಂಬ ಸುದ್ದಿ ಬಿತ್ತರಿಸಿ ಭೂಗತರಾಗಿರಿ! ನೋಡುತ್ತಾ ಇರಿ. ಪೊಲೀಸಿನವರು ಬಂದು ನಿಮ್ಮ ಮನೆ ಜಾಲಾಡ್ತಾರೆ ನಿಮ್ಮ ಫೋಟೋವನ್ನ ಟಿವಿಯಲ್ಲಿ ದಿನಾನಿತ್ಯ ತೋರಿಸುತ್ತಾ ಇರುತ್ತಾರೆ! ಅದು ಸರಿ, ಸಿಕ್ಕಿಬಿದ್ದರೆ ಏನು ಗತಿ ಅಂದಿರಾ... ಮೊದಲೇ ಹೇಳಿಲ್ಲವಾ ... ಮುಖ್ಯ ಅಂತ. ಟಿವಿಯಲ್ಲಿ ಕಾಣಿಸಿಕೊಳ್ಳೋದು ... ಅಲವೇನು.

ಕತೆ

ಮತಾಂತರ

ಊರಿನ ಪ್ರತಿ ದೇವಸ್ಥಾನದ ಗೋಪುರದ, ಲೈಟಿನ ಕಂಬ, ಮನೆ, ಅಂಗಡಿ ಬಾಗಿಲ ಮ್ಯಾಲ ಕೇಸರಿ ಧ್ವಜಗಳು ಹಾರಾಡುತ್ತಿದ್ದವು. ಬಸ್‌ಸ್ಟ್ಯಾಂಡಿನ ಸಮೀಪದ ರೋಡಿನ ಎರಡು ಕಡೆ ದೊಡ್ಡದೊಡ್ಡ ಕಟೌಟ್ ನಿಲ್ಲಿಸಲಾಗಿತ್ತು. ವಿವಿಧ ಮಠಗಳ ಸ್ವಾಮಿಗಳು ಡಿಜಿಟಲ್ ಕಟೌಟ್‌ಗಳಿಂದ ಎದ್ದುಬರುತ್ತಿದ್ದರು. ಕೇಸರಿ ಬಣ್ಣದ ಹತ್ತಾರು ಅದಿ ಉದ್ದದ ಬ್ಯಾನರ್‌ಗಳು ಎಲ್ಲೆಂದರಲ್ಲಿ ಸೀರೆ, ದೋತರ ಇಳಿಬಿಟ್ಟಂತೆ ಕಾಣುತ್ತಿದ್ದವು. ಊರ ಹೊರಗಿದ್ದ ಹರಿಜನ ಕೇರಿಯ ನಾಲ್ಕಾರು ಮನೆಗಳು, ದುರುಗಮ್ಮ, ದುಳ್ಳಮ್ಮ ದೇವರ ಗುಡಿ ಕಳಸದ ಮ್ಯಾಲೂ ಕೇಸರಿ ಬಾವುಟಗಳು ಗಾಳಿಪಟದಂತೆ ತೂಯ್ದಾಡುತ್ತಿದ್ದವು.

ಊರಲ್ಲಿ ಅಂಗೈಯಷ್ಟು ಬಿಳಿ ಗೋಡೆ ಕಾಣಲಾರ್ದಂಗ ಕೇಸರಿ ಬಣ್ಣದಲ್ಲಿ ಬಂಡಿಗಾಲಿಯಂತಾ ಅಕ್ಷರಗಳನ್ನ ಬರೆಯಲಾಗಿತ್ತು. ಸಾಲಿ ಕಲಿಯೊ ಸಣ್ಣ ಹುಡುಗ್ರು ದೂರದಿಂದ ನಿಂತು ಅಕ್ಷರಗಳನ್ನು ಕೂಡಿಸಿ ಓದಿದರು. 'ಹಿಂದೂಗಳೇ ಒಂದಾಗಿ, ಹಿಂದೂ ರಾಷ್ಟ್ರ ನಮ್ಮ ಸಂಕಲ್ಪ, ಹಿಂದೂ ವೀರರೇ ಎದ್ದೇಳಿ, ಪ್ರಾಣ ಕೊಟ್ಟಾದರೂ ಹಿಂದೂ ಧರ್ಮ ಉಳಿಸಿಕೊಳ್ಳಿ, 'ಮತಾಂತರಿಗಳಿಗೆ ತಕ್ಕ ಪಾಠ ಕಲಿಸಲು ಮುಂದಾಗಿ, ಹಿಂದೂ ದ್ರೋಹಿಗಳಿಗೆ ದೇಶದಲ್ಲಿ ಜಾಗವಿಲ್ಲ.' ವಿವಿಧ ಓಣಿಗಳಿಂದ ಬಂದಿದ್ದ ಶೀನ, ಅಕ್ಬರ್, ಹುಸೇನಿ, ಡೇವಿಡ್, ರಾಮು ಪರಸ್ಪರ ಕೈಕೈ ಹಿಡಕಂಡು ಗಟ್ಟಿಯಾಗಿ ಓದಿ ತಮ್ಮ ಜಾಣತನ ಪರೀಕ್ಷಿಸಿಕೊಂಡರು.

ಮೊನ್ನೆ ರಾತ್ರಿಯ ತಳವಾರ ಯಮುನ ಡಂಗುರ ಸಾರಿದ್ದ. "ಕೇಳ್ರಪೊ...ಕೇಳ್ರಿ...ನಾಡಿದ್ದು ಸೋಮವಾರ ಮುಂಜಾನಿ ಪೂಜಾವರ ಮಠದ ಸ್ವಾಮಿಗಳು, ವಿವಿಧ ಮಠಾಧೀಶರು, ಹಿಂದೂಸೇನೆ ಮುಖಂಡರು ಊರಿಗೆ ಬರ್ತಾರ. ಹೋದ ವರ್ಷ ಕ್ರಿಶ್ಚಿಯನ್ ಧರ್ಮಕ್ಕ ಮತಾಂತರ ಆಗ್ಯಾರಲ್ಲ ಅವರನ್ನ ಒಳ್ಳಿ ಹಿಂದೂ ಧರ್ಮಕ್ಕ ಕರ್‍ಕೊಂಡು ದೀಕ್ಷೆ ಕೊಡ್ತಾರಂತ.... ಹೈಸ್ಕೂಲ್ ಗ್ರೌಂಡಿಗೆ ಎಲ್ಲರೂ ಬರ್‍ಬೇಕು.... ಕೇಳ್ರಪೊ.. ಕೇಳ್ರಿ..." ಅಂತ ಕೂಗಿದಾಗ ಸಮೀಪದ ಗುಡ್ಡದಿಂದ ಪ್ರತಿಧ್ವನಿ ಕೇಳಿಬರ್‍ತಿತ್ತು. ಮೊನ್ನೆಯಿಂದಲೇ ಊರಿನ ಲೋಕಲ್ ಚಾನಲ್‌ನಲ್ಲಿ ಕಾರ್ಯಕ್ರಮ ಕುರಿತ ಮಾಹಿತಿ ತೋರಿಸ್ತಿದ್ರು.

ಊರಿಗೆ ವಿಶೇಷ ಕಳೆ ಬಂದಿತ್ತು. ಸಾಕ್ಷಾತ್ ರಾಮದೇವನ ಬರ್‍ತಾನೇನು ಅಂಬಂಗೆ ಬ್ರಾಂಬ್ರು ಓಣಿ, ಶೆಟ್ರು ಓಣಿ, ಮಾರ್‍ವಾಡೇರ ಓಣಿಗಳ ಪ್ರತಿ ಮನೆಯ ಬಾಗಿಲಿಗೆ ಮಾವಿನ ತೋರಣ, ಬಾಳೆದಿಂಡು ಕಟ್ಟಿ ಸಿಂಗರಿಸಲಾಗಿತ್ತು. ಈ ಓಣಿಗಳ ಅಂಗಳಗಳಲ್ಲಿ ಆಕಳ ಸೆಗಣಿಯಿಂದ ಸಾರಿಸಿ, ಹಾಕಿದ್ದ ರಂಗೋಲಿ ಎಡಕ್ಕ ಬಲಕ್ಕ 'ಜೈಶ್ರೀರಾಮ" ಅಂತ ಬರೆಯಲಾಗಿತ್ತು. ಊರಾಗ ಕೆಲವು ವರ್ಷಗಳಿಂದ ಆಕಳ ಸೆಗಣಿ ಬಂಗಾರ ಆದಾಂಗ ಆಗಿತ್ತು. ಪಿಂಜಾರ ಇಮಾಮ್‌ಸಾಬ್, ಮೌಲಾಲಿ, ಬ್ಯಾಗಾರ ಬಸಪ್ಪ ತಳವಾರ ತಿಮ್ಮಪ್ಪ ಕುರುಬರ ಶಿವಪ್ಪನ ಮನೆಗಳಲ್ಲಿ ಬುಟ್ರೆ ಬ್ಯಾರೆ ಕಡೆ ಆಕಳುಗಳೇ ಇರ್‍ಲಿಲ್ಲ. ಬಹುತೇಕರ ಮನ್ಯಾಗ ಎಮ್ಮಿ, ಎತ್ತು ಸಾಕಲಾಗಿತ್ತು.

ಎರಡು ದಿನ ಮೊದ್ಲೆ ಈ ಮೂರು ಓಣಿಗಳ ಮಂದಿ ಮಾದರ ದುರಗಪ್ಪನಿಗೆ 'ಆಕಳ ಸೆಗಣೇನ ತಪ್ಪದ ತರ್‍ಬೇಕು. ಸೆಗಣಿ ತಂದುಕೊಟ್ರ ನಿನ್ನ ಜಲ್ಮ ಸಾರ್ಥಕ. ಸ್ವಾಮಿಗಳಿಗೆ ಸೇವಾ ಮಾಡಿದಷ್ಟು ಪುಣ್ಯ ಬರುತ್ತ' ಅಂತ ಶಾಮಾಚಾರಿ ಜೋಷಿ ಹೇಳಿದ್ದು ದುರಗಪ್ಪ ನೆನಿಸಗೆಂಡು ಆಕಳ ಇದ್ದೋರು ದನದ ಅಂಕಣ ಕಸ ಬಳಿಯಾಕಿನ ಮೊದ್ಲಾ ಹೋಗಿ ತಾನಾ ಸೆಗಣಿ ಬಳಕಂಡು ತಂದಿದ್ದ ಶರಣಪ್ಪಗೌಡ, ಬಸನಗೌಡನ ಮನಿ ಗೌಡ್ಶಾನೇರೂ ಬ್ರಾಂಬ್ರು ಓಣಿ ಹೆಣ್ಮಕ್ಕಳನ್ನ ನೋಡಿ ತಮ್ಮ ಮನಿ ಮುಂದಿನ ಸಿಮೆಂಟ್ ಅಂಗಳದಲ್ಲಿ ಆಕಳ ಸೆಗಣಿ ನೀರನ್ನ ಚಗ್ಗುಹೊಡೆದು ರಂಗೋಲಿ ಹಾಕಿದ್ದನ್ನ ನೋಡಿಕೆಂತ ದುರುಗಪ್ಪ ಮನ್ಸಿನ್ಯಾಗ ನಕ್ಕೊತ ಕೇರಿಕಡೆ ಹೊರಟ.

ಊರ ಹೊರಗಿನ ಹನುಮಪ್ಪನ ಗುಡಿಯ ದೊಡ್ಡ ಬೇವಿನ ಗಿಡದ ಕೆಳಗ ಊರಿನ ನಲವತ್ತೈವತ್ತು ಮಂದಿ ಯುವಕರು ಖಾಕಿ ಚಡ್ಡಿ ಚೊಪನು ಟೋಪಿಗಿ ಹಾಕ್ಕೆಂಡು, ಕೈಯಾಗೊಂದು ಬಿದಿರಿನ ಉದ್ದನ ಕೋಲು ಹಿಡ್ಕೊಂಡು ಕವಾಯತು ಮಾಡುತ್ತಿದ್ದುದನ್ನು ದುರುಗಪ್ಪ ದೂರದಿಂದ ನೋಡಿದ. ಹತ್ತಾರು ವರ್ಷಗಳಿಂದ ಬ್ರಾಂಬ್ರು, ಶೆಟ್ರು, ಮಾರ್‍ವಾಡೇರ ಓಣಿ ಪಾಲ್ಯಾರು ಹುಡುಗ್ರು ಶಾಮಾಚಾರಿ ಜೋಷಿ ಹೇಳಿದಂತೆ ಘೋಷಣೆ ಕೂಗುತಿದ್ರು. ಸಾಲಿ ಹುಡುಗರಂತೆ ಪ್ರಾರ್ಥನಾ ಮಾಡ್ತಿದ್ರು. ಮುಂಬೈದಾಗ ಓದಿ ಆರು ತಿಂಗಳ ಹಿಂದಷ್ಟ ಊರಿಗೆ ಬಂದಿದ್ದ ಮಾರ್‍ವಾಡಿ ಧಣಿ ಮಹಾವೀರಚಂದ್ ಮಗ ರಾಜೇಶಚಂದ್ ಮಂತ್ರ, ಘೋಷಣೆ ಜೋರಾಗಿ ಬಿದಿರು ತಿರುಗೋದು ಹೇಳಿಕೊಡ್ತಿದ್ದ. "ಇದೆಲ್ಲಾ ನಮ್ ರಕ್ಷಣೆಗೆ ಕಲಿಬೇಕು. ನಮ್ ವೈರಿಗಳಿಂದ ನಮ್ ಧರ್ಮ. ಜಾತಿ ಉಳಿಸಿಕೊಳ್ಳಾಕ ಇಷ್ಟಾದ್ರೂ ನಾವು ಕಲಿಬೇಕು" ಅಂತ ಊರ ಹುಡುಗರಲ್ಲಿ ಹುರುಪು ತುಂಬುತ್ತಿದ್ದ.

ಇವರಿಗೆ ಕುರುಬ್ರು, ಬ್ಯಾಡ್ರು, ವಡ್ಡರಿಗೇರು ಹುಡುಗ್ರು, ಕೂಲಿಮಾಡಿಕೆಂಡು ತಿನ್ನೊ ಹುಡುಗ್ರು ಮೊದ್ಲುಮಾಡಿ ಹನುಮಂತ ದೇವ್ರ ಗುಡಿಗಿ ಮುಂಜಾನಿ ಸಂಜಿಕಿ ಭೇಟಿ ಕೊಡಾಕ ಹತ್ತಿದ್ರು. ನಿನ್ನೆ ರಾತ್ರ್ಯಾಗ . ಕೇರಿಯಾಗಿನ ಪ್ರತಿಯೊಬ್ಬರ ಮನಿಗಿ ಚುನ್ನೂರಾಗ ಇರೋ ಸಂಘದ ಹುಡುಗರಾದ ಲಿಂಗಪ್ಪ ಪಂಪಾಪತಿ ಬಂದು, "ಊರಾಗಿನ ದೊಡ್ಡೋರು ಅನಿಸಿಗೆಂಡೋರು ಮಾತು ನಂಬ ಬಾರ್‍ದಾಗಬ್ಯಾಡ್ರಿ. ಸಾವಿರಾರು ವರ್ಷಗಳಿಂದ ನಮ್ಮನ್ನ ಪ್ರಾಣಿಗಳಿಗಿಂತ ಕಡೆಯಾಗಿ ನೋಡಿದ ಮಂದಿ ನಮ್ಮನ್ನ ಮನಿಸೇರುಗತೆ ನೋಡ್ತಾರ ಅಂಬದು ಕನಸಿನ ಮಾತು. ಅವ್ರೆಷ್ಟೇ ಒತ್ತಾಯ ಮಾಡಿದ್ರೂ ಮರುಮತಾಂತರ ಆಗ್ಬಾಡ್ರಿ..." ಅಂತ ಗಿಣಿಗಿ ಹೇಳಿದಂಗ ಹೇಳಿಹೋಗಿದ್ದು ನೆನಪಾಯ್ತು.

ದುರುಗಪ್ಪ ಕೇರಿ ಪ್ರವೇಶಿಸುತ್ತಿದ್ದಂತೆ ತಾನು ಯಾವುದೋ ಹೊಸ ಊರು ಪ್ರವೇಶಿಸುತ್ತಿದ್ದಂತೆ ಅನಿಸಿತು. ಕೇರಿಯ ಹತ್ತಾರು ಗುಡಿಸಲುಗಳ ಮುಂದ ರಂಗೋಲಿ ಹಾಕಿದ್ದು ಕಂಡಿತು. ಕೆದರಿದ ತಲೆಗೂದಲು ಬಾಚಿಕೊಳ್ಳಾಕ ಬಾರದ ಕೇರಿ ಹೆಣ್ಮಕ್ಳು ಚುಕ್ಕಿಗಳಲ್ಲಿ ಸೂರ್ಯ ಚಂದ್ರರನ್ನು ಹಾಕಿದ್ದರು. ದುರುಗ ತನ್ನ ಗುಡಿಸಲು ಹೊಕ್ಕು ಸುತ್ತ ಕಣ್ಣಾಡಿಸಿದ. ತನ್ನ ಆರಾಧ್ಯ ದೈವ ಯೇಸುಸ್ವಾಮಿ ಶಿಲುಬೆಗೇರಿಸಿದ ಚಿತ್ರವುಳ್ಳ ಫೋಟೋ ಕಾಣಲಿಲ್ಲ. ನಿತ್ಯವೂ ಅದರ ಮುಂದ ಒಂದೆರಡು ನಿಮಿಷ ಮೊಣಕಾಲು ಊರಿ ತಲೆ ಬಗ್ಗಿಸಿ ನಮಸ್ಕಾರ ಮಾಡೋದು ಆತನ ನಿತ್ಯದ ಕ್ರಮವಾಗಿತ್ತು. ಮನ್ಯಾಗ ಮಾತ್ರ ಯೇಸುವಿನ ಭಕ್ತನಾಗಿದ್ದ. ಹೊರಗ ತಾನು ಮಾದರ ದುರುಗ.

ಹಸ್ಮಕಲ್ ಗುಡ್ಡದಾಗಿರೊ ಆ ಚರ್ಚಿನ ಫಾದರು ಮಿನೇಜಸಪ್ಪ ಸಾಕ್ಷಾತ್ ಯೇಸುಸ್ವಾಮಿ ಇದ್ದಂಗ. ಊರಾಗಿನ ಮಂದಿ ಮುಟ್ಸಕೊಳ್ಳಾಕೂ ಹಿಂದ ಮುಂದ ನೋಡೋ ಹೊತ್ತಿನ್ಯಾಗ... ಬ್ರಿಟೀಷರು ದೇಶ ಬಿಟ್ಟು ಹೋಗಿ ಅರವತ್ತು ವರ್ಷ ಆಗಾಕ ಬಂದ್ರೂ ಊರ ಬಾವಿ, ದೇವ್ರ ಗುಡಿ, ಹೋಟ್ಲದಾಗ ಹೋಗಾಕ ಅವಕಾಶ ಕೊಟ್ಟಿಲ್ಲಂದ್ರೂ ಮಿನೇಜಸಪ್ಪ ತಮ್ಮ ಮನಿಗೆ ನಮ್ಮನ್ನ ಕರ್‍ಕೊಂಡು ಹೋಗಿ ತನ್ನ ಕೈಯಾರೆ ನಮಗ ಉಣ್ಣಾಕ ನೀಡಿದ್ದು, ಗುಬ್ಬಗತೆ ಮುದುರಿ ದೂರ ನಿಂತಿದ್ದ ತನ್ನನ್ನ ತಾಯಿ ಮಗುವನ್ನ ಅಪ್ಪಿಕೊಂಡಂಗ ಅಪ್ಪಿಕೊಂಡಿದ್ದು. ಆಗ ದುರುಗಪ್ಪನ ಕಣ್ಣಾಗಿನಿಂದ ದಳಾ ದಳಾ ಕಣ್ಣೀರು ಉದ್ರಿದ್ದು. ಮಾತಾಡಾಕ ಬರ್‍ಲಾರ್‍ದ ಬಿಕ್ಕಿ ಬಿಕ್ಕಿ ಅತ್ತಿದ್ದ. ತನ್ನ ಹೆಂಡತಿ, ನಾಲ್ವರು ಮಕ್ಕಳಿಗೆ ಹೋದ ಕ್ರಿಸ್‌ಮಸ್‌ಗೆ ಹೊಸ ಬಟ್ಟೆ ಕೊಡಿಸಿದ್ದು ಎಲ್ಲ ನೆನಪಾದವು. ಗುಡಿಸಲೆಲ್ಲಾ ಫೋಟೋ ಹುಡುಕಾಡಿದ.

"ಡೇವಿಡ್, ಏ ಮೇರಿ ನಿಮ್ಮವ್ವ ಎಲ್ಲಿ ಹೋಗ್ಯಾಳ? ಯೇಸುಸ್ವಾಮಿದು ಫೋಟೋ ಎಲ್ಲಿ ಹೋಯ್ತು?" ಅಂತ ಕೂಗಿದ. ದುರುಗಮ್ಮನ ಗುಡಿಮುಂದ ಆಡುತ್ತಿದ್ದ ಆರು ವರ್ಷದ ಡೇವಿಡ್, ನಾಲ್ಕು ವರ್ಷದ ಮೇರಿ ಓಡಿ ಬಂದರು. "ಯಪ್ಪಾ. ಇವತ್ತೊಂದು ದಿವ್ಸ ನೀ ನಮ್ಮನ್ನ ಹೊಸ ಹೆಸರಿನಿಂದ ಕರಿಬಾರ್‍ದಂತ... ಮೊದ್ಲಿನಗತೆ ಬಸುವ, ಲಚುಮಿ ಅಂತ ಕರಿಬೇಕಂತ...ನಿನ್ನ ಹೆಸರನ್ನ ಅಂಥೋನೆಪ್ಪ ಅಂತ ಹೇಳಬಾರ್‍ದಂತ..." ಡೇವಿಡ್‌ನ ಮಾತು ದುರುಗಪ್ಪನಿಗೆ ಅರ್ಥವಾಗಲಿಲ್ಲ. ಮಕ್ಕಳನ್ನೆ ದಿಟ್ಟಿಸಿ ನೋಡಿದ. "ಅದಕಂತ ಅವ್ವ ಯೇಸುಸ್ವಾಮಿ ಫೋಟಾನ್ನ ಹಳೆ ಟ್ರಂಕಿನ್ಯಾಗ ಬಚ್ಚಿಟ್ಟು ಹೋಗ್ಯಾಳ. ಅದನ್ನ ಹೊರಗ ತೆಗಿಬಾರ್‍ದಂತ'' ಮೇರಿ ತೊದಲುತ್ತಾ ಹೇಳಿದಳು. "ಮುಂಜಾನಿ ನೀ ಹೆಂಡಿ ಬಳಿಯಾಕ ಹೋದಾಗ ಹಣೆಗೆ ಕೆಂಪನು ರಿಬ್ಬನು ಕಟ್ಟಿಕೊಂಡ ಹತ್ತಾರು ಮಂದಿ ಕೇರಿ ದಾಡ್ಯಾಗ ನಿಂತ್ಗಂಡು ಹೇಳಿಹೋಗ್ಯಾರ... ನಮ್ಮೆಲ್ಲರಿಗೆ ದೊಡ್ ಸ್ವಾಮೇರು ಬಂದು ದಕ್ಷಾ ಕೊಡ್ತಾರಂತ." "ದಕ್ಷಾ ಅಲ್ಲ... ದೀಕ್ಷಾ ಅದು..." ಡೇವಿಡ್ ತಾನು ತಂಗಿಗಿಂತ ಶ್ಯಾಣ್ಯಾ ಅಂಬಂತೆ ಮಾತಾಡಿದ. "ದೀಕ್ಷಾ ಅಂದ್ರ ಏನಪ" ಮೇರಿ ಸಣ್ಣ ದನಿಯಲ್ಲಿ ಕೇಳಿದಳು. "ನಿಮುಗ ಅರ್ಥ ಆಗಂಗಿಲ್ಲ, ಮತ್ತೆ ಹಿಂದೂ ಧರ್ಮಕ್ಕ ಸೇರ್‍ಸಿಕೊಳ್ತಾರಂತ." "ಈಗ ನಾವು ಯಾವ ಧರುಮದಾಗ ಅದೀವಿ?" ಡೇವಿಡ್ ಕೇಳಿದ. "ಅಪ್ಪಾಚಿ... ಆ ದೊಡ್ ಸ್ವಾಮೇರು ಚರ್ಚಿನ ಫಾದರ್‍ಗಿಂತ ಒಳ್ಳೆರೇನು?" ಮೇರಿ ತನ್ನ ಬಟ್ಟಲಗಣ್ಣು ಅರಳಿಸುತ್ತಾ ಕೇಳಿದಳು. ದುರುಗ ಏನೋ ಹೇಳಬೇಕೆಂದು ಬಾಯಿ ತೆರೆದ. ತನ್ನ ಮಾತು ಮಕ್ಕಳಿಗೆ ಅರ್ಥ ಆಗ್ದೇಕಲ್ಲ ಅಂತ ಹಂಗೆ ಬಾಯಿ ಮುಚ್ಕೊಂಡ.

ಹಳೆ ಟ್ರಂಕಿನಲ್ಲಿ ಬಚ್ಚಿಟ್ಟಿದ್ದ ಯೇಸುಸ್ವಾಮಿ ಫೋಟೋ ಹೊರತೆಗೆದ ದುರುಗ ತನ್ನ ಹೆಗಲಮ್ಯಾಲಿದ್ದ ಹಳೆ ಟವೆಲ್ಲಿನಿಂದ ದೂಳು ಒರೆಸಿದ. ತನ್ನ ಜೀವವೆಂಬಂತೆ ಎದೆಗೆ ಗಟ್ಟಿಯಾಗಿ ಹಿಡಿದು ಎರಡ್ಮೂರು ನಿಮಿಷ ಕಣ್ಮುಚ್ಚಿ ಎದ್ದು ನಿಂತ. ಮಕ್ಕಳೂ ಚರ್ಚಿನಲ್ಲಿ ರವಿವಾರದ ಪ್ರಾರ್ಥನೆಯಲ್ಲಿ ನಿಲ್ಲುವಂತೆ ಅಪ್ಪನ ಮುಂದೆ ನಿಂತರು. "ಅವ್ವ ಹೈಸ್ಕೂಲ್‌ಗೆ ಹೋಗೋ ದಾರಿ ಕಸ ಬಳಿಯಾಕ ಕೇರಿ ಹೆಣ್ಮಕ್ಳ ಕೂಡ ಹೋಗ್ಯಾಳ. ಸ್ವಾಮೇರು ಬರೀ ನೆಲದ ಮ್ಯಾಲ ನಡಿಯಾಕಿಲ್ಲಂತಪೊ..." ಡೇವಿಡ್ ಗಾಬರಿಯಿಂದ ಹೇಳಿದ. ಅಣ್ಣನ ಮಾತು ಕೇಳಿದ ಮೇರಿ ಕೆಳಗೆ ಕುಂತು ತನ್ನ ಪುಟ್ಟ ಅಳಿಲಿನಂತಾ ಅಂಗಾಲುಗಳನ್ನು ಅಂಗೈಯಿಂದ ಸವರಿಕೊಂಡು ದಿಟ್ಟಿಸಿ ನೋಡಿಕೊಂಡಳು.

"ಸ್ವಾಮೇರು ಬರೋ ದಾರ್‍ಯಾಗ ರೇಷ್ಮಿ ಬಟ್ಟಿ ಹಾಸ್ತಾರಂತ..." ಅಂತ ಹೇಳುತ್ತಾ ಡೇವಿಡ್ ಅಪ್ಪನ ಹರಿದ ಬನೀನ್, ತನ್ನ ಅಂಗಿ, ತಂಗಿಯ ಮಿದಿ ನೋಡಿದ. ಹರಿದ ಬಟ್ಟೆಯಲ್ಲಿ ವಿವಿಧ ದೇಶಗಳ ನಕಾಶೆಗಳು ರೂಪ ಪಡೆದಿದ್ದವು. ಹೊರಗ ಕಸಬರಿಗೆ ನೆಲಕ್ಕ ಒಗೆದ ಸದ್ದಾಯ್ತು, ಅವ್ವ ತೇರೆಸಾ (ಪಿಡ್ಡವ್ವ) ಬಂದಳು. "ಗಾ ನೋಡ್ರಿ ಊರಾಗಿನ ಮಂದಿ ಕೇರಿ ಮಂದಿ ಮ್ಯಾಲ ಸಿಟ್ಟಾಗ್ಯಾರ. ಹೊರಗ ನಮ್ ಹೊಸ ಹೆಸ್ರು, ಹೊಸ ಧರುಮ ಹೇಳ್ಬಾರ್‍ದು. ಹೇಳಿದ್ರ ಬೇಸಲ್ಲ ಅಂತ ಮುಂಜಾನಿ ಬಂದ ಹುಡುಗ್ರು ಬಡಿಗಿ ತಿರುಗಿಸಿ ಹೇಳಿಹೋಗ್ಯಾರ. ಮಾರಾಯ ನಿನ್ ಕಾಲು ಹಿಡ್ಕೊಂಡು ಬೇಡಿಕೆಂತೀನಿ. ಊರಾಗ ಇರ್‍ಬೇಕು ಅಂದ್ರ ದೊಡ್ ಮಂದಿ ಹೇಳಿದಂಗ ಕೇಳಿಕಂತ ಇರ್‍ಬೇಕು. ಚರ್ಚಿನ್ಯಾಗ ಫಾದರ್ ಇಟ್ಟ ಹೆಸರನ್ನ ಯಾರಿಗೂ ಹೇಳ್ಬ್ಯಾಡ. ದೊಡ್ಡ ಮಕ್ಳುಬ್ರು ಬಳ್ಳಾರಿ ಚರ್ಚಿನ ಸಾಲ್ಯಾಗ ಓದಾಕ ಹತ್ಯಾರಂತ ಬಾಯಿಬಿಡಬ್ಯಾಡ..." ಮಾತಿಗೊಮ್ಮೆ ಹೊರಗ ಬಾಗ್ಲಿ ಕಡೆ ನೋಡುತ್ತಾ ಪಿಡ್ಡವ್ವ ಹೇಳಿದಳು.

"ಸ್ವಾಮೇರು ನಮ್ಮನ್ನ ಕರ್‍ದಾಗ ಅಲ್ಲಿಗೆ ಹೋಗ್ಬೇಕಂತ.



ನಮ್ಮನ್ನ ಮತ್ತೆ ಹಿಂದೂ ಧರ್ಮಕ್ಕ ಕರ್‍ಕೊತ್ತಾರಂತ. ನಮ್ ಮ್ಯಾಲ ಗಂಗಾನದಿ ನೀರು ಹಾಕಿ ಶುದ್ಧ ಮಾಡ್ತಾರಂತ. ನಾವೆಲ್ಲಾ ಚರ್ಚಿನ ಫಾದರು ಒತ್ತಾಯಕ್ಕ ಬ್ಯಾರೆ ಧರ್ಮಕ್ಕ ಸೇರಿವಂತ. ಚರ್ಚಿನ ಫಾದರು ಈ ಊರಿನ ಧರ್ಮ ಹಾಳುಮಾಡ್ಯಾರಂತ ಊರಾಗಿನ ಮಂದಿ ಮಾತಾಡಾಕ ಹತ್ಯಾರ. ಆವತ್ತು ಚರ್ಚಿನ್ಯಾಗ ಬ್ಯಾರೆ ಧರ್ಮಕ್ಕ ಸೇರಿದ ಎಲ್ಲ ಮಂದಿ ಅಲ್ಲಿಗೆ ಹೋಗ್ಬೇಕಂತ. ಸ್ವಾಮಿಗಳು, ಎಮ್ಮೆಲ್ಲೆಗಳದು ಭಾಷಣ ಮುಗದ ಮ್ಯಾಲ... ಎಲ್ಲರಿಗೂ ಉಣ್ಣಾಕ ಕೊಡ್ತಾರಂತ...." ಪಿಡ್ಡವ್ವ ಅವರಿವರ ಬಾಯಿಯಿಂದ ಕೇಳಿದ ಮಾತುಗಳನ್ನು ಹೇಳಿದಾಗ ಮಕ್ಕಳಿಬ್ಬರು ತಮ್ಮ ಹೊಟ್ಟೆಯನ್ನೊಮ್ಮೆ ನೋಡಿಕೊಂಡು, ತುಟಿಮ್ಯಾಲ ನಾಲಿಗಿ ಆಡಿಸಿಕೊಂಡರು. ಹೊರಗ ಕೇರಿಯಲ್ಲಿದ್ದ ನಾಯಿಗಳು ಒಂದೇ ಸಮನೇ ಒದರಿದವು....

* * * * * * * * * * *

ಬಸ್‌ಸ್ಟ್ಯಾಂಡಿನ ಕಡೆಯಿಂದ ಡೊಳ್ಳು, ಹಲಗೆ, ಹಾಡು, ಕುಣಿತ, ಕೇಕೇ ಸದ್ದು ಮುಗಿಲು ಮುಟ್ಟುವಂತೆ ಕೇಳಿತು. ಉಜ್ಜಯಿನಿ ಮಠದಿಂದ ತರಿಸಿದ ಆನಿ ಮ್ಯಾಲ ರಾಮದೇವರ ಫೋಟೋ ಇಡಲಾಗಿತ್ತು, ಅದರ ಮ್ಯಾಲ ಮಿಂಚೋ ಬಟ್ಟೆಯಿಂದ ಮಾಡಿದ ಛತ್ರಿ ಕಟ್ಟಲಾಗಿತ್ತು, ಹತ್ತಾರು ಸ್ವಾಮಿಗಳ ನಡುವೆ ದಪ್ಪನೆಯ ವಯಸ್ಸಾದ ಬರಿಮೈಮೇಲೆ ಹೊರಟಿದ್ದ ಸ್ವಾಮಿಗಳನ್ನೆ ಪೂಜಾವರ ಮಠದ ಸ್ವಾಮಿಗಳೆಂದು ದುರುಗಪ್ಪ ಗುರ್ತು ಹಿಡಿದ. ಊರಿನ ರೋಡಿನ ಮ್ಯಾಲ ಮೆರವಣಿಗೆ ಹೊರಟಿತು. "ಹಿಂದೂ.... ಹಿಂದೂ.... ನಾವೆಲ್ಲಾ ಒಂದು...", "ಪೂಜಾವರ ಸ್ವಾಮಿಗಳಿಗೆ ಜಯವಾಗಲಿ", "ಹಿಂದೂ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ", "ಹಿಂದೂ ಸೇನೆಗೆ ಜಯವಾಗಲಿ", "ಹಿಂದೂ ಸೇನೆ ಹುಲಿ ರಾಮವೀರಸೇನ್‌ಗೆ ಜೈ..." ಅಂತ ಸುತ್ತ ನಾಲ್ಕು ದಿಕ್ಕಿಗೂ ಕೇಳುವಂತೆ ಊರಿನ ಹಿಂದೂ ಸೇನೆ ಹುಡುಗ್ರು, ಗಂಟಲು ಹರಿಯುವಂತೆ, ಕೇಳೋರ ಕಿವಿ ತೂತುಬೀಳುವಂತೆ ಕೂಗುತಿದ್ರು...

ನಾಲ್ಕು ವರ್ಷದ ಹಿಂದೆ ಹಿಂದೂಸೇನೆ ಮುಖಂಡ ರಾಮವೀರಸೇನ್ ಜತೆ ಊರಿಗೆ ಬಂದಿದ್ದ ಪೂಜಾವರ ಸ್ವಾಮಿಗಳು ಖಾನಸಾಬ ತಾತನ ಉರುಸು ಮಾಡಬಾರ್‍ದಂತ ಹೇಳಿದ್ದು, ಈಶ್ವರಗುಡಿಗಿ ಹತ್ತಿಕೊಂಡಿರೋ ಮಸೀದಿ ಜಾಗ ಗುಡಿಗೆ ಸೇರಿದ್ದು, ಮಸೀದಿ ಜಾಗದಾಗ ರಾಮದೇವರ ಗುಡಿ ಕಟ್ಟಸ್ಬೇಕು. ಅದಕ್ಕ ಊರಾಗಿನ ಹಿಂದೂ ಭಕ್ತಾದಿಗಳು ಶಕ್ತ್ಯಾನುಸಾರ ದಾನಮಾಡ್ಬೇಕು ಅಂತ ಕೇಳಿದ್ದು, ರಾಮದೇವರ ಗುಡಿ ಕಟ್ಟೋದೆ ತಮ್ಮ ಗುರಿ, ಈ ಊರಾಗ ರಾಮದೇವರ ಗುಡಿ ಕಟ್ಟದ್ರೆ ಹಿಂದೂ ಧರ್ಮದಾಗ ಒಗ್ಗಟ್ಟು ಐತಿ ಅಂಬದು ತೋರ್‍ಸಿದಂಗ ಅಂತ ರಾಮವೀರಸೇನ್ ಗುಡುಗಿದ್ದು ನೆನಪಾಯ್ತು, ಊರಕಡೆ ಮೆರವಣಿಗೆ ನಿಧಾನವಾಗಿ ಸಾಗಿತು.....

"ಕಾಲು ಕೆದರಿ ಜಗಳ ಆಡೋದು ರಾಮವೀರಸೇನ್‌ಗ ಹಾಲು ಸಕ್ರಿ ಕುಡದಂಗ" ಪಕ್ಕದಾಗ ನಿಂತ ಪಿಂಜಾರ ಹುಸೇನ್‌ಸಾಬ್ ಹೇಳಿದ. "ಚರ್ಚ್ ಕಟ್ಟಿದಂಗ ಊರುಬಿಟ್ಟು ದೂರ ರಾಮದೇವ್ರ ಗುಡಿ ಕಟ್ಟಾಕ ಬರಂಗಿಲ್ಲೇನು? ಮಸೀದಿ ಜಾಗನ ಆಗ್ಬೇಕನು?" ದುರುಗಪ್ಪ ಕೇಳಿದ. "ರಾಜ್ಯನ ಒಲ್ಲೆ ಅಂತ ವನವಾಸಕ್ಕ ಹೋದ ರಾಮಗ ಮಂದಿರ ಕಟ್ತಾರಂತ. ನಾವೂ ಹಿಂದೂಗಳಲ್ಲೇನು? ಹುಟ್ಟನಿಂದ ಗುಡಿಸ್ಲಾಗ ಸಾಯಾಕ ಹತ್ತೀವಿ. ನಮ್ಮಂತಾ ಬಡವರಿಗೆ ಇರಾಕ ಮನಿ ಯಾಕ ಕಟ್ಟಿಸಿಕೊಡಬಾರ್‍ದು? ಆ ಮಂದಿರ ಕಟ್ಟಿ ಊರಿನ ನೆಮ್ಮದಿ ಹಾಳು ಮಾಡೋದು ಯಾರಿಗಿ ಬೇಕಾಗ್ಯೆತಿ?" ಹೊಲೇರ ರಾಮು ಸುತ್ತ ನಿಂತವರನ್ನು ಪ್ರಶ್ನಿಸಿದ. "ನಮಗ ಪೂಜಿ ಮಾಡಾಕ ಈಶ್ವರ ಗುಡಿ ಒಳಗ ಬುಡಲಾರ್‍ದವ್ರು, ನಾವು ಕ್ರಿಶ್ಚಿಯನ್ ಧರ್ಮಕ್ಕ ಸೇರಿದ್ದಕ್ಕ... ಹಿಂದೂಗಳ ಸಂಖ್ಯೆ ಕಡಿಮೆ ಆಗುತ್ತಂತ ಹೊಯ್ಕೊಳ್ಳಾಕ ಹತ್ಯಾರ..." ದುರುಗಪ್ಪ ಸಿಟ್ಟನಿಂದ ಮಾತಾಡಿದ. "ನಮ್ಮ ಮಕ್ಕಳಿಗೆ ಬ್ರಾಂಬ್ರು ಹಾಸ್ಟೆಲ್‌ದಾಗ ಜಾಗ ಕೊಡ್ತಾರೇನು? ನಾವೂ ಹಿಂದೂಗಳಲ್ಲ... ಯಾಕ ಸೇರ್‍ಸಿಕೊಳ್ಬಾರ್‍ದು" ರಾಮು ಕೇಳಿದ. ಕೇರಿಯ ನಾಲ್ಕಾರು ಮಂದಿ ಬಂದು ಇವ್ರ ಸುತ್ತ ನಿಂತರು. "ಸಾವಿರಾರು ವರ್ಷಗಳಿಂದ ನಮ್ ಮಂದಿಗೆ ಅಕ್ಷರ ಹೇಳಿಕೊಡಲಾರ್‍ದವ್ರು... ಊರ ಹೊರಗ ಇಟ್ಟೋರು... ಕುಡಿಯೋ ನೀರು ಬಾವಿಗಿ ಬುಡಲಾರ್‍ದವ್ರು, ಊರಾಗಿನ ದೇವ್ರ ಗುಡಿ ಒಳಗ ನಮ್ಮನ್ನ ಕರ್‍ದುಕೊಳ್ಳಲಾರ್‍ದವ್ರು... ಇಂಥವರಿಗೆ ನಮ್ ಮ್ಯಾಲ ಒಮ್ಮಿಂದೊಮ್ಮೆಲೆ ಪಿರೂತಿ, ದಯಾ ಉಕ್ಕಿ ಹರಿಯಾಕ ಹತ್ತೈತಿ... ಅಂದ್ರ ನಾವು ಕುಂಡೀಲಿಂದ ನಗಂಗ ಆಗ್ಯೆತಿ..." ರಾಮು ಕಡಕ್ ಆಗಿ ಮಾತಾಡಿದ. "ನಾವೂ ಹೋರಾಟ ಮಾಡಿದ್ರೂ ಇಲ್ಲ. ಏನಿಲ್ಲ ಪೊಲಿಸ್ನೋರು, ಎಮ್ಮೆಲ್ಲೆ-ಎಂಪಿಗಳ ಮುಂದ ನಮಗ ದಲಿತರ ಬಗ್ಗೆ ಗೌರವ ಐತಿ ಅಂತ ಮಾತಾಡೋದು... ಅವ್ರು ಹೋದ ಮ್ಯಾಲ ಮೊದಲಿನಂಗ ಇದ್ದುಬುಡದು..." ಕೆದರಿದ ಕೂದಲು ಹೊಂದಿದ್ದ ಕಪ್ಪು ಮುಖದ ಯುವಕ ಹೇಳಿದ. "ಇದೆಲ್ಲಾ ನಾಟಗ ತಮ್ಮಾ... ಬಡಿಗಿ ತೋರ್‍ಸಿದ್ರ ಮಂದಿ ಅಂಜಿಕೆಂತಾರ ಅಂತ ತಿಳದಾರ" ಇಂರ ಆಸುಪಾಸಿನ ವ್ಯಕ್ತಿ ನುಡಿದ. "ಎಲ್ಲಾ ಪಕ್ಷದ ರಾಜಕಾರಣಿಗಳು ಮೇಲ್ವರ್ಗದ ಮಂದಿಗತೆ ಮಾತಾಡ್ತಾರ... ಎಲೆಕ್ಷನ್ ಬಂದಾಗಷ್ಟ ನಾವ್ ನೆನಪಾಗ್ತೀವಿ...ನಮ್ ಉದ್ಧಾರ ಮಾಡೋ ಸೋಗು ಹಾಕಿ ಬರ್‍ತಾರ..." ಅಂದ ರಾಮು ಕ್ಯಾಕರಿಸಿ ಉಗುಳಿದ.

ಊರ ಹೊರಗಿನ ಹೈಸ್ಕೂಲ್ ಮೈದಾನದಾಗ ಕಟ್ಟಿದ್ದ ...ಕನಿಂದ.... "ಸ್ವಾಮಿಗಳು ಇನ್ನೇನು ಕೆಲ ನಿಮಿಷಗಳಲ್ಲಿ ...ವಿ ಬರ್‍ತಾರ... ಊರಿನ ಸಮಸ್ತ ಮಂದಿ ವೇದಿಕೆ ಕಡೆ ...ಸ್ತಿ. ಕ್ರಿಶ್ಚಿಯನ್ ಧರ್ಮಕ್ಕ ಸೇರಿದ ದಲಿತ ಮಂದಿ ...ದು ಸ್ವಾಮಿಗಳಿಂದ ಹಿಂದು ಧರ್ಮದ ದೀಕ್ಷಾ ತಗಳ್ತಾರ" ...ತ ಹಿಂದೂಸೇನೆಯ ಮುಖಂಡ ಜಯದೇವ ...ಸಾರಿದ. "ನಾವೆಲ್ಲಾ ಹಿಂದೂ... ನಾವೆಲ್ಲಾ ಒಂದು... ...ದೂ ರಾಷ್ಟ್ರ ಕಟ್ಟುವಾ ನಾವೆಲ್ಲಾ ಕೂಡಿ... ...ದ್ರೋಹಿಗಳಿಗೆ ಪಾಠ ಕಲಿಸುವಾ ಹರಿಸಿಯಾದ್ರೂ ...ದಾ ಕೋಡಿ..." ಮೈಕನಿಂದ ಹಾಡು ಕೇಳಿಬಂತು. ...ತ್ತ ಹರಿಸ್ತಾರಂತ...ಬ್ಯಾಸಿಗಿ ದಿವ್ಸಕ್ಕ ನಮ್ ಬಾಯಿಗಿ ...ರಿ ನೀರು ಕೊಟ್ರ ದೊಡ್ಡ ಪುಣ್ಯಾ..."ದುರುಗಪ್ಪ ಹೇಳಿದ್ದನ್ನ ...ಕಿ ಎಲ್ಲರೂ ನಕ್ಕರು. "ನಡಿರಮೊ... ಅವ್ರು ಕೆಟ್ ...ದಿ... ಏನ್ ಮಾಡಾಕೂ ಹೇಸೊ ಮಂದಿಯಲ್ಲ! ...ಮಿಗಳಿಂದ ನಾವೂ ದೀಕ್ಷಾ ತಗಳಂಬ್ರ. ನಮ್ ಮನಿಸ್ಯಾಗ ...ಊ ದೇವ್ರನ್ನ, ಧರ್ಮಾನ ಕಸ್ಗಳಾಕ ಯಾರಿಂದ ಸಾಧ್ಯ ...?" ರಾಮು ಹೇಳಿದ. ಹುಸೇನ್‌ಸಾಬನೂ ಅವ್ರ ...ದ ಹೊರಟ. ಹೈಸ್ಕೂಲ್ ಸಮೀಪಿಸುತ್ತಿದ್ದಂತೆ ಭಾಷಣ ...ತೊಡಗಿತು. "ಹಿಂದೂ ಧರ್ಮಕ್ಕ ಇವತ್ತು ಆಪತ್ತು ...ದೈತಿ. ಧರ್ಮದ ಉಳಿವಿಗೆ ಎಲ್ಲರೂ ಕಂಕಣ ...ಡಬೇಕು. ಕೈಯಾಗ ತ್ರಿಶೂಲ, ಲಾಠಿ ಹಿಡಿದು ಹಿಂದೂ ...ರ್ಮದ ವಿರೋಧಿಗಳನ್ನ ದೇಶಬಿಟ್ಟು ಓಡಿಸ್ಬೇಕು. ಇನ್ನೇಲೆ ...ಮ್ಮ ಹುಡುಗಾಟ ನಡಿಯಾಂಗಿಲ್ಲ, ಆಟ ಹಚ್ಚೀರೇನು? ...ದೂ ಧರ್ಮದ ಮುಗ್ಧ ಜನರಿಗೆ ಆಸಿ ತೋರ್‍ಸಿ ...ತಾಂತರ ಮಾಡ್ತೀರೇನು? ನಿಮ್ ಬಾಯಾಗ ...ಹಾರ್....!" ರಾಮವೀರಸೇನ್ ಗುಡುಗಿದಂತಾ ಮಾತು ...ಗೆ ಹಿಂದೂ ಸೇನೆ ಹುಡುಗ್ರು, ಕೇಕೇ, ಶಿಳ್ಳೆ ಹಾಕಿ ...ಿದು ಕುಪ್ಪಳಿಸಿದರು. ಕೈಯಲ್ಲಿದ್ದ ಕೇಸರಿ ಬಾವುಟಗಳನ್ನ ...ಡಿ ಇಕ್ಕಡಿ ಆಡಿಸಿದ್ರು...

"ದೀಕ್ಷಾ ತೊಗಳಾಕ ಬಂದ ದಲಿತ ಮಂದಿ ವೇದಿಕೆ ...ಂಭಾಗಕ್ಕ ಬಂದು ಒಂದ್ಕಡಿ ನಿಂತ್ಗಬಕು. ಪೂಜಾವರ ...ಮಿಗಳು ದೀಕ್ಷಾ ಬೋಧಿಸ್ತಾರ. ಎಲ್ಲರೂ ಶಾಂತರಾಗ್ಬಕು..." ...ತ ಹೇಳಿ, "ಹಿಂದೂ ಧರ್ಮಕ್ಕೆ... ಪೂಜಾವರ ...ಮಿಗಳಿಗೆ... ರಾಮವೀರಸೇನ್‌ಗೆ, ಹಿಂದೂ ಸೇನೆಗೆ..." ...ತ ಜಯದೇವ ಜೈಕಾರ ಹೇಳಿಸಿದ. ಕೇರಿಯ ...ತ್ತರವತ್ತು ಮಂದಿ ಹೆಣ್ಮಕ್ಳು, ಹುಡುಗ್ರು, ಗಣಮಕ್ಳು ...ದಿಕೆ ಮುಂದ ಅಂಜುತ್ತಲೆ ಬಂದು ತಲಿ ತಗ್ಗಿಸಿ ...ತರು. ವೇದಿಕೆ ಕಟ್ಟೆ ತುದಿಗೆ ಬಂದು ನಿಂತ ಪೂಜಾವರ ...ಮಿಗಳು ಕೈಯಾಗ ಮೈಕ್ ಹಿಡ್ಕಂಡು "ಸಂಗಚ್ಛಧ್ವಾಮ್ ...ವಾದಧ್ವಾಮ್ ಸಮ್‌ವೊ ಮನಾಮ್ಸಿ ಜನತಾಮ್... ...ಾನೊ ಮಂತ್ರಃ ಸಮಿತಿಃ ಸಮಾನಿ ಸಮಾನಮ್ ...ನಃ ಸಹ ಚಿತ್ತಮೇಸಮ್... ಸಮಾನಿ ವ ಆಕುತಿಃ ...ಮಾ ಹೃದಯ ವಃ...ಸಮಾನಮಸ್ತು ವೊ ...ನೊಯಾತಾ ವಃ ಸುಸಹಾಸತಿಃ..." ಅಂತ ಮಕ್ಳು ...ಗ್ಗಿ ಹೇಳಿದಷ್ಟೇ ಸಲೀಸಾಗಿ ಹೇಳಿದರು.

ಪೂಜಾವರ ಸ್ವಾಮಿಗಳು ಪಕ್ಕದಲ್ಲಿ ಬೇರೆ ಮಠಗಳ ...ಮಿಗಳು ಹೂವಿನ ಹಾರ, ಕುಂಕುಮ, ರಾಮನ ...ೋಟೋ, ರುದ್ರಾಕ್ಷಿ ಸರ ಹಿಡಿದು ನಿಂತಿದ್ರು. ಜಯದೇವ ...ೊಬ್ಬರ ಹೆಸ್ರು ಕೂಗಿದ. "ಮೊದಲಿಗೆ ದುರುಗ... ...ಲ್ಲ ದುರುಗಪ್ಪ ಮುಂದಕ್ಕ ಬರ್‍ಬಕು" ಅಂದ. ದುರುಗಪ್ಪ ...ಸ್ಸಿಲ್ಲದ ಮನಸ್ಸಿನಿಂದ ಪೂಜಾವರ ಸ್ವಾಮಿಗಳ ಮುಂದ ...ದು ನಿಂತ. ಜೆಡಿಎಸ್ ಪಕ್ಷದ ಎಮ್ಮೆಲ್ಲೆ ಬಸನಗೌಡ, ...ಗ್ರೆಸ್ ಪಕ್ಷದ ಎಂ.ಪಿ.ಈಶ್ವರಪ್ಪ ಬಿಜೆಪಿ ಪಕ್ಷದ ಜಿ.ಪಂ. ...ಕ್ಷ ರಮಣರೆಡ್ಡಿ ಸ್ವಾಮಿಗಳ ಹಿಂದ ರಕ್ಷಕರಂತೆ ನಿಂತಿದ್ರು. ...ರ ಹಣಿ ಮ್ಯಾಲ ದುರುಗಮ್ಮದೇವಿ ಚಾಚಿದ ...ಗೆಯಂತೆ ಕೆಂಪನು ನಾಮ ಎದ್ದುಕಾಣ್ತಿತ್ತು. ಹೆಗಲಿಗೆ ...ರಿ ಜರತಾರಿ ಹೆಗಲಪಟ್ಟಿ ಹಾಕ್ಕೊಂಡಿದ್ರು.

"ಯಾರದೋ ಒತ್ತಾಯಕ್ಕ ಬ್ಯಾರೆ ಧರ್ಮ ಸೇರಿರಿ. ...ಮ್ಮ ಸ್ವಂತ ಧರ್ಮಕ್ಕ ಮತ್ತೆ ಬರಾಕ ಹಚ್ಚೀರಿ. ಜಗತ್ತಿನ್ಯಾಗ ...ದೂ ಧರ್ಮದಂತಾ ಶ್ರೇಷ್ಠ ಧರ್ಮ ಮತ್ತೊಂದಿಲ್ಲ. ...ಮ್ ರಾಷ್ಟ್ರ ಧರ್ಮ ಹಿಂದೂ ಧರ್ಮ, ನಮ್ ರಾಷ್ಟ್ರ ...ದೂಸ್ಥಾನ. ಧರ್ಮದ ರಕ್ಷಣೆಗೆ ನೀವು ದೀಕ್ಷಾ ತಗೊಳಾಕ ...ರಿ. ದಿವ್ಸಾ ಮುಂಜಾನೆ ರಾಮಧ್ಯಾನ ಮಾಡಬೇಕು. ...ರೊಪ್ಪತ್ತು ದೇವರ ಪೂಜೆ ಮಾಡ್ಬಕು. ಮತ್ತೆಂದೂ ... ಧರ್ಮದ ದೇವರನ್ನ ಕಣ್ಣೆತ್ತಿ ನೋಡಬಾರ್‍ದು..." ...ದೇಶ ಮಾಡಿದ ಪೂಜಾವರ ಸ್ವಾಮಿಗಳು ಕೈಯಲ್ಲಿ ...ದ ಬಂಗಾರದ ಬಣ್ಣದ ಕಮಂಡಲದಿಂದ ನಾಲ್ಕಾರು ... ಬಗ್ಗಿಸಿಕೊಂಡು ವೇದಿಕೆ ಕೆಳಗ ನಿಂತಿದ್ದ ಮಂದಿಗೆ ...ದರು. ಬಗ್ಗಿದ ತಲೆಗೆ ಎತ್ತಿನ ಕೋಡಿಗೆ ಒಗೆದಂತೆ ...ಹಾರ ಎಸೆದರು. ಕೆಳಗ ಬೀಳುತ್ತಿದ್ದ ಹಾರವನ್ನ ...ಗಪ್ಪ ಕೊಳ್ಳಾಗ ಹಾಕ್ಕೊಂಡ. ಅವರು ಕೆಳಗ ಒಗೆದ ... ಫೋಟೋ, ಕುಂಕುಮ ಡಬ್ಬಿ ರುದ್ರಾಕ್ಷಿ ...ಪ್ಪ ದೋತ್ರದ ಸೆರಗಲ್ಲಿ ಇಸಿದುಕೊಂಡ. ಪೂಜಾವರ ...ಗಳ ಪಾದಮುಟ್ಟಿ ನಮಸ್ಕಾರ ಮಾಡ್ಬಕು ಅಂತ ...ನಕ್ಕ ಬಗ್ಗಿದ. ಹಲ್ಲ ಪ್ರೆಸ್ಮ್ಯಾಲಿ ಬಿದ್ದೋರಗತೆ ...ಗಳು ಹಿಂದಕ್ಕ ಸರಿದರು. "ಸ್ವಾಮಿಗಳು ಪಾದಿಲಿಂದ

ಹತ್ತಾರು ಬಾರಿ ಜಯಕಾರ ಹಾಕಿಸಿದರು. "ಎಲ್ಲರೂ ಊಟ ಮಾಡಿಕೆಂಡು ಹೋಗ್ರಿ. ದಿನಾಲು ದೇವ್ರ ಗುಡಿಗೆ ಹೋಗಿ ಪೂಜೆ ಸಲ್ಲಿಸ್ಬಕು. ಬರೋ ವರ್ಷದೊಳಗ ನಿಮ್ಮೂರಾಗ ರಾಮದೇವ್ರ ಗುಡಿ ಕಟ್ಟಾಕ ಸಹಾಯ ಮಾಡ್ಬಕು. ಎಲ್ರೂ ಪ್ರಸಾದ ತಗಂಡು ಹೋಗ್ಬಕು. ಹಿಂದೂಗಳೆಲ್ಲಾ ಒಂದಾಗಿ ಬದುಕ್ಬಕು. ಅನ್ಯ ಧರ್ಮಕ್ಕ ನಮ್ಮ ಶಕ್ತಿ ತೋರ್‍ಸಬಕು. ಸರ್ವೆ ಭವಂತು ಸುಕಿನಃ, ಸರ್ವೆ ಸಾಂತು ನಿರಾಮಯಾಃ, ಸರ್ವೆ ಭದ್ರಾನಿ ಪಶ್ಯಂತು, ಮಾಕ್ಚಿತ್ ದುಃಖಭಾಗ ಭವತ್. ಶಾಂತಿಃ ಶಾಂತಿಃ ಶಾಂತಿಃ... ಜೈ ಶ್ರೀರಾಮ" ಎನ್ನುತ್ತಾ ವೇದಿಕೆ ಇಳಿದು ಹೋದರು. ಅವರ ಹಿಂದೆ ಹಿಂದೂ ಸೇನೆ ಯುವಕರು ಜಯಘೋಷ ಹಾಕುತ್ತಾ ಸಾಗಿದರು. ಸ್ವಾಮಿಗಳು, ರಾಜಕಾರಣಿಗಳು ಹೋದ ಮ್ಯಾಲಿ ಜಯದೇವ ಮೈಕಿನಲ್ಲಿ ಹೇಳಿದ. "ಮೊದಲಿನ ಪಂಕ್ತ್ಯಾಗ... ಬ್ರಾಹ್ಮಣರು, ಅಯ್ನೋರು ಊಟಕ್ಕ ಕೂಡ್ಲಿ ನಂತರ ಲಿಂಗಾತ್ರು, ವಕ್ಕಲಿಗೇರು... ಕೊನಿಗೆ ಕೇರಿಮಂದಿ ಬರ್‍ಬಕು... ಬರೊ ಮುಂದ ನಿಮ್ಮ ಮನಿಯಾಗಿನಿಂದ ತಂಬಗಿ ಗಂಗಾಳ ತರ್‍ಬಕು" ಅಂತ ಸೂಚನಾ ನೀಡಿದ. ದುರುಗಪ್ಪನಿಗೆ ಕೈಯಾಗಿದ್ದ ಹೂವಿನ ಹಾರನ್ನ ಕಾಲಾಗ ಹಾಕ್ಕೆಂಡು ತುಳಿಬಕು, ಸ್ವಾಮಿಗಳು ಕೊಟ್ಟ ಫೋಟೋ, ಕುಂಕುಮ, ರುದ್ರಾಕ್ಷಿ ಸರಾನ್ನ ತಿಪ್ಪಿಗೆ ಒಕ್ಕಡಬಕು ಅಂತ ಅನ್ನಿಸಿತು. ಊಟ ಮಾಡದೇ ಮನೆಗೆ ಮರಳಿದ.



* * * * * * * * * * *

ಹೊತ್ತು ಮುಳುಗಿದ್ರೂ ಊರ ನಡುವಿದ್ದ ಮಸೀದಿ ಮೈಕಿನಿಂದ "ಅಲ್ಲಾ ಹು ಅಕ್ಬರ್" ಅಂತ ಕೂಗಲಿಲ್ಲ, ಗುಡ್ಡದ ಮ್ಯಾಗಿನ ಚರ್ಚಿನಿಂದ ಯೇಸುಸ್ವಾಮಿ ಹಾಡು ಕೇಳ್ಲಿಲ್ಲ, ಊರ ಅಗಸಿ ಸಮೀಪದ ಈಶ್ವರ ಗುಡಿ ಮೈಕಿನಿಂದ ಬಸವಣ್ಣನವರ ವಚನಗಳು ಕೇಳಿ ಬರುತ್ತಿದ್ದವು. "ಕಳಬೇಡ, ಕೊಲ ಬೇಡ; ಹುಸಿಯ ನುಡಿಯಲು ಬೇಡ; ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ..." ಕೇಳಿದಾಗ ಗುಡಿಸಲ ಒಳಗ ಕುಂತಿದ್ದ ದುರುಗಪ್ಪ ಹೊರಗ ಬಂದ. ಅಕ್ಕಡಿ ಇಕ್ಕಡಿ ಓಡಾಡಿ ದಣಕಂಡಿದ್ದ ಮಗಳು ಮೇರಿ ಅಪ್ಪನ ತೊಡಿ ಮ್ಯಾಲ ತಲಿಯಿಟ್ಟು ಮಲಗಿದಳು. ಮಗ ಡೇವಿಡ್ ಯೇಸುಸ್ವಾಮಿ ಫೋಟೋ ಮುಂದ ಕುಂತ್ಗಂಡು ಪ್ರಾರ್ಥನೆ ಮಾಡಿ, "ಆಮೇನ್" ಅಂದ.

ಕೇರಿಯ ಹತ್ತಾರು ಯುವಕರು ಕೈಯಾಗ ಎಣ್ಣೆ, ಬತ್ತಿ, ತೆಂಗಿನಕಾಯಿ, ವಿಭೂತಿ ಉಂಡಿ, ಕುಂಕುಮ, ಬಿಲ್ಪತ್ರಿ, ಊದಿನಕಡ್ಡಿ ಹಿಡಕಂಡು ದುರುಗಪ್ಪನ ಗುಡಿಸಲ ಮುಂದ ನಿಂತರು. "ದುರುಗಪ್ಪಣ್ಣ, ಮಧ್ಯಾಹ್ನ ದೊಡ್ಡ ಸ್ವಾಮೇರು ಹೇಳಿಲ್ಲೇನು? ಎಲ್ಲ ಹಿಂದೂಗಳು ಒಂದಾಗಿರ್‍ರಿ ಅಂತ. ಗುಡಿಗೆ ಹೋಗಿ ಪೂಜಾ ಮಾಡ್ರಿ ಅಂತ ಹೇಳಿಲ್ಲೇನು? ನಾವು ಇವತ್ತು ಈಶ್ವರ ಗುಡಿ ಒಳಗ ಹೋಗಿ ಪೂಜೆ ಮಾಡ್ತೀವಿ. ದೀಪ ಮುಡಿಸಿ, ಊದಿನಕಡ್ಡಿ ಬೆಳಗಿ, ಕಾಯಿ ಒಡ್ಕಂಡು ಬರ್‍ತೀವಿ. ನಮಗ ದೇವಸ್ಥಾನ, ಬಾವಿ ಹೊಟ್ಟದಾಗ ಹೋಗಾಕ ಬುಟ್ರ... ಹಿಂದೂ ಧರ್ಮಕ್ಕ ಸೇರಿವಿ ಅಂತ ಅರ್ಥ. ಇಲ್ಲಕ್ಕಂದ ಯೇಸುಸ್ವಾಮಿನ ನಮಗ ದೇವ್ರು" ಎಂದು ಹೇಳುತ್ತಾ ರಾಮು, ಬಸ್ಯಾ, ಲಚುಮ, ಸ್ಯಾಮ್ಸನ್, ಪೀಟರ್, ಲೂಯಿಸ್, ಜೋರ್ಡನ್, ಜಾರ್ಜ್ ಮತ್ತಿತರ ಯುವಕರು ಈಶ್ವರ ಗುಡಿ ಕಡೆ ಹೆಜ್ಜೆಹಾಕಿದರು. "ಜೇನಿನ ಗೂಡಿಗೆ ಕಲ್ಲು ಒಗೇದು ಬ್ಯಾಡ. ಹಂಗ ಅಷ್ಟುದ್ದ ಭಾಷಣ ಮಾಡಿದ ದೊಡ್ಡ ಸ್ವಾಮಿ ನಮ್ಮಿಂದ ಒಬ್ರ ಕುಡಾನ ಕಾಲು ಮುಗ್ಗಿಕೊಂಡ್ನೇನು? ಅವ್ರು ಶಾಸ್ತ್ರ ಹೇಳೋ ಮಂದಿ. ಅವ್ರ ಮಾತು ಕೇಳೋದು ಬ್ಯಾಡ" ಅಂತ ದುರುಗಪ್ಪ ಅವರಿಗೆ ತಿಳಿಸಿ ಹೇಳಿದ. ತನ್ನ ಮಾತು ಕೇಳಾಂಗಿಲ್ಲ ಅಂತ ಗೊತ್ತಾತು. ಮಗಳನ್ನ ಗುಡಿಸಲ ಒಳಗ ಮಲಗಿಸಿ ಆಕಿಮ್ಯಾಲ ಹಳೆ ಸೀರಿ ಹೊದಿಸಿ ಬಂದ. ಅವ್ರ ಹಿಂದನ ಓಡಿಹೋದ. ಪಿಡ್ಡವ್ವ ಒಳಗ ಅನ್ನ ಮಾಡದು ಬುಟ್ಟು ಹೊರಗ ಬಂದು ಕೇರಿ ಮಂದಿ ಹೋದ ದಿಕ್ಕಿಗೆ

ಕೇರಿಮಂದಿ ಗುಡಿ ಸಮೀಪಿಸುತ್ತಿದ್ದಂತೆ ಮೈಕಿನಿಂದ, ಬಸವಣ್ಣನವರ "ಇವನಾರವ... ಇವನಾರವ ಇವನಾರವನೆಂದೆನಿಸದಿರಯ್ಯ... ಇವ ನಮ್ಮವ ಇವ ನಮ್ಮವ ಇವನಮ್ಮ ವನೆಂದೆನಿಸಯ್ಯ" ಎಂಬ ಹಾಡು ಸುಶ್ರಾವ್ಯವಾಗಿ ಕೇಳಿ ಬಂತು. ಅಗಸಿ ದಾಟ ಹೋಗುತ್ತಿದ್ದ ಕೇರಿ ಮಂದೀನ ದುಗುಡದಿಂದ ನೋಡಿದ ಅಗಸಿಕಟ್ಟೆಗೆ ಕುಂತ ಊರ ಮಂದಿ... "ಏನ ಅನಾಹುತ ಮಾಡದಕಂತ ಇಲ್ಲಿಗೆ ಬಂದಾರ ಇವ್ರು. ಕಾಲ್ಮರಿನ ಎಲ್ಲಿ ಇಡ್ಬಕು ಅಲ್ಲಿ ಇಟ್ರ ಚೇಸು. ಬಂಗಾರ್‍ದ ಚಪ್ಪಲಿ ಅಂತ ತಲಿಮ್ಯಾಲ ಹೊತ್ಗಂಡು ನಡೆಯಾಕ ಆಗುತ್ತೇನು?" ನಡ್ಲಮನಿ ಮಲ್ಲಣ್ಣ, ಮಾಜಿ ಚೇರ್ಮನ್ ಬಸನಗೌಡ, ಗುರುರಾಜ ಪುರೋಹಿತ, ನಾಗೇಂದ್ರಪ್ಪ ಬೇವಿನಾಳ ಶ್ಯಾಣಪ್ಪ ಅಯ್ನೋರು ಅಮರಯ್ಯ ಬಡಿಗೇರ ವಿರುಪಾಕ್ಷಪ್ಪ ತಲೆಗೊಂದು ಮಾತಾಡಿದರು.

ಇನ್ನೇನು ಕೇರಿಮಂದಿ ಈಶ್ವರಗುಡಿ ಪಾಂಟುಣಿಗಿ ಹತ್ತಬೇಕು ಅನ್ನುತ್ತಿದ್ದಾಗ... ಬಸನಗೌಡ ಕೆಂಡಾಮಂಡಲವಾದ. "ಲೇ ಮಾದ್ನ ಸೂ... ಮಕ್ಳೆ... ಮೈತಿರುಗಾಕ ಹತ್ತೈತೇನು? ಎಷ್ಟು ಸೊಕ್ಕು ನಿಮ್ದು. ದೀಕ್ಷಾ ತಗೊಂಡು ಬುಟ್ರ ನಿಮ್ ಜಾತಿ ಬ್ಯಾರೆ ಆಯ್ತು ಅಂತ ತಿಳಕಂಡಿರೇನು? ಮೊದ್ಲು ಕಾಲು ಹಿಂದಕ್ಕ ತಕ್ಕಳ್ರಿ..." ಕಟ್ಟೆಲಿಂದ ಕೆಳಗ ಇಳಿಯುತ್ತಾ ಹೇಳಿದ. "ಏ ರಾಮ, ಗೌಡ್ರು ಕೂಗಾಕ ಹತ್ತಾರ... ಹಂಗೆ ಪಾಂಟುಣಿಗಿ ಹತ್ತಿತಿಯಲ್ಲ, ಇಳ್ಯಾ ಇಲ್ಲಾ..." ಮೂರು ಘೂಟು ಇದ್ದ ಗುರುರಾಜ ಪುರೋಹಿತ ನಾಲ್ಕು ಘೂಟು ಮ್ಯಾಲ ಎಗರಿ ಮಾತಾಡಿದ. ದುರುಗಪ್ಪನಿಗೆ ಯಾರಿಗೆ ಏನು ಹೇಳ್ಬಕು ಅಂತ ಗೊತ್ತಾಗ್ಲಿಲ್ಲ. ಗುಡಿ ಮುಂದ ನಿಂತ್ಗಂಡು ಕೈಮುಗಿದ. ಕಟ್ಟೆ ಮ್ಯಾಲಿದ್ದ ಹತ್ತಾರು ಮಂದಿ, ಸಮೀಪದ ಮನೆಗಳ ಇಬ್ರು ಮೂವರು ಕೈಯಾಗ ಬಡಿಗಿ ಹಿಡಕಂಡು ತಮ್ಮಪ್ಪ ತಾತನ ಆಸ್ತೀನ ಕಸಗಳಾಕ ಬಂದಾರ ಅಂಬಂಗ ಓಡಿ ಬಂದರು. ಗುಡಿ ಮುಂದ ನಿಂತ ದುರುಗಪ್ಪನ್ನ ನಾಲ್ಕಾರು ಮಂದಿ ನೂಕಿದರು. ಜೋಲಿ ತಡೆಯದೇ ಕೆಳಗ ಬಿದ್ದು ಮತ್ತೆ ಎದ್ದು ನಿಂತ. ಗುಡಿ ಒಳಗ ಹೋಗಿದ್ದ ಕೇರಿ ಮಂದಿ ಕೈಹಿಡಿದು ಹೊರ್‍ಗ ಎಳೆದು ದಬ್ಬಿದರು. ಇಬ್ರು ಮೂವರಿಗೆ ಎಲ್ಲಿ ಬೇಕಲ್ಲಿ ಕಟ್ಟಿಗೆ ಏಟು ಬಿದ್ದು ಈಶ್ವರಗುಡಿ ಒಳಗ ಅಲ್ಲಲ್ಲಿ ಕುಂಕುಮ ಚೆಲ್ಲಿದಂತೆ ರಕ್ತ ಚೆಲ್ಲಿತ್ತು.

"ಮತಾಂತರ ಅಂತ ಮುಂಜಾನಿ ನಾಟಗ ಮಾಡಾಕ ಬರುತ್ತ. ಸಂಜೆಕ ಗುಡಿಗಿ ಪೂಜೆಗಿ ಬಂದ್ರ ನಾಯಿ, ಹಂದಿಗತೆ ಮಾಡ್ತೀರಿ. ನಿಮ್ಮ ಮ್ಯಾಲ ಕೇಸು ಮಾಡ್ತೀವಿ. ಹೊಡೆಯೋದು ಬಡಿಯೋದು ನಿಮಗಷ್ಟ ಗೊತ್ತೈತಿ ಅಂತ ಮಾಡಿರೇನು? ನಮ್ ಸಿಟ್ಟು ಏನಂಬದು ನಿಮಗ ತಿಳಿಸ್ತೀವಿ..." ದುರುಗಪ್ಪ ಸ್ವಲ್ಪ ಸಿಟ್ಟಲೆ ಮಾತಾಡಿದ. "ಲೇ ದುರುಗ ಸೊಕ್ಕು ಏನಲೆ... ನಮ್ ಮನಿ ಹೇಲು ತಿಂದು ಸೊಕ್ಕು ನೆತ್ತಿಗೇರೈತೇನಲೆ ನಿನಗ..." ಬಸನಗೌಡ ಪಕ್ಕದಲ್ಲಿ ನಿಂತಿದ್ದ ಒಬ್ಬನ ಕೈಯಲ್ಲಿದ್ದ ಕಟ್ಟಿಗಿಲಿಂದ ದುರುಗನ ತಲೆ, ಬೆನ್ನಿಗೆ ಹೊಡೆದ. ನಾಲ್ಕಾರು ಮಂದಿ ಆತನ ಮ್ಯಾಲ ಬಿದ್ದರು. ಕೇರಿಮಂದಿ ಊರ ಮಂದಿ ಕೈಯಾಗಿದ್ದ ಎರಡ್ಮೂರು ಬಡಿಗೆ ಕಸ್ಗಂಡು ಊರಮಂದಿ ಮ್ಯಾಲ ಏರಿ ಹೋದ್ರು. ಈ ಕೇರಿ ಮಂದಿ ನಮ್ಮನ್ನ ಬುಡಾಕಿಲ್ಲ ಅಂತ ಗುರುರಾಜ, ಶ್ಯಾಣಪ್ಪ ಮಲ್ಲಣ್ಣ ಮುಕುಳ್ಯಾಗ ಬಾಲ ಇಟಗಂಡು ಓಡಿದರು. ದುರುಗಪ್ಪ ನೆಲದ ಮ್ಯಾಲ ಬಿದ್ದು ಉಳ್ಳಾಡದು ನೋಡಿದ ಊರಮಂದಿ ಇಷ್ಟಕ್ಕ ಸಾಕು ಅಂಬಂತೆ ಓಟ ಕಿತ್ತರು... "ಚರ್ಚಿನ ಫಾದರ್‌ನಲ್ಲಿ ಕರ್‍ಕಂಡು ಹೋಗ್ಬಕು. ಏನಾದ್ರು ಔಷಧ ಕೊಡ್ತಾರ. ದುರುಗಪ್ಪನ ತಲಿ ಹೊಡದೈತಿ. ರಾಮುನ ಕೈಗಿ, ಯಲ್ಲನ ಬೆನ್ನಿಗೆ ಏಟು ಬಿದ್ದು ರಕ್ತ ಸೋರಾಕ ಹತ್ತೈತಿ..." ಅಂತ ಹುಲುಗ ಹೇಳಿದ. "ಫಾದರು ಮುಂಜಾನಿ ಬಳ್ಳಾರಿಗೆ ಹೋಗಿದಾರ, ಬಂದಾರೊ ಇಲ್ವೊ!" ಜಾರ್ಜ್

ಸಾಬನ್ನಾಡ್ರನಲ್ಲಿ ಕರ್‍ಕಂಡು ಹೋಗಿ ಯಾವುದಾದ್ರೂ ಸೊಪ್ಪಿನ ಔಷಧ ಕೊಡ್ಸಿದ್ರ ಆಯ್ತು" ಅಂತ ಲಚುಮ ದುರುಗಪ್ಪನ

ಊರಾಗಿನ ದೊಡ್ಡೋರು
ಅನಿಸಿಗೆಂಡೋರ ಮಾತು
ನಂಬಿ ಹಾಳಾಗಬ್ಯಾಡ್ರಿ.
ಸಾವಿರಾರು ವರ್ಷಗಳಿಂದ
ನಮ್ಮನ್ನ ಪ್ರಾಣಿಗಳಿಗಿಂತ
ಕಡೆಯಾಗಿ ನೋಡಿದ
ಮಂದಿ ನಮ್ಮನ್ನ
ಮನಿಸೇರುಗತೆ ನೋಡ್ತಾರ
ಅಂಬದು ಕನಸಿನ ಮಾತು.
ಅವ್ರೆಷ್ಟೇ ಒತ್ತಾಯ
ಮಾಡಿದ್ರೂ
ಮರುಮತಾಂತರ
ಆಗ್ಬ್ಯಾಡ್ರಿ...

ಎತ್ತಿಕೊಂಡ. ಲೂಯಿಸ್ ಕಡುವ್ರ ಹಿಡಿದ. ಬಸ್ಯಾ ಕಾಲುಹಿಡಕೊಂಡ. ನಿಧಾನವಾಗಿ ದುರುಗಪ್ಪನ್ನ ಎತ್ತಿಕೊಂಡು ಹುಸೇನ್‌ಸಾಬನ ಮನೆಯತ್ತ ಹೋದರು.

ಮನಿಮುಂದ ಹತ್ತಾರು ಮಂದಿ ನಿಂತಂತೆ ಕಂಡಾಗ ಹುಸೇನ್‌ಸಾಬ ಮನಿಯಾಗಿದ್ದ ದೀಪದ ಬೆಳಕನ್ನ ಹೆಚ್ಚುಮಾಡಿ ಹೊರಗ ನೋಡಿದ. ದೀಪ ಹೊರಗ ಹಿಡಿದು ಬಂದು ಅವರನ್ನ ಕಟ್ಟೆಮ್ಯಾಲಿ ಕೂಡಿಸಿದ. ಹೆಂಡತಿ ಮೌಲಾಬಿ ಬಂದ ಜನರಿಗೆ ಕುಡಿಯಾಕ ನೀರು ಕೊಟ್ಟಳು. ಹುಸೇನ್‌ಸಾಬ ಯಾವುದೊ ಸೊಪ್ಪಿನ ರಸ ಮಾಡಿ ದುರುಗಪ್ಪನ ತಲಿ, ಬೆನ್ನಿಗೆ ಹಚ್ಚಿದ. ಮೌಲಾಬಿ ತಂದುಕೊಟ್ಟ ಹಳೆ ದೋತರದ ಬಟ್ಟೆನ ತಲೆಗೆ ಕಟ್ಟಿದ. ಗಾಯಗಳಾದವರಿಗೆ ಸೊಪ್ಪ ಹಚ್ಚಿ ಸ್ವಲ್ಪ ಹೊತ್ತು ಕುಂತು ಹೋಗ್ರಿ ಅಂತ ಹೇಳಿ ಅವ್ರ ಸಮೀಪ ಕುಂತ. ಗುಡಿತಲ್ಲಿ ನಡೆದಿದ್ದನ್ನ ಒಬ್ಬೊಬ್ಬರು ಕಥಿಮಾಡಿ ಹೇಳಿದರು....

ಕೇರಿಯಲ್ಲಿ ಒಮ್ಮಿಂದೊಮ್ಮೆಲೆ ಗುಡಿಸಲುಗಳು ಉರಿಯಾಕ ಹತ್ತಿದ್ದು ಕಂಡಿತು. ಕೇರಿ ಹೆಣ್ಮಕ್ಳು, ಮಕ್ಳು ಹೊಯ್ಕೊಳ್ಳೋದು, ಅಳೋದು, ಚೀರೋದು ಕೇಳಿಸಿತು. ದುರುಗಪ್ಪನ ಎದಿ ಧಸಕ್ಕೆಂದಿತು. "ನಡ್ರಿ ನಡ್ರಿ.... ಜಲ್ದಿ ಹೋಗಿ ನೋಡಾಮ್ರಿ" ಅನ್ನುತ್ತಾ ಹುಸೇನ್‌ಸಾಬ ಎದ್ದುನಿಂತ. ದುರುಗಪ್ಪ ಮೈಯಾಗ ಅದೆಂತದೋ ಶಕ್ತಿ ಬಂದೈತಿ ಅಂಬಂಗ ಎದ್ದು ಅವರ ಹಿಂದ ಬೀಳುತ್ತಾ ಏಳುತ್ತಾ ನಡೆದ. ತಲೆಗೆ ಕಟ್ಟಿದ ಬಿಳಿ ಪಟ್ಟಿ ಲೂಜಾದಂತೆ ಅನ್ನಿಸಿತು. ಕುತ್ತಿಗೆವರೆಗೆ ಪಟ್ಟಿ ಇಳಿಯಿತು. ತಲಿಮ್ಯಾಲಿಂದ ರಕ್ತ ಸೋರುತ್ತಿತ್ತು. ಅಂಗೈಗಿ ರಕ್ತ ಒರೆಸಿಕೊಳ್ಳುತ್ತಲೆ ಓಡಿದ. ಬೆನ್ನಿನಲ್ಲಿ ಅಸಹನೀಯ ನೋವಾಯಿತು. ಕೇರಿ ಮುಂದ ಬರುತ್ತಲೇ ಇಪ್ಪತ್ತು ಮೂವತ್ತು ಜನ "ಭಾರತ ಮಾತಾಕಿ ಜೈ", "ಜೈ ಹಿಂದ್", "ಹಿಂದೂ ಧರ್ಮಕ್ಕೆ ಜಯವಾಗಲಿ", "ಹಿಂದೂ ಸೇನೆಗೆ ಜಯವಾಗಲಿ" ಎಂದು ಕೂಗಿದ್ದು ಕೇಳಿತು. ಕೈಯಲ್ಲಿ ಪಂಜು ಹಿಡಿದ ಜನ ಬಸ್ ಸ್ಟ್ಯಾಂಡಿನತ್ತ ಹೆಜ್ಜೆಹಾಕಿದರು. ಅವರಲ್ಲಿ ಹಿಂದೂಸೇನೆ ಮುಖಂಡ ಜಯದೇವ, ರಾಜೇಶಜೈನ್ ಕಂಡರು. "ಸನಾತನ ನೀತಿ ನಿಯಮ ಮೀರಿದ್ರ... ಎಲ್ಲರಿಗೂ ಇದ ಗತಿ..." ಎಂದು ಜೋರಾಗಿ ಕೂಗಿದ ಜಯದೇವ ಜೋಳದ ಹೊಲದಲ್ಲಿ

ಮತಾಂತರ

ಗುಬ್ಬಿ ಹೊಡೆಯುವಂತೆ ಕೇಕೆ ಹಾಕಿದ....

ದುರುಗಪ್ಪನ ತಲಿ ಮ್ಯಾಲಿಂದ ಕಪಾಳದ ಮೇಲೆ ರಕ್ತ ತಟ್ ತಟ್ ಅಂತ ಇಳೀತಿತ್ತು. ನಾಲ್ಕಾರು ಮಂದಿ ಕುಡ ಗುಡಿಸಲ ಮುಂದ ನಿಂತಾಗ ಆಕಾಶನ ಕಳಚಿ ಬಿದ್ದಂತೆ ಅನ್ನಿಸಿತು. ಗುಡಿಸಲು ಸಂಪೂರ್ಣ ಸುಟ್ಟಿತ್ತು. ಅಲ್ಲೊಂದು ಇಲ್ಲೊಂದು ಬಲಿಸು ಆಕಾಶಕ್ಕ ಮುಖಮಾಡಿ ಪಂಜಿನಂತೆ ಉರಿಯುತ್ತಿದ್ದವು. ಇನ್ನೂ ಉರಿ ಆರಿರಲಿಲ್ಲ. ಕೇರಿ ಜನ ಮಣ್ಣು, ನೀರು ಉಗ್ಗುತ್ತಿದ್ದರು. ಪಿಡ್ಡವ್ವ ಗಂಡ ಬಂದದ್ದು ನೋಡಿ ನೆಲಕ್ಕ ಬಿದ್ದು ಉಳ್ಳಾಡಿದಳು. ದಿಡಗ್ಗನೆ ಎದ್ದು ಕುಂತು ಕೈಯಲ್ಲಿ ಹುಡಿಮಣ್ಣು ಹಿಡಿದು ನೆಲಕ್ಕ ತೂರಿದಳು. "ಲೋ ಭಂಡನನ ಮಕ್ಕಾ... ಈಗ ಸಮಧಾನ ಆಯ್ತೇನು ನಿಮ್ ಜಲ್ಮಕ್ಕ... ಇನ್ನೊಬ್ಬರಿಗೆ ತೊಂದ್ರಿ ಕೊಡು ಅಂತ ಹೇಳುತ್ತೇನು ನಿಮ್ ಧರುಮ?" ಕೆಟ್ ದನೀಲೆ ಕೂಗಿದಳು. ಡೇವಿಡ್ ಬಂದು ಅವ್ವನ ಅಪ್ಪಿಕೊಂಡು ಬಕ್ಕಿ ಬಕ್ಕಿ ಅಳತೊಡಗಿದ. ಮಗಳು ಮೇರಿ ಕಾಣಲಿಲ್ಲ. ಇಬ್ರು ಮೂವರು ಗುಡಿಸಲಿನಿಂದ ಸುಟ್ಟು ಕಪಿಕಟ್ಟಿಗೆಯಂತಿದ್ದ ಕರಕಾದ ಮೇರಿ ದೇಹ ಹೊತ್ತು ತಂದರು. ದುರುಗಪ್ಪನ ತಲೆ ತಿರುಗಿದಂತಾಗಿ ನೆಲಕ್ಕ ದೊಪ್ಪನೆ ಬಿದ್ದ. ಪಿಡ್ಡವ್ವ ಹಿಡಿದ ಮಣ್ಣನ್ನೆ ಬಾಯಲ್ಲಿ ಹಾಕಿಕೊಂಡು ಏಕಾರವಾಗಿ ಚೀರತೊಡಗಿದಳು....


ಗುಡಿಸಲುಗಳಿಗೆ ಹತ್ತಿದ್ದ ಬೆಂಕಿ ಆರಿತ್ತು. ಕೇರಿ ಮಂದಿ ಹೊಟ್ಟೆಯಲ್ಲಿ ಅಗ್ನಿಕುಂಡ ಕತಕತ ಕುದಿಯುತ್ತಿತ್ತು. ಬಸ್ ಸ್ಟ್ಯಾಂಡಿನ ಸಮೀಪ ಕಟ್ಟಿದ್ದ ಕೇಸರಿ ಬಾವುಟಗಳು ಅರೆಬರೆ ಬೆಳಕಿಗೆ ಕಡುಕೆಂಪಾಗಿ ಕಂಡವು. ದುರುಗಪ್ಪ ಎಚ್ಚರಗೊಂಡ. ಪಕ್ಕದಲ್ಲೆ ಮೇರಿ ಅಲುಗಾಡದೆ ಮಲಗಿದ್ದಳು. ಪಿಡ್ಡವ್ವ ಸುಟ್ಟ ಮಗಳ ದೇಹದ ಮೇಲೆ ಬಿದ್ದು ಉರುಳಾಡಿದಳು. "ನಿನ್ನ ಕೊಂದ ಕೈಗಳಿಗೆ ಕರಿನಾಗರ ಕಡೀಲಿ. ಅವ್ರ ವಂಶನಾಶ ಆಗ್ಲಿ..." ಅಂತ ಬೈಯುತ್ತಿದ್ದಳು. ಕೇರಿಯ ಹತ್ತಾರು ಮಂದಿ, ಹುಸೇನ್‌ಸಾಬ, ತಳವಾರ ಯಮುನ ಕಣ್ಣಿಗೆ ಟವಲು ಹಿಡಿದು ಬಕ್ಕಿ ಬಕ್ಕಿ ಅಳುತ್ತಿದ್ದರು. ದುರುಗಪ್ಪ ಗುಡ್ಡದ ಮ್ಯಾಗಿದ್ದ ಚರ್ಚಿನ ಕಡೆ ನೋಡಿ ಒಂದು ನಿಮಿಷ ಕಣ್ಮುಚ್ಚಿ ನಿಂತ. ಫಾದರ್ ಮಿನೇಜಸಪ್ಪ ನೆನಪಾದ. ಅವ್ರು ಹೇಳುತ್ತಿದ್ದ ಕಥೆ ನೆನಪಾಯ್ತು. ಡೇವಿಡ್ ಅಪ್ಪನ ಸುತ್ತ ಕೈಹಾಕಿ ಅಪ್ಪಿಕೊಂಡ. ಮಗನನ್ನು ... ದುರುಗಪ್ಪ ಕರಕಲಾದ ಮೇರಿ ದೇಹ, ಸುಟ್ಟ ಗುಡಿಸಲು ನೋಡಿದ. ಪಂಜು ಹಿಡಿದು ಹೋದ ಜನ ... ಹೋದಂತೆ ಅನಿಸಿತು. ಚರ್ಚಿನ ಕಡೆ ಮುಖಮಾಡಿ ಎರಡೂ ಕೈಮುಗಿದು ಮನಸ್ಸಿನಲ್ಲೆ ಬೇಡಿಕೊಂಡ.

ಸೆಂಟ್ರಲ್ ಜೈಲ್‌ನಲ್ಲಿ ಖೈದಿಗಳೊಂದಿಗೆ ಕ್ರಿಕೆಟ್ ಆಡುವಾಗ ಆದ ಆತಂಕ, ಅನುಭವ, ಟೆನ್ಷನ್ ಮತ್ತು ನೋವಿನ ಜೀವನದ ನಡುವೆಯೂ ಅವರಿಗಿರುವ ಕ್ರಿಕೆಟ್ ಪ್ರೇಮವನ್ನು ಪ್ರತ್ಯಕ್ಷವಾಗಿ ಕಂಡ ವಿಶಿಷ್ಟವಾದ ಪಂದ್ಯದ ವಿವರ ಇಲ್ಲಿದೆ... ಓವರ್ ಟು ಯು....

ಹೊಡಿ ಮಗ ಹೊಡಿ ಮಗ



ಜೈಲಿಗೆ ಆಗಮಿಸುತ್ತಿರುವ ಪತ್ರಕರ್ತರ ತಂಡ




ಪಂದ್ಯವನ್ನು ವೀಕ್ಷಿಸುತ್ತಿರುವ ಖೈದಿಗಳು

"ಸೆಂಟ್ರಲ್ ಜೈಲಲ್ಲಿ ಒಂದು ದಿನ ಕಳೆಯಬೇಕು" ಎಂಬ ಆಸೆ ಬಹಳ ವರ್ಷಗಳಿಂದ ನನ್ನ ಮನಸ್ಸಿನಲ್ಲಿತ್ತು. ಆದರೆ ಜೈಲು ಸೇರುವ 'ಕ್ವಾಲಿಫಿಕೇಷನ್' ನನಗಿರಲಿಲ್ಲ ವಾದ್ದರಿಂದ ಈ ಆಸೆ ಕನಸಾಗಿಯೇ ಉಳಿದಿತ್ತು. ಇತ್ತೀಚೆಗೆ ನಮ್ಮ 'ಪತ್ರಿಕೆ'ಯ ವರದಿಗಾರ ರಾ. ಸೋಮನಾಥ್ ಕೂಡ "ಸಾರ್, ನನಗೂ ಒಂದು ದಿನ ಸೆಂಟ್ರಲ್ ಜೈಲಲ್ಲಿ ಇದ್ದು ಬರೋಣ ಅಂತ ಅನ್ನಿಸುತ್ತಿದೆ" ಎಂದು ಹೇಳಿದಾಗ ಅವರಿಗಿಂತ ಮೊದಲೇ ನಾನು ಅಲ್ಲಿಗೆ ಹೋಗಬೇಕೆಂಬ ಬಯಕೆ ದುಪ್ಪಟವಾಯಿತು.

ಇತ್ತೀಚೆಗೆ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಸೆಂಟ್ರಲ್ ಜೈಲಿಗೆ ಕಾಲಿಡುವ 'ಸೌಭಾಗ್ಯ' ನನಗೆ ಒದಗಿಬಂತು. ಅಂದು ನನ್ನೊಂದಿಗಿದ್ದ ಮಿತ್ರ "ಸಾರ್, ಬಲಗಾಲಿಟ್ಟು ಒಳಗಡೆ ಹೋಗ್ಬೇಡಿ" ಎಂದು ಹೆದರಿಸಿದ. ನಾನು ಬಲಗಾಲಿಟ್ಟೇ ಜೈಲು ಪ್ರವೇಶಿಸಿದೆ! ಜೈಲಿನ ಒಳಗೆ ನಮ್ಮ ಆಗಮನಕ್ಕಾಗಿ ಏಳುನೂರು ನಟೋರಿಯಸ್ ಖೈದಿಗಳು ಕಾಯುತ್ತಿದ್ದರು.

ಇದೇನಪ್ಪಾ ಎಂದು ಆಚ್ಚರಿಗೊಳ್ಳಬೇಡಿ. ನಿಜ ವೇನೆಂದರೆ, ನಾವು ಕ್ರಿಮಿನಲ್ ಕೃತ್ಯಗಳನ್ನು ಮಾಡಿ ಜೈಲು ಸೇರುವ ಬದಲಾಗಿ ಖೈದಿಗ ಳೊಂದಿಗೆ ಕ್ರಿಕೆಟ್ ಆಡುವ ನೆಪದಲ್ಲಿ ಜೈಲಿಗೆ ಹೋಗಿದ್ದೆವು! ವಿಶ್ವಕಪ್‌ನಲ್ಲಿ ಭಾರತದ ಕ್ರಿಕೆಟ್ ತಂಡ ಜಯಗಳಿಸಿ ಬರಲಿ ಎಂದು ನಾವು (ಪತ್ರಕರ್ತರು) ಮತ್ತು ಖೈದಿಗಳು ಜಂಟಿಯಾಗಿ ಚಿಯರ್ಸ್ ಹೇಳುವ ವಿಶಿಷ್ಟವಾದ ಪಂದ್ಯವದು.



ಜೈಲಿನಲ್ಲಿ ಕ್ರಿಕೆಟ್

ಆರಂಭದಲ್ಲೇ ಜೈಲಿನ ವಾತಾವರಣ ನೋಡಿ ನಮ್ಮ ತಂಡದ ಸದಸ್ಯರ ಮನೋಸ್ಥೈರ್ಯ ಕುಸಿದುಹೋಗಿತ್ತು, ಯಾಕೆಂದರೆ ಈ ಹಿಂದೆ ನಾವು ಮುಖ್ಯಮಂತ್ರಿಗಳ ತಂಡದ ಜೊತೆ, ವಿಷ್ಣುವರ್ಧನ್ ನಾಯಕತ್ವದ 'ಸ್ನೇಹಲೋಕ' ತಂಡದ ಜೊತೆ ಮತ್ತು ಪೊಲೀಸ್ ಕಮೀಷನರ್ ಅಚ್ಯುತರಾವ್ ತಂಡದ ಜೊತೆಯೆಲ್ಲಾ ಆಟವಾಡಲು ಹೋಗಿದ್ದಾಗ, ನಾವು ಭಾರತದ ಕ್ರಿಕೆಟ್ ತಂಡವೇನೋ ಎಂಬಂತೆ ಅವರೆಲ್ಲ ನಮ್ಮನ್ನು ಸ್ವಾಗತಿಸಿದ್ದರು, ಕೈ ಕುಲುಕಿದ್ದರು, ಆಲಂಗಿಸಿದ್ದರು. ಆದರೆ ಇಲ್ಲಿ ನಡೆದದ್ದೇ ಬೇರೆ. ಯಾಕೆಂದರೆ ನಮ್ಮ ಬಗ್ಗೆ ಖೈದಿಗಳು ಕ್ಯಾರೇ ಅನ್ನಲಿಲ್ಲ, ಎಂದಿನ ಸಕಲ ಗೌರವಗಳಿಂದ ವಂಚಿತರಾದ ನಾವು ಅಚ್ಚೇಪಾರಿಗಳ ಥರ ನಿಂತಿದ್ದೆವು.

ಅದು ನಮ್ಮ ಸಂಕಷ್ಟಗಳ ಪ್ರಾರಂಭ ಮಾತ್ರವಾಗಿತ್ತು, "ಯಾರೂ ಖೈದಿಗಳಿಗೆ ಶೇಕ್ ಹ್ಯಾಂಡ್ ಕೊಡಬೇಡಿ. ಅವರ ಬೆರಳುಗಳ ನಡುವೆ ಬ್ಲೇಡ್ ಇರುತ್ತದೆ" ಎಂದು ನಮ್ಮ ತಂಡದ ಸದಸ್ಯನೊಬ್ಬ ಸುಳ್ಳು ಹೇಳಿ ನಮ್ಮನ್ನು ಮೊದಲೇ ಹೆದರಿಸಿದ್ದ, ಹಾಗಾಗಿ ಒಂದಿಬ್ಬರು ಖೈದಿಗಳು ಸಹಜವಾಗಿಯೇ ಕೈ ಕುಲುಕಲು ಬಂದರೂ ನಾವೆಲ್ಲಾ 'ಇಂಡಿಯನ್ ಏರ್‌ಲೈನ್ಸ್ ಗಗನಸಖಿಯರ ತರಹ 'ನಮಸ್ತೇ' ಎಂದು ಅಚ್ಚ ಭಾರತೀಯ ಶೈಲಿಯಲ್ಲಿ ಅವರಿಗೆ ವಂದಿಸಿದೆವು.

ಪತ್ರಕರ್ತರ ತಂಡಕ್ಕೆ ನಾನೇ ಕ್ಯಾಪ್ಟನ್. ನಾವು ಟಾಸ್ ಸೋತರೂ ಖೈದಿಗಳ ತಂಡದ ನಾಯಕ ದೊಡ್ಡ ಮನಸ್ಸು ಮಾಡಿ ನಮಗೇ ಮೊದಲು ಬ್ಯಾಟಿಂಗ್ ಮಾಡಲು ಅವಕಾಶ ನೀಡಿದ. ಅಷ್ಟೊತ್ತಿಗೆ ದೂರದಲ್ಲಿ ಕುಳಿತುಕೊಂಡಿದ್ದ ಖೈದಿಯೊಬ್ಬ ಓಡಿಬಂದು ನಮ್ಮ ತಂಡದ ಸದಸ್ಯ 'ದಿ ಹಿಂದೂ' ಪತ್ರಿಕೆಯ ಛಾಯಾಗ್ರಾಹಕ ಸೋಮಶೇಖರ್‌ಗೆ "ಯಾಕೋ ಸೋಮ ಇತ್ತೀಚೆಗೆ ಬರ್‍ತಾನೇ ಇಲ್ಲ?" ಎನ್ನಬೇಕೆ! ಆತ ಅಷ್ಟು ಹೇಳಿದ್ದೇ ತಡ ಟೀವಿ-9 ಚಾನೆಲ್‌ನ ಸುನೀಲ್, "ಏನ್ ಸೋಮಾ, ನಿನ್ ಕ್ಲಾಸ್‌ಮೇಟಾ?" ಎಂದು ಚುಡಾಯಿಸಿದರು. ವಿಷಯ ಗಂಭೀರವಾಗುವ ಮುನ್ನವೇ "ಸಾರ್, ಮಹಾರಾಣಿ ಕಾಲೇಜು ಬಳಿ ಸೆಂಟ್ರಲ್ ಜೈಲ್ ಇದ್ದಾಗ ಪ್ರತೀ ವರ್ಷ ರಕ್ಷಾಬಂಧನಕ್ಕೆ ಫೋಟೋ ತೆಗೆಯಲು ಹೋಗುತ್ತಿದ್ದೆ. ನಮ್ಮ ಪರಿಚಯ ಅಷ್ಟೇ. ಆದರೂ ಅಂದಿನಿಂದ ನಾನು ಅವರ ಬಾಲ್ಯಸ್ನೇಹಿತ ಎಂಬಂತೆ 'ಏನೋ ಸೋಮ', 'ಬಾರೋ ಸೋಮ' ಎಂದು ಮಾತನಾಡಿಸುತ್ತಾರೆ. ಇಲ್ಲಿನ ಕನಿಷ್ಠ ಇಪ್ಪತ್ತೈದು ಜನರಿಗೆ ನನ್ನ ಹೆಸ್ರು ಗೊತ್ತು ಸಾರ್" ಎಂದು ಸೋಮಶೇಖರ್ ಸಮಜಾಯಿಷಿ ನೀಡಿದರು.

ಅಷ್ಟೊತ್ತಿಗೆ ಉದಯವಾಣಿಯ ಮಲ್ಲಿ ಓಡೋಡಿ ಬಂದರು. "ಸಾರ್... ಸಾರ್... ನಮ್ಮೂರ್‍ನೋರು ಮೂರ್‍ಜನ ಸಿಕ್ಕಿದ್ರು ಸಾರ್. ನನ್ನ ಗುರುತು ಹಿಡಿದ್ಬಿಟ್ರು, ನಾನು ಊರಲ್ಲೂ ಕ್ರಿಕೆಟ್ ಆಡಿದ್ದನ್ನು ಅವ್ರು ನೋಡಿದ್ದಾರಂತೆ' ಎಂದು ಅತ್ಯುತ್ಸಾಹದಿಂದ ಏನೋ ಸಾಧನೆ ಮಾಡಿದವರಂತೆ ಹೇಳಿಕೊಂಡರು. ಆಗ ವಿಜಯ ಕರ್ನಾಟಕದ ತ್ಯಾಗರಾಜ್ "ಅಲ್ಲಯ್ಯಾ, ನಿನ್ನ ಊರ್‍ನೋರು ಮೂರು ಜನ ಇಲ್ಲಿದ್ದಾರೆಂದರೆ, ಅದಕ್ಕೆ ನೀನು ದುಃಖ ಪಡಬೇಕೇ ವಿನಃ ಇಷ್ಟೊಂದು ಸಂತಸ ಪಡಬಾರದು" ಎಂದು ತಿಳಿಹೇಳಿದರು. ಅಲ್ಲಿಗೆ ಮಲ್ಲಿಯ ಸಂತೋಷ ಭಗ್ನಗೊಂಡಿತು.

ಅಂದು ಮುಖ್ಯ ಅತಿಥಿಯಾಗಿ ಬಂದಿದ್ದ 'ನೆನಪಿರಲಿ' ಖ್ಯಾತಿಯ ಪ್ರೇಮ್ ಸೆಂಟ್ರಲ್ ಜೈಲ್ ವಾತಾವರಣ ನೋಡಿ ದಂಗಾಗಿದ್ದರು. "ಇದು ನನ್ನ ಲೈಫ್‌ನಲ್ಲೇ ಮೊದಲ ಎಕ್ಸ್‌ಪೀರಿಯನ್ಸ್" ಎಂದು ಪ್ರೇಮ್ ಉದ್ಗಾರವೆತ್ತಿದಾಗ "ಇದು ಕೊನೆಯ ಎಕ್ಸ್‌ಪೀರಿಯನ್ಸ್ ಕೂಡ ಆಗಲಿ" ಎಂದು ಅರವಿಂದ್ ಹಾಸ್ಯ ಚಟಾಕಿ ಹಾರಿಸಿದರು. ಆದರೆ ಪ್ರೇಮ್ ಉದ್ಘಾಟನೆಯ ನಂತರ ಹೊರಟಾಗ ಖೈದಿಗಳು ಅವರನ್ನು ತಬ್ಬಿಕೊಂಡದ್ದು, ಆಟೋಗ್ರಾಫ್ ಪಡೆದದ್ದು... ಮೊದಲಾದ ಸಂಗತಿಗಳನ್ನು ಪ್ರೇಮ್ ಮರೆಯಲಾರರು.

ಕ್ರಿಕೆಟ್ ಆಟ ಆರಂಭವಾಯಿತು. ನಮ್ಮ ತ್ಯಾಗರಾಜ್ ಮತ್ತು ಅರವಿಂದ್ ಆರಂಭ ಆಟಗಾರರು. ಮೊದಲ ಆರು ಓವರ್‌ಗಳಲ್ಲಿ ಯಾವುದೇ ವಿಕೆಟ್ ಬೀಳದಿದ್ದರೂ ಹೆಚ್ಚು ರನ್ ಕೂಡ ಇವರಿಂದ ಗಳಿಸಲಾಗಲಿಲ್ಲ, ಆಗ ನಮ್ಮ ತಂಡದ ಸ್ಕೋರ್ ಬೋರ್ಡ್ ಹೀಗಿತ್ತು: 6-3-9-0. ಯಾವುದೇ ವಿಕೆಟ್ ನಷ್ಟವಿಲ್ಲದೆ ಒಂಬತ್ತು ರನ್, ಆರು ಓವರ್, ಮೂರು ಮೇಡನ್.... ಅಂದರೆ ಅವರ ಬೌಲಿಂಗ್ ಎಷ್ಟು ಕರಾರುವಕ್ಕಾಗಿತ್ತು ಎಂದು ನೀವೇ ಊಹಿಸಿ.

ಈ ಸ್ಕೋರ್ ನೋಡಿ ಪೆವಿಲಿಯನ್‌ನಲ್ಲಿದ್ದ ನಮ್ಮ ತಂಡದ ಇತರರು ಕ್ಯಾತೆ ತೆಗೆಯಲು ಶುರುಮಾಡಿದರು "ಅವರು ಬಾಲ್ ಥ್ರೋ ಮಾಡ್ತಿದ್ದಾರೆ, ಅಬ್ಜೆಕ್ಷನ್ ಮಾಡೋಣ" ಎಂದು. ಇದು 'ಕುಣಿಲಾರದ ವಳು ನೆಲ ಡೊಂಕು ಅಂದಳಂತೆ' ಎಂಬ ಗಾದೆಯನ್ನು ನೆನಪಿಸಿದ್ದರಿಂದ ಅಬ್ಜೆಕ್ಷನ್ ಮಾಡದೆ ಸುಮ್ಮನಾದೆವು. ಮೊದಲ ವಿಕೆಟ್ ಬಿದ್ದಾಕ್ಷಣ ಒನ್ ಡೌನ್ ಬ್ಯಾಟಿಂಗ್‌ಗೆ ಸೋಮಶೇಖರ್ ಇಳಿದರು. ಇವರು ನಮ್ಮ ತಂಡದ ಸಚಿನ್ ತೆಂಡೂಲ್ಕರ್. ಸಚಿನ್‌ನಷ್ಟೇ ಎತ್ತರವಿರುವ ಸೋಮಶೇಖರ್ ಅನೇಕ ಬಾರಿ ಎಪ್ಪತ್ತು, ಎಂಬತ್ತು ರನ್‌ಗಳನ್ನು ಹೊಡೆದು ನಮ್ಮ ತಂಡದ ಮಾನ ಕಾಪಾಡಿರುವವರು.

ಮೊದಲೆರಡು ಬಾಲ್‌ಗಳನ್ನು ಹಾಗೇ ಬಿಟ್ಟುಬಿಟ್ಟರು. ಮೂರನೇ ಬಾಲನ್ನು ಗಲ್ಲಿ ಕಡೆಗೆ ದೂಡಿ ರನ್ ಕದಿಯಲು ಹೊರಟರು. ಅಷ್ಟೊತ್ತಿಗೆ ಖೈದಿಗಳ ತಂಡದ ಸಿದ್ಧರಾಜು ಅಜರುದ್ದೀನ್ ಶೈಲಿಯಲ್ಲಿ ಓಡಿಬಂದು ಬಾಲನ್ನು ಹೆಕ್ಕಿ ನೆಲಕ್ಕುರುಳಿದರೂ ನೇರವಾಗಿ ವಿಕೆಟ್‌ಗೇ ಚೆಂಡನ್ನು ಗುರಿಯಿಟ್ಟು ಎಸೆದರು. ಅಂಪೈರ್ "ಔಟ್" ಎಂದರು. "ಫೋಟೋ ಫಿನಿಷ್ ಆಗಿದ್ದರಿಂದ ಔಟ್ ಆಗದೇ ಇರಬಹುದು. ಬೆನಿಫಿಟ್ ಆಫ್ ಡೌಟ್ ಬ್ಯಾಟ್ಸ್‌ಮನ್‌ಗೆ ನೀಡಬೇಕು" ಎಂದು ನಾವು ಕೇಳಿದ್ದೇ ತಡ, ಸಿದ್ಧರಾಜು ಓಡೋಡಿ ಬಂದ. ಅಲ್ಲೇ ನಿಂತಿದ್ದ ಸ್ಟಾರ್ ಟೀವಿಯ ಪ್ರಸನ್ನ ಅವರ ಕ್ಯಾಮೆರಾವನ್ನು ಕೈಗೆತ್ತಿಕೊಂಡು ಸಿದ್ಧರಾಜು ಅದನ್ನು ತಾನೇ ರಿವೈಂಡ್ ಮಾಡಿ ಅಂಪೈರ್‌ಗೆ ತೋರಿಸಿಬಿಟ್ಟ. ಆಗ 'ಥರ್ಡ್ ಅಂಪೈರ್' ನಿರ್ಣಯವನ್ನು ನಾವೆಲ್ಲಾ ಒಪ್ಪಲೇಬೇಕಾಯಿತು. ಸಿದ್ಧರಾಜನ ಸಮಯಪ್ರಜ್ಞೆ ಮತ್ತು ಜಾಣ್ಮೆಯನ್ನು ನೋಡಿ ನಾವೆಲ್ಲಾ ಸ್ತಂಭೀಭೂತರಾದೆವು.

ನಮ್ಮ ತಂಡದ 'ಸಚಿನ್' ಸೋಮ ಸೊನ್ನೆಗೆ ಔಟಾದ ನಂತರ ಬೇರೆ ಆಟಗಾರರ ಜಂಘಾಬಲವೇ ಕುಗ್ಗಿಹೋಯಿತು. ಇಂಡಿಯನ್ ಟೀಮ್‌ನಂತೆ ನಾವೆಲ್ಲಾ ಒಂದರಮೇಲೆ ಒಂದು ವಿಕೆಟ್ಟನ್ನು ಒಪ್ಪಿಸಿ ಪೆವಿಲಿಯನ್‌ನತ್ತ ಬಂದೆವು. ನಾನು ಕೊನೆಯ ಬ್ಯಾಟ್ಸ್‌ಮನ್ ಆಗಿ ಅಖಾಡಕ್ಕಿಳಿದು ಯಾವುದೇ ರನ್ ಗಳಿಸದಿದ್ದರೂ ನಾಟ್ ಔಟ್‌ಆಗಿ ಹಿಂದಿರುಗಿದ್ದರಿಂದ ಸ್ವಲ್ಪ ನಗುಮುಖದಿಂದಲೇ ಇದ್ದೆ.



ಸದಾಶಿವ ಶೆಣೈ

ನಲವತ್ತೇಳು ರನ್‌ಗಳಿಗೆ ಆಲ್‌ಔಟ್ ಆಗಿದ್ದ ನಮ್ಮ ತಂಡ ಇಷ್ಟೊಂದು ಕಳಪೆ ಆಟ ಯಾವತ್ತೂ ಆಡಿದ್ದೇ ಇಲ್ಲ, ಇದರಿಂದ ನಮಗೆ ನಿರಾಶೆಯಾಗಿದ್ದರೂ ಕ್ರಿಕೆಟ್ ಎಂಬ 'ಅನ್‌ಪ್ರೆಡಿಕ್ಟಬಲ್' ಆಟದಲ್ಲಿ ನಾವು ಗೆಲ್ಲುವ ಸಾಧ್ಯತೆ ಇದ್ದುದರಿಂದ ಸ್ವಲ್ಪ ಸಂತೋಷದಿಂದಲೇ ಇದ್ದೆವು. ಅದಕ್ಕೆ ತಕ್ಕಂತೆ ಮೊದಲ ನಾಲ್ಕು ಓವರ್‌ಗಳಲ್ಲಿ ಉಪಾಕರಣದ ಅನಿಲ್ ಮತ್ತು ಸ್ಟಾರ್‌ನ್ಯೂಸ್‌ನ ಪ್ರಸನ್ನ ಅತ್ಯುತ್ತಮ ಬೌಲಿಂಗ್ ಮಾಡಿ ನಾಲ್ಕು ವಿಕೆಟ್ಟುಗಳನ್ನು ಕಬಳಿಸಿದರು.

ಅಲ್ಲಿಯವರೆಗೂ ಗೆಲುವು ತಮ್ಮದೆ ಎಂದು ಬೀಗುತ್ತಿದ್ದ ಖೈದಿಗಳು ಒಮ್ಮೆಲೇ ಮೌನವಾದರು. ಇಡೀ ವಾತಾವರಣ ಒಂದು ರೀತಿಯ ಬಿಗುವಿನಿಂದ ಕೂಡಿತ್ತು, ಅಕಸ್ಮಾತ್ ನಾವು ಗೆದ್ದೇಬಿಟ್ಟರೆ ಆ ಖೈದಿಗಳು ನಮ್ಮನ್ನು,ಅಲ್ಲೇ ಮಟಾಶ್ ಮಾಡಬಹುದೇ ಎಂಬ ಆಧಾರವಿಲ್ಲದ ಅನುಮಾನವೂ ಮೂಡಿತು ನಮ್ಮ ತಂಡದ ಹಲವರಲ್ಲಿ, ಇದಕ್ಕೆ ಕಾರಣ ಕಾಮೆಂಟರಿ ನೀಡುತ್ತಿದ್ದವರೂ ಖೈದಿಗಳನ್ನು ಪ್ರಚೋದಿಸುವಂತೆ ಮಾತನಾಡುತ್ತಿದ್ದದ್ದೂ ಇರಬಹುದು!

ಇದೇ ಸಮಯಕ್ಕೆ ಬೌಂಡರಿ ಲೈನ್‌ನಲ್ಲಿ ಜಮಾಯಿಸಿದ್ದ ಖೈದಿಗಳೆಲ್ಲಾ "ಹೊಡಿ ಮಗಾ, ಹೊಡಿ ಮಗಾ" ಎಂದು ಬೊಬ್ಬೆಯಿಡಲಾರಂಭಿಸಿದರು. ಅವರು ಹೊಡಿ ಎಂದು ಹೇಳುತ್ತಿರುವುದು ಬಾಲಿಗೋ ಅಥವಾ ನಮಗೋ ಎಂದು ಗೊತ್ತಾಗಲಿಲ್ಲ, ಆಗ ಲಾಂಗ್ ಆನ್ ಮತ್ತು ಲಾಂಗ್ ಆಫ್‌ನಲ್ಲಿ ಫೀಲ್ಡಿಂಗ್ ಮಾಡಲು ನಮ್ಮ ಕೆಲವು ಆಟಗಾರರು ಹಿಂಜರಿದರು. ಪಾಕಿಸ್ತಾನದ ಆಟಗಾರರು ಬೆಂಗಳೂರಿನಲ್ಲಿ ಆಡುತ್ತಿದ್ದಾಗ ಬೌಂಡರಿ ಬಳಿ ಇರುವ ಪ್ರೇಕ್ಷಕರು ಹೇಗೆ ಅವರನ್ನು ಕಿಚಾಯಿಸುತ್ತಾರೋ ಅದೇ ರೀತಿ ಖೈದಿಗಳು ಫೀಲ್ಡಿಂಗ್ ಮಾಡುತ್ತಿದ್ದ ನಮ್ಮವರನ್ನು ಸ್ವಲ್ಪಮಟ್ಟಿಗೆ ಕಿಚಾಯಿಸುತ್ತಿದ್ದರು. ಆಗ ನಮ್ಮ ತಂಡದಲ್ಲೂ ರೌಡಿಗಳ ಥರ ಕಾಣಿಸುವ ದೇಹದಾರ್ಢ್ಯವನ್ನು ಹೊಂದಿದ್ದ ಆಟಗಾರರನ್ನು ಲಾಂಗ್ ಆನ್ ಮತ್ತು ಡೀಪ್ ಫೈನ್ ಲೆಗ್‌ಗೆ ಕಳಿಸಿದೆವು.

ಈ ಸಮಸ್ಯೆ ಬಗೆಹರಿಯುತ್ತಿದ್ದಂತೆ, ಕೆಲವು ಖೈದಿಗ ಟೀವಿ-9ನ ಕಿರಣ್ ಜೊತೆ ಅದೇನನ್ನೋ ಚರ್ಚಿಸುತ್ತಿರುವ ಕಂಡುಬಂತು. ಏನಾಗುತ್ತಿರಬಹುದು ಎಂದು ವಿಚಾರಿಸಿ ಕಿರಣ್ ಹೇಳಿದ್ದು ಏನು ಗೊತ್ತೆ? "ಇವರೆಲ್ಲ ಪತ್ರಕರ್ತ ತಂಡ ಖಂಡಿತವಾಗಿಯೂ ವಿನ್ ಆಗುತ್ತೆ ಎಂದು ಬೆಟ್ಟಿಂಗ್ ಕಟ್ಟಿದ್ದಾರಂತೆ. ಅದಕ್ಕೇ ಯಾವುದೇ ಕಾರಣಕ್ಕೂ ನೀ ಸೋಲಬಾರದು ಅಂತ ಗದರಿಸುತ್ತಿದ್ದಾರೆ" ಎಂದ ಬೆಟ್ಟಿಂಗ್ ಮಾತ್ರವಲ್ಲ, ಹೀಗೆ ಗದರಿಸಿ ಮ್ಯಾಚ್ ಫಿಕ್ಸಿಂ ಕೂಡ ಜೈಲಿನಲ್ಲಿ ನಡೆಯುವುದನ್ನು ನೋಡಿ, ಇದೆ ಆಯಿತಲ್ಲ, ಸೋತರೂ ನಮಗಿಲ್ಲಿ ಕಷ್ಟ ಕಟ್ಟಿಟ್ಟ ಬ ಎನಿಸಿತು.

ಇದಕ್ಕಿಂತಲೂ ಭಯಾನಕವಾದ ಇನ್ನೊಂದು ವಿಷ ಇತ್ತು, "ಸಾರ್, ನಮ್ಮ ತಂಡದಲ್ಲಿ ಬರೀ ಮುಸ್ಲಿಮರ ಪ್ರಾಬಲ್ಯ. ನಮಗೆಲ್ಲಾ ಜೈಲರ್ ಅವಕಾಶ ನೀಡ್ತಾ ಈ ನನ್‌ಮಕ್ಕಳನ್ನು ನೀವು ಸೋಲಿಸಲೇಬೇಕು" ಎಂ ಮತ್ತೊಬ್ಬ ಖೈದಿ ನಮಗೆ ಸುಪಾರಿ ನೀಡಿದ. ಸೆಂಟ್ ಜೈಲಿನಲ್ಲಿ ಕೂಡಾ ಹಿಂದೂ-ಮುಸ್ಲಿಂ ವಾರ್ ಜ ನಡೀತಿದೆ ನೋಡಿ.

ಅಂದು ನಾವು ಸೋಲುವುದನ್ನು ತಪ್ಪಿಸ ಯಾರಿಂದಲೂ ಸಾಧ್ಯವಿರಲಿಲ್ಲ, ಖೈದಿಗಳ ತಂಡದ ಜಯ ರೂವಾರಿ ಸರ್ಫೋರ್ಸ್ — ಈತ ಛಾಪಾ ಕಾಗದ ರೂವಾರಿ ಕರೀಂ ಲಾಲ ತೆಲಗಿಯ ರೈಟ್ ಹ್ಯಾಂಡ್ ಎರಡು ಸಿಕ್ಸರ್ ಎತ್ತಿ ವಿಜಯದ ಹೊಡೆತವನ್ನು ಬಾರಿಸಿ ಬಿಟ್ಟ. ಅದನ್ನು ಕಂಡು ಕ್ರೀಡಾಂಗಣದಲ್ಲಿದ್ದ ಖೈದಿಗಳ ಕೇಕೆ ಹಾಕುತ್ತಾ ಕ್ರೀಸ್‌ನ ಓಡಿಬಂದರು. ಆಗ ನಾವು ಬದ ದೆಯೋ ಬಡ ಜೀವ ಅಷ್ಟೇ ವೇಗವಾಗಿ ಪೆವಿಲಿಯನ್ ಓಡಿದೆವು.

ಹೀಗೆ ಓಡಿಬರುತ್ತಿದ್ದಾಗ ದಢೂತಿ ವ್ಯಕ್ತಿಯೊಬ್ಬ ನನ್ನ ಹಿಡಿದು "ನೀವು ಗೌರಿ ಲಂಕೇ ಪತ್ರಿಕೆಯೋರು ತಾನೆ?" ಎಂ ದುರುಗುಟ್ಟಿ ಕೇಳಿದ. ಆಗ ನ ತಕ್ಷಣ ನೆನಪಾಗಿದ್ದು ಸಹೋದ್ಯೋಗಿ ರಾ. ಸೋ ನಾಥ್. ಈ ಸೋಮನಾಥ್ ಯ ಬಗ್ಗೆ ಬರ್‍ದಿದ್ದಾರೋ, ಅದರ ಇವರಿಗೆ ಎಷ್ಟು ಸಿಟ್ಟಿದೆಯೆ ನನಗೇನಾಗುತ್ತದೋ ಎಂಬೆಲ್ಲ ಚಿಂತೆಗಳು ನನ್ನ ಮುಂದೆ ಸುಳಿದುಹೋದವು. ಕೊನೆಗೆ ಧೈರ್ಯ ಮಾಡಿಕೊಂಡು "ಹೌದು" ಅಂದೆ. ಆಗ ಆತ "ಸಾ ನಿಮ್ ಪತ್ರಿಕೆ ಇತ್ತೀಚೆಗೆ ನಮ್ಮ ಜೈಲ್ ಲೈಬ್ರ ಸರಿಯಾಗಿ ಬರ್‍ತಾಇಲ್ಲ, ಪ್ರತಿವಾರ ನಿಮ್ಮ ಪತ್ರಿಕೆ ಓದದಿ ನನಗೆ ಸಮಾಧಾನವೇ ಆಗಲ್ಲ, ದಯವಿಟ್ಟು ಸರಿಯ ಪತ್ರಿಕೆ ತಲುಪಿಸುವ ವ್ಯವಸ್ಥೆ ಮಾಡಲು ನಿಮ್ಮ ಮೇಡ ಹೇಳಿ" ಎಂದ. ನಾನು ಶಿಸ್ತಿನ ಸಿಪಾಯಿಯು "ಆಯ್ತಾಯ್ತು" ಎಂದು ತಲೆ ಅಲ್ಲಾಡಿಸಿ ಅಲ್ಲಿಂದ ಓಡಿ

ನಮ್ಮ ವಿರುದ್ಧ ಜಯಗಳಿಸಿದ್ದ ತಂಡದ ಎ ಆಟಗಾರರು ಜೀವಾವಧಿ ಶಿಕ್ಷೆಗೆ ಒಳಗಾಗಿದ್ದರು. ಅವ ತೆಲಗಿ ಬಂಟ ಪ್ರಮುಖನಾದರೆ, ಏಳು ವರ್ಷಗಳಿ ಜೈಲಿನಲ್ಲಿ ಕೊಳೆಯುತ್ತಿರುವ ಬಿ.ಇ.ಎಲ್.ನ ಕಾಮಿ ನಾಯಕ ಸಿದ್ದರಾಜು ಮತ್ತೊಬ್ಬ, ಶಂಕರ್, ಮ ಮೊದಲಾದ ಖೈದಿಗಳು ನಮ್ಮನ್ನು ಸಂತೋಷದಿ ಆಲಂಗಿಸಿದಾಗ ಆ ಕ್ಷಣ ಅವರ ಹಿನ್ನೆಲೆ, ಅವರು ಮಾಡ

ವಿಜಯಿ ತಂಡ ಮತ್ತದರ ನಾಯಕ ಸರ್ಫೋರ್ಸ್



ಮರೆತು ನಾವೂ ಸಹೋದರರಂತೆ ಅವರನ್ನು ಸ್ವಿಕೊಂಡೆವು. ಆಗ ಅವರಲ್ಲಿ ಅನೇಕರು ಕಣ್ಣೀರು ವರು.


ವಿ-9 ನ ಸನತ್ ಕುಮಾರ್, ವಿಕೃತ ಕಾಮಿ ಉಮೇಶ್ ಗ್ಗೆ ಕುತೂಹಲ ವ್ಯಕ್ತಪಡಿಸಿದಾಗ ಜೈಲಿನ ಮುಖ್ಯಸ್ಥ ು "ಅವ್ನ ತುಂಬಾ ಒಳ್ಳೆಯ ಆಲ್ ರೌಂಡ್ ಆಟಗಾರ. ಇವನ್ನಿನ ತಂಡದಲ್ಲಿದ್ದಿದ್ದರೆ ನೀವು 25ಕ್ಕೇ ಆಲ್ ಆಗುತ್ತಿದ್ದಿರಿ" ಎಂದರು. ಸದ್ಯಕ್ಕೆ ಆತನನ್ನು ಬೆಳಗಾವಿಯ ದ ಜೈಲಿಗೆ ವರ್ಗಾಯಿಸಿರುವುದು ನಮ್ಮ ಅದೃಷ್ಟ ಭಾವಿಸಿದೆವು.

ೈಲಿನಲ್ಲೇ ನಮಗೆಲ್ಲ ಊಟದ ವ್ಯವಸ್ಥೆ ಮಾಡಲಾಗಿತ್ತು. ದ್ದ ನಮ್ಮ ತಂಡದೊಂದಿಗೆ, ವಿಜಯೀ ತಂಡದ ರನ್ನೂ ಅತಿಥಿಮಂದಿರಕ್ಕೆ ಆಹ್ವಾನಿಸಿದ್ದರು ಅಬ್ಬಾಯಿ. ಾನ್ಯವಾಗಿ ಖೈದಿಗಳಿಗೆ ಈ ಅತಿಥಿಮಂದಿರಕ್ಕೆ ಶವಿಲ್ಲ, ಊಟ ಮಾಡುವ ಮುನ್ನ ನಾವು ಕೈ-ಕಾಲು ಯುತ್ತಿದ್ದಾಗ ಅತಿಥಿಮಂದಿರದಲ್ಲಿದ್ದ ಮಾಡ್ರನ್ ಟ್ಟನ್ನು ನೋಡಿದ ಖೈದಿಯೊಬ್ಬ "ಸಾರ್, ಮಾರ್ಬಲ್ ಇಂತಹ ಟಾಯ್ಲೆಟ್ ಮತ್ತು ಸ್ನಾನದಮನೆಯನ್ನು ಎಂಟು ವರ್ಷವಾಯಿತು" ಎಂದು ಹಲುಬಿದ. ಅಲ್ಲ, ಇಂತಹದ್ದನ್ನು ಮತ್ತೆ ಯಾವತ್ತು ನೋಡುತ್ತೇನೋ ತೆ ಆತ ನಾಲ್ಕಾರು ಬಾರಿ ತನ್ನ ಮುಖ, ಕೈ ಕಾಲುಗಳನ್ನು ದುಕೊಂಡು ಸಂತೋಷಪಟ್ಟ. ಆ ದೃಶ್ಯವನ್ನು ನೀವು ದ್ದರೆ ಜೈಲಿನಲ್ಲಿ ಜೀವನ ಹೇಗಿರುತ್ತದೆ ಎಂಬ ಸಣ್ಣ ಸಿಗುತ್ತಿತ್ತು.

ಂದಿನಂತೆ ರಾಗಿ ಮುದ್ದೆ ಊಟ. ಆದರೆ ಅದೊಂದು ದಿನವಾಗಿದ್ದರಿಂದ ಬಿಸಿಬೇಳೆಬಾತ್ ಮತ್ತು ಮೊಸರನ್ನ ಮಾಡಿದ್ದರು. ನಾವು ಕೈಯಲ್ಲಿ ತಟ್ಟೆ ಹಿಡಿದುಕೊಂಡು ಲ್ಲಿ ನಿಂತಿದ್ದಾಗ ನಮಗಿಂತ ಮುಂಚೆ ಊಟ ಮುಗಿಸಿದ್ದ ತಂಡದವರೊಬ್ಬರು "ಊಟ ತುಂಬಾ ಚೆನ್ನಾಗಿದೆ" ಹೇಳಿದರು. ಅದನ್ನು ಕೇಳಿ ಪಕ್ಕದಲ್ಲಿದ್ದ ಖೈದಿಯೊಬ್ಬ ಡ್ ಮಗಾ, ಈತ ಇಲ್ಲೇ ಉಳ್ಕೊಳ್ಳಕ್ಕೆ ಸ್ಕೆಚ್ ಹಾಕ್ತಾ ಅನ್ನಬೇಕೆ! ಜೈಲಿನಲ್ಲಿದ್ದರೂ ಅವರಲ್ಲಿ ಹಾಸ್ಯ ಪ್ರಜ್ಞೆ ತವಾಗಿರುವುದನ್ನು ನೋಡಿ ನಮಗೆಲ್ಲಾ ಆಶ್ಚರ್ಯ. ಊಟ ಮುಗಿದ ನಂತರ ಜೈಲು ಮುಖ್ಯಸ್ಥ ು "ಊಟ ಹೇಗಿತ್ತು?" ಎಂದು ಕೇಳಿದಾಗ ಗಿತ್ತು" ಎಂದು ಹೇಳುವ ಧೈರ್ಯ ನಮ್ಮವರ್‍ಯಾರೂ ಲಿಲ್ಲ!

ಾಸ್ಯಪ್ರಜ್ಞೆಯ ಜೊತೆಗೆ ಜೈಲಿನಲ್ಲಿ ಬದುಕು ಮತ್ತು ಬಗೆಗಿನ ವಿಚಾರಗಳೂ ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ. ಹರಣೆಗೆ ನಮ್ಮ ಎದುರಾಳಿ ತಂಡದ ನಾಯಕ ನದೀಮ್ ಮೊನ್ನೆಯಷ್ಟೇ ಜೀವಾವಧಿ ಶಿಕ್ಷೆ ಘೋಷಣೆಯಾಗಿತ್ತು. ಗೆ ಶಿಕ್ಷೆಯಾದ ವಿಷಯ ತಿಳಿದಾಕ್ಷಣ ಆತನ ತಾಯಿ ದಾಘಾತದಿಂದ ತೀರಿಕೊಂಡಳು. ಈ ಎರಡೆರಡು ನ ಮಧ್ಯೆಯೂ ಆತ ನಾಯಕನಾಗಿ ತನ್ನ ಜವಾಬ್ದಾರಿ ದಕ್ಷತೆಯಿಂದ ಪೂರೈಸಿ ಖೈದಿಗಳ ತಂಡಕ್ಕೆ ಜಯ ಕೊಟ್ಟ. ಆದರೆ ಆ ಸಂದರ್ಭದಲ್ಲಿ ಆತನ ಮನೋಸ್ಥಿತಿ ಬೇಕೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ತನಗಾದ ಬಗ್ಗೆ ನೋವು, ತಾಯಿಯ ಅಗಲಿಕೆಯ ದುಃಖ, ದನ್ನೂ ಮರೆತು ಆತ ಗೆಲುವನ್ನು ಆನಂದಿಸಲು ಸಾಧ್ಯ? ಆದ್ದರಿಂದಲೇ ಆತನ ತಂಡ ಗೆದ್ದಿದ್ದರೂ ಆತ ತಂಡದ ನಾಯಕನಂತೆ ಹ್ಯಾಪಿ ಮೋರೆ ಹಾಕಿ ರುವುದನ್ನು ನೋಡಿ ನನ್ನ ಮನಸ್ಸು ಕಂಬನಿ ಮಿಡಿಯಿತು.

ಂಜೆಯಾಗುತ್ತಿದ್ದಂತೆ ನಾವು ಜೈಲಿನಿಂದ ಹೊರಡಲು ಾದೆವು. ಆದರೆ ನಮ್ಮನ್ನು ನೋಡಿ ಜೈಲಿನ ಅಧಿಕಾರಿಗೆ ಏಕೆಂದರೆ ಜೈಲಿನೊಳಕ್ಕೆ ಹೋಗಿದ್ದು ನಮ್ಮ ಹದಿನೈದು



ಹೊರಬರುತ್ತಿರುವ ಕೈದಿ

ಜನರ ತಂಡ. ಆದರೆ ಹೊರಗೆ ಬರುತ್ತಿರುವುದು ಹದಿನಾರು ಜನರ ತಂಡ. ಆಗ ಅವರು ನೋಡಿದರೆ ನಮಗೇ ಗೊತ್ತಿಲ್ಲದಂತೆ ಖೈದಿಯೊಬ್ಬ ನಮ್ಮ ನಡುವೆ ಸೇರಿಕೊಂಡು ಲೋಕಾರೂಢನಾಗಿ ಮಾತನಾಡುತ್ತಾ ಹೊರನಡೆಯಲು ನಿಂತಿದ್ದಾನೆ. ಅವನನ್ನು ಪತ್ತೆ ಹಚ್ಚಿದ ಅಧಿಕಾರಿ ತನ್ನ ಲಾಠಿಯನ್ನು ಬೀಸಿದಾಗ ಟಿ. ಉಷಾಳನ್ನೇ ಮೀರಿಸುವಂತೆ ಜೈಲಿನೊಳಗಡೆ !

ಿಮಾಗಳಲ್ಲಿ ನಾಯಕನಟ ಜೈಲಿನಿಂದ ಹೊರಬರು ದೃಶ್ಯ ನೆನಪಿಸಿಕೊಳ್ಳಿ, ಹಾಗೆ ನಾವೂ ಮೈಮುರಿಯುತ್ತಾ ಬಂದೆವು. ಆ ದೃಶ್ಯವನ್ನು ವಿಜಯಕರ್ನಾಟಕದ ಗ್ರಾಹಕ ಶ್ರೀಧರ್ ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದರು. ಈತನಕವೂ ಆ ಫೋಟೋಗಳನ್ನು ಅವರು ದಿಗೂ ನೀಡಿಲ್ಲ, ಆತ ಅವನ್ನು ಯಾವುದಾದರೂ ನೀಡಿ "ಜೈಲಿನಿಂದ ಬಿಡುಗಡೆಯಾಗಿರುವ ರು" ಎಂಬ ಕ್ಯಾಪ್ಷನ್‌ನೊಂದಿಗೆ ಅದು ಪ್ರಕಟವಾಗುವ ನಮ್ಮನ್ನು ಕಾಡುತ್ತಿರುವುದರಿಂದ ನಾವಲ್ಲಿ ಈಗ

ಥ್ಯಾಂಕ್ಸ್ ಷುಗರ್!

■ ಕೆ. ಪರೀಕ್ಷಾ



ಅದೊಂದು ನಿಗೂಢ ಲೋಕ: ಪರದೆಯ ಹಿಂದಿನ ಪಾತ್ರಗಳು ಪರದೆಯ ಮುಂದೆ ಬರುವುದೇ ವಿರಳ. ಮದುವೆ-ಸಮಾರಂಭ, ದರ್ಗಾ, ಉರುಸುಗಳಲ್ಲಿ ಬುರ್ಖಾಗಳಲ್ಲಿ ಕಾಣಿಸಿಕೊಳ್ಳುವ ಇವರು-ಸಾರ್ವಜನಿಕ ವಲಯಗಳಲ್ಲಿ ಮಾಯವಾಗಿರುತ್ತಾರೆ.

1981 ರಲ್ಲಿ ಮದುವೆಯಾಗಿ ಹರಿಹರಕ್ಕೆ ಬಂದ ನಾನು ಕೆಲಸ ಮಾಡುತ್ತಿರುವ ಎ.ಪಿ.ಎಂ.ಸಿ.ಯ ಯಾರ್ಡಿನಲ್ಲಿ ಇದೇ ಸಮುದಾಯದ ಮಹಿಳೆಯರನ್ನು ಪ್ರಾಂಗಣದಲ್ಲಿ ನೋಡಿದ್ದೇ ಇಲ್ಲ. ಐದು ವರ್ಷಗಳ ಹಿಂದೆಯಷ್ಟೇ ಇಲ್ಲಿಯ ಮುಸ್ಲಿಂ ಡಾಕ್ಟರೊಬ್ಬರ ಪತ್ನಿ ಎಪಿಎಂಸಿ ಯಾರ್ಡಿನಲ್ಲಿ ವಾಕಿಂಗ್ ಬರುವುದನ್ನು ಕಂಡ ಆ ಲೋಕದ ಕೆಲವು ಮಹಿಳೆಯರು "ಅಯ್ಯೋ! ಅವಳು ಬುರ್ಖಾನೆ ಹಾಕುವುದಿಲ್ಲ" ಎಂದು ಅಂದುಕೊಂಡರೆ ಇನ್ನೂ ಕೆಲವರು "ಥೂ! ಅವಳೆಂಥಾ ಹೆಂಗಸು? ನಮಾಜಿನ (ಅಸರ ನಮಾಜ್) ಸಮಯದಲ್ಲಿ ಹೇಗೆ ವಾಕಿಂಗ್ ಹೋಗ್ತಾಳೆ ನೋಡಿ?" ಎಂದು ಮೂಗು ಮುರಿದಿದ್ದರು.

ಅಂದರೆ ಹಿಂದಿನ ದಿನಗಳಲ್ಲಿ ಆ ಲೋಕದ ಹೆಂಗಸರು ವಾಕಿಂಗ್‌ಗಾಗಿ ಎಂದು ಹೊರಗೆ ಬರುತ್ತಲೇ ಇರಲಿಲ್ಲ. ಆದರೆ ಈಗ- 4, 5 ವರ್ಷಗಳಿಂದೀಚೆಗೆ- ಒಬ್ಬೊಬ್ಬರೇ ಎಪಿಎಂಸಿ ಯಾರ್ಡಿಗೆ ವಾಕಿಂಗ್‌ಗಾಗಿ ಬರುತ್ತಿದ್ದಾರೆ. ಸೀರೆಗಳಲ್ಲಿ, ಬುರ್ಖಾ, ಚೌಧರ್, ಶಾಲು ಹೊದ್ದು ಪಂಜಾಬಿ ತೊಟ್ಟು ಮತ್ತು ಕೆಲವರು ನೈಟಿಯಲ್ಲೂ ಬರುವುದುಂಟು. ಕೆಲವರು ಬೆಳಿಗ್ಗೆ ಬಂದರೆ ಮತ್ತೆ ಕೆಲವರು ಸಾಯಂಕಾಲ ಬರುತ್ತಿದ್ದಾರೆ.

ಹೀಗೆ ಬರುತ್ತಿರುವುದಕ್ಕೆ ಬಹುಶಃ ಮುಸ್ಲಿಂ ಮಹಿಳೆಯರಲ್ಲಿ ಉಂಟಾಗುತ್ತಿರುವ ಆರೋಗ್ಯ ಪ್ರಜ್ಞೆ ಕಾರಣವಿರಬಹುದು ಎಂದು ನಾನು ಖುಷಿಪಟ್ಟಿದ್ದೆ. ಆದರೆ ಒಬ್ಬೊಬ್ಬರನ್ನೇ ವಿಚಾರಿಸಿದ ನಂತರ ಗೊತ್ತಾಗಿದ್ದೇನೆಂದರೆ ಅವರೆಲ್ಲ 'ಮಧುಮೇಹಿ'ಗಳು ಎಂಬುದು! ಅವರಲ್ಲಿ 99% ಷುಗರ್ ಕಾಯಿಲೆಯವರಾಗಿದ್ದಾರೆ.

1981 ರಲ್ಲಿ ವ್ಯಾಪಾರ ವಹಿವಾಟು ಇಲ್ಲದೇ ಬಿಕೋ ಎನ್ನುತ್ತಿದ್ದ ಎಪಿಎಂಸಿಯ ವಿಶಾಲವಾದ 82 ಎಕರೆ ಜಾಗದಲ್ಲಿ ಈಗ ಆಂತರಿಕ ಟಾರ್ ರಸ್ತೆಗಳಾಗಿವೆ. ಈಗಲೂ ವ್ಯಾಪಾರ ವಹಿವಾಟುಗಳಿಲ್ಲದೇ ಬಿಕೋ ಎನ್ನುವ ಎಪಿಎಂಸಿ ಯಾರ್ಡು ಬೆಳಿಗ್ಗೆ ಮತ್ತು ಸಾಯಂಕಾಲ ಮಾತ್ರ ವಾಕಿಂಗ್ ಬರುವ ಜನರಿಂದ ಗಿಜಿಗುಡುತ್ತಿರುತ್ತದೆ.

ನನಗೆ ಖುಷಿ ನೀಡಿದ ವಿಷಯವೇನೆಂದರೆ ಯಾವ ಕಾರಣಕ್ಕೂ ಹೊರಗೆ ಬರಲು ಒಪ್ಪದ ಮುಸ್ಲಿಂ ಮಹಿಳೆಯರು ಷುಗರ್ ಕಾರಣಕ್ಕಾದರೂ ಹೊರಗೆ ಕಾಲಿಡುತ್ತಿದ್ದಾರಲ್ಲ! ಒಬ್ಬರಿಂದ ಆರಂಭವಾಗಿ ಕೇವಲ 5 ವರ್ಷಗಳಲ್ಲಿ 15 ರಿಂದ 16 ರವರೆಗೆ ಮುಸ್ಲಿಂ ಮಹಿಳೆಯರು ಎಪಿಎಂಸಿ ಯಾರ್ಡ್ ವಾಕಿಂಗ್ ಬರುತ್ತಿದ್ದಾರೆ. ಈ ಮಹಿಳೆಯರನ್ನು ಹೀಗಾದರೂ ಹೊರ ಎಳೆದಿದ್ದಕ್ಕೆ "ಥ್ಯಾಂಕ್ಸ್ ಷುಗರ್" ಅನ್ನೋಣವೇ?!

ಕೊಡುಕೊಳ್ಳುವಿಕೆಯೊಂದೇ ದಾರಿ

ಸಾ.ರಾ. ಅಬೂಬಕರ್



'ನನ್ನ ಈ ಜನರು ಒಂದಾಗಬೇಕು' ಎಂದು ಲಂಕೇಶ್ ಅವರು ಕೊಟ್ಟ ಕರೆ ಇಂದು ಮರೆಯಾಗಿಹೋಗಿದೆ. ಸಂಘ ಪರಿವಾರದ ಬೋಧನೆ ಈ ಜನರನ್ನು ಮತ್ತಷ್ಟು ದೂರ ಸರಿಸುತ್ತಿದೆ. 'ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ.' ಮುಂತಾದ ಬೋಧನೆಗಳೆಲ್ಲ ಎಂದೋ ಮರೆಯಾಗಿವೆ. ಇಟ್ಟಿಗೆ, ಪಾದುಕೆ ಮುಂತಾದವುಗಳು ಪೂಜಾರ್ಹವಾಗುತ್ತಿವೆ. ಮನುಷ್ಯರ ರಕ್ತವನ್ನು ಹರಿಸಿಯೇ ತೃಪ್ತಿ ಕಾಣುವ ಜನರ ದೊಡ್ಡ ಸಮೂಹವೇ ತಯಾರಾಗಿದೆ. ಇಂತಹ ಪರಿಸ್ಥಿತಿಗೆ ಹಿಂದೂ ಕೋಮುವಾದದಷ್ಟೇ ಮುಸ್ಲಿಂ ಕೋಮುವಾದವೂ ಕಾರಣವಾಗಿದೆ. ಮತ್ತು ಅಷ್ಟೇ ಅಪಾಯಕಾರಿ ಕೂಡಾ ಆಗಿದೆ.

ಧರ್ಮದ ಆಧಾರದಲ್ಲಾಗಲಿ, ಲಿಂಗದ ಆಧಾರದಲ್ಲಾಗಲಿ ತಾರತಮ್ಯ ಮಾಡಲು ಇಲ್ಲಿ ಸಾಧ್ಯವಿಲ್ಲ. ಇಲ್ಲಿನ ಸಂವಿಧಾನದಂತೆ ಇಲ್ಲಿ ಎಲ್ಲರೂ ಸಮಾನರು. ನಮ್ಮ ದೇಶದ ಅತ್ಯುಚ್ಚ ಸ್ಥಾನದಲ್ಲಿರುವ ನಾಲ್ವರನ್ನು ನೋಡಿ. ನಮ್ಮ ರಾಷ್ಟ್ರಾಧ್ಯಕ್ಷರು ಓರ್ವ ಮುಸ್ಲಿಂ. ಪ್ರಧಾನಮಂತ್ರಿಗಳು ಓರ್ವ ಸಿಖ್. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಓರ್ವ ದಲಿತರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಓರ್ವ ಕ್ರೈಸ್ತ ಮಹಿಳೆ. ಇದು ನಮ್ಮ ಭಾರತ! ನಮ್ಮ ಜಾತ್ಯತೀತತೆಗೆ ಮತ್ತು ಸಮಾನತೆಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? ಈ ಸಂವಿಧಾನವೇ ನಮ್ಮ ಬೆಳಕು. ನಾವು, ಮುಸ್ಲಿಮರು ಈ ಸಂವಿಧಾನದಿಂದ

ನ್ಯಾಯಾಲಯಗಳಿಂದ ಮುಸ್ಲಿಂ ಮಹಿಳೆಯರಿಗೆ ಎಂದಿಗೂ ನ್ಯಾಯ ದೊರೆಯುವುದಿಲ್ಲ ಎಂಬುದನ್ನು ಇತ್ತೀಚೆಗಿನ ಹಲವು ಪ್ರಕರಣಗಳಿಂದ ನಾವು ಕಂಡುಕೊಂಡಿದ್ದೇವೆ.

ಇಲ್ಲಿ ಇನ್ನೂ ಒಂದು ವಿಷಯ ಹೇಳಬೇಕಾಗಿದೆ. ಇಂತಹ ವಿಷಯಗಳಲ್ಲಿ ಇಸ್ಲಾಂ ಧರ್ಮದ ನಿಲುವೇನು? ಮುಸ್ಲಿಮರು ನಮಾಜ್, ಉಪವಾಸ ಮುಂತಾದ ಧಾರ್ಮಿಕ ನಿಯಮಗಳನ್ನು ಹೊರತುಪಡಿಸಿ ಸಾಮಾಜಿಕ ನಿಯಮಗಳ ಕುರಿತು ತಾವು ಯಾವ ದೇಶದಲ್ಲಿ ಬದುಕುತ್ತಿದ್ದಾರೆಯೋ ಆ ದೇಶದ ಕಾನೂನಿಗನುಸಾರವಾಗಿ ಬದುಕಬೇಕೆಂದು ಪ್ರವಾದಿಗಳು ಬೋಧಿಸಿದ್ದಾರೆ. ಹಾಗೆಯೇ ನಾವು ಈ ದೇಶದ ಕ್ರಿಮಿನಲ್ ಪ್ರೊಸಿಜರ್ ಕೋಡನ್ನು ನಮ್ಮ ಸಮಾಜದಲ್ಲಿ ಅಳವಡಿಸಿಕೊಂಡಿದ್ದೇವೆ. ಹಾಗಾದರೆ ಈ ದೇಶದ ನಾಗರಿಕ ಸಂಹಿತೆ ನಮಗೆ ಅನ್ವಯಿಸಲಾಗುವುದಿಲ್ಲವೇ? ಇಂತಹ ವಿಷಯಗಳಲ್ಲಿ ನಾವು ಹಠವಾದಿಗಳಾದರೆ ಸಂಘ ಪರಿವಾರಕ್ಕೆ ಕೆಳವರ್ಗದ ಹಿಂದೂಗಳನ್ನು ತಮ್ಮೆಡೆಗೆ ಸೆಳೆಯಲು ಹಾದಿ ಮಾಡಿ

ಮುಸ್ಲಿಮರೆಲ್ಲರೂ ಕೋಮುವಾದಿಗಳಲ್ಲ; ಭಯೋತ್ಪಾದಕರೂ ಅಲ್ಲ. ದೇಶದ ಜನಸಂಖ್ಯೆಯ 15% ಮುಸ್ಲಿಮರಲ್ಲಿ 10% ಮುಸ್ಲಿಮರು ಅಥವಾ ಅದಕ್ಕಿಂತ ಹೆಚ್ಚು ಜನರು ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದೆ ಅನಕ್ಷರತೆ ಮತ್ತು ಬಡತನದಿಂದ ನರಳುತ್ತಿರುವ ಮುಸ್ಲಿಮರಾಗಿದ್ದಾರೆ. ಇಲ್ಲಿ ಮುಸ್ಲಿಮರ ಒಂದು ಸಣ್ಣ ಗುಂಪು ಈ ಸಮಾಜವನ್ನು ತಮ್ಮ ಬಿಗಿ ಮುಷ್ಟಿಯಲ್ಲಿಟ್ಟುಕೊಂಡು ಇಡೀ ಸಮಾಜವನ್ನು ಹಾದಿ ತಪ್ಪಿಸುತ್ತಿದೆ., ಇಂದು, ಸಲಫಿ, ಜಮಾತೆ ಇಸ್ಲಾಮಿ, ಸುನ್ನಿ, ತಬ್ಲಿಕ್ ಜಮಾತ್ ಎಂದು ಮುಸ್ಲಿಮರು ಹಲವು ಗುಂಪುಗಳಾಗಿ ಒಡೆಯುತ್ತಿದ್ದಾರೆ. ಒಂದು ಗುಂಪು ಇನ್ನೊಂದು ಗುಂಪನ್ನು ದ್ವೇಷಿಸುತ್ತಲೂ ಇದೆ. ಎರಡು ಗುಂಪುಗಳೊಳಗೆ ಮಸೀದಿಯೊಳಗೇ ಹೋರಾಟ ನಡೆದದ್ದೂ ಇದೆ. ನಮ್ಮದೇ ನಿಜವಾದ ಇಸ್ಲಾಂ ಧರ್ಮ ಎಂದು ಈ ಎಲ್ಲಾ ಗುಂಪುಗಳೂ ವಾದಿಸುತ್ತಿವೆ. ಇವರಲ್ಲಿ ಈ ದೇಶದ ಸಂವಿಧಾನವನ್ನು ಒಪ್ಪಿಕೊಂಡು ಅದಕ್ಕೆ ಬದ್ಧರಾಗಿರುವ ಗುಂಪು ಯಾವುದು ಎಂಬುದನ್ನು ಕಂಡುಕೊಂಡು ಅಂತಹವರೊಡನೆ ಸಖ್ಯ ಬೆಳೆಸಬೇಕೇ ಹೊರತು ಸಂಘ ಪರಿವಾರವನ್ನು ವಿರೋಧಿಸುವ ಹುಮ್ಮಸ್ಸಿನಲ್ಲಿ ಅಂತಹುದೇ ಇನ್ನೊಂದು ಕೋಮುವಾದಿ ಸಂಘಟನೆಗಳೊಡನೆ ಸಖ್ಯ ಬೆಳೆಸುವುದು ಅಪಾಯಕಾರಿ. ಆದುದರಿಂದ ಮುಸ್ಲಿಮರ ಈ ಬೇರೆಬೇರೆ ಗುಂಪುಗಳ ತತ್ವಾದರ್ಶಗಳ ಮತ್ತು ಅವರ ಧೋರಣೆಗಳೇನೆಂದು ಸರಿಯಾಗಿ ಅರ್ಥೈಸಿಕೊಳ್ಳಬೇಕು.

ಈ ದೇಶಕ್ಕೆ ಅತ್ಯುನ್ನತ ಸಂವಿಧಾನವಿದೆ. ಜಾತಿ,




ದೂರ ಸರಿಯಬಾರದು. ನಾನು ಯಾಕೆ ಈ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆಂದರೆ ಕೆಲವು ಮೂಲಭೂತವಾದಿ ಸಂಘಟನೆಗಳು ದೇಶಾದ್ಯಂತ ಶರಿಯತ್ ನ್ಯಾಯಾಲಯಗಳನ್ನು ಪ್ರಾರಂಭಿಸುತ್ತಿವೆ. ಉತ್ತರ ಭಾರತದ ಕೆಲವೆಡೆಗಳಲ್ಲಿ ಈಗಾಗಲೇ ಇಂತಹ ನ್ಯಾಯಾಲಯಗಳ ಸ್ಥಾಪನೆಯಾಗಿದೆ ಎನ್ನಲಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಇತ್ತೀಚೆಗೆ ಮುಸ್ಲಿಂ ಮಹಿಳೆಯರು ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳ ಕುರಿತು ಈ ದೇಶದ ನ್ಯಾಯಾಲಯಕ್ಕೆ ದೂರು ಕೊಡತೊಡಗಿದ್ದಾರೆ ಮತ್ತು ನ್ಯಾಯಾಲಯಗಳು ಮಹಿಳೆಯರ ಪರವಾಗಿ ನ್ಯಾಯಯುತವಾಗಿ ತೀರ್ಪು ನೀಡುತ್ತಿವೆ. ಇದು ಈ ಸಂಘಟನೆಗಳಿಗೆ ನುಂಗಲಾರದ ತುತ್ತಾಗಿದೆ. ನ್ಯಾಯಾಲಯದಲ್ಲಿ ತೀರ್ಪು ಹೊರಬರಲು ಹಲವು ವರ್ಷಗಳು ಬೇಕಾಗುತ್ತದೆ ಎಂಬುದು ಇವರು ಕೊಡುವ ಕಾರಣ. ಬೇಗ ತೀರ್ಪು ದೊರೆಯಲು ಇಂತಹ ಶರಿಯತ್ ನ್ಯಾಯಾಲಯಗಳು ಅಗತ್ಯ ಎಂದು ಇವರು ವಾದಿಸುತ್ತಾರೆ. ಆದರೆ ಇಂತಹ

ಕೊಟ್ಟಂತಾಗುತ್ತದೆ. ಮತ್ತು ಕೋಮು ಸೌಹಾರ್ದದ ಕುರಿತ ನಮ್ಮ ಪ್ರಯತ್ನ ಎಂದಿಗೂ ಫಲ ನೀಡುವುದಿಲ್ಲ. ಇಂತಹ ಕೊಡುಕೊಳುವಿಕೆಗೆ ನಾವು ಮುಸ್ಲಿಮರು ಆಸ್ಪದ ನೀಡಿದರೆ ಮಾತ್ರ ನಮ್ಮ ನಡುವೆ ಸೌಹಾರ್ದದ ಒಂದು ಕಾಲುಹಾದಿಯನ್ನಾದರೂ ನಿರ್ಮಿಸಲು ಸಾಧ್ಯ. ಈ ದೇಶದ ಹಿಂದೂಗಳು ಈವರೆಗೆ ಮುಸ್ಲಿಮರನ್ನೂ ಅರ್ಥ ಮಾಡಿಕೊಂಡಿಲ್ಲ. ಮುಸ್ಲಿಮರು ಹಿಂದೂಗಳನ್ನೂ ಅರ್ಥ ಮಾಡಿ ಕೊಂಡಿಲ್ಲ. ಹೀಗೆ ಅರ್ಥ ...

ಜಾತ್ಯತೀತತೆ ಎಂದರೇನು?

ನನಗೆ ಇನ್ನೂ ನೆನಪಿದೆ. ಟೀಕೆ-ಟಿಪ್ಪಣಿ (ಅಕ್ಟೋಬರ್ 15, 1989)ರಲ್ಲಿ ಬಾಬರಿ ಮಸೀದಿಯ ಜಾಗದಲ್ಲಿ ಒಂಬಾನೂರು ಕಾಲಕ್ಕೆ ರಾಮಮಂದಿರ ಇತ್ತೆಂದು ಹೇಳಿ, ಆ ಮಸೀದಿಯನ್ನೇ ಕೆಡವಲು ಯತ್ನಿಸುವುದಾದರೆ, ಶಂಕರಾಚಾರ್ಯರು ದೇಶದ ಉದ್ದಗಲಕ್ಕೆ ತಿರುಗಾಡಿ ಬೌದ್ಧ ಮಂದಿರಗಳನ್ನು ಬೀಳಿಸಿ ದೇವಸ್ಥಾನ ಕಟ್ಟಿಸಿದ್ದು, ವೈಷ್ಣವರು, ಉತ್ತರ ಭಾರತದಲ್ಲಿ ಶೈವರು ಅಂದರೆ, ಶಂಕರಾಚಾರ್ಯರ ಅನುಯಾಯಿಗಳು, ದೇವಾಲಯಗಳನ್ನು ಬೀಳಿಸಿದ್ದು ಎಲ್ಲವನ್ನು ಸರಿಪಡಿಸುತ್ತಾ ಹೋಗಬೇಕಾಗುತ್ತದೆ ಎಂದು ಲಂಕೇಶರು ಬರೆದಿದ್ದರು.



ಬಾಬರಿ ಮಸೀದಿ ಕುರಿತ ಮಾಹಿತಿ ನೀಡಿ, ಸ್ಥಳದಲ್ಲಿದ್ದ ಗೋಳಿ ಮರದ ಕಥೆ ಬರೆದು, ಹಿಂದೂ-ಮುಸ್ಲಿಮರು ಒಂದಾಗಿ ಬಾಳಲು ಪ್ರಯತ್ನಿಸಿ ಒಪ್ಪಂದ ಮಾಡಿಕೊಂಡು ಸಹಿ ಹಾಕಿದ ಎರಡು ಕೋಮಿನ ಮುಖಂಡರನ್ನು ಬ್ರಿಟಿಷರು ನೇಣುಗಂಬಕ್ಕೆ ಏರಿಸಿದ ವಿವರಣೆ ಬರೆದು, ನಮಗೆ "ಇಟ್ಟಿಗೆ ಪವಿತ್ರವಲ್ಲ-ಜೀವಪವಿತ್ರ" ಎಂದು ಹೇಳಿಕೊಟ್ಟವರೇ ಲಂಕೇಶರು.

ಇವತ್ತು ಟಿಪ್ಪು ಸುಲ್ತಾನ ಕನ್ನಡ ದ್ರೋಹಿ ಆಗಿದ್ದ, ಕೋಮುವಾದಿ ಆಗಿದ್ದ ಎಂದೆಲ್ಲ ಹಲವರು ಅರಚುತ್ತಿದ್ದಾರೆ. ಆದರೆ ಮತ್ತೊಂದು ಟೀಕೆ-ಟಿಪ್ಪಣಿ (ಮೇ 12, 1993)ಯಲ್ಲಿ ಜಾತ್ಯತೀತರೆನಿಸಿಕೊಂಡ ನಮ್ಮ ಇಂದಿನ ನಾಯಕರಲ್ಲಿ, ನಿಜಕ್ಕೂ ಜಾತಿವಂತರಾದ ಹೈದರ್ ಮತ್ತು ಟಿಪ್ಪುವಿನಲ್ಲಿದ್ದ ಜಾತ್ಯತೀತ ಕಾಳಜಿ ಮತ್ತು ದಕ್ಷತೆ ಕಂಡುಬರುವುದಿಲ್ಲ ಎಂದು ಲಂಕೇಶರು ತೋರಿಸಿದ್ದರು.

ಲಂಕೇಶ್ ನಮಗೆ ಗೊತ್ತಿಲ್ಲದ ಎಷ್ಟೋ ವಿಷಯಗಳನ್ನು, ತಮ್ಮ ಲೇಖನಗಳ ಮೂಲಕ, ತಮ್ಮ ಚಿಂತನೆಗಳ ಮೂಲಕ, ಪತ್ರಿಕೆಯಲ್ಲಿ ಪ್ರಕಟಿಸಿ ನಮಗೆಲ್ಲರಿಗೂ ಮಾರ್ಗದರ್ಶಿ ಆಗಿದ್ದರು, ಗುರುವಾಗಿದ್ದರು.

-ರಬ್ಬಾನಿ, ಹಮಿದನಗರ, ಬಿಜಾಪುರ

ಹರಿತವಾದ ಕೊನಗವಳ್ಳಿಯ ಪೆನ್ನು

1979 ಸೊರಬದಲ್ಲಿ PUC ಓದುತ್ತಿದ್ದೆ. ಪ್ರಜಾವಾಣಿಯಲ್ಲಿ ಲಂಕೇಶರ ಲೇಖನಗಳನ್ನು ಓದಿ ಪ್ರಭಾವಿತನಾಗಿದ್ದೆ. ಕಪ್ಪು-ಬಿಳುಪು ಬಣ್ಣದಲ್ಲಿ ಪ್ರಾರಂಭಿಸಿದ್ದ ಪತ್ರಿಕೆಗೆ ಆಗ 40 ಪೈಸೆ ಇರಬಹುದು. ಆದರೂ ಕೊಂಡು ಓದುವುದು ವಿದ್ಯಾರ್ಥಿಯಾದ ನನಗೆ ಕಷ್ಟವಾಗುತ್ತಿತ್ತು. ಹ್ಯಾಗೊ ಹಣ ಹೊಂದಿಸಿಕೊಂಡು ಓದುತ್ತಿದ್ದೆ. ಅವರ ಟೀಕೆ-ಟಿಪ್ಪಣಿ, ರಾಜಕೀಯ ವಿಮರ್ಶೆ ಹಾಗೂ ತುಂಟಾಟವನ್ನು ತಪ್ಪದೆ ಓದುತ್ತಿದ್ದೆ. ನೀಲು ಕವನಗಳು ಪತ್ರಿಕೆಗೆ ಊಟಕ್ಕೆ ಉಪ್ಪಿನಕಾಯಿ ಇದ್ದಹಾಗೆ.




1983ರಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಲಂಕೇಶರ ಧೋರಣೆ ಹಾಗೂ ಪತ್ರಿಕೆಯ ಮೂಲಕ ಜನಸಾಮಾನ್ಯರಲ್ಲಿ ಉಂಟುಮಾಡಿದ್ದ ಜಾಗೃತಿ ಕೂಡ ಕಾರಣವಾಗಿತ್ತು. ಗ್ರಾಮಪಂಚಾಯತಿಯ ಹರಿಕಾರ, ಸರಳ, ಸಜ್ಜನ, ಪ್ರಾಮಾಣಿಕರಾಗಿದ್ದ 'ನೀರ್‌ಸಾಬ್'(ಅಬ್ದುಲ್ ನಜೀರ್‌ಸಾಬ್)ರನ್ನು ರಾಜ್ಯದ ಮುಖ್ಯಮಂತ್ರಿ ಮಾಡಲು ಲಂಕೇಶ್ ಮೇಷ್ಟ್ರು ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ. ಆದರೆ ಅದು ಸಾಧ್ಯವಾಗದೆ ರಾಮಕೃಷ್ಣಹೆಗಡೆ ಮುಖ್ಯಮಂತ್ರಿಯಾದರು. ಇನ್ನೂ ಹರಿತವಾಯಿತು ನಮ್ಮ ಕೊನಗವಳ್ಳಿಯ ಮಾಸ್ತರ ಪೆನ್ನು.

ಅವರ ಬರಹ ನಮ್ಮೆಲ್ಲರ ಪ್ರಜ್ಞೆಯನ್ನು ಹೆಚ್ಚಿಸಿತು.

-ಜೆ. ವಿಜಯಕುಮಾರ್,
ಚಿಕ್ಕಜೋಗಿಹಳ್ಳಿ, ಶಿವಮೊಗ್ಗ

ನಾನು ಕಲಿತ ವಿಶ್ವವಿದ್ಯಾಲಯ

'ಲಂಕೇಶ್ ಏನಿಲ್ಲ, ಏನು ಹೌದು' ಎಂದು ಹೇಳಲಾಗದು. ಕುರುಡರು ಆನೆಯನ್ನು ಮುಟ್ಟಿದಂತೆ, ಉಪನ್ಯಾಸಕ, ಸಮಾಜವಾದಿ, ಕಥೆಗಾರ, ನಾಟಕಕಾರ, ನಟ, ಚಲನಚಿತ್ರ, ರಾಜಕೀಯ, ಗೊಡ್ಡು ಧಾರ್ಮಿಕ, ಅಂಧಶ್ರದ್ಧೆಗಳ ವಿರೋಧಿ, ಜಾತೀವಾದದ ವಿರೋಧಿ, ದಲಿತ ಹಾಗೂ ಮುಸ್ಲಿಂ ಅದರಲ್ಲೂ ಮಹಿಳಾ ಸಂವೇದನೆಗಳನ್ನು ಜನರಿಗೆ ತಲುಪಿಸಿದವರು. ಅವರ "ಟೀಕೆ-ಟಿಪ್ಪಣಿ" ಅಂಕಣ ಬರಹ ಇಂದಿಗೂ ಎಂದಿಗೂ ಪ್ರಸ್ತುತವೆನಿಸುವಂತಹುದು.



ರಾಜಕೀಯ ನೇತಾರರಿಗೆ ಸಿಂಹಸ್ವಪ್ನ, ಗ್ರಾಮೀಣಾಭಿವೃದ್ಧಿ, ಕೃಷಿ, ಸರಳಬದುಕು ಇವುಗಳನ್ನು ಜನತೆಗೆ ಮುಟ್ಟಿಸಿದವರು. ಗಾಂಧೀಜಿಯ ಬದುಕು ನಮಗೆ ಆದರ್ಶ ಎಂದವರು. ಅಹಿಂಸೆ, ಸ್ವಾವಲಂಬನೆಯ ಅಗತ್ಯವನ್ನು ಒತ್ತಿ ಹೇಳಿದವರು.

ಸಾಮಾಜಿಕ ಅನಿಷ್ಟಗಳಾದ ಜಾತಿಪದ್ಧತಿ, ದೇವದಾಸಿ ಪದ್ಧತಿ, ಬಡತನ, ಮಹಿಳೆಯರ ದುಃಸ್ಥಿತಿಗಳು ಇತ್ಯಾದಿಗಳನ್ನು ನೇರವಾಗಿ ಎದುರಿಸಿ ಹೋರಾಡಿದವರು. ಕನ್ನಡಾಭಿಮಾನದ ಸೆರಗಿನಲ್ಲಿ ಸೋಗಲಾಡಿತನವನ್ನು ಬಚ್ಚಿಟ್ಟುಕೊಂಡಿದ್ದವರನ್ನು ಅನಾವರಣಗೊಳಿಸಿದವರು.


ನನಗಂತೂ ಆತ್ಮಗೌರವ, ನೇರನಡೆನುಡಿ, ಪುರೋಗಾಮಿ ಚಿಂತನೆಗಳ ದೀಕ್ಷೆ ನೀಡಿದ ಸಂತ, ಸಮಾಜ ಚಿಕಿತ್ಸಕ. ಲಂಕೇಶ್ ನನ್ನನ್ನು ತಾಕಿದ್ದು ಹೀಗೆ ಒಂದು ವಿಶ್ವ ವಿದ್ಯಾಲಯವಾಗಿ.

-ಶಾಂತಿ ಸರೋಜಿನಿ, ಮೂಡಿಗೆರೆ

ಪಿ. ಲಂಕೇಶ್‌ರ ಕೊಡುಗೆಗಳ ಬಗ್ಗೆ ಈ ನಾಡಿನ ಹಲವಾರು ಬುದ್ಧಿಜೀವಿಗಳು, ಬರಹಗಾರರು, ಕವಿಗಳು ಬಹಳಷ್ಟು ಬರೆದಿದ್ದಾರೆ. ಆದರೆ ಸೃಜನಶೀಲ ಬರಹಗಾರರಾಗಿ, ಪತ್ರಕರ್ತರಾಗಿ ಲಂಕೇಶರು ಸಾವಿರಾರು ಜನಸಾಮಾನ್ಯರನ್ನು ತಾಕಿದ್ದಾರೆ, ಅವರ ಮೇಲೆ ಪ್ರಭಾವ ಬೀರಿದ್ದಾರೆ. ಇವತ್ತಿಗೂ ಅದೆಷ್ಟೋ ಜನ ತಮ್ಮನ್ನು "ನಾನು ಲಂಕೇಶ್ ವಿಶ್ವವಿದ್ಯಾಲಯದಲ್ಲಿ ಓದಿದವನು/ಳು" ಎಂದೇ ಪರಿಚಯ ಮಾಡಿಕೊಳ್ಳುತ್ತಾರೆ. ಕನ್ನಡದ ಇತರೆಲ್ಲ ಬರಹಗಾರರಿಗಿಂತ ಲಕ್ಷಾಂತರ ಜನರನ್ನು ತಮ್ಮ ಪ್ರತಿವಾರದ ಬರಹಗಳ ಮೂಲಕ ಲಂಕೇಶರು ಸ್ಪರ್ಷಿಸಿದ್ದಕ್ಕೆ, ಅವರಲ್ಲಿ ಸಾಹಿತ್ಯ ರಾಜಕೀಯ, ಸಮಾನತೆ, ಸಹಬಾಳ್ವೆ, ತತ್ವಗಳನ್ನು ಬಿತ್ತಿದ್ದಕ್ಕೆ ಇದೇ ಸಾಕ್ಷಿ. ಈ ಬಾರಿಯ ವಿಶೇಷಾಂಕಕ್ಕೆ ನಾವು ಓದುಗರಿಂದ 'ಲಂಕೇಶ್ ನನ್ನನ್ನು ತಾಕಿದ್ದು ಹೀಗೆ...' ಕುರಿತು ಬರೆಯಲು ಆಹ್ವಾನಿಸಿದೆವು. ಈ ಆಹ್ವಾನಕ್ಕೆ ಸ್ಪಂದಿಸಿ ಸಾವಿರಾರು ಜನ ತಮ್ಮ ಲೇಖನಗಳನ್ನು ಕಳುಹಿಸಿದರು. ಅವರೆಲ್ಲರೂ ಅದೆಷ್ಟು ಚೆಂದವಾಗಿ ಬರೆದಿದ್ದಾರೆಂದರೆ, ಸಾಧ್ಯವಾದಷ್ಟು ಜನರಿಗೆ ಅವಕಾಶ ಮಾಡಿಕೊಡಲು ನಮ್ಮ ಓದುಗರಿಗೆಂದೇ ನಿಗದಿಪಡಿಸಿದ್ದ ನಾಲ್ಕೂ ಪುಟಗಳನ್ನು ಇದಕ್ಕೇ ನೀಡಿದ್ದೇವೆ. ಅಂದಹಾಗೆ, ನಮಗೆ ಬಂದ ಲೇಖನಗಳೆಲ್ಲ ಎಷ್ಟು ಚೆನ್ನಾಗಿದ್ದವೆಂದರೆ ಆಯ್ಕೆ ಮಾಡುವುದೇ ಕಷ್ಟದ ಕೆಲಸವಾಯಿತು. ಆದ್ದರಿಂದ ಲಂಕೇಶರ ವ್ಯಕ್ತಿತ್ವವನ್ನು ಬಿಂಬಿಸುವ ಹಲವನ್ನು ಮಾತ್ರ ಪ್ರಕಟಿಸಿದ್ದೇವೆ. ಇತರರು ಬೇಜಾರು ಮಾಡಿಕೊಳ್ಳಬಾರದೆಂದು ಕೇಳಿಕೊಳ್ಳುತ್ತೇನೆ.

ಕನ್ನಡ ಕಲಿಸಿದ ಗುರು

ನಾನು ಲಂಕೇಶರನ್ನು ಭೇಟಿಯಾದದ್ದು 1972ನೆ ಇಸವಿಯಲ್ಲಿ ಚಳ್ಳಕೆರೆಯ ಎಚ್.ಪಿ.ಪಿ.ಸಿ ಕಾಲೇಜಿನಲ್ಲಿ ಆಂಗ್ಲಭಾಷಾ ಉಪನ್ಯಾಸಕನಾಗಿದ್ದಾಗ. ಆ ಸಮಯದಲ್ಲಿ ನನ್ನ ಜೊತೆಯಲ್ಲಿ ಉಪನ್ಯಾಸಕರಾಗಿದ್ದ ನನ್ನ ಗೆಳೆಯರಿಬ್ಬರು ಹಿಂದೆ ಅವರ ವಿದ್ಯಾರ್ಥಿಗಳಾಗಿದ್ದರಂತೆ. ಅವರು ಲಂಕೇಶರ ಬಗ್ಗೆ ಬಹಳಷ್ಟು ವಿಷಯಗಳನ್ನು ನನಗೆ ತಿಳಿಸಿದರು. ಕೇಳಿ ಬಹಳ ಸಂತೋಷಪಟ್ಟ ನಾನು ಹಾಗೂ ಲಂಕೇಶರು ಆಂಗ್ಲಭಾಷಾ ಸಾಹಿತ್ಯದ ಬಗ್ಗೆ ಎಷ್ಟೋ ವಿಷಯಗಳನ್ನು ಚರ್ಚಿಸಿದೆವು. ವಿದ್ಯಾರ್ಥಿ ಸಂಘದ ಸಮಾರಂಭದಲ್ಲಿ ಅವರ ಭಾಷಣ ಅರ್ಥಪೂರ್ಣವಾಗಿಯೂ, ಸಮಯೋಚಿತವಾಗಿಯೂ ಇತ್ತು.



ಅದುವರೆಗೂ ಅವರ ಹೆಸರನ್ನು ಕೇಳದೆ ಇದ್ದ ನನಗೆ ಅವರ ವಿಚಾರಧಾರೆಯ ಬಗ್ಗೆ ಅಪಾರ ಮೆಚ್ಚುಗೆಯಾಯಿತು. ತದನಂತರ ಕನ್ನಡಸಾಹಿತ್ಯದ ಬಗ್ಗೆ ಆಸಕ್ತಿ ಹೆಚ್ಚಾಗಿ ಅವರ ಬರಹಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದ ನನಗೆ ಲಂಕೇ... ಬಗ್ಗೆ ಅನೇಕ ಹೊಸ ವಿಷಯಗಳು ತಿಳಿದವು. ಅದೇ ಸಂದರ್ಭ... ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಅವರದೇ ನಾಟಕವಾದ 'ಸಂಕ್ರಾಂತಿ'ಯ... ಪ್ರದರ್ಶಿಸಲು ಉತ್ಸಾಹ ತೋರಿದರು. ನನ್ನ ಆತ್ಮೀಯ ಗೆಳೆಯರಾದ ... ಕೃಷ್ಣಮೂರ್ತಿ ಹನೂರುರವರು ನಾಟಕವನ್ನು ನಿರ್ದೇಶಿಸಲು ಒಪ್ಪಿದರು... ಹನೂರರಿಂದ ನಾನು ಲಂಕೇಶರ ಬಗ್ಗೆ ಇನ್ನಷ್ಟು ವಿಷಯಗಳನ್ನು ಅರಿ...

ಕಾಲಕ್ರಮೇಣ, ಪತ್ರಿಕೆಯಲ್ಲಿ 'ಗುಂ' ಮತ್ತು 'ಬಂ'ಗಳನ್ನು ಉಪಯೋ...ಸಿದ ಅವರ ಬರವಣಿಗೆಗಳು ಕನ್ನಡಿಗರಲ್ಲಿ ಉಂಟುಮಾಡಿದ ಸಂಚಲನವ... ಕಂಡು ಲಂಕೇಶರ ಬಗೆಗಿದ್ದ ನನ್ನ ಮೆಚ್ಚುಗೆ ಇನ್ನೂ ಹೆಚ್ಚಾಯಿತು... ಲಂಕೇಶ್ ಪತ್ರಿಕೆಯ ಆಗಮನ ಇತಿಹಾಸಕ್ಕೊಂದು ಹೊಸ ತಿರುವ... ದಯಪಾಲಿಸಿತು. ಜಾಣಜಾಣೆಯರು ಅದರ ಬಗ್ಗೆ ಬಿಡಲಾರದ ನಂಟ...ದನ್ನು ಬೆಳೆಸಿಕೊಂಡರು. ಪ್ರತಿವಾರ ಅದರ ಬರುವಿಕೆಯನ್ನು ಕಾತುರದಿ... ಕಾಯಲು ಪ್ರಾರಂಭಿಸಿದರು. ಪತ್ರಿಕೆಯಲ್ಲಿನ ಬರವಣಿಗೆಗಳು ಕರ್ನಾಟಕದ... ಹೊಸ ವಿಚಾರಧಾರೆಯನ್ನು ಬೆಳೆಸಿದವು. 'ವಂದಿಮಾಗಧ' ಎನ್ನು... ಬರವಣಿಗೆಯಲ್ಲಿನ ಸಂಭಾಷಣೆಗಳು ಈಗಲೂ ನನ್ನ ನೆನಪಿನಲ್ಲಿ ಹಸಿರಾ... ಉಳಿದುಕೊಂಡಿವೆ. ರಾಜಕೀಯದ ಬಗ್ಗೆ ಅವರ ಬರವಣಿಗೆಗ... ಜಾಣಜಾಣೆಯರಲ್ಲಿ ನವಚೈತನ್ಯವನ್ನುಂಟುಮಾಡಿ ಅದರ ದಿಕ್ಕುದೆಸೆಯ... ಬದಲಾಯಿಸುವುದರಲ್ಲಿ ಪ್ರಮುಖವಾದ ಪಾತ್ರ ವಹಿಸಿದ್ದು ಸ್ಪಷ್ಟವಾ... ಗೋಚರಿಸಿತ್ತು.

ಪತ್ರಿಕೆ ಪ್ರಾರಂಭವಾದ ಮೇಲೆ ನನಗೆ ಲಂಕೇಶರ ಬಗ್ಗೆ ಹೆ...

ಲಂಕೇಶ್

ವಿಷಯಗಳನ್ನು ತಿಳಿಸುತ್ತಿದ್ದವನು ಲಂಕೇಶ ಪತ್ರಿಕೆಯ ವರದಿಗಾರ ಮ... ನನ್ನ ಅಚ್ಚುಮೆಚ್ಚಿನ ಶಿಷ್ಯ ಚಳ್ಳಕೆರೆ ಎರ್ರಿಸ್ವಾಮಿ.

ತೆಲುಗಿನವನಾದ ನನ್ನ ಮೇಲೆ ಲಂಕೇಶರ ಪ್ರಭಾವ ಅತಿ ಮಹತ್ವ...ದದ್ದು ಏಕೆಂದರೆ ನಾನು ಶಾಲಾ ಕಾಲೇಜುಗಳಲ್ಲಿ ಎರಡನೆಯ ಭಾಷೆಯ... ಓದಿದ್ದು ತೆಲುಗು. ಲಂಕೇಶ್ ಪತ್ರಿಕೆ ಓದಲು ಪ್ರಾರಂಭಿಸಿದ ಮೇ... ನನ್ನಲ್ಲಿ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಬೇಕೆಂಬ ಆಸಕ್ತಿ ಹೆಚ್ಚಾಯಿ... ನಾನು ಕನ್ನಡದಲ್ಲಿ ಬರೆಯಲು ಆರಂಭಿಸಿದೆ. ಕನ್ನಡದಲ್ಲಿ ನಾನು ಬ... ಕವನ "ನೆಲ್ಸನ್ ಮಂಡೇಲಾ ಮತ್ತು ನಾನು" ಮಂಡೇಲಾರವರ ಮೆಚ್ಚು... ಪಾತ್ರವಾಯಿತು. ಪರೋಕ್ಷವಾಗಿ ನನಗೆ ಕನ್ನಡವನ್ನು ಓದಲು ಹಾಗ... ಬರೆಯಲೂ ಕಲಿಸಿದ ಗುರುಗಳು ಲಂಕೇಶರೇ.


-ಪ್ರೊ.ಎಸ್.ಜೇಕಬ್, *ನಿವೃತ್ತ ಜಂಟಿ ನಿರ್ದೇಶಕ...*
ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂ...

ಮಾತಿಗಿಂತ ಕೃತಿ ಮೇಲು

ಪ್ರಗತಿರಂಗದ ಪ್ರಥಮ ಸಭೆ ತಾಳಿಕಟ್ಟೆಯಲ್ಲಿ ನಡೆದು, ಸ... ನನ್ನೂರ ಬಸ್‌ಸ್ಟಾಂಡಿನಲ್ಲಿ ಚಿಕ್ಕ ಭಾಷಣ. ನಾನೇ ಉಚಿತವಾಗಿ ಹ್ಯಾಂಡ್‌ಬಿ... ಪ್ರಿಂಟ್ ಮಾಡಿ ಹಂಚಿದ್ದೆ. ನಿರೀಕ್ಷೆಗೂ ಹೆಚ್ಚು ಜನ ಸೇರಿದ್ದರು.

ನನಗೋ ಈ ಲಂಕೇಶರನ್ನು ನೋಡಬೇಕು, ಮಾತಾಡಿಸಬೇ... ಅವರ ಕೈಯನ್ನೊಮ್ಮೆ ಮುಟ್ಟಬೇಕು ಎಂಬ ತವಕ. ಆದರೆ ಅ... ಭಯಂಕರ ಸಿಟ್ಟು ಜೊತೆಗೆ ಓತಪ್ರೋತವಾಗಿ ಬಾಯಿಂದ ಹೊರಹೊಮ್ಮು... ಸಿಗರೇಟ್ ಹೊಗೆಯನ್ನೇ ನೋಡುತ್ತಾ ನಿಂತಿದ್ದೆ. ಆಗಿನ್ನು ನಾನು ಚಿಕ್ಕವ...

ಸಂಜೆ ಅಮೃತಮಹಲ್‌ಗೆ ಭೇಟಿ. ಅಲ್ಲಿನ ರಾಸುಗಳನ್ನು ಮೆಚ್ಚುಗೆಯಿಂದ ನೋಡಿದರು. ಅಲ್ಲಿನ ಅಪರೂಪದ ವೈದ್ಯ ಡಾ. ಕೃಷ್ಣಮೂರ್ತಿ ನಮಗಾಗಿ ಮೊಲದ ಮಾಂಸದ ಊಟ ತಯಾರಿಸಿ, ಅವರೇ ನಿಂತು ಉಪಚರಿಸಿ, ಅಲ್ಲಿನ ಕೆಲಸಗಾರರು ಬಡಿಸುತ್ತಿದ್ದರು.



ನಾನು, ನನ್ನ ಪಕ್ಕ ಅಶ್ವಥ, ಮಧ್ಯೆ ಲಂಕೇಶ್, ಅವರ ಪಕ್ಕ ನಮ್ಮ ಕಟ್ಟೆ ಪುರಾಣದ ಚಂದ್ರೇಗೌಡ ಭರ್ಜರಿಯಾಗಿ ಉಣ್ಣುತ್ತಿದ್ದರು. ಮಾತಿನ ಮಧ್ಯೆ ಚಂದ್ರೇಗೌಡ ಲಂಕೇಶರನ್ನು ಖುಷಿಪಡಿಸ... ಅಶ್ವಥನೆಡೆಗೆ ತೋರಿಸುತ್ತಾ "ಸಾರ್ ಈತ ವಿಧವೆಯನ್ನು ಮದು...ಯಾಗುತ್ತಿದ್ದಾನೆ" ಎಂದು ಹೇಳಿದರು.

ಅದೆಲ್ಲಿತ್ತೊ ಲಂಕೇಶರ ಸಿಟ್ಟು "ಏ ಫೂಲಿಷ್ ಫೆಲೋಸ್, ವಿಧವೆಯ... ಯಾಕೆ ಹೇಳ್ತೀಯಾ. ರ್‍ಯಾಸ್ಕಲ್, ಡರ್ಟಿ ಫೆಲೋಸ್ ಮದುವೆಯಾ...

ನನ್ನ ಹತ್ತಿರ ಹೇಳು ಆಗ ಮೆಚ್ಕೋತೀನಿ" ಅಂತ ಒಮ್ಮೆಲೆ ಗೌಡನ ಮೇಲೆ ಹರಿಹಾಯ್ದರು.

ತಿಗಿಂತ ಕೃತಿ ಮೇಲು ಎಂಬಂತೆ ವರ್ತಿಸುವ ಲಂಕೇಶಪ್ಪನನ್ನು ಈ ಬಂದ ಮೆಚ್ಚಿಕೊಂಡೆ. ತದನಂತರ ಹಚ್ಚಿಕೊಂಡೆ. ಈಗ 'ಲಂಕೇಶ್' ತ್ರಿಕೆಯೇ ನನ್ನ ಉಸಿರು.

ಗೆ ನನ್ನನ್ನು ಲಂಕೇಶ್ ತಾಕಿದ್ದು.


-ಶೂದ್ರ ಸಂತೋಷ್, ಅಜ್ಜಂಪುರ

ಕೇಶರ ವಿಶೇಷ ಸಂದರ್ಶನ

ನಗೆ ನಮ್ಮೂರಿನಲ್ಲಿ ವೆಂಕಟೇಶ ಎನ್ನುವ ಗೆಳೆಯರಿದ್ದಾರೆ. ನಾನು ಬರೆದರೂ ಅದನ್ನು ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿಗಿಂತಲೂ ಇಂಚು ದೊಡ್ಡದಿದೆ (ಕೆಲವೊಮ್ಮೆ ನನ್ನ ಬರಹವನ್ನು ಓದದಿದ್ದರೂ!) ಶಾಶ್ವತ ವಿಮರ್ಶೆ ಮಾಡುತ್ತಾ ನನ್ನನ್ನು ಮತ್ತೆ ಬರೆಯಲು ತೊಡಗಿಸುವ . ನನಗೆ 'ಲಂಕೇಶ್ ಪತ್ರಿಕೆ' ಹುಚ್ಚು ಹಿಡಿಸಿದ್ದೇ ಈ ಗೆಳೆಯರು. ಕಾಲೇಜು ಶಿಕ್ಷಣ ಮುಗಿಸಿ ಉದ್ಯೋಗವರಸಿ ಬೆಂಗಳೂರಿಗೆ ಹೋದಾಗ ಮೊದಲು ಭೇಟಿ ಮಾಡಿದ ವ್ಯಕ್ತಿ ಲಂಕೇಶರೇ ಎಂದು ಸಹಜವಾಗಿಯೇ ದ್ದರು. "ಲಂಕೇಶರನ್ನು ಭೇಟಿಯಾದಿರಾ?" ಎಂಬ ಪ್ರಶ್ನೆ ಅವರು ತ್ತಿದ್ದ ಪತ್ರಗಳಲ್ಲಿ ಸಾಮಾನ್ಯವಾಗಿತ್ತು.

ಂಗಳೂರಿಗೆ ಹೋಗುವವರೆಗೂ ನನಗೂ ಲಂಕೇಶರನ್ನು ಯಾವಾಗ ಮಾಡುತ್ತೇನೆಯೋ ಎಂಬ ಕಾತರವಿತ್ತು. ಆದರೆ ಅವರ ಭೇಟಿಗೆ ತಬೇಕು ಅಂದ ತಕ್ಷಣ ಅಲ್ಲಲ್ಲಿ ಕೇಳಿದ್ದ ಅವರ ಸಿಟ್ಟು ಸೆಡವು ಂದು 'ಲಂಕೇಶರು ನನ್ನನ್ನು ಬೈಯ್ದು ಬಿಟ್ಟರೆ?' 'ಲಂಕೇಶರು ಾಡದಿದ್ದರೆ?' ಎಂಬ ಆತಂಕದಲ್ಲಿ ಭೇಟಿ ಮಾಡುವ ಧೈರ್ಯ ಲಿಲ್ಲ. ಆದರೆ ಲಂಕೇಶರು ಅನಾರೋಗ್ಯದಲ್ಲಿದ್ದಾರೆ ಎಂಬ ವಿಚಾರ ಗ ಮರು ಯೋಚಿಸದೆ ಗೆಳೆಯ ಷಹಬುದ್ದೀನ್ ಜೊತೆ ಪತ್ರಿಕೆಯ ಗೆ ಹೋದೆ. ಲಂಕೇಶರು ಕಚೇರಿಯಲ್ಲಿ ಅಡ್ಡಾಡುತ್ತಿದ್ದರು. ಅವರನ್ನು ಮಾಡಲು ಕಚೇರಿಯವರು ಬಿಡಲಿಲ್ಲ. ನಾವು ತೆಗೆದುಕೊಂಡು

ನ್ನನ್ನು ತಾಕಿದ್ದು ಹೀಗೆ...



ದ ಹಣ್ಣನ್ನು ಲಂಕೇಶರಿಗೆ ತಲುಪಿಸಲು ಹೇಳಿ ಓಡಾಡುತ್ತಿದ್ದ ಶರನ್ನು ಕಣ್ಣಿನಲ್ಲೇ ತುಂಬಿಕೊಂಡು ಮರಳಿದೆವು. ಆಮೇಲೆ ಕೊಂಚ ಬಂದು ಸ್ವಲ್ಪದಿನಗಳಾದ ಮೇಲೆ ಮತ್ತೆ ಕಚೇರಿಗೆ ಹೋದೆವು. ಕಚೇರಿಯವರು ಲಂಕೇಶರನ್ನು ಭೇಟಿ ಮಾಡಲು ಬಿಡಲಿಲ್ಲ. ಮರಳಿ ಕಚೇರಿಯವರ ಬಗ್ಗೆ ಸಿಟ್ಟಿನಿಂದ ಎರಡು ಪುಟದ ಪತ್ರ ಲಂಕೇಶರ ವಿಳಾಸಕ್ಕೆ ಕಳಿಸಿದೆ!

ವು ತಿಂಗಳುಗಳಲ್ಲೇ ಪತ್ರಿಕೆಯ ದಶಮಾನೋತ್ಸವ ಏರ್ಪಾಡಾಯಿತು. ದರ್ಭದಲ್ಲಿ ತೀರ್ಥಹಳ್ಳಿಯ ಪತ್ರಿಕೆಯೊಂದಕ್ಕೆ ಅಂಕಣ ಬರೆಯುತ್ತಿದ್ದೆ. ರು ದಶಮಾನೋತ್ಸವ ಸಂದರ್ಭದಲ್ಲಿ ಪತ್ರಿಕೆ ಕನ್ನಡ ನಾಡು-ನುಡಿಗೆ ಕೊಡುಗೆಯ ಬಗೆಗೆ ಲೇಖನ ಬರೆಯಲು ಯೋಚಿಸಿದೆ. ಂದಿಗೆ ಲಂಕೇಶರ ಸಂದರ್ಶನ ಮಾಡಿದರೆ ಹೇಗೆ ಎನಿಸಿತು. ಮಿತ್ರ ರೊಂದಿಗೆ ಮತ್ತೆ ಪತ್ರಿಕೆಯ ಕಚೇರಿಗೆ ಹೋದೆ. ಕಚೇರಿಯವರಿಗೆ ರಿ ನಮ್ಮ ಮೇಲೆ ಕರುಣೆ ಬಂದಿತ್ತೆನಿಸುತ್ತದೆ, ಲಂಕೇಶರ ಬಳಿ , ಲಂಕೇಶರ ಮುಂದೆ ಅವರನ್ನು ಸಂದರ್ಶಿಸುವ ಬಯಕೆ ಇಟ್ಟೆ. ಒಪ್ಪದಿದ್ದರೂ ನಂತರ ನಾಳೆ ನಾಲ್ಕು ಗಂಟೆಗೆ ಬನ್ನಿ ಎಂದರು. ಸ್ವರ್ಗ ಮೂರೇ ಗೇಣು, ಖುಷಿಯಿಂದ ಮರಳಿದೆವು.


ರನೆ ದಿನ, ನಾನೂ ಹಾಗು ಗೆಳೆಯ ಷಹಬುದ್ದೀನ್ ಸರಿಯಾಗಿ ಗಂಟೆ ಸಲವತ್ತೈದು ನಿಮಿಷಕ್ಕೆ ಪತ್ರಿಕೆ ಕಚೇರಿಯಲ್ಲಿದ್ದೆವು. ಗಿ ನಾಲ್ಕು ಗಂಟೆಗೆ ಲಂಕೇಶರು ನಮ್ಮನ್ನು ತಮ್ಮ ಕೋಣೆಗೆ ಂಡರು.

ಮೂರು ಪ್ರಶ್ನೆಗಳನ್ನು ಮಾತ್ರ ಕೇಳಿ", ಆರಂಭದಲ್ಲಿಯೇ ಲಂಕೇಶರು ರದನ್ನು ಹಾಕಿದರು. 'ಆಯ್ತು ಸಾರ್' ಎಂದು ಸಂದರ್ಶಿಸಲು ದೆ. ಕಾಲ ಸರಿಯಿತು. ಅರ್ಧ ಗಂಟೆ, ಒಂದು ಗಂಟೆ ಲಂಕೇಶರು ಷರತ್ತು ನನಗೆ ಮರೆತುಹೋಗಿತ್ತು, ಒಂದಾದ ಮೇಲೆ ಒಂದು ಪ್ರಶ್ನೆಯನ್ನು ಕೇಳತೊಡಗಿದೆ. ಬಹುಶಃ ಲಂಕೇಶರಿಗೂ ಅವರು ವಿಧಿಸಿದ್ದ ಷರತ್ತು ಮರೆತುಹೋಗಿರಬೇಕು. ಅವರು ನಿರರ್ಗಳವಾಗಿ ಮಾತನಾಡುತ್ತಾ ಸಾಗಿದರು. ಪತ್ರಿಕೋದ್ಯಮ, ರಾಜಕೀಯ, ಪರಿಸರ, ಕ್ರೀಡೆ.... ಲಂಕೇಶರ ಮಾತು ಸಾಗಿತ್ತು. ಲಂಕೇಶರು ಮಾತುಮುಗಿಸಿದಾಗ ಸರಿಸುಮಾರು ಮೂರು ಗಂಟೆಯಾಗಿತ್ತು.

ಲಂಕೇಶರು ನಮ್ಮಂತಹ ಎಳೆಯ ಹುಡುಗರೆದುರು ಇಷ್ಟುಹೊತ್ತು, ಇಷ್ಟು ಆತ್ಮೀಯವಾಗಿ ಮಾತನಾಡುತ್ತಾರೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ಲಂಕೇಶರು ಗೆಳೆಯರಂತೆ, ಹಿತೈಷಿಯಂತೆ, ಗುರುವಿನಂತೆ, ತಂದೆಯಂತೆ ಹರಟಿದರು. ಮಾತನಾಡಿದರು. ಎಚ್ಚರಿಸಿದರು. ಷಹಬುದ್ದೀನ್ ಕ್ರಿಕೆಟ್ ಬಗ್ಗೆ ಪ್ರಶ್ನೆ ಕೇಳಿದಾಗ 'ಆಲ್‌ರೌಂಡರ್' ಪತ್ರಿಕೆ ನಡೆಸುತ್ತಿದ್ದ ಮಗನನ್ನು ಕರೆದು ನಮಗೆ ಪರಿಚಯಿಸಿದರು.

ನನ್ನ ಬಗ್ಗೆ, ಷಹಬುದ್ದೀನ್ ಬಗ್ಗೆ ವಿಚಾರಿಸಿದರು.

'ನಾನೂ ಷಹಬುದ್ದೀನ್ ಒಂದೇ ಹಳ್ಳಿಯವರು. ಒಂದೇ ದಿನ ಹುಟ್ಟಿದ್ದವರು' ಎಂದೆ. ನಿಮ್ಮನ್ನು ನೋಡಿದರೆ ಅವರಿಗಿಂತ ಹೆಚ್ಚು ವಯಸ್ಸಾದವರಂತೆ ಕಾಣುತ್ತೀರಿ ಎಂದು ಕಿಚಾಯಿಸಿದರು.



ನಾನು ಷಹಬುದ್ದೀನ್‌ಗೆ ಮೊದಲೇ ತಾಕೀತು ಮಾಡಿದ್ದೆ. ಲಂಕೇಶರನ್ನು ಸಂದರ್ಶಿಸುವಾಗ ಬೇರೆ ಬೇರೆ ಕೋನದಿಂದ ಫೋಟೊ ತೆಗಿ ಎಂದು. ಲಂಕೇಶರನ್ನು ನಾನು ಸಂದರ್ಶಿಸುತ್ತಿರುವ ಫೋಟೋ ಊರಿನ ಪತ್ರಿಕೆಯಲ್ಲಿ ಅಚ್ಚಾದರೆ ಎಲ್ಲರೂ ನನ್ನನ್ನು ನೋಡುವ ಬಗೆಯೇ ನನಗೆ ಥ್ರಿಲ್ ತರಿಸುತ್ತಿತ್ತು. ಲಂಕೇಶರ ಸಂದರ್ಶನ ಮುಗಿಸಿ ಲಗುಬಗನೆ ಕಲರ್ ಲ್ಯಾಬ್‌ಗೆ ಪ್ರಿಂಟ್ ಹಾಕಲು ಕೊಟ್ಟು ಬಂದೆವು. ಒಂದು ಗಂಟೆಯಲ್ಲಿ ಫೋಟೋ ನನ್ನ ಕೈಯಲ್ಲಿತ್ತು. ಆದರೆ ನಾನು 'ಅಂತರರಾಷ್ಟ್ರೀಯ ಪತ್ರಕರ್ತನ' ಗತ್ತಿನಲ್ಲಿ ಲಂಕೇಶರನ್ನು ಸಂದರ್ಶಿಸಿದ ಒಂದು ಫೋಟೋವೂ ಬಂದಿರಲಿಲ್ಲ.

ಷಹಬುದ್ದೀನ್ ಲಂಕೇಶರ ಸಾನ್ನಿಧ್ಯದಲ್ಲಿ ಕ್ಯಾಮರಾದ ಫ್ಲಾಶ್ ಆನ್ ಮಾಡುವುದನ್ನೇ ಮರೆತಿದ್ದ.

-ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ


ಅವರಿಗೆ ಅವರೇ ಸಾಟಿ

ಅದು 1980ನೇ ಇಸ್ವಿ. ನಾನಾಗ ಪ್ರಥಮ ಪಿಯುಸಿಯನ್ನು ಐತಿಹಾಸಿಕ ಸುರಪುರದ (ಗುಲ್ಬರ್ಗಾ ಜಿಲ್ಲೆ) ಶ್ರೀ ಪ್ರಭು ಕಾಲೇಜಿನಲ್ಲಿ ಓದುತ್ತಿದ್ದೆ. ಆದೇತಾನೇ ಲಂಕೇಶ್ ಪತ್ರಿಕೆ ಆರಂಭಗೊಂಡಿದ್ದ ಕಾಲವದು. ಪ್ರಜ್ಞಾವಂತರ ವಲಯದಲ್ಲಿ, ಬರಹಗಾರರ ಮಧ್ಯೆ ಆಗ ಲಂಕೇಶರ ಕುರಿತು ಮಾತನಾಡುವುದು ಒಂದು ಫ್ಯಾಷನ್ ಹಾಗೂ ಪ್ರತಿಷ್ಠೆಯ ವಿಷಯವಾಗಿದ್ದ ಕಾಲವದು. ನನಗೋ ಎಲ್ಲವನ್ನು ತಾಜಾ ಕಣ್ಣುಗಳಿಂದ ನೋಡಿ ಆಸ್ವಾದಿಸುವ ಹೊಸ ಹುರುಪು. ವಯೋ ಸಹಜವಾಗಿ ಹಾಗೂ ಪರಿಸರದ ಪ್ರಭಾವದಿಂದಾಗಿ ನನಗೆ ಆಗ ಹಾಗೂ ಈಗಲೂ ಪ್ರಗತಿಪರ ಜಾತ್ಯತೀತ ನಿಲುವಿನ ಸಾಹಿತಿಗಳ ಬಗ್ಗೆ ಆಸಕ್ತಿ ಹಾಗೂ ವಿಶೇಷರಾದ ಪ್ರೀತಿ. ಹಾಗಾಗಿ ಲಂಕೇಶ್ ಪತ್ರಿಕೆಯ ಓದುಗನಾದೆ. ಬಂ, ಗುಂ ಹಾಗೂ ಅವರನ್ನು ಟೀಕಿಸುವ ಲಂ ನನಗೆ ತುಂಬಾ ಇಷ್ಟವಾದರು.

ಮುಂದೆ ಓದುತ್ತಾ ಬೆಳೆಯುತ್ತಾ ಆಗಾಗ ಬೆಂಗಳೂರಿಗೆ ಬಂದಾಗ ಲಂಕೇಶರನ್ನು ಕಾಣುತ್ತಾ ಇದ್ದ ನನಗೆ ಜಾಗೃತ ಸಮ್ಮೇಳನ ನಡೆದ ಸಂದರ್ಭದಲ್ಲಿ ಎರಡು ದಿನ ಲಂಕೇಶ್, ತೇಜಸ್ವಿ, ಶೂದ್ರ, ರಾಮದಾಸ್, ಜಯಂತ್, ಅನಂತಮೂರ್ತಿ ಮುಂತಾದ ಘಟಾನುಘಟಿಗಳನ್ನು ತೀರಾ ಹತ್ತಿರದಿಂದ ಕಾಣುವ, ಮಾತನಾಡುವ ಸಂದರ್ಭ ಒದಗಿಬಂತು.

ನನಗೆ ಒಂದು 'ದೃಷ್ಟಿಕೋನ' ಅಂತ ಸಿಕ್ಕಿದ್ದು ಲಂಕೇಶ್ ಹಾಗೂ ಅವರ ಪತ್ರಿಕೆಯಿಂದ. ಹಾಗಾಗಿ ಇತ್ತೀಚೆಗೆ ನನ್ನ ಸಮಗ್ರ ಕಥಾಸಂಕಲನ 'ನೆಲದ ಮರೆಯ ನಿಧಾನ' ಅನ್ನು ದಿ. ಲಂಕೇಶರವರಿಗೆ ಗೌರವದಿಂದ ಅರ್ಪಿಸಿರುವೆ. ಲಂಕೇಶ್ ದೈಹಿಕವಾಗಿ ನಮ್ಮೊಂದಿಗಿಲ್ಲ, ಆದರೆ ಬೌದ್ಧಿಕವಾಗಿ, ಮಾನಸಿಕವಾಗಿ ಅವರು ಸದಾ ನಮ್ಮೊಂದಿಗಿದ್ದಾರೆ.

ಲಂಕೇಶರವರು ಆರಂಭದಲ್ಲಿ ತಮ್ಮ ಪತ್ರಿಕೆ ಬಳಗ ಅಂತಹೇಳಿ ಚಂಪಾ, ತೇಜಸ್ವಿ, ರಾಮದಾಸ್, ರೇಷ್ಮೆ, ಕೇಶವಮೂರ್ತಿ, ಶೂದ್ರ, ಲಲಿತಾ ನಾಯಕ್, ಭಾನುಮುಷ್ತಾಕ್, ಸಾರಾ ಅಬೂಬಕರ್, ಅರಸ್- ಹೀಗೆ ತಮ್ಮ ಬರಹಗಾರರ ಒಂದು ತಂಡದ ಫೋಟೋಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದನ್ನು ಹತ್ತಾರು ವರ್ಷ ನಾನು ನನ್ನ ಆಲ್ಬಂನಲ್ಲಿ ಇಟ್ಟುಕೊಂಡು ನನ್ನ ಬಳಗ ಅಂತ ಖುಷಿಯಿಂದ ತೋರಿಸ್ತಾ ಇದ್ದೆ.



ಲಂಕೇಶರವರು ಪ್ರಗತಿರಂಗವನ್ನು ಹುಟ್ಟುಹಾಕಿದಾಗ ಅದರ ಸದಸ್ಯನಾಗಿದ್ದ ನಾನು ಅವರನ್ನು ಗುಲಬರ್ಗಾ ಪ್ರವಾಸದಲ್ಲಿದ್ದಾಗ ಬಂದು ಕಾಣುವಲ್ಲಿ ಸ್ವಲ್ಪ ತಡವಾಗಿತ್ತು, ಆ ಬಗ್ಗೆ ಅವರು ಮರೆಯುವ ಮುನ್ನದಲ್ಲಿ ಬರೆದಿದ್ದರು. 'ಸಮಯ-ಅಸಮಯ' ಅಂತ. ಅದು ಇತ್ತೀಚೆಗೆ ಮತ್ತೆ ಲಂಕೇಶ್ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ನನ್ನ ವಯಸ್ಸಿನ ಅಂದ್ರೆ ಒಟ್ಟಾರೆ ನನ್ನ ತಲೆಮಾರಿನ ಸೃಜನಶೀಲ ಲೇಖಕರೆಲ್ಲರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಲಂಕೇಶರ ಪ್ರಭಾವ ಖಂಡಿತ ಇದೆ, ಕೆಲವರು ಹೇಳಿಕೊಳ್ಳಬಹುದು. ಕೆಲವರು ಹೇಳಿಕೊಳ್ಳದೇ ಇರಬಹುದು. ಆದಾಗ್ಯೂ ಲಂಕೇಶ್ ಅಂದ್ರೆ ಅದು ಲಂಕೇಶರೇ. ಇಂದಿಗೂ ನನಗೆ ಕರ್ನಾಟಕದ ಪ್ರಸ್ತುತ ಸಂದರ್ಭದಲ್ಲಿ ಲಂಕೇಶರನ್ನು ತುಂಬಾ ಮಿಸ್ ಮಾಡಿಕೊಳ್ತೀನಿ. ಅವರು ಈಗ ಇರ್ಬೇಕಾಗಿತ್ತು ಅನ್ನಿಸುತ್ತೆ. ಅವರು ನನ್ನಲ್ಲಿ ಲಲಿತ ಪ್ರಬಂಧವಾಗಿದ್ದಾರೆ, ಕಥೆಯಾಗಿದ್ದಾರೆ, ಕವಿತೆಯಾಗಿದ್ದಾರೆ. ಒಟ್ಟಿನಲ್ಲಿ ಲಂಕೇಶರವರು ನಮಗೆ ಗುರುವಲ್ಲದ ಗುರುವಾಗಿ, ಅವರು ಶಾಲೆ-ಕಾಲೇಜುಗಳಲ್ಲಿ ನಮಗೆ ಪಾಠ ಹೇಳದೆಯೇ ಇರಬಹುದು ಆದರೆ ಪತ್ರಿಕೆ ಮೂಲಕ ಬದುಕನ್ನು ಗ್ರಹಿಸುವ ದೃಷ್ಟಿಕೋನ ನೀಡಿದ್ದಾರೆ. ಕನ್ನಡ ಪತ್ರಿಕೋದ್ಯಮಕ್ಕೆ ವಿಶಿಷ್ಟ ತಿರುವು ನೀಡಿದ ಲಂಕೇಶ ಒಬ್ಬ ಜೀನಿಯಸ್. ಆತನಿಗೆ ಆತನೇ ಸಾಟಿ.

-ಸಿದ್ಧರಾಮ ಹೊನ್ಕಲ್, ಗುಲ್ಬರ್ಗಾ

'ಗಾಂಧಿಯಲ್ಲೂ ಒಬ್ಬ ನಕ್ಸಲೈಟ್ ಇದ್ದ'

ನಾನು ಆಗ ಹುಬ್ಬಳ್ಳಿಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರ. ಖಾದ್ರಿ ಶಾಮಣ್ಣನವರು ಪ್ರಧಾನ ಸಂಪಾದಕರು. ಜಯಶೀಲರಾಯರು ಜಂಟಿ ಸಂಪಾದಕರು. ಸರಿಸುಮಾರು1976-77ರ ಸಾಲಿನಲ್ಲಿ ಕರ್ನಾಟಕ ಮೆಡಿಕಲ್ ಕಾಲೇಜ್ ಕರ್ನಾಟಕ ಸಂಘಕ್ಕೆ ಮುಖ್ಯ ಅತಿಥಿಗಳಾಗಿ ಲಂಕೇಶ್ ಆಗಮನ. ಆ ಸಭೆಯ ವರದಿ ನನ್ನ ಪಾಲಿಗೆ ಬಂದಿತ್ತು. ಲಂಕೇಶ್ ವಾಕ್ಚಾತುರ್ಯಗಳಿಂದ ಸಭಿಕರನ್ನು ಮರಳು ಮಾಡುವ ವಾಗ್ಮಿಗಳಲ್ಲ. ಆದರೆ ತಣ್ಣನೆಯ ಮಂಜುಗಡ್ಡೆಗಳನ್ನು ತಲೆಯ ಮೇಲೆ ಇರಿಸುವಂತಹ ಮಾತುಗಳು. ಅವರು ಶುರುವಿನಲ್ಲೇ ಹೀಗೆ ನುಡಿದರು "ಯಾವ ದೇಶದಲ್ಲಿ ಮಾತು ಕಡಿಮೆ ಮಾಡಿ; ಕೆಲಸ ಹೆಚ್ಚು ಮಾಡಿ ಎನ್ನುವ ಕಡೆ ನಾನು ಹರಿಹರನ ರಗಳೆ ಬರೆಯಲೇನು?" ನೀವು ಬಾಯಿಬಿಟ್ಟರೆ ಬರೀ ಹಲ್ಲುಗಳಿವೆಯೇನು; ನಿಮಗೆ ನಾಲಿಗೆ ಇಲ್ಲವೇನು, ಯಾವ ದೇಶದಲ್ಲಿ ಒಬ್ಬನ ಆದಾಯ ತಿಂಗಳಿಗೆ 500 ರೂ, ಮತ್ತೊಬ್ಬನದು 50,000 ರೂ. ಇರುವಾಗ ಈ ಅಸಮಾನತೆ ಕುರಿತು ನಿಮಗೆ ಏನೂ ಅನಿಸುತ್ತಿಲ್ಲವೆ? ಸ್ನೇಹಲತಾರೆಡ್ಡಿ ಒಬ್ಬ ಕಲಾವಿದೆ, ನಾಟಕಕಾರ್ತಿ, ಪ್ರತಿಷ್ಠಿತರು, ಇವರನ್ನು ಬಂಧಿಸಿರುವರೆಂದು ನಾನು ಪ್ರತಿಭಟಿಸಬೇಕಾಗಿಲ್ಲ, ನಮ್ಮ, ನಿಮ್ಮ ಅಕ್ಕ-ತಂಗಿಯರಿಗೆ ದಾರಿಯಲ್ಲಿ ಹೋಗುವ ಸಾಮಾನ್ಯ ಹೆಣ್ಣಿಗೆ ಆ ರೀತಿ ಆದಾಗಲೂ ನಾವು ಪ್ರತಿಭಟಿಸಬೇಕು" ಈ ಮಾತುಗಳಿಂದಲೇ ಲಂಕೇಶ್ ನನ್ನನ್ನು ತಾಕಿದ್ದು ಹೀಗೆ....




ಸಭೆಯ ನಂತರ ನಾನು "ಈ ಸಭೆಯಲ್ಲಿ ನೀವು ಹೇಳಿದ ವಿಷಯಗಳು ಕೆಲವು ದಿನಗಳ ಹಿಂದೆ ಬೆಂಗಳೂರು ಆವೃತ್ತಿಯ ನಿಮ್ಮ ಲೇಖನದಲ್ಲಿ ಬರಲಿಲ್ಲವಲ್ಲ ಸಾರ್" ಎಂದು ಕೇಳಿದೆ. ಲಂಕೇಶ್ ಒಂದೇ ಮಾತು ಹೇಳಿದರು "ಹೋಗಿ ನಿಮ್ಮ ಸಂಪಾದಕರನ್ನು ಕೇಳಿ" ಎಂದು ಬಿಟ್ಟರು.

ಮತ್ತೊಂದು ಪ್ರಸಂಗ: ಅವರು ಪ್ರಗತಿರಂಗ ಕಟ್ಟುವ ಸಮಯದಲ್ಲಿ ಅಜ್ಜಂಪುರದಲ್ಲಿ ಭಾಷಣಕ್ಕೆಂದು ಬಂದಿದ್ದರು. ಭಾಷಣದ ನಂತರ ನಾವು ದಾವಣಗೆರೆಯಿಂದ ಬಂದಿದ್ದ ಗೆಳೆಯರು, ಚಿಕ್ಕಮಗಳೂರಿನ ಗೆಳೆಯರು, ಅಜ್ಜಂಪುರದ ಗೆಳೆಯರು ಅವರೊಂದಿಗೆ ಸಂವಾದಕ್ಕೆ ತೊಡಗಿಕೊಂಡೆವು. ಗಾಂಧೀಜಿಯವರನ್ನು ಕುರಿತು ನಾನು "ಸಾರ್ ಅವರಲ್ಲಿ ಒಬ್ಬ ಸಂತ ಇದ್ದನಲ್ಲವೇ" ಎಂದೆ. ಅದಕ್ಕವರು "ಅವರಲ್ಲಿ ಒಬ್ಬ ನಕ್ಸಲೈಟ್ ಕೂಡ ಇದ್ದ ಕಣ್ರೀ" ಎಂದುಬಿಟ್ಟರು. ಅದೇ ಸಂವಾದದಲ್ಲಿ ನಾನು ಬಡತನದ ಬಗ್ಗೆ ಗಾಂಧಿ ಹೇಳಿದ ಮಾತನ್ನು ಹೇಳಿದೆ: "poverty is the worst from violence" ಅದಕ್ಕವರು "profound thought." ಎಂದು ಮೆಚ್ಚುಗೆ ಸೂಚಿಸಿದರು. ಅವರು ನನ್ನನ್ನು ತಾಕಿದ್ದಕ್ಕೆ ಇಷ್ಟು ಸಾಕು.

-ಈಶ್ವರ [illegible]

ಮರೆಯುವ ಮುನ್ನ

ಕಳೆದ 21 ವರ್ಷಗಳಿಂದ ನಾನೊಬ್ಬ ಪತ್ರಿಕೆಯ ಓದುಗ. ಹೈಸ್ಕೂಲಿನ ಆ ದಿನಗಳಲ್ಲಿ ವಿವಿಧ ಅಂಕಣಗಳ ಜೊತೆಯಲ್ಲಿ ತಪ್ಪದೆ ಓದುತ್ತಿದ್ದದು ಪ್ರಶ್ನೋತ್ತರ ಭಾಗವನ್ನು. "ಈಗ ಭಾವಜೀವಿಗಳಿಗಷ್ಟೇ ಅಲ್ಲ, ಅಭಾವ ಜೀವಿಗಳಿಗೂ ಬೆಲೆ ಇಲ್ಲ" ಎಂದು ನನ್ನ ಪ್ರಶ್ನೆಯೊಂದಕ್ಕೆ (1984) ಉತ್ತರಿಸಿದಾಗ ಅದರಲ್ಲಿ ಮೊನಚುತನ, ನೇರತೆ, ಜಾಣತನ ಇತ್ಯಾದಿಗಳು ನನ್ನ ಅನುಭವಕ್ಕೆ ಬಂದವು. ಮುಂದೆ ತಾಂತ್ರಿಕ ಕಾಲೇಜಿನಲ್ಲಿ ಓದುತ್ತಿರುವಾಗ Hostelನ reading roomನಲ್ಲಿ ನಾನು ಮೊದಲು



ಆರಿಸಿಕೊಳ್ಳುತ್ತಿದ್ದುದು ಪತ್ರಿಕೆಯನ್ನು. ಕಾರಣ ಲಂಕೇಶರ ಅಂಕಣಗಳಾದ ಟೀಕೆಟಿಪ್ಪಣಿ ಮತ್ತು ಮರೆಯುವ ಮುನ್ನಗಳು ನನ್ನಂತಹ ಓದುಗರನ್ನು ತುಂಬಾ ಆಪ್ತವಾಗಿ ಓದಿಸಿಕೊಂಡು ಹೋಗುತ್ತಿದ್ದವು. ಮುಂದೆ ಹೋದಂತೆ ಈ ಅಂಕಣಗಳ ಶೈಲಿ, ವಿಷಯ ವಿಸ್ತಾರ, ಸ್ಪಷ್ಟತೆ ನನ್ನಲ್ಲಿ ಬೆರಗನ್ನು ಹುಟ್ಟಿಸುತ್ತಾ ಹೋದವು.

ವಿಶೇಷವಾಗಿ ಮರೆಯುವ ಮುನ್ನ ಅಂಕಣದಲ್ಲಿ ಲಂಕೇಶ್ ತಮ್ಮ ದೈನಂದಿನ ಜೀವನದ ಸಾಮಾನ್ಯ ಅನುಭವಗಳನ್ನು ಒಂದು ಸುಂದರ parable ಆಗಿ ಕಟ್ಟುತ್ತಿದ್ದರು. ಅದನ್ನು ಓದುಗರ ಜೊತೆ ಆಪ್ತವಾಗಿ ಹಂಚಿಕೊಳ್ಳುತ್ತಿದ್ದುದರಿಂದ ಅವು ಸೂಕ್ಷ್ಮ ಓದುಗರಲ್ಲಿ ಮರುಹುಟ್ಟನ್ನೂ ಪಡೆಯುತ್ತಿದ್ದವು ಎಂಬುದು ನನ್ನ ಅನಿಸಿಕೆ.


ಲಂಕೇಶರ ಭಾಷಾ ಶೈಲಿ ಮತ್ತು ವಿಚಾರ ಕಂದಾಚಾರ, ಸಂಪ್ರದಾಯ, ಔಪಚಾರಿಕತೆ, ಮಡಿವಂತಿಕೆ ಇತ್ಯಾದಿ ಬಂಧನಗಳನ್ನು ಕೊಡವಿ, ಹೊಸತನ ಜೀವಂತಿಕೆ ಮತ್ತು ಮುಖ್ಯವಾಗಿ ಕ್ರಿಯಾಶೀಲತೆ ಕಡೆಗೆ ಹರಡಿತ್ತು. ಅಕ್ಷರಮಟ್ಟಿಗೆ ಭಾರತದ ಪತ್ರಿಕಾರಂಗದಲ್ಲಿಯೇ ಇದೊಂದು ಹೊಸ ಪ್ರಯೋಗ ಎಂದು ನಾನು ತಿಳಿಯುತ್ತೇನೆ.

ಗೆಳೆಯ ಡಿ.ಆರ್. ನಾಗರಾಜರೊಂದಿಗೆ (ತೀರಿ ಹೋಗುವ ಒಂದು ತಿಂಗಳ ಮುಂಚೆ 1998 -ಜುಲೈ) ಅವರ ಮನೆಯಲ್ಲಿ ಒಮ್ಮೆ ರಾತ್ರಿ ನಾನು ಊಟ ಮಾಡುವಾಗ ಸಮಕಾಲೀನ ಪ್ರಪಂಚದಲ್ಲಿ ಲಂಕೇಶ್ ಯಾಕೆ ಒಬ್ಬ ಬಹುಮುಖ್ಯ ಬರಹಗಾರ ಎಂಬುದನ್ನು ನನಗೆ ವಿವರಿಸಿ ಹೇಳಿದ್ದರು. ಕಾಕತಾಳೀಯ ಎಂಬಂತೆ ಅದೇ ಡಿ.ಆರ್. ರವರ ನಿಧನ ಸಂತಾಪಸೂಚಕ ಸಮಾರಂಭದಲ್ಲಿ (1998-Aug) ನಾನು ಮತ್ತು ಲಂಕೇಶ್ ಮೇಷ್ಟ್ರು ಅಕ್ಕಪಕ್ಕ ಕುಳಿತಿದ್ದೆವು. ನನ್ನ ಒಮ್ಮೆ ನೋಡಿ ನಂತರ stage ಕಡೆಗೆ ತಿರುಗಿ 'ಕೋಲಾರದ ಕಡೇನೇನು?' ಎಂದು ಕೇಳಿದರು. 'ಅಲ್ಲ ಸಾರ್ ಶಿವಮೊಗ್ಗ' ಎಂದೆ. ನಂತರ ಶಿವಮೊಗ್ಗದಲ್ಲಿ ಎಲ್ಲಿ ಎಂಬ ಮರುಪ್ರಶ್ನೆ. ಅದೇ ನನ್ನ ಮೊದಲ ಪ್ರತ್ಯಕ್ಷ ಮುಖಾಮುಖಿ. ನಂತರ ಅಮೆರಿಕಾದಲ್ಲಿದ್ದಾಗ ಲಂಕೇಶ್ ಮೇಷ್ಟ್ರ ಸಾವಿನ ಸುದ್ದಿ ತಿಳಿಯಿತು. ಸಮಕಾಲೀನ ಕನ್ನಡ ಸಾಹಿತ್ಯದ ಚತುರ್ತಾರೆಗಳಲ್ಲಿ ಮತ್ತೊಬ್ಬರನ್ನು ಕಳೆದುಕೊಂಡ ಅಗಲುವಿಕೆಯಿಂದ ಮನಸ್ಸು ಭಾರವಾಯಿತು. ನನ್ನ ಮೊದಲ ಭೇಟಿಯೇ ಕೊನೆಯ ಭೇಟಿಯೂ ಆಗಿತ್ತು.

-ಶಶಿಮೋಹನ್ ದೊಡ್ಡಮನೆ,
ಬೆಂಗಳೂರು

'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಸಾರಿ ಹೇಳಿದ ಲಂಕೇಶ್

ಎಂಭತ್ತರ ದಶಕದಲ್ಲಿ ಕರ್ನಾಟಕದಲ್ಲಿ ಲಂಕೇಶ್ ಮೂಡಿಸಿದ್ದ ಜನಜಾಗೃತಿ ಮತ್ತು ಪತ್ರಿಕೆಯ ನೈತಿಕ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದ ಹೆಗಡೆ ಸರ್ಕಾರ ರೇವಜೀತು, ದೂರವಾಣಿ ಕದ್ದಾಲಿಕೆ ಇತ್ಯಾದಿ ಹಗರಣದಲ್ಲಿ ಮುಳುಗಿ ಕರ್ನಾಟಕದ ವಿಚಾರವಂತರಿಗೆ, ಬುದ್ಧಿಜೀವಿಗಳಿಗೆ ಮತ್ತು ಪ್ರಗತಿಪರರಿಗೆ ಭ್ರಮನಿರಸನ ಉಂಟುಮಾಡಿತ್ತು. ಆಗ ಕರ್ನಾಟಕದ ಪ್ರಗತಿರಂಗ ವೇದಿಕೆ ರಚನೆ ಮಾಡಿ ರಾಜ್ಯಾದ್ಯಂತ ವ್ಯಕ್ತಿ ರಾಜಕಾರಣದ ಬಗ್ಗೆ ಜನಜಾಗೃತಿ ಮೂಡಿಸುತ್ತಿದ್ದವರು ಲಂಕೇಶ್, ರಾಮದಾಸ್, ಎಚ್.ಎಲ್.ಕೇಶವಮೂರ್ತಿ, ಡಾ. ಶ್ರೀನಿವಾಸಗೌಡ, ತೇಜಸ್ವಿ, ಸಿ.ಎಸ್. ದ್ವಾರಕಾನಾಥ್ ಮುಂತಾದ ಗೆಳೆಯರು. ಪತ್ರಿಕೆಯನ್ನು ಓದುತ್ತಿದ್ದ ನನಗೆ ಮತ್ತು ನನ್ನ ಹಳ್ಳಿಯ ಗೆಳೆಯರಿಗೆ ಆಸಕ್ತಿ ಉಂಟಾಯಿತು. ಕೋಲಾರದಲ್ಲಿ ಒಂದು ದಿನ ಪ್ರಗತಿರಂಗದ ಸಭೆ ಏರ್ಪಾಡಾಗಿರುವುದನ್ನು ತಿಳಿದ ನಾನು ಮತ್ತು ಗೆಳೆಯರು ಅದೇ ಹಾದಿಯಲ್ಲಿ ಬರುವ ನಮ್ಮ ಹಳ್ಳಿಯಲ್ಲಿಯೂ ಸಭೆ ನಡೆಸಲು ಲಂಕೇಶರನ್ನು ಭೇಟಿ ಮಾಡಿ ಅವರ ಒಪ್ಪಿಗೆ ಪಡೆದೆವು. ಈ ಮಧ್ಯೆ ಸಭೆ ಏರ್ಪಡಿಸುವುದು ನಮ್ಮ ಹಳ್ಳಿಯ ಕೆಲ ಪಟ್ಟಭದ್ರರಿಗೆ ಇಷ್ಟವಿಲ್ಲದೆ ನಾನು ಕೆಲಸದಲ್ಲಿದ್ದ ಹಾಲಿನ ಸಹಕಾರ ಸಂಘಕ್ಕೆ




ರಾಜೀನಾಮೆ ನೀಡಬೇಕೆಂದು ಪರೋಕ್ಷವಾಗಿ ಬೆದರಿಸಿದರು. ಈ ವಿಷಯ ಲಂಕೇಶರಿಗೆ ಗೊತ್ತಾಗಿ ನಮ್ಮ ಹಳ್ಳಿಯ ಸಭೆಯಲ್ಲಿ ಎಚ್ಚರಿಕೆ ನೀಡಿ ನಾನು ರಾಜೀನಾಮೆ ನೀಡಬೇಕಾದ ಅವಶ್ಯಕತೆ ಇಲ್ಲ ಎಂದು ಗುಡುಗಿದರು. ಅಂದಿನ ಸಭೆಯನ್ನು ಅಚ್ಚುಕಟ್ಟಾಗಿ ಏರ್ಪಡಿಸಿದ್ದ ನಾನು ನನ್ನ ಗೆಳೆಯರು ಲಂಕೇಶರ ಗಮನ ಸೆಳೆದೆವು.

ನಮ್ಮ ಹಳ್ಳಿಯಿಂದ ಶಾಲಾ ಕಾಲೇಜಿಗೆ ವಿದ್ಯಾರ್ಥಿಗಳು ಹೊಸಕೋಟೆ ಮುಂತಾದ ಕಡೆ ಹೋಗಲು ಸಾರಿಗೆ ಬಸ್ಸುಗಳಿಗೆ ಪರದಾಡುತ್ತಿದ್ದುದ್ದನ್ನು ನಿವಾರಿಸಲು ಲಂಕೇಶರನ್ನು ಕೇಳಿಕೊಂಡು ಕಚೇರಿಗೆ ಹೋದೆವು. ತಕ್ಷಣ ಸಾರಿಗೆ ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆದು, ಹೋಗಿ ಭೇಟಿ ಮಾಡಲು ತಿಳಿಸಿದರು. ಈ ಬಗ್ಗೆ ನನಗಿದ್ದ ವೈಯಕ್ತಿಕ ಕಾಳಜಿ ಬಗ್ಗೆ ಪತ್ರಿಕೆಯ ಮರೆಯುವ ಮುನ್ನ ಕಾಲಂನಲ್ಲಿ ಬರೆದರು. ಸಾರಿಗೆ ಅಧಿಕಾರಿಗಳು ಈ ಪತ್ರ ಕಂಡ ತಕ್ಷಣ ವೇಗದೂತ ಬಸ್ ನಿಲುಗಡೆಗೆ ಕ್ರಮ ತೆಗೆದುಕೊಂಡರು, ಅಲ್ಲದೆ ಲಂಕೇಶರು ಪತ್ರಕರ್ತರಾಗಿ, ಸಾಹಿತಿಯಾಗಿ, ಈ ಬಗ್ಗೆ ತೋರಿಸಿದ ಅತೀವ ಆಸಕ್ತಿಗೆ ಅಚ್ಚರಿ ವ್ಯಕ್ತಪಡಿಸಿದರು.

ಲಂಕೇಶರ ಒಡನಾಟದಲ್ಲಿದ್ದಾಗ ಅವರಲ್ಲಿದ್ದ ಮಾತೃಪ್ರೇಮ, ಜಾತ್ಯತೀತ ನಿಲುವು ಮತ್ತು ಕೋಮುವಾದಿಗಳ ಬಗ್ಗೆ ಇದ್ದ ಸಾತ್ವಿಕ ಸಿಟ್ಟು ಹಾಗೂ ಸಮಯಪ್ರಜ್ಞೆಯಿಂದ ನಾನು ತುಂಬಾ ಪ್ರಭಾವಿತನಾದೆ. ಲಂಕೇಶರು ಕರ್ನಾಟಕದ ಸಾಹಿತ್ಯ ಲೋಕದ ದಿಗ್ಗಜರಾಗಿದ್ದು ಖ್ಯಾತ ಪತ್ರಕರ್ತರಾಗಿದ್ದರೂ ಸಹ ದೊಡ್ಡಬಳ್ಳಾಪುರದ ಪ್ರಗತಿರಂಗದ ಕಾರ್ಯಕರ್ತರ ಶಿಬಿರದಲ್ಲಿ ನಾನು ನೀಡಿದ್ದ ನನ್ನ ಮದುವೆಯ ಆಹ್ವಾನವನ್ನು ಮನ್ನಿಸಿ, ನನ್ನ ಮದುವೆಗೆ ಲಂಕೇಶರು ಬಂದೇ ಬಿಟ್ಟಾಗ ನನಗೆ ಎಲ್ಲಿಲ್ಲದ ಸಂತೋಷ. ಅಂದಿನಿಂದ ಈವರೆಗೂ ಲಂಕೇಶ್ ಓದುಗನಾಗಿ ಸಾಮಾಜಿಕ ಚಳವಳಿಯಲ್ಲಿ ಸಕ್ರಿಯನಾಗಿದ್ದೇನೆ. ಅದಕ್ಕೆ ಮೂಲ ಪ್ರೇರಣಸ್ಫೂರ್ತಿ ಲಂಕೇಶ್ ಎಂದು ಭಾವಿಸುತ್ತೇನೆ.

ಈ ರೀತಿ ನನ್ನ ಮತ್ತು ಲಂಕೇಶರ ಒಡನಾಟದಲ್ಲಿ ಪರಿಚಯವಾದ ಅನೇಕ ಗೆಳೆಯರಲ್ಲಿ ಮುಖ್ಯವಾಗಿ ಈಶರನ್ನೂ ನಾನು ಸ್ಮರಿಸಲೇಬೇಕು.

ನೆನಪು: ಕೊನೆಯದಾಗಿ ಅಂದಿನ ದಿನಗಳಲ್ಲಿ ಅಯೋಧ್ಯೆ ರಾಮಮಂದಿರ ನಿರ್ಮಾಣಕ್ಕೆ ಸಂಘ ಪರಿವಾರ ದೇಶಾದ್ಯಂತ ಇಟ್ಟಿಗೆ ಸಂಗ್ರಹಣೆ ಮಾಡುತ್ತಿದ್ದಾಗ ಅಕ್ಟೋಬರ್ 2ರಂದು ಕಬ್ಬನ್ ಪಾರ್ಕಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಅಂದಿನ ಸಭೆಯಲ್ಲಿ 'ಇಟ್ಟಿಗೆ ಪವಿತ್ರವಲ್ಲಾ ಜೀವ ಪವಿತ್ರ' ಎಂದರು ಲಂಕೇಶರು. ಆ ದಿನ ನನ್ನನ್ನು ಪಕ್ಕಕ್ಕೆ ಕರೆದುಕೊಂಡು "ನೀನು ನಮ್ಮ ವೇದಿಕೆಗೆ ತುಂಬಾ ಪ್ರಮುಖ ಕಾರ್ಯಕರ್ತನಾಗಬೇಕು" ಎಂದು ಕಿವಿಯಲ್ಲಿ ಹೇಳಿದರು. ಅಂದಿನ ಭಾಷಣದಲ್ಲಿ ನನ್ನ ಹೆಸರು ಪ್ರಸ್ತಾಪಿಸಿ ಒಬ್ಬ ಮುಸ್ಲಿಂ ವಿಧಾನಸೌಧದಲ್ಲಿ ಹೋಗಿ ಮೇಜನ್ನೂ ಕುಟ್ಟಿ



ಕನ್ನಡದಲ್ಲಿ ಮಾತನಾಡುವ ವಾತಾವರಣ ನಿರ್ಮಾಣ ಆಗಬೇಕೆಂದಿದ್ದು ಈಗಲೂ ನೆನಪಿದೆ.

-ಹೈದರ್ ಬೇಗ್, ಮುಗಬಾಳ


ಮೋಕ್ಷ ಹುಡುಕುತ್ತಾ... ಹುಟ್ಟಿದ ಕತೆ

1989-90ರಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ನನಗೆ ಕನ್ನಡ ಭಾಷೆಯಲ್ಲಿ ಸಾಹಿತ್ಯ ಸಮಾಗಮ ಭಾಗ-1ರ ಪಠ್ಯ ಪುಸ್ತಕದಲ್ಲಿ ಪಿ.ಲಂಕೇಶ್ ಅವರ ಲೇಖನವಿತ್ತು. ಕಾವ್ಯ ವಿಭಾಗದಲ್ಲಿ ಜನ್ನನ ಯಶೋಧರ ಚರಿತೆಯಿಂದ ಹಿಡಿದು ಅಡಿಗರತನಕ ಹಲವಾರು ಕವಿಗಳ ಕಾವ್ಯಭಾಗಗಳಿದ್ದವು. ನಾಟಕ ವಿಭಾಗದಲ್ಲಿ ಶ್ರೀರಂಗರ ಶೋಕಚಕ್ರವಿತ್ತು. ಗದ್ಯಭಾಗದಲ್ಲಿ ಬಿಎಂಶ್ರೀ, ನಾಗೇಶ್ ಹೆಗಡೆ ಮತ್ತು ಪಿ.ಲಂಕೇಶ್ ಇವರುಗಳ ತಲಾ ಒಂದೊಂದು ಲೇಖನಗಳಿದ್ದವು. ಆಶ್ಚರ್ಯವೆಂದರೆ ಕೊನೆಯ ಇಬ್ಬರ ಹೆಸರು ಕೇಳಿದ್ದು ಅದೇ ಮೊದಲು.

ಪಿ.ಲಂಕೇಶ್ ಅವರು ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ... ಗೌತಮ ಬುದ್ಧನನ್ನು ಕುರಿತು ಬರೆದಿದ್ದ ಲೇಖನ, ಡಿಸೆಂಬರ್ 1986ರ ಲಂಕೇಶ್ ಪತ್ರಿಕೆಯ ಟೀಕೆಟಿಪ್ಪಣಿ ವಿಭಾಗದಲ್ಲಿ ಪ್ರಕಟವಾಗಿದ್ದ ಅವರ ಲೇಖನವನ್ನು ಪಠ್ಯವಾಗಿ ಇಡಲಾಗಿತ್ತು.

ಅದುವರೆಗೆ ಬುದ್ಧನನ್ನು **traditional** ಆಗಿಯೇ ಓದಿ ಅವನೊಬ್ಬ **mythical person** ಎಂದುಕೊಂಡು ಅವರೇ ಹೇಳುವಂತೆ ನಿರ್ಲಕ್ಷಿಸಲು ಬೇಕಾದ ಗೌರವವನ್ನು ಮಾತ್ರ ಇಟ್ಟುಕೊಂಡು ಸುಮ್ಮನಾಗಿದ್ದ ನನ್ನ ನಂಬಿಕೆಯ ಬೇರುಗಳನ್ನೇ ಈ ಲೇಖನ ಅಲ್ಲಾಡಿಸಿತು. ಏಕೆಂದರೆ ಬುದ್ಧನಂಥ ಬುದ್ಧನನ್ನೇ ಕೇವಲ ಒಬ್ಬ ಸಾಮಾನ್ಯ ಮನುಷ್ಯನನ್ನಾಗಿ ಮಾಡಿ ಅವನ ಹಿರಿಮೆಗೆ ಅಚ್ಚರಿಗೊಂಡಿದ್ದ ಈ ಲೇಖನದ ವೈಚಾರಿಕತೆ ನನ್ನ ಕಣ್ತೆರೆಸಿತು. ವಸ್ತುನಿಷ್ಠ ಆಲೋಚನಾ ಶೈಲಿ, ಪ್ರತಿಯೊಂದರ ಹಿಂದಿನ ಯಾವತ್ತೂ ಒಳಹೊರಗನ್ನೂ ತಮ್ಮ ವೈಚಾರಿಕತೆಯ ಪ್ರಖರ ಬೆಳಕಿನಲ್ಲಿ ವಿಶ್ಲೇಷಿಸುವ ಪುರಾಣ ಕಾಲದ ಮಹಾತ್ಮ ಎಂದು ಆತನನ್ನು ಅಟ್ಟದಲ್ಲಿ ಕೂರಿಸಿ ಕೈ ಮುಗಿಯುವುದಕ್ಕಷ್ಟೇ ಆತನನ್ನು ಸೀಮಿತಗೊಳಿಸದೆ, ಸಾಮಾನ್ಯರ ನಡುವೆ ತಂದು ಸಾಮಾನ್ಯನನ್ನಾಗಿ ನೋಡಿ ಒಬ್ಬ ಅಸಾಮಾನ್ಯ ವ್ಯಕ್ತಿಯನ್ನು, ವ್ಯಕ್ತಿತ್ವವನ್ನು ಕಂಡು ಅಚ್ಚರಿಗೊಂಡ ಪರಿ ಬೆರಗುಗೊಳಿಸುವಂಥದು.

ಲಂಕೇಶರು ಈ ಲೇಖನದಲ್ಲಿ ಬುದ್ಧನನ್ನು ಮತ್ತೆ ಮತ್ತೆ ಈ ಮನುಷ್ಯ... ಎಂತಲೇ ಕರೆಯುತ್ತಾರೆ. ನನಗೇನೋ ಇದರಲ್ಲಿ ಸಾಮಾನ್ಯರ ನಡುವಿನಿಂದ



ಎದ್ದು ಬಂದ ಅಸಾಮಾನ್ಯತೆಯನ್ನು ಪರಸ್ಪರ ಹೋಲಿಸುವ, ತನ್ಮೂಲಕ ಸಾಮಾನ್ಯರೂ ತಮ್ಮಲ್ಲಿ ಅಸಮಾನ್ಯತೆಯನ್ನು ಕಂಡುಕೊಳ್ಳಲು ಹು... ದುಂಬಿಸುವ, ಪ್ರೋತ್ಸಾಹಿಸುವ ಧ್ವನಿಯೇ ಕಾಣುತ್ತದೆ.

ಬುದ್ಧನ ಬದುಕು, ಅವನು ಎದುರಿಸಿದ ಮಹತ್ತರ ಸನ್ನಿವೇಶಗಳು, ಅವನ ಸಾಧನೆ-ಸಾಧಿಸಿದ ಬಗೆ, ಏರಿದ ಎತ್ತರ, ಕಂಡುಕೊಂಡ ಸಿದ್ಧಾಂತ-ಹೀಗೆ ಎಲ್ಲವೂ ಲಂಕೇಶರ ವೈಚಾರಿಕತೆಯ ಮೂಲಕ ಹೊಸ ಅರ್ಥವನ್ನು ಕಂಡುಕೊಂಡಿವೆ.

ಹೀಗೆ ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನಕ್ಕೊಳಗಾದ ಬುದ್ಧ ಜಗತ್ತನ್ನು ಗೆದ್ದದ್ದು ಕೇವಲ ಪ್ರೀತಿಯಿಂದ ಎಂಬುದನ್ನು ಬಹು ಸರಳವಾಗಿ ತಿಳಿಸಿದ ಈ ಲೇಖನದ ನಿರೂಪಣಾ ಶೈಲಿಯೂ ಆಕರ್ಷಣೀಯವಾದುದು. ಓದುಗನನ್ನು ಎದುರಿಗೆ ಕೂರಿಸಿಕೊಂಡು, ನೇರ ಸಂಪರ್ಕ ಬೆಳೆಸಿಕೊಳ್ಳುವ ವಿಚಾರಗಳ ಕಡೆ ಮತ್ತೆ ಮತ್ತೆ ಓದುಗರ ಗಮನ ಸೆಳೆಯುವ ಧಾಟಿಯ ಈ ಲೇಖನ ತುಂಬಾ ಇಷ್ಟವಾಯಿತು.

ಅಲ್ಲಿಂದಾಚೆಗೆ ನನ್ನ ಓದುವ ಕ್ರಮದಲ್ಲಿಯೂ ಮಹತ್ತರ ಬದಲಾ...

ಲಂಕೇಶ್

...ವಣೆಯಾಯಿತು. ಕುರುಡು ಕುರುಡಾಗಿ ಓದುವುದು ಬಿಟ್ಟು, ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾ ಸಾಮಾನ್ಯೀಕರಿಸಿಕೊಳ್ಳುತ್ತಾ ಓದುವುದು, ಅರ್ಥ ಮಾಡಿಕೊಳ್ಳು... ವುದನ್ನೇ ಕಲಿತೆ. ಲಂಕೇಶ್ ನನ್ನನ್ನು ತಟ್ಟಿದ್ದು ಹೀಗೆ....!

-ಎಂ.ಎಸ್. ಗೀತಾ...
ಅಜ್ಜಂಪುರ...

ಹತ್ತು, ಹಲವು ಮುಖಗಳ ಲಂಕೇಶ್

ಲಂಕೇಶ್ ವ್ಯಕ್ತಿಯಾಗಿ ತಾಕಿದ್ದಕ್ಕಿಂತಲೂ ಅವರು ಸಮಷ್ಟಿಯ ಪ್ರಜ್ಞೆಯಾಗಿ ಪ್ರಭಾವಿಸಿದ್ದೇ ಹೆಚ್ಚು. ರಾಮಾಯಣದ ಲಂಕಾಧೀಶನ ದಶಮುಖಗಳು ಕಲ್ಪನೆಯೇ ಸುಳ್ಳೇನೋ ಎಂದುಕೊಳ್ಳುವ ಹೊತ್ತಿಗೆ ವ್ಯಕ್ತಿಯೊಬ್ಬ ಏಕಕಾಲದಲ್ಲಿ ಹತ್ತು ಹಲವು ಸಮಸ್ಯೆಗಳ ಜೊತೆ ಅನುಸಂಧಾನ ನಡೆಸಬಹುದೆಂಬ ಜೀವಂತ ನಿದರ್ಶನ ಸಿಕ್ಕಿದ್ದು ಲಂಕೇಶರಲ್ಲಿ. ಉಪನ್ಯಾಸಕರಾಗಿ, ಪತ್ರಿಕೋದ್ಯಮಿಯಾಗಿ, ಲೇಖಕರಾಗಿ, ಕವಿಯಾಗಿ, ನಾಟಕಕಾರರಾಗಿ, ಸಾಮಾಜಿಕ ಹೋರಾಟಗಾರರಾಗಿ, ಕ್ರೀಡಾಭಿಮಾನಿಯಾಗಿ, ಸೌಂದರ್ಯೋಪಾಸಕರಾಗಿ, ಕೃಷಿಕರಾಗಿ, ಜೂಜು, ಕುಡಿತ, ಹೆಣ್ಣು ಎಲ್ಲವನ್ನು ಅನುಭವಿಸಿದ ಭುವಿಯ ಮೇಲಿನ ಭೋಗಿಯಾಗಿ ಎಲ್ಲವನ್ನೂ ಬಿಚ್ಚಿಟ್ಟು ಹೂ-ಹಣ್ಣು ಫಲ ನೀಡಿದ ಹುಳಿ ಮಾವಿನ ಮರವಾಗಿ, ಭೌತಿಕವಾಗಿ ಧರೆಗುರುಳಿದ ಗುರು ಕನ್ನಡ ಕುಲದ ಜನಮಾನಸದಲ್ಲಿ ನಿತ್ಯ ಮಿನುಗುವ ಧ್ರುವತಾರೆಯಾಗಿದ್ದು, ಅವರಿಗಿರುವ ಜೀವನಪ್ರೇಮದಿಂದ. ಅವರ ಉತ್ಸಾಹ, ಬಿಡುವಿಲ್ಲದ ಬರಹ, ಬರೆದಂತೆ ನಡೆಸಿದ ಬದುಕು, ನಂಬಿದ ಮೌಲ್ಯಗಳಿಗೆ ಚ್ಯುತಿಬಾರದಂತೆ ಬದುಕಿದ ರೀತಿಯೇ ನನ್ನನ್ನು ಪ್ರಭಾವಿತಗೊಳಿಸಿದ್ದು.

'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಎಂಬ ಮಾತಿದೆಯಲ್ಲ ಇದು ಸಾರ್ವಕಾಲಿಕ ಸತ್ಯದ ಘೋಷಣೆ. ನಿರ್ಜೀವ ವಸ್ತುಗಳನ್ನು ದೈವತ್ವಕ್ಕೇರಿಸಿ ನಿಜ ದೇವರುಗಳನ್ನ ಕಾಲಡಿ ಹಾಕಿ ತುಳಿದು ಕೊಲ್ಲುವ ಪುರೋಹಿತಶಾಹಿಗೆ ಸಿಂಹಸ್ವಪ್ನವಾಗಿದ್ದು ನನ್ನನ್ನು ಹೆಚ್ಚು ಪ್ರಭಾವಿತಗೊಳಿಸಿತು. ಮನುಷ್ಯ ಹುಟ್ಟಿದಾಗ ಸಮಾನತೆ ಮತ್ತು ಸ್ವಾತಂತ್ರ್ಯ ಪಡೆದಿರುತ್ತಾನೆ. ಸಮಾಜ ಹಂತಹಂತವಾಗಿ ಅವುಗಳನ್ನು ಕಸಿದುಕೊಳ್ಳುತ್ತದೆ. ಅವುಗಳನ್ನು ಅವನಿಗೆ ಹಿಂದಿರುಗಿಸುವುದಕ್ಕೆ ಹೋರಾಟ ಅನಿವಾರ್ಯ ಎಂಬುದನ್ನು ಕಂಡುಕೊಂಡ ಒಬ್ಬ ಸಂತನಾಗಿ ನನ್ನನ್ನು ತಾಕಿದರು.

ಲಂಕೇಶರ ಬರಹ ಮಾತೃಭಾಷೆಯಲ್ಲಿರದೇ ಆಂಗ್ಲಭಾಷೆಯಲ್ಲಿದ್ದಿದ್ದರೆ ಈ ಹೊತ್ತಿಗಾಗಲೇ ಸಾಹಿತ್ಯಕ್ಷೇತ್ರದ ನೊಬೆಲ್ ಪಾರಿತೋಷಕ ಪಡೆದವರಾಗಿ... ರುತ್ತಿದ್ದರು. ಆದರೆ ಪ್ರಶಸ್ತಿ ಕೀರ್ತಿಗಳ ಬೆನ್ನು ಹತ್ತದ ಲಂಕೇಶ್ ಜನಸಾಮಾನ್ಯರ ಭಾಷೆಯಲ್ಲಿ ಬರೆದು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪಿದಿದೆಯಲ್ಲ...

ನನ್ನನ್ನು ಹೆಚ್ಚು ತಾಕಿದ್ದು, ಬ್ರಾಹ್ಮಣ್ಯದ ಯಜಮಾನಿಕೆಯ ಹಿಡಿತದಿಂದ ವುದಕ್ಕಾಗಿಯೇ ಬುದ್ಧ-ಬಸವ, ಅಂಬೇಡ್ಕರ್, ಕುವೆಂಪು-ಹೀಗೆ ಸಮುದ್ರಕ್ಕೂ ಶೂದ್ರ, ಪರಂಪರೆಯ ಕಾವಲುಗಾರರಾಗಿದ್ದು, ಜಾಗೃತಿ ಪ್ರತೀಕವಾಗಿದ್ದ ಇತಿಹಾಸ. ಕನ್ನಡಿಗರನ್ನು ಎಚ್ಚರಿಕೆಯ ಮನೋ ಲ್ಲಿಟ್ಟು ಆಗಾಗ ಲೇಖನಿಯ ಮೂಲಕ ಕೊಟ್ಟ ಚಾಟಿ ಏಟುಗಳಿವೆ ಅವು ನಮ್ಮ ಪ್ರಜ್ಞೆಯ ಭಾಗಗಳೇ ಆಗಿರುವುದು.

ಂಕ್ರಾಂತಿ ನಾಟಕದ ಮೂಲಕ 12ನೇ ಶತಮಾನದ ಘಟನೆಯನ್ನು ಕಟ್ಟುವಂತೆ ಬರೆದು 21ನೇ ಶತಮಾನದಲ್ಲೂ ಅದರ ಪ್ರಸ್ತುತೆಯನ್ನು ಾಣಿಸಿದ್ದು ನನಗೆ ತಾಕಿದ ಸಂಗತಿಯಾಗಿದೆ. ಲಂಕೇಶ್ ಎಲ್ಲಾ ಜಾತಿ, . ಸೀಮೆಗಳ ಎಲ್ಲೆ ಮೀರಿ ಕನ್ನಡ ಭಾಷೆಯೊಳಗೆ ಕನ್ನಡಿಗನೊಬ್ಬ ವಿಶ್ವದರ್ಶನ ಮೂಡಿಸಿರುವುದು ನಮ್ಮ ಸೌಭಾಗ್ಯವೇ ಸರಿ.



ನನ್ನನ್ನು ಅತಿಯಾಗಿ ಕಾಡುವ ಸಂಗತಿ ಎಂದರೆ ಒಂದು ವೇಳೆ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಮತ್ತು ಲಂಕೇಶ್ ಹುಟ್ಟದಿದ್ದರೆ ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಶೂದ್ರರಾದ ನಮ್ಮ ಬದುಕು ಹೇಗಿರುತ್ತಿತ್ತು? ಎಂದು ಯೋಚಿಸಿದರೆ ಮೈ ನ್ನುತ್ತದೆ.

ಂಕೇಶರ ವ್ಯಕ್ತಿತ್ವವೇ ಒಂದ ರೀತಿಯ ಎಲ್ಲೇ ಮೀರಿದ, ನಿರ್ದಿಗಂತವಾ ದ್ದು, ಒಂದೇ ಕ್ಷೇತ್ರಕ್ಕೆ ಅಥವಾ ಒಂದೇ ಸಮಸ್ಯೆಗೆ ಸಿಕ್ಕಿ ಬಿದ್ದು ದವರಲ್ಲ, ಬದುಕನ್ನು ವಿವಿಧ ಕೋನಗಳಿಂದ ನೋಡಿದ, ತೋರಿಸಿದ ಪುರುಷರಾಗಿ ನನ್ನನ್ನು ತಾಕಿದರು. ವಿದ್ಯಾರ್ಥಿಯ ದೆಸೆಯಲ್ಲಿಯೇ, ಹುಡುಕುತ್ತ ಪ್ರೀತಿಯ ಬಂಧನದಲ್ಲಿ' ಎಂಬ ವೈಚಾರಿಕ ಲೇಖನದ ಕ ನನ್ನನ್ನು ತಾಕಿದರು. ದೇವರ ದರ್ಶನಕ್ಕೆ ಬದುಕಿನ ಹೊಸ ಗಳ ಶೋಧನೆಗೆ ಹೆಣ್ಣು ಅಡ್ಡಿಯಾಗಲಾರಳು ಎಂಬುದನ್ನು ಸಂಸಾರ ಹೋದ ಬುದ್ಧ ಸುಜಾತ ಎಂಬ ಹುಡುಗಿಯ ಸತ್ಕಾರದಿಂದಲೇ

...ನ್ನನ್ನು ತಾಕಿದ್ದು ಹೀಗೆ...

ೋದಯದ ಉತ್ತುಂಗಕ್ಕೆ ಏರಿದನೆಂಬ ಹೊಸ ಹೊಳವು ನೀಡಿದ್ದ ನಮ್ಮ ವ್ಯಕ್ತಿತ್ವದ ಅಂತಃಶಕ್ತಿಯಾಗುತ್ತಾ ಹೋದರು.

ಕ್ತಿಗತ ಕವಿಯಾದ ಗುರು ಇತರರನ್ನು ಕವಿಗಳನ್ನಾಗಿಸುವಂತಹ ಶಾಲಿಯಾಗಿರುವುದು ನನ್ನನ್ನು ಹೆಚ್ಚು ತಾಕಿತು. 1998ರ ದೀಪಾವಳಿ ಾಂಕದ ಮುಖಪುಟದಲ್ಲಿದ್ದ ಫೋಟೋವೊಂದು ನನ್ನನ್ನು ಕೂಡ ಸಾಲು ಬರೆಯುವಂತೆ ಪ್ರಚೋದಿಸಿತೆಂದರೆ ನಿಮಗೆ ಆಶ್ಚರ್ಯವಾಗ ದು.

-ಮಂಜಪ್ಪ ಡಿ., ಹುಲ್ತಿಕೊಪ್ಪ

ನೀವು ಕಲಿಸಿದಿರಿ ನನಗೆ ತಲೆಯೆತ್ತಿ ನಿಲ್ಲುವುದನ್ನು

ೇಗ ನನಗಿನ್ನೂ ಎಳೆಯ ವಯಸ್ಸು. ಎಲ್ಲವನ್ನೂ-ಎಲ್ಲರನ್ನೂ ಗಣ್ಣುಗಳಿಂದ ನೋಡುವ, ಅರಿತುಕೊಳ್ಳುವ ಕುತೂಹಲದ ದಿನಗಳವು. ನಗಳಲ್ಲೇ ಲಂಕೇಶ್ ಪತ್ರಿಕೆ ನನ್ನ ಮನೆ ಪ್ರವೇಶಿಸಿಬಿಟ್ಟಿತ್ತು. ಅಪ್ಪ ್ಣಾ ಸತ್ಯಂಪೇಟೆ)ನಿಗೆ ಪತ್ರಿಕೆಯೆಂದರೆ ಪಂಚಪ್ರಾಣ. ಪ್ರತಿ ಬುಧವಾರ ಶಹಾಪುರದ ಬುಕ್‌ಸ್ಟಾಲ್‌ಗಳಿಗೆ ತಲುಪುತ್ತಿದ್ದುದರಿಂದ ಬೆಂಗಳೂರಿ ನಮ್ಮೂರಿನ ಬಸ್‌ನಲ್ಲಿ ಬರುವ ಬಂಡಲ್‌ಗಳಿಗಾಗಿ ಕಾದು ನಿಂತು, ಂದು ಪ್ರತಿ ತೆಗೆದುಕೊಂಡು ಮನೆಗೆ ಬರುತ್ತಿದ್ದೆ. ಮನೆಗೆ ಬಂದ ಪತ್ರಿಕೆಯನ್ನು ಓದುವಷ್ಟು ತಾಳ್ಮೆಯೂ ನನ್ನಲ್ಲಿ ಇರಲಿಲ್ಲ. ಗೆಯಲ್ಲಿ ಬರುತ್ತಲೇ ಪತ್ರಿಕೆಯ ಎಲ್ಲ ಪುಟಗಳನ್ನು ಮಗುಚಿ ತ್ತಿದ್ದೆ.

ತ್ರಿಕೆಯಲ್ಲಿಯ ಎಲ್ಲಾ ಬರಹಗಳು ನನಗೆ ಅರ್ಥವಾಗದಿದ್ದರೂ ಆಗ ಬಳಸುತ್ತಿದ್ದ ಗುಂ, ಬಂ... ಮುಂತಾದ ಪದಪುಂಜಗಳು ಮೈಯಲ್ಲಿ ದೋ ರೋಮಾಂಚನ ಉಂಟುಮಾಡುತ್ತಿದ್ದವು. ಜೊತೆಗೆ ಈ ಮುಖ್ಯಮಂತ್ರಿಗಳಿಗೇ ಏಕವಚನದಿಂದ ಜಾಡಿಸಿ ಬರೆದೂ ದಕ್ಕಿಸಿಕೊಳ್ಳುವ ಲಂಕೇಶರ ಛಾತಿ ನೆನೆದು ನನಗರಿವಿಲ್ಲದೆ ಮೈ ಕಂಪಿಸುತ್ತಿತ್ತು.



ಪತ್ರಿಕೆ ಆರಂಭವಾದ ಕೆಲವೇ ದಿನಗಳಲ್ಲಿ ನನ್ನ ತಂದೆಯೂ ಗುಲ್ಬರ್ಗಾ, ರಾಯಚೂರು, ಬೀದರ, ಬಳ್ಳಾರಿ ಮುಂತಾದ ಜಿಲ್ಲೆಗಳ ಕುರಿತು ಬರೆಯತೊಡಗಿದಾಗಲಂತೂ ಲಂಕೇಶರೇ ನನ್ನೊಳಗೆ ನನಗರಿವಿಲ್ಲದೆ ಸೇರಿಹೋದರು.

ಅಪ್ಪ ನಮ್ಮ ಭಾಗದಿಂದ ಕಳಿಸಿದ ಒಂದೊಂದು ವರದಿಗೂ ಓದುಗ ವರ್ಗ ನೀಡುತ್ತಿದ್ದ ಪ್ರತಿಕ್ರಿಯೆ ನನ್ನನ್ನು ದಂಗುಬಡಿಸಿತ್ತು, ಯಾವ ಇಲಾಖೆಯ ನೌಕರ ಯಾರಿಗಾದರೂ ಲಂಚ ಕೇಳಿದರೆ "ಅವನಿಗೆ ಯಾಕೆ ಮಾರಾಯ. ಲಂಕೇಶರಿಗೆ ಹೇಳಿ ನಿನ್ನ ಕತೆ ಬರೆಸಲೇನು?" ಎಂದು ಹೇಳುವಷ್ಟು ಜನ ಮುಗುಮ್ಮಾಗಿ ಮಾತಾಡತೊಡಗಿದರು. ಲಂಕೇಶ್ ಪತ್ರಿಕೆಯ ಸಂಪಾದಕರ ಹೆಸರೂ ಲಂಕೇಶ್ ಎಂದು ನಮ್ಮ ಭಾಗದ ಸಾಮಾನ್ಯರಿಗೆ ತಿಳಿದೇ ಇರಲಿಲ್ಲ, ಅಪ್ಪನನ್ನೇ ಲಂಕೇಶ್ ಎಂದು ಕರೆಯುತ್ತಿದ್ದುದು ನೆನಪು. ಹಾಗೆಯೇ ನನ್ನನ್ನು ಮರಿ ಲಂಕೇಶ್ ಎಂದು ಕರೆಸಿಕೊಂಡ ಹೆಮ್ಮೆ. ಹಾಗೆ ಜನ ನನ್ನನ್ನು ಕರೆದಾಗಲೆಲ್ಲ ನಾನೂ ಕೂಡಾ ಒಬ್ಬ ಆದರ್ಶ ಪತ್ರಕರ್ತನಾಗಬೇಕು ಎಂದು ಹಂಬಲ ಆಗಲೇ ಮೊಳಕೆ ಒಡೆಯತೊಡಗಿತ್ತು.

ಪ್ರತಿ ವಾರ ಕಪ್ಪು-ಬಿಳಿಪು ವರ್ಣದಲ್ಲಿ ಬರುತ್ತಿದ್ದ ಪತ್ರಿಕೆ ನನ್ನೊಳಗೆ ಮಾತ್ರ ವರ್ಣರಂಜಿತ ಕನಸುಗಳನ್ನು ಬಿತ್ತುವಲ್ಲಿ, ಆದರ್ಶದ ತುಡಿತಗಳನ್ನು ಹುಟ್ಟುಹಾಕುವಲ್ಲಿ ವಿಶೇಷವಾದ ಪಾತ್ರ ವಹಿಸಿತು. ಧರ್ಮಸಿಂಗ್-ಡ್ರಮ್‌ಸಿಂಗ್, ವಾಟಾಳ ನಾಗರಾಜ್ ಅವರು ಉಟ್ಟು ಓರಾಟಗಾರ ಎಂದು ಪತ್ರಿಕೆಯಲ್ಲಿ ಕರೆಸಿಕೊಂಡದ್ದು ನನಗಿನ್ನೂ ಚೆನ್ನಾಗಿ ನೆನಪಿನಲ್ಲಿದೆ. ಚಿಮ್ಮನಕಟ್ಟೆ ಅಮ್ಮನಕಟ್ಟೆ ಹತ್ತಿದ್ದು ಯಾವಾಗ? ನಮ್ಮೂರ ಬಾಜಿರಾಯಗೂ ಐತಿಗಕಾಲ, ಸಿಂಥಗಿಯ ಮಾಯಾ ಬಿಂದಿಗಿ, ಚೆಕಿನಾಳ ಮಾಸ್ತರನ ಬಾರಾಬಾನಗಡಿ ಎಂಬ ಪತ್ರಿಕೆಯ ಹೆಡ್ಡಿಂಗ್‌ಗಳನ್ನು ನಾನೆಂದೂ ಮರೆಯಲಾರೆ. ಯಾರಿಗೂ ಅಂಜದೆ ಅಳುಕದೆ ಇದ್ದದ್ದನ್ನು ಇದ್ದಂತೆ ಹೇಳುವ ಧೈರ್ಯ ಈ ನಾಡಿನಲ್ಲಿ ಲಂಕೇಶರಿಗೆ ಮಾತ್ರ ಎಂದು ನನಗೆ ಖಚಿತವಾಗುತ್ತಿದ್ದಂತೆಯೇ ಈ ಪತ್ರಿಕೆಯ ಓದುಗ, ಮೇಲಾಗಿ ನನ್ನ ತಂದೆಯೂ ಆ ಪತ್ರಿಕೆಯ ವರದಿಗಾರ ಎಂಬ ಹೆಮ್ಮೆ ನನ್ನೊಳಗೆ ಮೂಡಿಕೊಂಡಿತು. ಈ ಕಾರಣಕ್ಕಾಗಿಯೇ ಆ ಹದಿಹರೆಯದ ದಿನಗಳಲ್ಲಿ ಲಂಕೇಶ್ ಪತ್ರಿಕೆ ಕೈಯಲ್ಲಿ ಹಿಡಕೊಂಡು ಬಾಜಾರವೆಲ್ಲ ಸುತ್ತಿದ್ದೇ ಸುತ್ತಿದ್ದು.

ಬರೀ ವಾಚಾಮಗೋಚರವಾಗಿ ಬಯ್ಯುವುದಷ್ಟೇ ಲಂಕೇಶ್ ಅವರು ಕಲಿಸಿಕೊಡಲಿಲ್ಲ, ಇದರ ಜೊತೆಜೊತೆಗೆ ಸಾಹಿತ್ಯವನ್ನು ಇಷ್ಟಪಡುವ, ಸಂಕೋಚದಿಂದಲೇ ಪ್ರಶಂಸೆ ಹೊಗಳಿಕೆಗೆ ಪಕ್ಕಾಗುವ ಮನಸ್ಸನ್ನೂ ಒದಗಿಸಿಕೊಟ್ಟರು. ಹಾಗಾಗಿ ನಾನಾಗಲೇ ನನ್ನ ತಂಗಿಯ ಸಹಾಯದಿಂದ ಅವರಿಗೊಂದು ಕಾಗದ ಬರೆದು ನಿಮ್ಮ ಭಾವಚಿತ್ರ ನನ್ನ ಬದುಕಿಗೊಂದು ಪ್ರೇರಣೆ ನೀಡಬಲ್ಲದು ಕೂಡಲೇ ನಿಮ್ಮದೊಂದು ಭಾವಚಿತ್ರ ಕಳಿಸಿ ಎಂದು ಬರೆದಿದ್ದೆ. ಲಂಕೇಶರೂ ಕಾಡ ಹುಡುಗನ ಪತ್ರವೆಂದು ನನ್ನನ್ನು ಅಲಕ್ಷಿಸದೆ ತಮ್ಮ ಪುಟ್ಟ ಫೋಟೋ ಕಳಿಸಿ ನನ್ನೊಳಗೆ ಮತ್ತಷ್ಟು ಕಸುವನ್ನು-ಕನಸುಗಳನ್ನು ತುಂಬಿದ್ದರು.

ಅಕ್ಟೋಬರ್ 2, 1993(?)ರ ಆತ್ಮಾವಲೋಕನ ಸಭೆ ಲಾಲ್‌ಬಾಗ್‌ನಲ್ಲಿ ನಡೆಯುವುದೆಂದು ಲಂಕೇಶರು ತೀರ್ಮಾನಿಸಿದಾಗ ಅವರನ್ನು ತೀರ ಹತ್ತಿರದಿಂದ ನೋಡಬೇಕೆಂಬ ಕುತೂಹಲದಿಂದ ನನ್ನ ತಂದೆಯೊಂದಿಗೆ ಆಗ ಬೆಂಗಳೂರಿಗೆ ಹೋಗಿದ್ದೆ. ಅಲ್ಲಿ ಲಂಕೇಶರ ಆರ್ಭಟನೆಯೇ ಇಲ್ಲದ ತಣ್ಣನೆಯ, ಕಾವ್ಯಾತ್ಮಕವಾದ ಮಾತು ಕೇಳಿ ಮತ್ತಷ್ಟು ದಂಗಾದೆ. ಲಂಕೇಶ್ ಪತ್ರಿಕೆಗಾಗಿ ನನ್ನ ತಂದೆ ಸಿದ್ಧಪಡಿಸಿದ ವರದಿಯೊಂದನ್ನು ಕೊಡಲು ಬೆಂಗಳೂರಿಗೆ ಹೋಗಿ ಅವರನ್ನು ನೇರವಾಗಿ ಕಂಡು, ಆನಂತರ ಕಚೇರಿಯ ಮೇಲಿನ ರೂಮ್‌ನಲ್ಲಿ ಊಟಮಾಡಿ, ಅವರ ತೋಟವನ್ನು ನೋಡಿಕೊಂಡು ಬಂದ ಮೇಲಂತೂ ಅವರು ನನ್ನೊಳಗೆ ಬೆಳೆಯುತ್ತಲೇ ಇದ್ದಾರೆ.

ನನ್ನ ಪ್ರಜ್ಞೆಯ ಭಾಗವೇ ಆದ, ನನ್ನ ಪ್ರತಿಭಟನಾತ್ಮಕ ಮನಸ್ಸಿನ ಮೂಲವೇ ಆಗಿರುವ ಲಂಕೇಶ್ ಮರೆಯುವುದೆಂದರೆ ನನ್ನನ್ನೇ ನಾನು ಮರೆತಂತೆ. ಈ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಕುರಿತು ಡಾ. ಜಿ.ಎಸ್.ಶಿವರುದ್ರಪ್ಪ ಅವರು ಬರೆದ ಕವಿತೆ ನೆನಪಾಗುತ್ತದೆ.

ನೀವು ಕಲಿಸಿದಿರಿ ನನಗೆ ತಲೆಯೆತ್ತಿ ನಿಲ್ಲುವುದನ್ನು
ಯಾವುದಕ್ಕೂ ಜಗ್ಗದೆ ನಿರ್ಭಯವಾಗಿ ಬದುಕುವುದನ್ನು


-ವಿಶ್ವಾರಾಧ್ಯ ಸತ್ಯಂಪೇಟೆ, ಶಹಾಪುರ

ಮೌಲ್ಯಗಳನ್ನು ರೂಪಿಸಿದ ಮಾನಸ ಗುರು

ಆಧುನಿಕ ಕನ್ನಡ ಸಾಹಿತ್ಯದ ಮುಸ್ಸಂಜೆಯಲ್ಲಿ ಮಿನುಗಲು ಬಂದ ಮಿಂಚುಹುಳು ಲಂಕೇಶ್‌ರವರು ನನಗೆ ತಾಕಿದ್ದು 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಕಥೆಯಿಂದಲಾದರೂ ಹೆಚ್ಚು ತಾಕಿದ್ದು ತಟ್ಟಿದ್ದು ಪ್ರಭಾವಿಸಿದ್ದು ವಾರಕ್ಕೊಮ್ಮೆ ಅವರ ಹೆಸರಿನಲ್ಲೇ ಬರುತ್ತಿದ್ದ ಲಂಕೇಶ್ ಪತ್ರಿಕೆ ಮೂಲಕ. ನಾನು ಪತ್ರಿಕೆಗೆ ಮುಖಾಮುಖಿಯಾಗಿದ್ದು 1984ರಲ್ಲಿ, ನಾನಾಗ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದೆ. ಅಂದಿನಿಂದ ಮೇಷ್ಟ್ರು ಬದುಕಿಗೆ ನಮಸ್ಕಾರ ಹೇಳುವವರೆಗೂ ನಾನು ಪತ್ರಿಕೆಯ ನಿರಂತರ ಓದುಗನಾಗಿದ್ದೆ, ಪತ್ರಿಕೆಯಲ್ಲಿ ಬರುತ್ತಿದ್ದ ಈ ಸಂಚಿಕೆ, ಛೇ ಛೇ, ಟೀಕೆ-ಟಿಪ್ಪಣಿ, ಮರೆಯುವ ಮುನ್ನ, ನೀಲು, ತುಂಟಾಟ, ಬರೆವ ಬದುಕು, ಸಂದರ್ಶನ (ಸಾಹಿತಿಗಳ ಬದುಕು ಬರಹ), ವಿಮರ್ಶೆ ಕಾಲಂಗಳು ನನ್ನಲ್ಲಿ ಹೆಚ್ಚು ಅಭಿರುಚಿ ಮೂಡಿಸಿದವು. ಅಲ್ಲದೆ ಪತ್ರಿಕೆಗೆ ಅಂಟಿಕೊಳ್ಳುವಂತೆ ಮಾಡಿದವು.


ಅದೆಷ್ಟೊತ್ತೆಂದರೆ ಮಂಗಳವಾರಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದೆ, ನನಗೆ ಸರ್ಕಾರಿ ಉದ್ಯೋಗ ಸಿಕ್ಕಿದ್ದು 25 ಜನವರಿ 1999. ಅಲ್ಲಿಗಂಟ ಅಪ್ಪ ಕೊಟ್ಟ ದುಡ್ಡಲ್ಲೇ ಪತ್ರಿಕೆ ಕೊಂಡುಕೊಳ್ಳುತ್ತಿದ್ದೆ, ಪತ್ರಿಕೆಯನ್ನು ಏಕಾಂತವಾಗಿ ಓದುತ್ತಿದ್ದರೂ ಮನಸೆಳೆದ ಭಾಗಗಳನ್ನು, ಪತ್ರಿಕೆ ಎತ್ತಿಹಿಡಿಯುತ್ತಿದ್ದ ಸಿದ್ಧಾಂತ, ವಿಚಾರಗಳನ್ನು ಗೆಳೆಯರೊಂದಿಗೆ ಚರ್ಚಿಸುತ್ತಾ, ಅವರಿಗೂ ಪತ್ರಿಕೆಯ ಹುಚ್ಚನ್ನು ಹತ್ತಿಸುತ್ತಿದ್ದೆ. ಕಾಲೇಜು, ವಿಶ್ವವಿದ್ಯಾಲಯದ ಗುರುಗಳಿಂದ ಕಲಿತದ್ದಕ್ಕಿಂತ ಹತ್ತು ಪಟ್ಟು ವಿಚಾರವನ್ನು ಪತ್ರಿಕೆಯಿಂದ ಕಲಿತೆ. ಪತ್ರಿಕೆ ನಿಜವಾಗಿಯೂ ನನ್ನಲ್ಲಿ ವೈಚಾರಿಕತೆಯನ್ನು, ಜೀವನ ಪ್ರೀತಿಯನ್ನು ಅರಳಿಸಿತು.

ದಿನಂಪ್ರತಿ ಜಂಜಾಟದ ನಡುವೆಯೂ ಕಥೆ, ಕಾದಂಬರಿ, ನಾಟಕ, ಕಾವ್ಯ ಪ್ರಬಂಧ, ವಿಮರ್ಶೆಗಳನ್ನು ಒಸೆದು ತಪ್ಪದೇ ಪ್ರತಿವಾರ ಪತ್ರಿಕೆಯನ್ನು ಓದುಗರ ಕೈಗೆ ತಲುಪಿಸಿದ್ದಲ್ಲದೆ, ಜೀವನದ ಕೊನೆಗಳಿಗೆ ತನಕ ಬರೆಯುತ್ತಲೇ ಬದುಕಿ, ಕೊನೆಯುಸಿರೆಳೆದಿದ್ದು ನನ್ನಲ್ಲಿ ದಿಗ್ಭ್ರಮೆ, ಭಯ, ಅಚ್ಚರಿಯನ್ನು ತಂದಿತು. ಮೇಷ್ಟರಿಗೆ ಎಲ್ಲಿತ್ತು ಈ ರೀತಿ ಬರೆಯುವ ಅದಮ್ಯ ಚೇತನ, ಧೀಮಂತ ಶಕ್ತಿ, ಜೀವನ ಪ್ರೀತಿ? ಎಂದು ಹತ್ತೆಂಟು ಬಾರಿ ಚಿಂತಿಸಿದ್ದೇನೆ. ಕನ್ನಡಿಗರ ಈ ನೆಚ್ಚಿನ ಸಾಹಿತಿಯನ್ನು, ನನ್ನ ಮಾನಸ ಗುರುವನ್ನು ನೋಡಲು



ಅದೆಷ್ಟೋ ಬಾರಿ ಅವರ ಕಚೇರಿಗೆ ಎಡತಾಕಿದೆ. ಆದರೂ ದರ್ಶನವಾಗಲಿಲ್ಲ, 'ತಲೆಮಾರಿನ ತಳಮಳ'(ವಿಮರ್ಶಕರು ಕಂಡ ಲಂಕೇಶರ ಬದುಕು ಬರಹ) ಕೃತಿ ಯವನಿಕಾ ಸಭಾಂಗಣದಲ್ಲಿ ಬಿಡುಗಡೆಯಾದ ದಿನ ಅವರನ್ನು ಕಣ್ತುಂಬಿಕೊಂಡೆ, ತೀರಾ ಹತ್ತಿರದಿಂದ ಅವರ ಭಾಷಣದ ಮಾತುಗಳನ್ನು ಕಿವಿಗೊಟ್ಟು ಆಲಿಸಿದೆ. ಅಷ್ಟಕ್ಕೇ ತೃಪ್ತನಾಗದೆ ಅಂಜುತ್ತಾ ಅಳುಕುತ್ತಾ ಅವರ ಬಳಿ ಹೋಗಿ "ನಮಸ್ಕಾರ ಸಾರ್ ತಮ್ಮ ಜೊತೆ ಒಂದು ಫೋಟೋ ತೆಗೆಸಿಕೊಳ್ಳುವ ಬಯಕೆಯಾಗಿದೆ" ಎಂದೆ. ಮೇಷ್ಟರು ನಗು ಮುಖದಿಂದ ಸಮ್ಮತಿಯಿತ್ತರು. ನಾನು ಅಲ್ಲೇ ಇದ್ದ ಮೇಷ್ಟರ ಜೀವದ ಗೆಳೆಯ ಪ್ರೊ. ಕೆ.ರಾಮದಾಸ್, ಪ್ರೊ. ಕಿ.ರಂ. ನಾಗರಾಜ್(ನನ್ನ ಗುರುಗಳು) ಹಾಗೂ ನವ್ಯ ಕವಿ ಕೆ.ವಿ. ತಿರುಮಲೇಶ್‌ರನ್ನು ಮೇಷ್ಟರೊಂದಿಗೆ ನಿಲ್ಲಿಸಿ ಫೋಟೋ ತೆಗೆಸಿಕೊಂಡೆ. ಆ ಫೋಟೋವನ್ನು ಈಗಲೂ ಜೋಪಾನವಾಗಿ ಮಡಗಿ ಕೊಂಡಿರುವೆ.

ಇನ್ನೊಂದು ಸಂಗತಿಯೆಂದರೆ ಮಾರ್ಚ್ 8(ಮೇಷ್ಟರ ಹುಟ್ಟಿದ ದಿನ), ಜುಲೈ6 (ಪತ್ರಿಕೆ ಹುಟ್ಟಿದ ದಿನ) ಡಿಸೆಂಬರ್ 31 (ವರ್ಷದ ಅಂತಿಮ ದಿನ) ರಂದು ಮೇಷ್ಟರು ತಮ್ಮ ಕಾರ್ಯಭಾರ ಮುಗಿಸಿ ತಂಡವನ್ನು ತಮ್ಮ ಮಾವಿನ ತೋಟಕ್ಕೆ ಕರೆದೊಯ್ದು ಸಂತಸ, ಸಂಭ್ರಮ ಹಂಚಿಕೊಳ್ಳುತ್ತಿದ್ದರು. ಒಮ್ಮೆಯಾದರೂ ನಾನು ಅವರ ಸಂತೋಷಕೂಟದಲ್ಲಿ ಪಾಲ್ಗೊಳ್ಳಬೇಕೆಂದು ನಿರ್ಧರಿಸಿ ಗೆಳೆಯ ಕೆಂಪನಹಳ್ಳಿ ರಂಗನಾಥನೊಂದಿಗೆ 31 ಡಿಸೆಂಬರ್ 1998ರಂದು ತೋಟಕ್ಕೆ ಹೋದೆ. ಅಲ್ಲಿ ನನ್ನ ಗುರು ಕಿ.ರಂ. ನಾಗರಾಜ್ ಕುಟುಂಬ ಸಮೇತ ಆಗಮಿಸಿದ್ದರು. ತೋಟದಲ್ಲಿ ಊಟೋಪಚಾರ ಆದಮೇಲೆ ತೋಟದ ನಡುವೆ ಇದ್ದ ಮನೆಯ ಟೆರೇಸ್ ಮೇಲೆ



ಕಾಶೀಬಾಯಿ ದಾದನಟ್ಟಿಯವರ ತಂಡ 'ಶ್ರೀಕೃಷ್ಣ ಪಾರಿಜಾತ' ನಾಟಕವನ್ನು ಅಭಿನಯಿಸಿತು. ನಾಟಕ ಮುಗಿದ ಮೇಲೆ ಮೇಷ್ಟ್ರು ಹೂವಿನ ಬೊಕ್ಕೆ ಕೊಟ್ಟು ಕಾಶೀಬಾಯಿ ಯನ್ನು ಅಭಿನಂದಿಸಿದರು. ನಾನು ನನ್ನ ಮಾನಸ ಗುರುವಿಗೆ, ವಿದ್ಯಾ ಗುರುವಿಗೆ ವಂದಿಸಿ ಜ್ಞಾನಭಾರತಿ ಹಾಸ್ಟೆಲ್‌ಗೆ ಹಿಂದಿರುಗಿದೆ.

ಜನವರಿ 25, 2000ದಂದು ಮೇಷ್ಟರು ಸತ್ತ ಸುದ್ದಿ ಕೇಳಿ ಹೊಸಕೆರೆ ಹಳ್ಳಿಯ ಅವರ 'ನವಿಲು' ಮನೆಗೆ ಕೆಂಪನಹಳ್ಳಿ ರಂಗನಾಥನೊಂದಿಗೆ ಓಡಿಹೋದೆ. ಮೇಷ್ಟ್ರು ನಿಸ್ತೇಜವಾಗಿ ಮಲಗಿದ್ದರು. ಮೂಗಿನ ಎರಡೂ ಹೊಳ್ಳೆಗೂ ಹತ್ತಿ ತುಂಬಿದ್ದರು. ತಲೆಯ ಹಿಂಭಾಗದಲ್ಲಿ ನಂದಾ ದೀಪ ಉರಿಯುತ್ತಿತ್ತು, ಮನೆ ಮೌನವಾಗಿತ್ತು. ಮೇಷ್ಟರ ಅನುಯಾಯಿಗಳು, ಗೆಳೆಯರು, ಶಿಷ್ಯರು, ಹಿತೈಷಿಗಳು, ಬಂಧು-ಬಳಗದವರೆಲ್ಲಾ ಬಂದು ಇಪ್ಪತ್ತನೇ ಶತಮಾನದ ಅದ್ಭುತ ಚಿಂತಕನಿಗೆ ವಂದಿಸಿ ಅಂತಿಮ ದರ್ಶನ ಪಡೆದರು. ನನ್ನ ಕಣ್ಣಲ್ಲಿ ನೀರು ಚಿಮ್ಮಿದವು.

ಒಟ್ಟಿನಲ್ಲಿ ನಾನು ನಾನಾಗಲು, ಬದುಕನ್ನು ಪ್ರೀತಿಸಲು, ಅನ್ಯರೊಂದಿಗೆ ಸನ್ನಡತೆ ಬೆಳೆಸಿಕೊಳ್ಳಲು, ಆಡಂಬರದ ಬದಲಿಗೆ ಸರಳತೆಯನ್ನು ರೂಢಿಸಿ ಕೊಳ್ಳಲು, ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳಲು ನನ್ನ ಪ್ರೀತಿಯ ಲಂಕೇಶ್ ಮೇಷ್ಟ್ರೇ ಕಾರಣಕರ್ತರಾಗಿದ್ದಾರೆ ಎಂದರೆ ತಪ್ಪಾಗಲಾರದು.

-ಡಾ. ಕೆಂಪ್ಪಪ್ಪ ಚನ್ನಸಾಗರ,
ವೆಂಕಟಾಪುರ, ಹಾವೇರಿ

ಮಳೆಯಲ್ಲ ಅಂತರ್ಜಲ


ಸಿನಿಮಾ ಟ್ರೆಂಡುಗಳು..

ಎನ್.ಎಸ್.ಶಂಕರ್



ಒಂದು ಒಳ್ಳೆಯ ಪುಸ್ತಕ ಅಥವಾ ಸಿನಿಮಾ ಅಥವಾ ಚಿತ್ರ ಕಲಕಿದ ಒಳ್ಳೆಯ ವಿಚಾರ- ಇವು ಯಾವುವೂ ಆಗಿಂದಾಗಲೇ ಇನ್ನೇನೋ ಒಂದಕ್ಕೆ ದಾರಿಯಾಗುವ ಪ್ರಚೋದನೆಗಳಲ್ಲ. ಅವುಗಳ ಪ್ರಭಾವ, ನೇರ ತೋಯಿಸುವ ಮಳೆ ನೀರಿನಂತಲ್ಲ; ಒಳಗೇ ಆರ್ದ್ರತೆಯನ್ನು ರಕ್ಷಿಸುವ ಅಂತರ್ಜಲದಂತೆ.

ಅದು ಜನ ಕೊಲೆಗಾರರು. ಅವರನ್ನು ಗಲ್ಲಿ ಶಿಕ್ಷೆಗೆ ಈಡು ಮಾಡುವ ಬದಲು ತನ್ನೊಂದಿಗೆ ಹಳ್ಳಿಯೊಂದಕ್ಕೆ ಕರೆದೊಯ್ದು ಅವರನ್ನು ಜೀವನದೆಡೆಗೆ, ಪ್ರೀತಿ ಭರವಸೆಗಳ ಕಡೆಗೆ ತಿರುಗಿಸುವ ಮಾನವೀಯ ಜೈಲರ್. ನೀವು ಈಗಾಗಲೇ ಊಹಿಸಿದಂತೆ ಇದು ವಿ. ಶಾಂತಾರಾಂ ನಟಿಸಿ ನಿರ್ದೇಶಿಸಿದ 'ದೋ ಆಂಖೆ ಬಾರಾಹ್ ಹಾಥ್' (ಎರಡು ಕಣ್ಣು ಹನ್ನೆರಡು ಕೈಗಳು) ಎಂಬ ಮಹತ್ವಾಕಾಂಕ್ಷೆಯ ಚಿತ್ರದ ತಿರುಳು. ಆ ಚಿತ್ರ ನೆನಪಾದಾಗ ಈಗಲೂ "ಏ ಮಾಲಿಕ್ ತೇರೇ ಬಂದೇ ಹಮ್.."" ಹಾಡಿನ ಸುಶ್ರಾವ್ಯ ಗುಂಗು ಕಾಡತೊಡಗುತ್ತದೆ.



'ಭೂತಯ್ಯನ ಮಗ ಅಯ್ಯು'


ಜಾವೇದ್ ಅಖ್ತರ್ ಒಮ್ಮೆ "ಇಂದು ಸಿನಿಮಾ ತಂತ್ರಜ್ಞಾನದಲ್ಲಿ ನಾವು ಮೈಲುಗಟ್ಟಲೆ ಮುಂದೆ ಬಂದಿದ್ದೇವೆ. ಹಾಲಿವುಡ್ಡಿಗೆ ಸರಿಸಮನಾದ ತಾಂತ್ರಿಕ ಪರಿಣತಿ ಗಳಿಸಿದ್ದೇವೆ. ಆದ್ದಾಗಿಯೂ ಇಂದು 'ದೋ ಆಂಖೆ ಬಾರಾಹ್ ಹಾಥ್" ಥರದ ಸತ್ವಪೂರ್ಣ ಚಿತ್ರಗಳೇಕೆ ಕಾಣಸಿಗುತ್ತಿಲ್ಲ?"" ಎಂದು ಮರುಗಿದ್ದರು.

ಆದರೆ? ಆ ಸಿನಿಮಾ ನೋಡಿ ಯಾರದಾದರೂ ಪಾತಕಿಗಳ ಮನಃಪರಿವರ್ತನೆ ಆಗಿತ್ತೇ? ಗೊತ್ತಿಲ್ಲ. ಅಂದ ಮೇಲೆ, ಕಲೆ ಆಗಾಗ ತನ್ನ ಮೈಮೇಲೆ ಆವಾಹಿಸಿಕೊಳ್ಳುವ ಈ ಸಾಮಾಜಿಕ ಜವಾಬ್ದಾರಿಯ ತಥ್ಯವೇನು?

ಕಲೆ ಮತ್ತು ಸಾಮಾಜಿಕ ಕಾಳಜಿಗಳ ಪ್ರಶ್ನೆಯಂತೂ ತೀರಾ ಹಳತು. ಈ ವಿಷಯ ತೆಗೆಯುವ ಉತ್ಸಾಹಿಗಳು, ಗೊತ್ತಿದ್ದೋ ಗೊತ್ತಿಲ್ಲದೆಯೋ, ಕಲೆ ಹಾಗೂ ಸಮಾಜದ ನಡುವೆ ಕಾರ್ಯ-ಕಾರಣ ಥರದ್ದೊಂದು ಸಂಬಂಧ ಕಾಣಲೆತ್ನಿಸುತ್ತಾರೆ.

ಉದಾಹರಣೆಗಳೊಂದಿಗೆ ಮಾತನಾಡೋಣ. ನಮ್ಮಲ್ಲೇ 'ಬಂಗಾರದ ಮನುಷ್ಯ' ಬಿಡುಗಡೆಯಾದ ಸಂದರ್ಭದಲ್ಲಿ ಆ ಚಿತ್ರದ ನಾಯಕನ ಆದರ್ಶ ಅನುಸರಿಸಿ ಪಟ್ಟಣ ತೊರೆದು ಹಳ್ಳಿಗೆ, ಬೇಸಾಯಕ್ಕೆ ಮರಳಿದವರಿದ್ದರು. 'ಜೀವನ ಚೈತ್ರ' ನೋಡಿ ಅನೇಕ ಊರುಗಳಲ್ಲಿ ಸಾರಾಯಿ ಅಂಗಡಿಗಳ ವಿರುದ್ಧ ಹೋರಾಟ ನಡೆದಿತ್ತು. ಯಾಕೆ? ಈಚೆಗೆ 'ಲಗೇ ರಹೋ ಮುನ್ನಾಭಾಯಿ' ಹಿಂದಿ ಚಿತ್ರ ಬಂದ ಮೇಲೆ ದೇಶಾದ್ಯಂತ "ಗಾಂಧಿಗಿರಿ"ಯ ಆಹ್ಲಾದಕರ ಪ್ರಯೋಗಗಳು ವರದಿಯಾದವು. ಬೆಂಗಳೂರಿನಲ್ಲೂ ಟ್ರಾಫಿಕ್ ನಿಯಮ ಉಲ್ಲಂಘಿಸಿದವರಿಗೆ ಗುಲಾಬಿ ಹೂ ಕೊಟ್ಟು ತಿಳಿ ಹೇಳುವ ಪ್ರಯತ್ನಗಳೂ ಕಂಡವು.

ಆದ್ದಾಗಿಯೂ ಸಿನಿಮಾದಿಂದ 'ಇಲ್ಲಿ ಸ್ವಿಚ್ ಒತ್ತಿದರೆ ಅಲ್ಲಿ ಬಲ್ಬ್ ಹೊತ್ತಿಕೊಳ್ಳುವ' ನೇರ ಹಾಗೂ ಸ್ಪಷ್ಟ ಸಾಮಾಜಿಕ ಪರಿಣಾಮದ ನಿರೀಕ್ಷೆ ಇಟ್ಟುಕೊಳ್ಳುವುದೇ



'ಪಲ್ಲವಿ'

ಮುಗ್ಧತನವೆನಿಸುತ್ತದೆ. ಯಾಕೆಂದರೆ ಒಂದು ಒಳ್ಳೆಯ ಪುಸ್ತಕ ಅಥವಾ ಸಿನಿಮಾ ಅಥವಾ ಚಿತ್ರ ಕಲಕಿದ ಒಳ್ಳೆಯ ವಿಚಾರ- ಇವು ಯಾವುವೂ ಆಗಿಂದಾಗಲೇ ಇನ್ನೇನೋ ಒಂದಕ್ಕೆ ದಾರಿಯಾಗುವ ಪ್ರಚೋದನೆಗಳಲ್ಲ, ಅವುಗಳ ಪ್ರಭಾವ, ನೇರ ತೋಯಿಸುವ ಮಳೆ ನೀರಿನಂತಲ್ಲ; ಒಳಗೇ ಆರ್ದ್ರತೆಯನ್ನು ರಕ್ಷಿಸುವ ಅಂತರ್ಜಲದಂತೆ.

ಇದರ ಜೊತೆಗೆ ಕಲೆಯ ಮೂಲ ಉದ್ದೇಶ ಮನೋಲ್ಲಾಸ ಎಂಬುದನ್ನೂ ಮರೆಯದಿರೋಣ. ಬರ್ಟೋಲ್ಟ್ ಬ್ರೆಕ್ಟ್‌ನಂಥ "ಬದ್ಧ" ನಾಟಕಕಾರನೂ ತನ್ನ ನಾಟಕಗಳ ಮೊದಲ ಗುರಿ ಮನರಂಜನೆ ಎಂದು ಸಾರುತ್ತಲೇ "ಎಪಿಕ್" ರಂಗಭೂಮಿಯನ್ನು ಸೃಷ್ಟಿಸಿದ್ದ.

ಆದ್ದರಿಂದ ಕಲೆಗಾಗಿಯೇ ಕಲೆ, ಅದಕ್ಕೆ ಇನ್ನು ಯಾವ ಜವಾಬ್ದಾರಿಯೂ ಇಲ್ಲವೆಂತಲೋ, ಪೂರ್ತಿಯಾಗಿ ಸಮಾಜ ಸುಧಾರಣೆಯೇ ಕಲೆಯ ಏಕೈಕ ಗುರಿ ಎಂತಲೋ ವಾದ ಹೂಡುವ ಇಬ್ಬರೂ ಅತಿರೇಕದ ಅವಾಸ್ತವಿಕ ಬೇಲಿಗಳನ್ನು ಹಾಕಿಕೊಂಡಿದ್ದಾರೆ ಎಂದೇ ಅರ್ಥ. ಯಾಕೆಂದರೆ ಸಮಾಜ-ಕಲೆಗಳ ನಡುವಣ ಪ್ರಭಾವ, ಪೋಷಣೆಗಳ ಲೇವಾದೇವಿ, ಅಂಗಡಿಗೆ ಹೋಗಿ ಸಾಮಾನು ಕೊಳ್ಳುವಷ್ಟು ಸರಳವಲ್ಲ, ನೇರವಲ್ಲ.

ಎಪ್ಪತ್ತು ಹಾಗೂ ಎಂಬತ್ತರ ದಶಕದ ಕನ್ನಡ ಸಿನಿಮಾ ಬಗ್ಗೆ ಭಾರತಕ್ಕೇ ಅಚ್ಚರಿಯಿತ್ತು. ಹೊಸ ಅಲೆಯ ಹರಿಕಾರ ನೆನಿಸಿದ 'ಸಂಸ್ಕಾರ" ಬಿಡುಗಡೆಯಾಗಿದ್ದು 1970ರಲ್ಲಿ. ಆಗ 'ಚೋಮನ ದುಡಿ', 'ಘಟಶ್ರಾದ್ಧ', 'ಪಲ್ಲವಿ', 'ಕಾಡು' – ಇಂಥ ಚಿತ್ರಗಳೊಂದು ಕಡೆ, ಪುಟ್ಟಣ್ಣನವರ 'ಗೆಜ್ಜೆಪೂಜೆ', 'ನಾಗರಹಾವು', ಸಿದ್ದಲಿಂಗಯ್ಯನವರ 'ಬಂಗಾರದ ಮನುಷ್ಯ', 'ಭೂತಯ್ಯನ ಮಗ ಅಯ್ಯು'... ಇಂಥ ಶ್ರೇಷ್ಠ ಮುಖ್ಯವಾಹಿನಿ ಚಿತ್ರಗಳಿನ್ನೊಂದು ಕಡೆ. ಜನ ಎಲ್ಲ ಸಿನಿಮಾಗಳನ್ನೂ ನೋಡಿ ಮೆಚ್ಚಿ ಗೆಲ್ಲಿಸಿದರು. ಆಗ ಹೊಸ ಅಲೆ ಅನಿಸಿಕೊಂಡ ಈ ಚಿತ್ರಗಳು ವ್ಯಾಪಾರದಲ್ಲೂ ಗೆಲ್ಲದೆ ಹೋಗಿದ್ದಿದ್ದರೆ, 'ಚೋಮನದುಡಿ', 'ಕಾಡು' ಮುಂತಾದುವು ನೂರು ದಿನ ಓಡದೆ ಹೋಗಿದ್ದಿದ್ದರೆ, ಬಹುಶಃ ಭಾರತದಲ್ಲೇ ಪರ್ಯಾಯ ಚಿತ್ರಗಳ ಸೊಲ್ಲು ಉಡುಗಿ ಹೋಗುತ್ತಿತ್ತು. ಅಂತೂ ಈ ಅವಧಿಯನ್ನು ಕನ್ನಡ ಚಿತ್ರರಂಗದ ಸುವರ್ಣಯುಗ ಎಂದು ಕರೆದರೆ ತಪ್ಪಿಲ್ಲ....

ವೃತ್ತಿ ರಂಗಭೂಮಿ ಮತ್ತು ಹರಿಕಥೆಯ ಮಾದರಿಗಳಲ್ಲಿ ತನ್ನ ನುಡಿಗಟ್ಟು ರೂಢಿಸಿಕೊಂಡ ಭಾರತೀಯ ಸಿನಿಮಾ, ಆರಂಭದಲ್ಲಿ ಪೌರಾಣಿಕ ಹಾಗೂ ಜಾನಪದ ಶೈಲಿಯ ಕಥನಗಳನ್ನೇ ಆಶ್ರಯಿಸಿದ್ದು ಸಹಜವಾಗಿತ್ತು. ಮುಂದಕ್ಕೆ, ಆ ಸರಕು ಸಾಲದು, ಇನ್ನು ದಿನನಿತ್ಯದ ವಿದ್ಯಮಾನಗಳನ್ನು ಬಿಂಬಿಸುವ ಸಾಮಾಜಿಕ ದ್ರವ್ಯವನ್ನು ಒಳಗೊಳ್ಳಬೇಕೆಂದು ಚಿತ್ರ ನಿರ್ದೇಶಕ ಅಂದುಕೊಳ್ಳುವಾಗ ಅವನ ಕಣ್ಣ ಮುಂದಿದ್ದದ್ದು ನೆಹರೂ ಯುಗದ ಭವ್ಯ ಭಾರತದ ಕನಸು. ಜೊತೆಗೆ ಸ್ವಾತಂತ್ರ್ಯ ಚಳವಳಿಯ ಅಮೋಘ ಯಶಸ್ಸಿನ ಗಾಥೆ ಬೆನ್ನಿಗಿತ್ತು. ಸಹಜವಾಗಿಯೇ, ಪ್ರೀತಿ, ತ್ಯಾಗ, ಸಹಬಾಳ್ವೆಗಳ ಆದರ್ಶ ಆಗಿನ ಚಿತ್ರಗಳನ್ನು ತುಂಬಿಕೊಂಡಿತ್ತು.

ನನ್ನ ದೃಷ್ಟಿಯಲ್ಲಿ ಸರ್ವಕಾಲೀನ ಶ್ರೇಷ್ಠ ಕನ್ನಡ ಚಿತ್ರಗಳಲ್ಲೊಂದಾದ 'ಭೂತಯ್ಯನ ಮಗ ಅಯ್ಯು' ಯಶಸ್ಸಿನಲ್ಲಿ ಕೂಡ ಇವೇ ಗಾಂಧಿವಾದಿ ಮೌಲ್ಯಗಳ ಬಗೆಗಿನ ಆದರ ಕಾಣುತ್ತದೆ.

ಸರ್ವಗುಣ ಸಂಪನ್ನನಾದ, ಪ್ರೀತಿ, ಆದರ್ಶ ತುಂಬಿಕೊಂಡ ನಾಯಕ

ಈ ಆದರ್ಶದ ಪ್ರತಿಮೆ ಬಿರುಕು ಬಿಡಲಾರಂಭಿಸಿದ್ದು ಯಾವಾಗ? ಅಂದರೆ ನೈತಿಕ ಸ್ಥೈರ್ಯದಲ್ಲಿ ಜನಸಾಮಾನ್ಯನ ನಂಬಿಕೆ ಕುಸಿಯತೊಡಗಿದ್ದು ಯಾವಾಗ? ಬಹುಶಃ ತುರ್ತುಸ್ಥಿತಿಯ ಕಾಲಮಾನದಲ್ಲಿ, ಆ ವೇಳೆಗೆ ನೆಹರೂ ಯುಗದ 'ರಾಷ್ಟ್ರ ನಿರ್ಮಾಣದ' ಭ್ರಮೆಗಳು ಹರಿದಿದ್ದವು. ಭಾರತೀಯ ಪ್ರಜೆ, ರಾಜಕೀಯ ಭ್ರಷ್ಟಾಚಾರದ ಜೊತೆಗೆ ಸರ್ವಾಧಿಕಾರಿ ಆಡಳಿತದ ರುಚಿಯನ್ನೂ ಕಂಡಿದ್ದ. ಈಗ ಒಟ್ಟು ಸಮಾಜದ ಗೊಡವೆ ಹಿಂದಕ್ಕೆ ಸರಿದು ವ್ಯಕ್ತಿಗತ ಆತಂಕಗಳು ಮೇಲುಗೈಯಾದವು. ರಾಜಕಾರಣಿ ತೆರೆಯ ಮೇಲಿನ ಹೊಸ ಖಳನಾಯಕನಾಗಿ ಅವತರಿಸಿದ- ಕನ್ನಡದ 'ಅಂತ' ಚಿತ್ರದ ಮೂಲಕ. ಮುಂದಕ್ಕೆ ಆದರ್ಶವಾದಿ ಪೊಲೀಸ್- ಅವನಿಗೆದುರಾಗಿ ಖಳನಾಯಕ ರಾಜಕಾರಣಿ- ಈ ಗಿಳಿಪಾಠವನ್ನೇ ಒಪ್ಪಿಸುವ ಎಷ್ಟೊಂದು ಚಿತ್ರಗಳು ಬಂದವು!

ಅಮಿತಾಭ್ ಬಚನ್‌ಗೆ ಕುಪಿತ ಯುವಕನ ವರ್ಚಸ್ಸು ನೀಡಿದ 'ದೀವಾರ್' ಚಿತ್ರದ ನಾಯಕ ನೀತಿವಂತನಲ್ಲ, ಅದೇ ವರ್ಷ ಬಂದ 'ಶೋಲೆ' ಹಿಂಸೆಗೆ ಹೊಸ ಭಾಷ್ಯವನ್ನೇ ಬರೆಯಿತು. ಹೀಗೆ ಹಿಂದಿಯಲ್ಲಿ ಸಲೀಂ ಜಾವೇದ್ ಸೃಷ್ಟಿಸತೊಡಗಿದ ಪ್ರಕ್ಷುಬ್ಧ ಹಿಂಸಾಮಯ ಲೋಕ, ಭಾರತೀಯನ ತಳಮಳವನ್ನು, ತಾಳ್ಮೆಗೇಡಿತನವನ್ನು ಹೇಳತೊಡಗಿತ್ತು. ಎನ್. ಚಂದ್ರಾನ ಮೊದಲ ಚಿತ್ರ 'ಅಂಕುಶ್' – ಅತೃಪ್ತ ನಿರುದ್ಯೋಗಿ ಯುವಕರ ದಿಕ್ಕೇಡಿತನದ ಜೊತೆಗೆ ಹಿಂಸೆಯ ಬೇರುಗಳನ್ನೂ ಶೋಧಿಸುವ ಯತ್ನ ಮಾಡಿತು.

ಅಷ್ಟಾದರೂ, ಹಿಂಸೆಯನ್ನು ಚಿತ್ರರಂಗ ಅರ್ಥೈಸಿಕೊಂಡಿದ್ದು ಗೆಲ್ಲುವ ಸೂತ್ರವಾಗಿ ಮಾತ್ರ. ಪರಿಣಾಮ, ತೆರೆಯ ಮೇಲೆ ಚಿತ್ರವಿಚಿತ್ರ ಹಿಂಸಾತ್ಮಕ ಕಟ್ಟುಕತೆಗಳು ಸೃಷ್ಟಿಯಾಗತೊಡಗಿದವು. 'ಅಂಕುಶ್'ನ ನಾಯಕರಿಗೆ ಸಾಮಾಜಿಕ ಪರಿಸ್ಥಿತಿಯ ಒತ್ತಡ ಎಂಬ ಸಮಜಾಯಿಷಿಯಾದರೂ ಇತ್ತು, ಮಚ್ಚು ಲಾಂಗು ಹಿಡಿದ ಕನ್ನಡದ (ಮತ್ತು ತೆಲುಗಿನ) ಹೀರೋಗಳು ಯಾವ ಆದರ್ಶದ ಸೊಲ್ಲು ತೆಗೆದಾರು? ಅಷ್ಟಾಗಿ ಈಗ ಒಣ ಆದರ್ಶದ ಭಾಷಣಗಳನ್ನು ಯಾರೂ ಕೇಳುವುದೂ ಇಲ್ಲ!?

ಯಾವುದೇ ಭಾಷೆಗೂ ಏರಿಳಿತಗಳಿದ್ದೇ ಇವೆ. ಎಂಬತ್ತರ ದಶಕದ ಸುವರ್ಣಯುಗದ ನಂತರ ಕನ್ನಡ ಚಿತ್ರರಂಗವೂ ಯಶಸ್ಸಿಗಾಗಿ ಏನೇನೋ ಗುರಿಹೀನ ಪ್ರಯೋಗಗಳನ್ನು ಮಾಡಿತು. ಒಂದಷ್ಟು ದಿನ ಕನ್ನಡದ ಪ್ರೇಕ್ಷಕರು, ಅಳುವ ಸಲುವಾಗಿಯೇ ಚಿತ್ರಮಂದಿರಗಳಿಗೆ ಹೋದರು...! ಹೊಸಬರು ದಾಳಿಯಿಡುವವರೆಗೆ ತೆಲುಗಿನಲ್ಲೂ ಅದೇ ಅತಂತ್ರವಿತ್ತು, ಹಿಂದಿಯಲ್ಲಂತೂ 'ಲಗಾನ್' ಬರುವ ಮುಂಚಿನ ಕೆಲವು ವರ್ಷಗಳು, ತೆಲುಗು ತಮಿಳು ಚಿತ್ರಗಳೇ ವಿಮೋಚನೆಯ ದಾರಿ ತೋರಬೇಕಾದ ಸ್ಥಿತಿಯಿತ್ತು. ಅಲ್ಲಿಯೂ ಗೋವಿಂದನ ಕಾಮಿಡಿ ಹೊರತು ಗೆಲುವೆಂಬುದು ಮರೀಚಿಕೆಯೇ...

ಆದರೆ, ಯಾವ ಕಾಲದಲ್ಲೂ ಪ್ರೀತಿ ಪ್ರೇಮದ ಸೂತ್ರಕ್ಕಂತೂ ಸಾವಿಲ್ಲ! ಅಲ್ಲಿಯೂ 'ಬಾಬ್ಬಿ' ಸೃಷ್ಟಿಸಿದ ಪ್ರೇಮ ಬಂಡಾಯದ ಕಾಲ ಮುಗಿದು 'ಹಮ್ ಆಪ್ ಕೆ ಹೈ ಕೌನ್! ಮತ್ತು 'ದಿಲ್ ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಮೂಲಕ ಪ್ರೇಮಿಗಳು ಶರಣಾಗತಿಯ ಭಂಗಿಯಲ್ಲಿ ಬಾಗಿದ್ದರು....

ಇಲ್ಲಿ, ಇಷ್ಟೆಲ್ಲ ವಿವರಗಳನ್ನು ಚರ್ಚಿಸಿದ ಮೇಲೆ ಸಿನಿಮಾ (ಅಥವಾ ಯಾವುದೇ ಕಲೆ) ಯಾವಾಗಲೂ ಸಮಾಜದ ಅಂತರ್ಗತ ಗೊತ್ತುಗುರಿಗಳನ್ನೇ ಅನುಸರಿಸುತ್ತದೆ ಎಂಬುದು ಸ್ಪಷ್ಟವಾಗಿರಬೇಕು. ಅಂದರೆ ಸಾಮಾಜಿಕ ಕಾಳಜಿಯ ಮಾತು ಎಂದೂ ಸಮಾಜದ ದಿಕ್ಕು ದೆಸೆಯಿಂದ ಹೊರತಾದದ್ದಲ್ಲ ಎಂಬುದು ನಮ್ಮ ಗಮನದಲ್ಲಿರಬೇಕು...

'ಲಗಾನ್' ಬಂತು. ಹಳೆಯ ಕಾಲದ ಆದರ್ಶವಾದವೇ ನಿಜದ ವಾಸ್ತವಿಕತೆಯಲ್ಲಿ ಅದ್ಭುತ ಎನ್ನುವ ಮಟ್ಟದ ತಾಂತ್ರಿಕತೆಯೊಂದಿಗೆ ಬಂತು. ಆಗಿನಿಂದ ಹಿಂದಿಯಲ್ಲಿ ಹೊಸ ರಕ್ತ ಹರಿಯತೊಡಗಿತು. ಬುದ್ಧಿವಂತ ಉದ್ದಿಶ್ಯಪೂರ್ಣ ಚಿತ್ರಗಳು ಒಂದಾದ ಮೇಲೊಂದು ಬಂದವು. ಈ ತಲೆಮಾರಿನ "ಕಲಿತ" ನಿರ್ದೇಶಕರು ತಂತಮ್ಮ ಪ್ರಾಮಾಣಿಕತೆ ಮತ್ತು ತಾಂತ್ರಿಕ ಪ್ರೌಢಿಮೆಯೊಂದಿಗೆ ಹಾಜರಾದರು. ಹೊಸ ಪೀಳಿಗೆಯ ಹುಡುಗಾಟ-ಹುಡುಕಾಟಗಳ ಪ್ರಾಮಾಣಿಕ ಲವಲವಿಕೆಯ ಚಿತ್ರಣ ನೀಡಿದ 'ದಿಲ್ ಚಾಹತಾ ಹೈ'; ಆರಂಭದ 'ಚಾಂದಿನಿ ಬಾರ್'ನಂತಹ ಸದುದ್ದೇಶದ ಆದರೆ ಅಪಕ್ವ ಚಿತ್ರ ನೀಡಿದ ಮಧುರ್ ಭಂಡಾರ್ಕರ್‌ನ 'ಪೇಜ್ ತ್ರೀ'; ರಾಂ ಗೋಪಾಲ್ ವರ್ಮಾನ 'ಸತ್ಯ', 'ರಂಗೀಲಾ' ಮತ್ತು 'ಕಂಪನಿ', ಮೊದಲೇ ಹೇಳಿದ 'ಮುನ್ನಾಭಾಯಿ ಎಂಬಿಬಿಎಸ್' ಮತ್ತು 'ಗಾಂಧಿಗಿರಿಗಳ' ರಾಜಕುಮಾರ್ ಹಿರಾನಿ, ಇದೀಗ ಅನುರಾಗ್ ಕಶ್ಯಪ್...



'ಲಗಾನ್'

ಇಲ್ಲೆಲ್ಲ ಸಾಮಾಜಿಕ ಜವಾಬ್ದಾರಿ ಎಲ್ಲಿದೆ?

ಎಲ್ಲಿದೆ ಎಂದರೆ ಅವರ ನೋಟದಲ್ಲಿ, ಮೊದ್ದು ಆದರ್ಶವಾದಿ ನಾಯಕನ ಬದಲು ಇಲ್ಲಿ ಕಾಣುವ ಗುಣ ದೋಷಗಳ ಪ್ರಾಂಜಲ ಸಾಚಾತನದಲ್ಲಿ... ಮಲ್ಟಿಪ್ಲೆಕ್ಸ್ ಸಂಸ್ಕೃತಿ ಬಂದ ಮೇಲಂತೂ ಹಿಂದಿಯಲ್ಲಿ ಬಂಡವಾಳದ ಹೊರೆ ತಗ್ಗಿ ಸಣ್ಣ ಸಣ್ಣ ಪ್ರಾಮಾಣಿಕ ಚಿತ್ರಗಳಿಗೆ ಅನುಕೂಲದ ವಾತಾವರಣ ಸೃಷ್ಟಿಯಾಗಿದೆ.

ತಮಿಳು ತೆಲುಗುಗಳೂ ಸುಕುಮಾರ್, ಬಾಲ, ಸೆಲ್ವ ರಾಘವನ್ ಥರದ ತಾಜಾ ನಿರ್ದೇಶಕರ ಚೇತೋಹಾರಿ ಪ್ರಯೋಗಗಳಲ್ಲಿ ನಿರತವಾಗಿವೆ. ತಮಿಳಿನ ಶಂಕರ್ ಮತ್ತು ಮಣಿರತ್ನಂರಿಗಂತೂ ಸಮಕಾಲೀನ ವಿಷಯಗಳತ್ತಲೇ ಒಲವು.

ಅಲ್ಲೆಲ್ಲ ಇಷ್ಟೆಲ್ಲ ನಡೆಯುತ್ತಿರುವಾಗ ಕನ್ನಡದ ಪರಿಸ್ಥಿತಿ ಮಾತ್ರ ಆಸೆ ಹುಟ್ಟಿಸುವಂತಿಲ್ಲ. ಅಲ್ಲೊಂದು ಇಲ್ಲೊಂದು ಗೆದ್ದ ಚಿತ್ರಗಳೂ ದೊಡ್ಡ ಸಾಹಸದ ಹುಮ್ಮಸ್ಸು ತರುತ್ತಿಲ್ಲ. ಇತ್ತ ಉಗ್ರಗಾಮಿಗಳ ಚಿತ್ರಣವೂ ಅಲ್ಲ, ಅತ್ತ ಅವರ ಕೈಲಿ ನಲುಗಿದವರ ಪಾಡೂ ಅಲ್ಲ ಎಂಬಂಥ 'ಸಯನೈಡ್' ಚಿತ್ರವನ್ನೇ ನಾವು ಕೊಂಡಾಡುತ್ತಿದ್ದೇವೆ, ಅದರ ಸಾಕ್ಷ್ಯಚಿತ್ರ ಮಾದರಿ ನಿರೂಪಣೆಗಾಗಿ...!

ಹೀಗಿರುವಾಗ, ಉಸಿರಾಟಕ್ಕೆ ಸದಾ ರಿಯಾಯ್ತಿ ಪ್ರೋತ್ಸಾಹಗಳ ಆಮ್ಲಜನಕವನ್ನೇ ನೆಚ್ಚಿಕೊಂಡಂತಿರುವ ಕನ್ನಡ ಚಿತ್ರರಂಗ ತನ್ನ ಹಿಂದಿನ ವೈಭವದ ದಿನಗಳಿಗೆ ಮರಳುವುದು ಯಾವಾಗ?...



ಮುಗಿದ 'ರಾ'ಗಳ ಕಾಟ





ಕಳೆದ ವರ್ಷ ಯುಗಾದಿ ಸಮಯದಲ್ಲಿ ಮೂರು 'ರಾ'ಗಳು ಚಿತ್ರರಂಗದಲ್ಲಿ ಮಿಂಚುತ್ತಿದ್ದರು. ಆ 'ರಾ'ಗಳೆಂದರೆ ರಾಧಿಕಾ, ರಕ್ಷಿತಾ ಮತ್ತು ರಮ್ಯಾ. ಈ ಮೂವರ ನಡುವೆ ತೀವ್ರತರವಾದ ಪೈಪೋಟಿ ಇತ್ತಲ್ಲದೆ ನಂ 1 ಸ್ಥಾನಕ್ಕೆ ಸ್ಪರ್ಧೆ ಏರ್ಪಟ್ಟಿತ್ತು. ಆದರೆ ಒಂದೇ ವರ್ಷದಲ್ಲಿ ತುಂಬಾ ಬದಲಾವಣೆಗಳಾಗಿವೆ.

ಡಬ್ಬಲ್ ಡೆಕ್ಕರ್ ಥರ ಊದಿಕೊಂಡಿರುವ ರಕ್ಷಿತಾ ನಿರ್ದೇಶಕ ಪ್ರೇಮ್ ಜೊತೆ ಪ್ರೇಮ ಪಾಶದಲ್ಲಿ ಸಿಲುಕಿ, ಮೊದಲು "ಅದೆಲ್ಲ ಸುಳ್ಳು" ಎಂದು ಹೇಳಿ, ಆನಂತರ "ಅದೆಲ್ಲ ನಿಜ" ಎಂದೂ ಹೇಳಿ ವರ್ಷವಿಡೀ ಪಬ್ಲಿಸಿಟಿ ಪಡೆದುಕೊಂಡಳು. ಮೊನ್ನೆ ಆಕೆಯ ಮದುವೆ ಕೂಡ ಜಾತ್ರೆಯಂತೆ ನಡೆದು ಅದಕ್ಕೂ ಮತ್ತಷ್ಟು ಪ್ರಚಾರ ಸಿಕ್ಕಿತು. ಈ ಒಂದು ವರ್ಷದಲ್ಲಿ ಆಕೆಯ ಒಂದೇ ಒಂದು ಚಿತ್ರ ಕೂಡಾ ಸೂಪರ್ ಹಿಟ್ ಆಗದಿದ್ದರೂ ಪಬ್ಲಿಸಿಟಿಯಲ್ಲಿ ಮಾತ್ರ ನಂ. 1 ಸ್ಥಾನ ಆಕೆಗೇ ಸಲ್ಲುತ್ತದೆ.

ಈ ಮಧ್ಯೆ ಚಿತ್ರರಂಗದವರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಕರಾವಳಿಯ ಕನ್ಯೆ ರಾಧಿಕಾಳ ಬಗ್ಗೆ ಮೊನ್ನೆ ಮೊನ್ನೆ ತನಕ ಯಾರೂ ಕ್ಯಾರೇ ಅನ್ನುತ್ತಿರಲಿಲ್ಲ. ಆಗ ಬಿತ್ತು ರೈಡ್ ಎಂಬ ಬಾಂಬ್! ರಕ್ಷಿತಾ ಗಾಸಿಪ್ ಕಾಲಂಗಳಲ್ಲಿ ಮಾತ್ರ ಮಿಂಚಿದ್ದರೆ ರಾಧಿಕಾ ದಿನಪತ್ರಿಕೆಗಳ ಮುಖಪುಟದಲ್ಲೇ ಸೆನ್‌ಸೇಷನ್ ಸೃಷ್ಟಿಸಿದಳು; ವಿಧಾನಸೌಧದ ಕಾರಿಡಾರುಗಳಲ್ಲೂ ಅವಳ ಹೆಸರು ಗುನುಗುತ್ತಿತ್ತು.

ಈ ಮಧ್ಯೆ ಸ್ವಲ್ಪ ಸದ್ದು, ಸ್ವಲ್ಪ ಸುದ್ದಿ ಎಂಬುದನ್ನು ಹದವಾಗಿ ಮಾಡಿದವಳೆಂದರೆ ಅದು ರಮ್ಯಾ. ಆಕೆ ನಟಿಸಿದ್ದ 'ಅಮೃತಧಾರೆ' ಮತ್ತು 'ಜೊತೆಜೊತೆಯಲಿ' ಸೂಪರ್ ಹಿಟ್ ಆಗಿದ್ದೇ ತಡ ಗಾಂಧಿನಗರದವರು ಆಕೆಯನ್ನು 'ಲಕ್ಕಿ ಗರ್ಲ್' ಎಂದು ಕರೆದರು. ರಾಧಿಕಾ ನಾಪತ್ತೆಯಾಗಿದ್ದು, ರಕ್ಷಿತಾ ಮದುವೆಯಾಗಿದ್ದು ರಮ್ಯಳಿಗೆ ಪ್ರತಿಸ್ಪರ್ಧಿಯೇ ಇಲ್ಲ ಎಂಬಂತಹ ವಾತಾವರಣ ಸೃಷ್ಟಿಯಾಯಿತು. ಇದೇ ಸಮಯದಲ್ಲಿ ಒಂದೆರಡು ತಮಿಳು ಚಿತ್ರಗಳಿಗೂ ಸಹಿ ಹಾಕಿದ ರಮ್ಯಾ ತನ್ನ ಸಂಭಾವನೆಯನ್ನು ಏರಿಸಿಕೊಂಡಿರುವುದರಿಂದ 'ಊರಿಗೊಬ್ಬಳೇ ಪದ್ಮಾವತಿ ಈಕೆ' ಎಂಬಂತಾಗಿದೆ.

ಅಂತೂ 'ರಾ'ಗಳ ಕಾಟ ಮತ್ತು ಕದನ ಮುಗಿದಿದೆ.

-ಶೆಣೈ

ಗಾಂಧಿನಗರದಲ್ಲಿ ದೋಸ್ತಿ ದರ್ಬಾರು

ಅದೊಂದು ಕಾಲವಿತ್ತು.

ಆಗ ಸದಾಶಿವನಗರದವರ ಚಿತ್ರ ಬಿಡುಗಡೆಯಾದರೆ ಜಯನಗರದವರು ಟೆನ್ಷನ್ ಮಾಡಿಕೊಳ್ಳುತ್ತಿದ್ದರು. ಹಾಗೆಯೇ ಜಯನಗರದವರ ಚಿತ್ರ ರಿಲೀಸ್ ಆದರೆ ಅದು ಬಾಕ್ಸಾಫೀಸಿನಲ್ಲಿ ಬಿದ್ದು ಹೋಗಲಿ ಎಂದು ಸದಾಶಿವನಗರದವರು ಜಪಿಸುತ್ತಿದ್ದರು. ರಾಜಾಜಿನಗರದವರ ಚಿತ್ರ ಬಿಡುಗಡೆಯಾದಾಗ ಜಯನಗರ ಮತ್ತು ಸದಾಶಿವನಗರದವರು ಬಾಕ್ಸಾಫೀಸಿನ ರಿಪೋರ್ಟ್‌ಗಾಗಿ ಬೆಳಗ್ಗಿನಿಂದಲೇ ಕಾದು ಕೂರುತ್ತಿದ್ದರು.

ಇದು ಗಾಂಧಿನಗರದವರ ರಾಜಕೀಯ ಗೊತ್ತಿದ್ದವರಿಗೆ ಸುಲಭವಾಗಿ ಅರ್ಥವಾಗುತ್ತದೆ. ಉಳಿದವರಿಗೆ ಏನೂ ಅರ್ಥವಾಗದು. ಗಾಂಧಿನಗರದಲ್ಲಿ ಐದೇ ಜನ ಹೀರೋಗಳಿದ್ದರೂ ಇಲ್ಲಿ ಹತ್ತು ಗುಂಪುಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದವು. ಎಲ್ಲಾ 'ನಗರ'ಗಳ ನಡುವೆ ಮತ್ತು ಎಲ್ಲಾ ಹೀರೋಗಳ ನಡುವೆ ಒಂದು ಅಡ್ಡಗೋಡೆ ಇರುತ್ತಿತ್ತು.

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಗಾಂಧಿನಗರದಲ್ಲಿ ಗೋಡೆಗಳೇ ಇಲ್ಲದಂತಾಗಿದೆ. ಇದನ್ನು ಸ್ವಲ್ಪ ಮುಂದುವರೆಸಿ, ಈಗ ಗಾಂಧಿನಗರದಲ್ಲಿ ಹೀರೋಗಳೂ ಇಲ್ಲ ಎಂದು ಹೇಳಿದರೆ ಅವರ ಅಭಿಮಾನಿಗಳಿಗೆ ಬೇಸರವಾಗಬಹುದು. ಒಂದಂತೂ ನಿಜ. ಗುಂಪು ರಾಜಕೀಯ ಮಾಡಿಕೊಂಡಿದ್ದ ಕನ್ನಡ ಚಿತ್ರರಂಗದ ಜನ ಈಗ ಎಲ್ಲವನ್ನೂ ಮರೆತು ತಾವೆಲ್ಲಾ ಒಂದೇ ಕುಟುಂಬದ ಸದಸ್ಯರು ಎಂಬಂತೆ ವರ್ತಿಸುತ್ತಿದ್ದಾರೆ. ಇದು ಸದ್ಯದ ಅಗತ್ಯವೋ ಅಥವಾ ಪರಿಸ್ಥಿತಿಯ ಅನಿವಾರ್ಯತೆಯೋ, ಇನ್ನೂ ಖಚಿತವಾಗಿಲ್ಲ.







ಉದಾಹರಣೆಗೆ ವಿಷ್ಣುವರ್ಧನ್ ಅವರನ್ನೇ ನೋಡಿ. ಮೂವತ್ತು ವರ್ಷಗಳಿಂದ ಎರಡನೇ ತಲೆಮಾರಿನ ನಾಯಕ ನಟರ ಜೊತೆ ನಟಿಸಲು ಹಿಂದು-ಮುಂದು ಆಲೋಚಿಸುತ್ತಿದ್ದ 'ಸಾಹಸಸಿಂಹ' ಈಗ ಹೊಸ ಹಾದಿಯನ್ನು ತುಳಿದಿದ್ದಾರೆ. ಮೊನ್ನೆ ಮೊನ್ನೆ ಅವರೊಂದು ಮಾತನ್ನು ಹೇಳಿದರು: "ನಾನು ಮತ್ತು ಶಿವರಾಜ್‌ಕುಮಾರ್ ಒಂದೇ ಚಿತ್ರದಲ್ಲಿ ಜೊತೆಯಾಗಿ ನಟಿಸಬೇಕೆಂಬ ಆಸೆ ನನಗಿದೆ. ಅಂತಹ ಒಳ್ಳೆಯ ಕತೆ ಸಿಗಲಿ ಎಂದು ಹಾರೈಸುತ್ತೇನೆ. ನಾವಿಬ್ಬರೂ ಒಂದೇ ಚಿತ್ರದಲ್ಲಿ ನಟಿಸಿದರೆ, ಅದು ನಾವು ರಾಜಣ್ಣನಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ" ಎಂದರು.

ಹಿಂದೊಮ್ಮೆ ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಅಭಿಮಾನಿಗಳ ನಡುವಿನ ಗದ್ದಲ ಯಾವ ಪರಾಕಾಷ್ಠೆ ತಲುಪಿತ್ತು ಎಂಬುದು ನಿಮಗೆಲ್ಲಾ ಗೊತ್ತೇ ಇದೆ. ಹೀಗಾಗಿ ರಾಜ್ ಕುಟುಂಬದವರು ಮತ್ತು ವಿಷ್ಣು ಕುಟುಂಬದವರು ಜೊತೆಯಾಗಿ ನಟಿಸುವ ಸಾಧ್ಯತೆಯೇ ಇಲ್ಲ ಎಂದು ಬಹಳ ಹಿಂದೆಯೇ ಗಾಂಧಿನಗರದವರು ಭವಿಷ್ಯ ಬರೆದಿಟ್ಟಿದ್ದರು.

ಆದರೆ ರಾಜಕೀಯದ ಥರ ಚಿತ್ರರಂಗದಲ್ಲೂ ಯಾರೂ ಪರ್ಮನೆಂಟ್ ಶತ್ರುಗಳಲ್ಲ ಅಥವಾ ಮಿತ್ರರೂ ಅಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಇದಕ್ಕೆ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದು.

ಈಗ ಮಾಗಿದ ಮತ್ತು ಪಳಗಿದ ಸಿಂಹದಂತಾಗಿರುವ ವಿಷ್ಣುವರ್ಧನ್ ಸುದೀಪ್ ನಿರ್ದೇಶನದ ಒಂದು ಚಿತ್ರದಲ್ಲಿ ನಟಿಸಲು ಒಪ್ಪಿದ್ದಾರೆ. ಮತ್ತೊಂದೆಡೆ ಜಗ್ಗೇಶ್ ಜೊತೆ ಮೊದಲ ಬಾರಿಗೆ ಸಮಾನವಾದ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲು ಒಪ್ಪಿಕೊಂಡಿದ್ದಾರೆ. ಇನ್ನೊಂದೆಡೆ ವಿಷ್ಣು ಮತ್ತು ಉಪೇಂದ್ರ ಒಟ್ಟಿಗೇ ನಟಿಸಲಿರುವ ಚಿತ್ರ ಸದ್ಯದಲ್ಲೇ ಸೆಟ್ಟೇರಲಿದೆ. ಹೀಗೆ ವಿಷ್ಣು ಅಲ್ಲಿಯೂ, ಇಲ್ಲಿಯೂ, ಎಲ್ಲೆಲ್ಲಿಯೂ ಸಲ್ಲುವ ನಟರಾಗಿ ಕಾಣಿಸುತ್ತಿದ್ದಾರೆ.

ಈ ಮಾತು ವಿಷ್ಣುಗೆ ಮಾತ್ರ ಅನ್ವಯಿಸುವುದಿಲ್ಲ. ಶಿವರಾಜ್‌ಕುಮಾರ್ ಕೂಡ ಸುದೀಪ್ ನಿರ್ದೇಶನದ 'ನಂ. 72, ಶಾಂತಿನಿವಾಸ' ಚಿತ್ರದ ಒಂದು ನೃತ್ಯದ ದೃಶ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಸಾಧು ಕೋಕಿಲ ನಿರ್ದೇಶನದ ಚಿತ್ರದಲ್ಲಿ ದರ್ಶನ್ ನಾಯಕನಟನಾದರೂ, ಅಲ್ಲೂ ಕೂಡ ಶಿವರಾಜ್ ಕುಮಾರ್ ಹಾಡೊಂದರಲ್ಲಿ ಕಾಣಿಸಿಕೊಳ್ಳಲು 'Yes' ಎಂದಿದ್ದಾರೆ. ಇದೆಲ್ಲದರ ಮಧ್ಯೆ ಸುಮಾರು ಏಳು ವರ್ಷಗಳ ನಂತರ ಮತ್ತೊಮ್ಮೆ ಶಿವರಾಜ್ ಕುಮಾರ್ ಮತ್ತು ಉಪೇಂದ್ರ 'ಲವ-ಕುಶ' ಚಿತ್ರದಲ್ಲಿ ಒಟ್ಟಿಗೆ ನಟಿಸುತ್ತಿದ್ದಾರೆ.

ವಿಷ್ಣು ಮತ್ತು ಶಿವಣ್ಣರಿಗಿಂತ ವಿಭಿನ್ನವಾಗಿ ಕಾರ್ಯೋನ್ಮುಖರಾಗಿರುವವರು ಕ್ರೇಜಿ ಸ್ಟಾರ್ ರವಿಚಂದ್ರನ್. ಅವರದ್ದೊಂದು ಮಹಾ ಕನಸಿದೆ. ಅದೇನೆಂದರೆ, ಕನ್ನಡ ಚಿತ್ರರಂಗದ ಎಲ್ಲ ನಟ-ನಟಿಯರನ್ನು ಸೇರಿಸಿ ಒಂದು ಚಿತ್ರ ಮಾಡಬೇಕೆಂಬುದು. ಈ ಕನಸುಗಾರನ ಕನಸಿಗೆ ಚಿತ್ರರಂಗದ ಎಲ್ಲ ಹೀರೋಗಳೂ ಎಸ್ ಅಂದಿರುವುದು ಒಂದು ವಿಶೇಷ. ಚಿತ್ರಕ್ಕೆ 'ಮದುವೆ ಮನೆ' ಅಂತ ಹೆಸರಿಟ್ಟಾಗಿದೆ. ಸದ್ಯದಲ್ಲೇ ಆರಂಭವಾಗಲಿರುವ ಈ ಸಿನಿಮಾದಲ್ಲಿ ಒಂದು ಅಂದಾಜಿನ ಪ್ರಕಾರ ಒಟ್ಟು 246 ಜನ ಕಲಾವಿದರು ನಟಿಸಲಿದ್ದಾರೆ.

ಇದೆಲ್ಲವನ್ನು ನೋಡಿ ನಾಯಕರು ತಮ್ಮ ವೈಯಕ್ತಿಕ ವರ್ಚಸ್ಸು ಮತ್ತು ಚರಿಷ್ಮಾವನ್ನು ಕಳೆದುಕೊಂಡಿದ್ದಾರೆಯೇ? ಅಥವಾ ಇನ್ನೇನಿದ್ದರೂ ಮಲ್ಟಿಸ್ಟಾರ್ ಚಿತ್ರಗಳಿಗಷ್ಟೇ ಭವಿಷ್ಯವೇ? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸಬಹುದು. ಈ ಪ್ರಶ್ನೆಗಳಿಗೆ ಉತ್ತರ ನೆಗೆಟೀವ್ ಆಗಿರಬಹುದು ಅಥವಾ ಪಾಸಿಟೀವ್ ಆಗಿಯೂ ಇರಬಹುದು. ಅದು ಇಲ್ಲಿ ಮುಖ್ಯವಲ್ಲ. ಆದರೆ ಚಿತ್ರರಂಗದಲ್ಲಿನ ಗುಂಪುಗಾರಿಕೆ ದೂರವಾಗಿ ಎಲ್ಲರೂ ಜೊತೆಗೂಡಿ ಕೆಲಸಮಾಡುವ ವಾತಾವರಣ ಸೃಷ್ಟಿಯಾಗಿರುವುದೇ ಕನ್ನಡ ಚಿತ್ರರಂಗದಲ್ಲಿ ಸಂಭವಿಸಿರುವ ಒಂದು ಕ್ರಾಂತಿ ಎನ್ನಬಹುದು.

ಇದಕ್ಕಾಗಿ ಎಲ್ಲರನ್ನೂ ಅಭಿನಂದಿಸೋಣ.



ಇದು ಆರು ವರ್ಷಗಳ ಹಿಂದಿನ ಕತೆ. ನಾನು ಒಂದು ಮೆಗಾ ಸೀರಿಯಲ್‌ಗೆ ಆಯ್ಕೆಯಾದೆ. ಬೆಳಗ್ಗಿನ ಜಾವ ಆರು ಗಂಟೆಗೆ ಕೃಷ್ಣಕುಮಾರಿ ಎಸ್ಟೇಟ್‌ನಲ್ಲಿ ಇರಬೇಕು ಎಂದರು. ನಾನು ನಾಲ್ಕು ಗಂಟೆಗೇ ಎದ್ದು ಗಂಟು ಮೂಟೆ ಕಟ್ಟಿಕೊಂಡು ನೆಲಮಂಗಲದಿಂದ ಮೂರ್‍ನಾಲ್ಕು ಕಿ.ಮೀ. ನಡೆದುಕೊಂಡೇ ಬಂದೆ. ಆಮೇಲೆ ಬಸ್ ಹತ್ತಿ ಕರೆಕ್ಟಾಗಿ ಆರು ಗಂಟೆಗೆ ಶೂಟಿಂಗ್ ಸ್ಪಾಟಲ್ಲಿದ್ದೆ. ಆದರೆ ನನ್ನ ದುರಾದೃಷ್ಟಕ್ಕೆ ಅಲ್ಲಿ ಯಾರೂ ಇರಲಿಲ್ಲ.

ಅವರೆಲ್ಲ ಬಂದಿದ್ದು ಬೆಳಗ್ಗೆ ಹತ್ತು ಗಂಟೆಗೆ. ಬಂದವರೇ ಅವರವರ ಕೆಲಸದಲ್ಲಿ ಎಲ್ಲರೂ ಬ್ಯುಸಿಯಾಗಿಬಿಟ್ಟರು. ಯಾರೂ ನನ್ನನ್ನು ಮಾತನಾಡಿಸಲಿಲ್ಲ, ನನಗೋ ಅವರನ್ನು ಮಾತನಾಡಿಸಲು ಹೆದರಿಕೆ. ಅವರೆಲ್ಲ ತಿಂಡಿ ತಿಂದರು, ಕಾಫಿ ಕುಡಿದರು, ಊಟ ಮಾಡಿದರು ಆದರೆ ಯಾರೂ ನನ್ನನ್ನು "ಕಾಫಿ ಕುಡಿತೀಯಾ, ಊಟ ಆಯ್ತಾ" ಎಂದು ಸೌಜನ್ಯಕ್ಕೂ ಕೇಳಲಿಲ್ಲ. ಕೊನೆಗೆ ನಾಲ್ಕು ಗಂಟೆಗೆ ಶೂಟಿಂಗ್ ಆರಂಭವಾದಾಗ ನಾನು ಮಾಡಬೇಕಾದ ಪಾತ್ರವನ್ನು ಇನ್ನೊಬ್ಬ ಕಲಾವಿದ ಮಾಡುವುದನ್ನು ಗಮನಿಸಿದೆ.

ಆಗ ಧೈರ್ಯ ಮಾಡಿ ವಿಷಯ ಪ್ರಸ್ತಾಪಿಸಿದೆ. "ಬೆಳಗ್ಗಿನ ಜಾವ ಆರು ಗಂಟೆಯಿಂದ ನಾನು ಇಲ್ಲೇ ಕಾಯ್ತಾ ಇದ್ದೀನಲ್ಲ ಸಾರ್" ಎಂದೆ. "ಆ ಪಾತ್ರವನ್ನು ನಿರ್ಮಾಪಕರ ಕಡೆಯವರಿಗೆ ಕೊಡಬೇಕಾಗಿ ಬಂದಿದೆ" ಎಂದಷ್ಟೇ ಅವರು ಹೇಳಿದರು. "ಸಾರ್, ಅದರ ಬದಲಿಗೆ ಬೇರೆ ಪಾತ್ರವಿದ್ದರೆ ಕೊಡಿ, ನಾನು ಮಾಡುತ್ತೇನೆ" ಎಂದೆ. ಅದಕ್ಕೂ ಅವರು ಕ್ಯಾರೇ ಅನ್ನಲಿಲ್ಲ. "ಪಾತ್ರವಿದ್ದರೆ ತಿಳಿಸ್ತೀವಿ, ಈಗ ನೀನು ಮನೆಗೆ ಹೋಗು" ಅಂದರು. ಬಾಟಾ ಕೇಳಿದೆ. "ಇನ್ನೂ ನೀನು ಈ ಸೀರಿಯಲ್ಲಿನಲ್ಲಿ ನಟಿಸೇ ಇಲ್ಲ, ಬಾಟಾ ಬೇರೆ ಕೇಡು" ಎಂದು ದಬಾಯಿಸಿದರು. ಕೊನೆಗೆ ಬರಿಗೈಲಿ ಮನೆಗೆ ಹಿಂದಿರುಗಿದೆ.

ಆ ದಿನ ನನ್ನ ಜೀವನದಲ್ಲೇ ಅತ್ಯಂತ ನೋವಿನ ದಿನ. ಅವತ್ತೇ ನಾನು ಶಪಥ ಮಾಡಿದೆ, ಈ ಕ್ಷೇತ್ರದಲ್ಲಿದ್ದು ನಾನು ಏನಾದರೂ ಸಾಧಿಸಬೇಕೆಂದು. ಇಂತಹ ದುಷ್ಟರು ನನ್ನ ಸಹಾಯ ಕೇಳಿ ನನ್ನ ಮನೆಗೆ ಬರುವ ಹಂತಕ್ಕೆ ನಾನು ಬೆಳೆಯಬೇಕೆಂದು ಪ್ರತಿಜ್ಞೆ ಮಾಡಿದೆ.


ಅಂದಿನ ಗಣೇಶ



ನೀವು ನಂಬುತ್ತೀರೋ ಇಲ್ಲವೋ, ಮೊನ್ನೆ 'ಚೆಲ್ಲಾಟ' ಚಿತ್ರ ಬಿಡುಗಡೆಯಾದ ನಂತರ ಅದೇ ಸೀರಿಯಲ್‌ನ ನಿರ್ದೇಶಕ ನನ್ನ ಕಾಲ್‌ಶೀಟ್ ಕೇಳಿ ಮನೆಗೆ ಬಂದಿದ್ದರು.

ನಾನು ಚಿತ್ರರಂಗದಲ್ಲಿ ಇಷ್ಟು ಎತ್ತರಕ್ಕೆ ಬೆಳೆಯಲು ಇಂತಹ ನಿರ್ದೇಶಕರ ಉಡಾಫೆ ಮತ್ತು ನಿರ್ಮಾಪಕರ ತಿರಸ್ಕಾರವೇ ಕಾರಣ ಎಂದು ದೃಢವಾಗಿ ನಂಬಿದ್ದೇನೆ. ಈಗ ನನ್ನ ಅದೃಷ್ಟ ಬದಲಾಗಿದೆ. ಮುಂದಿನ ಎರಡು ವರ್ಷಕ್ಕೆ ನಾನು ಬುಕ್ ಆಗಿದ್ದೇನೆ. ಅಂದು ಶೂಟಿಂಗ್‌ಗೆ ಬಸ್‌ನಲ್ಲಿ ಹೋಗುತ್ತಿದ್ದ ನನಗೆ ಸಿನಿಮಾವೊಂದಕ್ಕೆ ಈಗ ಮೂವತ್ತರಿಂದ ನಲವತ್ತು ಲಕ್ಷ ರೂಪಾಯಿ ಸಂಭಾವನೆ ಕೊಡಲು ತಯಾರಿದ್ದಾರೆ.

ಆದರೂ ನಾನು ಬೆಳೆದು ಬಂದ ಹಾದಿಯನ್ನು ಮರೆಯಲು ಸಾಧ್ಯವಿಲ್ಲ. ಮುಖಕ್ಕೆ ಬಣ್ಣ ಹಚ್ಚಿ ಬೆಳಗಿನಿಂದ ರಾತ್ರಿಯ ತನಕ ನಿರ್ದೇಶಕರು ಕರೆಯುವುದನ್ನೇ ಕಾಯುತ್ತಿದ್ದ ಆ ದಿನಗಳನ್ನು ನಾನು ಮರೆಯಲು ಸಾಧ್ಯವೇ ಇಲ್ಲ.

ಗಣೇಶ್

ಬೆಲ್ಲದಂತಹ ಇವತ್ತಿಗೆ ಬೇವಿನಂತಹ ನೆನಪು



ಇವತ್ತು ಪ್ರೇಮ್ ಮತ್ತು ಗಣೇಶ್ ಯಶಸ್ವಿ ನಾಯಕ ನಟರಾಗಿದ್ದಾರೆ, ಪ್ರತಿ ಸಿನಿಮಾಗೆ ಲಕ್ಷಾಂತರ ರೂಪಾಯಿಗಳ ಸಂಭಾವನೆ ಪಡೆಯುತ್ತಿದ್ದಾರೆ. ಆದರೆ ಈ ಯಶಸ್ಸನ್ನು ಪಡೆಯುವ ಮುನ್ನ ಅವರಿಬ್ಬರೂ ಅನುಭವಿಸಿದ ಬಡತನ ಮತ್ತು ಉಂಡ ನೋವು ಅಷ್ಟಿಷ್ಟಲ್ಲ. ಈ ಯುಗಾದಿಯ ಹಬ್ಬಕ್ಕೆ ಒಂದಿಷ್ಟು ಬೇವು, ಬೆಲ್ಲ ಇಲ್ಲಿದೆ....



ನನ್ನ ಅಜ್ಜಿಗೆ ನಾನೆಂದರೆ ಪಂಚಪ್ರಾಣ. ನನ್ನನ್ನು ಅತ್ಯಂತ ಪ್ರೀತಿಯಿಂದ ಅವರು ಸಾಕುತ್ತಿದ್ದರು. ಮನೆಯಲ್ಲಿ ಮಾಂಸದ ಅಡುಗೆ ಮಾಡಿದ್ದಾಗ ನಾನು ರಾತ್ರಿ ಮನೆಗೆ ಹಿಂದಿರುಗುವವರೆಗೂ ಯಾರಿಗೂ ಊಟಮಾಡಲು ಬಿಡದೆ ನನಗಾಗಿ ಅಜ್ಜಿ ಕಾಯುತ್ತಿದ್ದರು. ಅಷ್ಟೊಂದು ಪ್ರೀತಿ ಅವರಿಗೆ ಈ ಮೊಮ್ಮಗನ ಮೇಲೆ.

ಹೀಗಿದ್ದಾಗ ಒಮ್ಮೆ ಅಜ್ಜಿಗೆ ಆರೋಗ್ಯ ಕೈಕೊಟ್ಟಿತು. ವೈದ್ಯರು ಸಂಪೂರ್ಣವಾಗಿ ಚೆಕ್‌ಅಪ್ ಮಾಡಿ "ವಾರಕ್ಕೆರಡು ಬಾರಿ ಡಯಾಲಿಸಿಸ್ ಮಾಡಬೇಕು" ಅಂದರು. ಆಗ ನಾವು ಎಷ್ಟು ಬಡತನವನ್ನು ಎದುರಿಸುತ್ತಿದ್ದೆವೆಂದರೆ ನಾವು ವಾಸಿಸುತ್ತಿದ್ದದ್ದೇ ಜಿಂಕ್ ಶೀಟ್ ಮನೆಯಲ್ಲಿ. ನಾನು ಮತ್ತು ನನ್ನ ತಂದೆ ಇಬ್ಬರೂ ಕಷ್ಟಪಟ್ಟು ದುಡಿದರೂ ಸಂಸಾರ ನಡೆಸುವುದೇ ಕಷ್ಟವಿತ್ತು. ಹಾಗಿದ್ದಾಗ, ಅಜ್ಜಿಗೆ ಡಯಾಲಿಸಿಸ್‌ನಂತಹ ದುಬಾರಿ ಚಿಕಿತ್ಸೆ ಕೊಡಿಸಲು ನಮ್ಮಿಂದ ಹೇಗೆ ಸಾಧ್ಯ? ಆಗ ನಮ್ಮ ಸಂಬಂಧಿಕರೂ ನೆರವಿಗೆ ಬರಲಿಲ್ಲ. ಆದರೂ ನಾನು ಮತ್ತು ನನ್ನ ಅಪ್ಪ ಸಾಧ್ಯವಾದಷ್ಟು ಹಣ ಸೇರಿಸಿ ಅಜ್ಜಿಯ ಚಿಕಿತ್ಸೆಗೆ ತಯ್ಯಾರಿ ನಡೆಸಿದೆವು.

ಆದರೆ ಅಜ್ಜಿಗೆ ನೋವು ಸಹಿಸಲು ಆಗಲಿಲ್ಲ. ಕೊನೆಗೊಂದು ದಿನ ಆ ನೋವಿಗೆ ಪರ್ಮನೆಂಟ್ ಪರಿಹಾರವನ್ನು ಅವರು ಕಂಡುಕೊಂಡರು. ಮನೆಯಲ್ಲಿ ನಾವ್ಯಾರೂ ಇಲ್ಲದಾಗ ಮೈಗೆ ಸೀಮೆ ಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದರು. ಈ ವಿಷಯ ನನಗೆ ಮೊದಲು ಗೊತ್ತಾಯಿತು. ನಾನು ಮನೆಗೆ ಓಡಿದೆ. ಅಜ್ಜಿಯನ್ನು ಆಸ್ಪತ್ರೆಗೆ ಕೊಂಡೊಯ್ಯಲು ಕೂಡಾ ನನ್ನ ಬಳಿ ಹಣವಿರಲಿಲ್ಲ. ನನ್ನ ಗೆಳೆಯರಿಂದ ಹಣ ಪಡೆದು ಅಜ್ಜಿಯನ್ನು ಕಾರಲ್ಲಿ ಹಾಕಿಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಬಂದೆ.

ಎಂಬತ್ತೈದರ ಇಳಿವಯಸ್ಸಿನ ನನ್ನ ಮುದ್ದಿನ ಅಜ್ಜಿ ಆತ್ಮಹತ್ಯೆಗೆ ಯತ್ನಿಸಿದ್ದು ನೋಡಿ ನನ್ನ ಮನಸ್ಸು ವಿಲವಿಲನೆ ಒದ್ದಾಡಿತು. ಚೀರಾಡುತ್ತಿದ್ದ ಅವರನ್ನು ನೋಡಲಾರದೆ ದೇವರಿಗೆ ಮನಸ್ಸಿನಲ್ಲೇ ಪ್ರಾರ್ಥಿಸಿದೆ. "ಓ ದೇವರೇ, ದಯಾಮಯಿ ಆದ ನೀನು ಆದಷ್ಟು ಬೇಗ ನನ್ನ ಅಜ್ಜಿಯನ್ನು ನಿನ್ನ ಬಳಿ ಕರೆದುಕೊಂಡು ಹೋಗು" ಎಂದೆ.

ನನ್ನನ್ನು ಪ್ರೀತಿಯಿಂದ ಸಾಕಿದ ಅಜ್ಜಿಯು ಆದಷ್ಟು ಬೇಗ ಕೊನೆಯುಸಿರೆಳೆಯಲಿ ಎಂದು ನಾನು ಪ್ರಾರ್ಥಿಸಬೇಕಾಗಿ ಬಂದಿದ್ದು ನನ್ನ ಜೀವನದ ಅತ್ಯಂತ ನೋವಿನ ಸಂಗತಿ. ಆದರೆ ಅಂದು ಅವರು ಶೇ. 60 ರಷ್ಟು ಸುಟ್ಟಗಾಯಗಳಿಂದ ನರಳುತ್ತಿದ್ದುದನ್ನು ನಾನು ನೋಡಲಾರದೇ ಈ ರೀತಿ ಬೇಡಿಕೊಂಡಿದ್ದೆ.



ಬಡತದನ ದುರಂತ ಎಂತಹದ್ದು ನೋಡಿ. ನಾವು ಪ್ರೀತಿಸುವವರನ್ನೂ ಜೀವಂತವಾಗಿ ಉಳಿಸಿಕೊಳ್ಳಲಾಗದಷ್ಟು ಕ್ರೂರಿ ಬಡತನ. ಇವತ್ತು ನನ್ನಲ್ಲಿ ಹಣವಿದ್ದರೂ ನನ್ನೊಂದಿಗೆ ನನ್ನ ಪ್ರೀತಿಯ ಅಜ್ಜಿ ಇಲ್ಲ. ಜೀವನದಲ್ಲಿ ಎಲ್ಲರೂ ಕಷ್ಟ ಪಡುತ್ತಾರೆ. ಆದರೆ ನಾನು ಮಾತ್ರ ನನ್ನ ಪ್ರೀತಿಯ ಅಜ್ಜಿಗೆ ಏನನ್ನೂ ಕೊಡಲಿಕ್ಕಾಗಲಿಲ್ಲವಲ್ಲ ಎಂಬ ದುಃಖದಿಂದ ನರಳುತ್ತಿದ್ದೇನೆ. ಇವತ್ತು ನಾನು ಬಡತನದಿಂದ ದೂರ ಬಂದಿದ್ದರೂ ನನ್ನ ಅಜ್ಜಿ ನೀಡುತ್ತಿದ್ದ ನಿಷ್ಕಳಂಕ ಪ್ರೀತಿ ತೋರುವ ಮತ್ತೊಂದು ಜೀವ ಸಿಕ್ಕಿಲ್ಲ, ಸಿಗುವುದೂ ಇಲ್ಲ. ಇವತ್ತಿನ ನನ್ನ ಸ್ಟಾರ್‌ಗಿರಿ ತಲೆಗೆ ಏರಬಾರದೆಂಬ ಕಾರಣಕ್ಕೆ ತಿಂಗಳಿಗೊಮ್ಮೆ ವಿಕ್ಟೋರಿಯಾ ಆಸ್ಪತ್ರೆಯ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡುತ್ತಿರುತ್ತೇನೆ. ಅಲ್ಲಿ ಸುಟ್ಟು ನರಳುತ್ತಿರುವ ಹಲವಾರು ಹೆಣ್ಣುಮಕ್ಕಳನ್ನು ಕಂಡಾಗ ನನ್ನ ಮನಸ್ಸು ಅಜ್ಜಿಗಾಗಿ ಚಡಪಡಿಸುತ್ತದೆ. ನಾನು ಈ ಎತ್ತರಕ್ಕೆ ಬೆಳೆ ಬೆಳೆಯಬೇಕಾದರೆ, ಅದರ ಹಿಂದೆ ಅಜ್ಜಿಯ ಪ್ರೀತಿಯ ಸುರಿಮಳೆ, ಆಕೆ ನೀಡಿದ ತುತ್ತು ಅನ್ನ ಮತ್ತು ಸ್ಫೂರ್ತಿಯೇ ಕಾರಣ.

ಪ್ರೇಮ್

PRINTER, PUBLISHER, PROPRIETOR A[illegible] GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@redi[illegible] [illegible]jhans Enterprises, # 134, 4th Main, Industrial Estate, Rajajinagar, Bangalore-44